ಶನಿವಾರ, ಮೇ 25, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 145 | ಪುಟ 24
● www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಫೈನಲ್‌ಗೆ ಎಸ್‌ಆರ್‌ಎಚ್
ಐಪಿಎಲ್‌ನ 2ನೇ ಕ್ವಾಲಿಫೈಯರ್ ಪಂದ್ಯದಲ್ಲಿ 'ರಾಜಸ್ಥಾನ ರಾಯಲ್ಸ್' ವಿರುದ್ಧ ಗೆದ್ದು, 'ಸನ್‌ರೈಸರ್ಸ್ ಹೈದರಾಬಾದ್' ಫೈನಲ್ ಪ್ರವೇಶಿಸಿತು. 'ಸನ್‌ರೈಸರ್ಸ್'ನ ಕ್ಲಾಸೆನ್ ಅರ್ಧಶತಕ ದಾಖಲಿಸಿದರು



ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ 9
ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ ಎರಡನೇ ಆವೃತ್ತಿಯ ನಾಮನಿರ್ದೇಶಿತರ ವಿವರ

ಗರಿಷ್ಠ ಮಟ್ಟ ತಲುಪಿ ಕುಸಿದ ನಿಫ್ಟಿ 12

ಮೈಸೂರಿನ ನಿರ್ದೇಶಕನಿಗೆ ಕಾನ್ ಪ್ರಶಸ್ತಿ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
75,410 ▼	22,957 ▼	₹74,200 (ಬೆಂಗಳೂರು) ▼	₹91,900 (ಬೆಂಗಳೂರು) ▼	83.10 ▲

ಕಾಮೆಡ್‌–ಕೆ ಬೆಂಗಳೂರು ಮೇಲುಗೈ

ಬೆಂಗಳೂರು: ಕರ್ನಾಟಕ ವೈದ್ಯಕೀಯ, ಎಂಜಿನಿಯರಿಂಗ್ ಮತ್ತು ದಂತ ವೈದ್ಯಕೀಯ ಕಾಲೇಜುಗಳ ಒಕ್ಕೂಟ (ಕಾಮೆಡ್‌–ಕೆ) ನಡೆಸಿದ್ದ 2024ನೇ ಸಾಲಿನ ಪ್ರವೇಶ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ಮೊದಲ 10 ಸ್ಥಾನಗಳಲ್ಲಿ ಬೆಂಗಳೂರಿನ ಎಂಟು ವಿದ್ಯಾರ್ಥಿಗಳು ಸ್ಥಾನ ಪಡೆದಿದ್ದಾರೆ. 5

ಕಾಫಿ ಧಾರಣೆ ಚೇತರಿಕೆ 12

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಮತದಾನದ ವಿವರವನ್ನು 48 ಗಂಟೆಗಳಲ್ಲಿ ಪ್ರಕಟಿಸಲು ಕೋರಿ ಎಡಿಆರ್ ಅರ್ಜಿ

ಆಯೋಗಕ್ಕೆ ನಿರ್ದೇಶನ ಇಲ್ಲ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಲೋಕಸಭಾ ಚುನಾವಣೆಯಲ್ಲಿ ಪ್ರತಿ ಮತಗಟ್ಟೆಯಲ್ಲಿ ಆಗಿರುವ ಮತದಾನ ಪ್ರಮಾಣದ ವಿವರವನ್ನು (ಫಾರ್ಮ್ 17ಸಿ) ವೆಬ್‌ಸೈಟ್‌ನಲ್ಲಿ ಪ್ರಕಟಿಸುವಂತೆ ಚುನಾವಣಾ ಆಯೋಗಕ್ಕೆ ಸೂಚಿಸಬೇಕು ಎಂದು ಕೋರಿ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಸಲ್ಲಿಸಿದ್ದ ಅರ್ಜಿಯನ್ನು ಈ ಹಂತದಲ್ಲಿ ಪರಿಗಣಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಚುನಾವಣೆಯ ಸಂದರ್ಭದಲ್ಲಿ ತಾನು ಮಧ್ಯಪ್ರವೇಶ ಮಾಡುವುದಿಲ್ಲ ಎಂದು ಕೋರ್ಟ್ ಹೇಳಿದೆ. ನ್ಯಾಯಮೂರ್ತಿಗಳಾದ ದೀಪಾಂಕರ್ ದತ್ತ ಮತ್ತು ಸತೀಶ್ ಚಂದ್ರ ಶರ್ಮ ಅವರು ಇದ್ದ ವಿಭಾಗೀಯ ಪೀಠವು, ಐದು ಹಂತಗಳ ಮತದಾನವು ಪೂರ್ಣಗೊಂಡಿರುವ ಕಾರಣ ಈಗ ತನಗೆ ಅಂತಹ ನಿರ್ದೇಶನ ನೀಡಲಾಗದು ಎಂದು ತಿಳಿಸಿದೆ. ಈ ಕೆಲಸಕ್ಕೆ ಮಾನವ ಸಂಪನ್ಮೂಲವನ್ನು ಒಗ್ಗೂಡಿಸುವುದು ಚುನಾವಣಾ ಆಯೋಗಕ್ಕೆ ಕಷ್ಟವಾಗುತ್ತದೆ ಎಂದು ಕೂಡ ಹೇಳಿದೆ.



ಸರ್ಕಾರೇತರ ಸಂಘಟನೆಯಾಗಿರುವ ಎಡಿಆರ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಮುಂದೂಡಿದ ರಜಾಕಾಲದ ಈ ಪೀಠವು, 2019ರಿಂದ ಬಾಕಿ ಇರುವ ಇನ್ನೊಂದು ಅರ್ಜಿಯಲ್ಲಿ ಇರುವ ಕೋರಿಕೆಗಳನ್ನೇ ಇದೂ ಹೊಂದಿರುವಂತೆ ಮೇಲ್ನೋಟಕ್ಕೆ ಕಾಣುತ್ತಿದೆ ಎಂದು ಹೇಳಿದೆ.

ಅರ್ಜಿಯನ್ನು ಬಲವಾಗಿ ವಿರೋಧಿಸಿದ್ದ ಚುನಾವಣಾ ಆಯೋಗವು, ಅನುಮಾನ ಹಾಗೂ ಆತಂಕಗಳನ್ನು ಆಧರಿಸಿ ಈ ಅರ್ಜಿ ಸಿದ್ಧಪಡಿಸಲಾಗಿದೆ ಎಂದು ಹೇಳಿತ್ತು.

'ಅರ್ಜಿಯಲ್ಲಿನ ವಿಷಯಗಳ ಬಗ್ಗೆ ನಾವು ಏನನ್ನೂ ಹೇಳುವುದಿಲ್ಲ. ಆದರೆ ಈಗ ನಿಮ್ಮ ವಾದ ಬಲವಾಗಿಲ್ಲ' ಎಂದು ಪೀಠವು ಅರ್ಜಿದಾರರ ಪರ ವಕೀಲರನ್ನು ಉದ್ದೇಶಿಸಿ ಹೇಳಿತು. 'ಮಧ್ಯಂತರ ಅರ್ಜಿಯನ್ನು ನಾವು ಬಾಕಿ ಇರಿಸುತ್ತೇವೆ. ಇದನ್ನು ಸೂಕ್ತ ಸಮಯದಲ್ಲಿ ಪರಿಶೀಲಿಸುತ್ತೇವೆ' ಎಂದು ಅದು ಹೇಳಿತು.

7ನೇ ಪುಟ ನೋಡಿ

'ವ್ಯಾಪಕ ಅಪನಂಬಿಕೆ ಸೃಷ್ಟಿಯಾಗಬಹುದು'

ಮೇ 22ರಂದು ಕೋರ್ಟ್‌ಗೆ ವಿವರಣೆಯೊಂದನ್ನು ಸಲ್ಲಿಸಿದ್ದ ಆಯೋಗವು 'ಫಾರ್ಮ್ 17ಸಿ'ಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದರಿಂದ ಕಿಡಿಗೇಡಿತನದ ಕೃತ್ಯಗಳಿಗೆ ಅವಕಾಶ ಕಲ್ಪಿಸಿದಂತಾಗಬಹುದು, ಚಿತ್ರಗಳನ್ನು ತಿರುಚುವ ಕೆಲಸ ಆಗಬಹುದು, ಅದರಿಂದ ವ್ಯಾಪಕವಾಗಿ ಅಪನಂಬಿಕೆ ಉಂಟಾಗಬಹುದು' ಎಂದು ಹೇಳಿತ್ತು.

ಮೊದಲ ಎರಡು ಹಂತಗಳ ಮತದಾನದ ಪ್ರಮಾಣವನ್ನು ಶೇ 5ರಿಂದ ಶೇ 6ರಷ್ಟು ಹೆಚ್ಚಿಸಲಾಗಿದೆ ಎಂಬುದು ತಪ್ಪುದಾರಿಗೆ ಎಳೆಯುವ ಹಾಗೂ ಆಧಾರರಹಿತವಾದ ಆರೋಪ ಎಂದು ಕೂಡ ಆಯೋಗ ಹೇಳಿತ್ತು.



(ಚುನಾವಣಾ) ಪ್ರಕ್ರಿಯೆ ನಡೆಯುತ್ತಿರುವಾಗ ಇಂತಹ ಪಟ್ಟಭದ್ರ ಹಿತಾಸಕ್ತಿಗಳಿಗೆ ಪ್ರಶ್ನೆಗಳನ್ನು ಎತ್ತಲು ಕೋರ್ಟ್ ಅನುಮತಿ ನೀಡುತ್ತಲೇಹೋಯಿತು. ಇಂತಹ ಅರ್ಜಿಗಳನ್ನು ಪರಿಗಣಿಸುವುದಕ್ಕೆ ಸಂಪೂರ್ಣ ನಿರ್ಬಂಧ ಇದೆ.

ಮಣಿಂದರ್ ಸಿಂಗ್, ಚುನಾವಣಾ ಆಯೋಗದ ಪರ ವಕೀಲ (ಕೋರ್ಟ್‌ನಲ್ಲಿ ಆಡಿದ ಮಾತು)

ಪ್ರಬುದ್ಧಾ ಕೊಲೆ ಪ್ರಕರಣ • ಬ್ಲೇಡ್‌ನಿಂದ ಕೈ, ಕತ್ತು ಕೊಯ್ದಿದ್ದ ಬಾಲಕನ ಬಂಧನ

₹2 ಸಾವಿರ ವಾಪಸು ಕೇಳಿದ್ದಕ್ಕೆ ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎ ವಿದ್ಯಾರ್ಥಿನಿ ಆರ್. ಪ್ರಬುದ್ಧಾ (20) ಕೊಲೆ ಪ್ರಕರಣ ಭೇದಿಸಿರುವ ಸುಬ್ರಹ್ಮಣ್ಯಪುರ ಠಾಣೆ ಪೊಲೀಸರು, ₹2 ಸಾವಿರ ವಾಪಸು ಕೇಳಿದ್ದಕ್ಕಾಗಿ ಕೃತ್ಯ ಎಸಗಿದ್ದ ಆರೋಪದಡಿ 14 ವರ್ಷ ವಯಸ್ಸಿನ ಬಾಲಕನನ್ನು ಬಂಧಿಸಿದ್ದಾರೆ.

ಇಲ್ಲಿ ಬೃಂದಾವನ ಲೇಔಟ್‌ನಲ್ಲಿರುವ ಮನೆಯೊಂದರಲ್ಲಿ ಮೇ 15ರಂದು ಪ್ರಬುದ್ಧಾ ಅವರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದರು. ಕೈ ಹಾಗೂ ಕತ್ತಿನ ಭಾಗದಲ್ಲಿ ಗಾಯ ಇದ್ದಿದ್ದರಿಂದ ಇದೊಂದು ಕೊಲೆ ಎಂದು ಮೃತಳ ತಾಯಿ ಕೆ.ಆರ್. ಸೌಮ್ಯಾ ಅವರು ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಹಲವು ಪುರಾವೆಗಳನ್ನು ಆಧರಿಸಿ ಬಾಲಕನನ್ನು ಸೆರೆ ಹಿಡಿದಿದ್ದಾರೆ.


ಪ್ರಬುದ್ಧಾ

'ಪ್ರಬುದ್ಧಾ ಅವರದ್ದು ಆತ್ಮಹತ್ಯೆ' ಎಂದು ಆರಂಭದಲ್ಲಿ ಹೇಳಲಾಗಿತ್ತು. ಸಾವಿನ ಬಗ್ಗೆ ಪೊಲೀಸರಿಗೂ ಆರಂಭದಲ್ಲಿ ಯಾವುದೇ ಸುಳಿವು ಸಿಕ್ಕಿರಲಿಲ್ಲ. 'ಮಗಳದ್ದು ಕೊಲೆ' ಎಂಬುದಾಗಿ ತಾಯಿ ಪದೇ ಪದೇ ಹೇಳಿದ್ದರಿಂದ ತನಿಖೆ ಚುರುಕುಗೊಳಿಸಿದ್ದ ಪೊಲೀಸರು, ಪ್ರಬುದ್ಧಾ ಮನೆ ಬಳಿಯ ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲಿಸಿದಾಗ, ಆರೋಪಿ ಸಿಕ್ಕಿಬಿದ್ದಿದ್ದಾನೆ.

'ಪ್ರಬುದ್ಧಾ ಅವರ ಕೊಲೆ ಆರೋಪಿ ಬಾಲಕನನ್ನು ವಶಕ್ಕೆ ಪಡೆಯಲಾಗಿದೆ. ಬಾಲಕನಾಗಿರುವುದರಿಂದ ಹೆಸರು ಬಹಿರಂಗಪಡಿಸಲಾಗದು' ಎಂದು ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಜಗಲಾಸರ 'ಪ್ರಜಾವಾಣಿ'ಗೆ ತಿಳಿಸಿದರು.

ಪರ್ಸ್‌ನಲ್ಲಿದ್ದ ₹2 ಸಾವಿರ ಕಳ್ಳತನ: 'ಬಾರ್ ಮಾಲೀಕರ ಮಗನಾದ ಆರೋಪಿಯು, ಪ್ರಬುದ್ಧಾ ತಮ್ಮನ ಸ್ನೇಹಿತ. ಪ್ರಬುದ್ಧಾ ಅವರ ಮನೆಗೂ ಬಂದು ಹೋಗುತ್ತಿದ್ದರಿಂದ ಆತ ಎಲ್ಲರಿಗೂ ಪರಿಚಿತ' ಎಂದು ಪೊಲೀಸ್ ಮೂಲಗಳು ಹೇಳಿವೆ.


'ಸ್ನೇಹಿತನ ಕನ್ನಡಕವನ್ನು ಬಾಲಕ ಒಡೆದಿದ್ದ. ಅದನ್ನು ದುರಸ್ತಿ ಮಾಡಿಸಿಕೊಡುವಂತೆ ಸ್ನೇಹಿತ ಪಟ್ಟು ಹಿಡಿದಿದ್ದ. ಆದರೆ, ಬಾಲಕನ ಬಳಿ ಹಣ ಇರಲಿಲ್ಲ' ಎಂದು ತಿಳಿಸಿವೆ.

5ನೇ ಪುಟ ನೋಡಿ

ಆರನೇ ಹಂತದ ಮತದಾನ ಇಂದು

ಲೋಕಸಭಾ ಚುನಾವಣೆಯ ಆರನೇ ಹಂತದ ಮತದಾನವು ಇಂದು ನಡೆಯಲಿದೆ. ಈ ಹಂತದಲ್ಲಿ ಒಟ್ಟು 58 ಕ್ಷೇತ್ರಗಳಿಗೆ ಮತದಾನ ನಡೆಯಲಿದೆ. 889 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಇದೇ ಹಂತದಲ್ಲಿ ಒಡಿಶಾದ 42 ವಿಧಾನಸಭಾ ಕ್ಷೇತ್ರಗಳಿಗೂ ಮತದಾನ ನಡೆಯಲಿದೆ. ಉತ್ತರ ಭಾರತದ ಹಲವು ಭಾಗಗಳಲ್ಲಿ ತಾಪಮಾನವು ಅಧಿಕವಾಗಿದೆ. ಜೊತೆಗೆ, ಕೆಲವೆಡೆ ಮಳೆಯ ಮುನ್ಸೂಚನೆಯೂ ಇದೆ. ಹೀಗಾಗಿ, ಮತದಾರರ ಆರೋಗ್ಯವನ್ನು ಹಾಗೂ ಸುರಕ್ಷತೆಯನ್ನು ಗಮನದಲ್ಲಿ ಇಟ್ಟುಕೊಂಡು ಸಕಲ ಸಿದ್ಧತೆ ಮಾಡಿಕೊಂಡಿರುವುದಾಗಿ ಚುನಾವಣಾ ಆಯೋಗ ಹೇಳಿದೆ

58 ಲೋಕಸಭಾ ಕ್ಷೇತ್ರ | **889** ಅಭ್ಯರ್ಥಿಗಳು | **7** ರಾಜ್ಯಗಳು | **1** ಕೇಂದ್ರಾಡಳಿತ ಪ್ರದೇಶ



11.13 ಕೋಟಿ ಒಟ್ಟು ಮತದಾರರು

5.84 ಕೋಟಿ ಪುರುಷ ಮತದಾರರು | **5.29** ಕೋಟಿ ಮಹಿಳಾ ಮತದಾರರು

5,120 ಲಿಂಗತ್ವ ಅಲ್ಪಸಂಖ್ಯಾತರು

1.14 ಲಕ್ಷ ಮತಗಟ್ಟೆಗಳು

11.4 ಲಕ್ಷ ಮತಗಟ್ಟೆ ಸಿಬ್ಬಂದಿ

6 ಮತದಾನ ನಡೆಯಲಿರುವ ಲೋಕಸಭಾ ಕ್ಷೇತ್ರಗಳು

42 ಮತದಾನ ನಡೆಯಲಿರುವ ವಿಧಾನಸಭಾ ಕ್ಷೇತ್ರಗಳು

8.93 ಲಕ್ಷ 85 ವರ್ಷಕ್ಕೂ ಅಧಿಕ ವಯಸ್ಸಿನ ಮತದಾರರು

23,659 100 ವರ್ಷಕ್ಕೂ ಮೇಲ್ಪಟ್ಟ ಮತದಾರರು

9.58 ಲಕ್ಷ ಅಂಗವಿಕಲ ಮತದಾರರು

ಆಧಾರ: ಪಿಟಿಐ, ಚುನಾವಣಾ ಆಯೋಗದ ಪತ್ರಿಕಾ ಪ್ರಕಟಣೆ

ಪ್ರಜಾವಾಣಿ ಗ್ರಾಫಿಕ್ಸ್

ಪಾಸ್‌ಪೋರ್ಟ್ ರದ್ದು: ಪ್ರಜ್ವಲ್‌ಗೆ ನೋಟಿಸ್

ನವದೆಹಲಿ (ಪಿಟಿಐ): 'ರಾಜತಾಂತ್ರಿಕ ಪಾಸ್‌ಪೋರ್ಟ್ ಅನ್ನು ಏಕೆ ರದ್ದುಗೊಳಿಸಬಾರದು' ಎಂದು ಕೇಳಿ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ನೋಟಿಸ್ ಜಾರಿಗೊಳಿಸಿದೆ ಎಂದು ಮೂಲಗಳು ತಿಳಿಸಿವೆ.



ಲೈಂಗಿಕ ದೌರ್ಜನ್ಯದ ಆರೋಪಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರದ ಕೋರಿಕೆಯನ್ನು ಆಧರಿಸಿ ಪಾಸ್‌ಪೋರ್ಟ್ ಏಕೆ ರದ್ದುಮಾಡಬಾರದು ಎಂದು ಅದು ನೋಟಿಸ್ ಮೂಲಕ ಕೇಳಿದೆ. ಪ್ರಜ್ವಲ್ ಅವರು ಹೊಂದಿರುವ ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದುಪಡಿಸುವಂತೆ ರಾಜ್ಯ ಸರ್ಕಾರ ಸಲ್ಲಿಸಿದ್ದ ಮನವಿಯನ್ನು ಪರಿಶೀಲಿಸಲಾಗುತ್ತಿದೆ ಎಂದು ಮೂಲಗಳು ಗುರುವಾರ ತಿಳಿಸಿದ್ದವು. ಪ್ರಜ್ವಲ್ ಅವರು ಈಗ ಜರ್ಮನಿಯಲ್ಲಿದ್ದಾರೆ ಎಂದು ಹೇಳಲಾಗಿದೆ.

ಪ್ರಜ್ವಲ್ ಅವರ ಪಾಸ್‌ಪೋರ್ಟ್ ರದ್ದುಪಡಿಸಲು ಆರಂಭಿಸಿರುವ ಪ್ರಕ್ರಿಯೆಯ ಭಾಗವಾಗಿ ಈ ನೋಟಿಸ್ ನೀಡಲಾಗಿದೆ ಎಂದು ಉನ್ನತ ಮೂಲಗಳು ಹೇಳಿವೆ. ಇ–ಮೇಲ್ ಮೂಲಕ ನೋಟಿಸ್ ರವಾನಿಸಲಾಗಿದೆ ಎಂದು ಗೊತ್ತಾಗಿದೆ. ಪಾಸ್‌ಪೋರ್ಟ್ ರದ್ದಾದರೆ ಪ್ರಜ್ವಲ್ ಅವರು ವಿದೇಶದಲ್ಲಿ ಇರುವುದು ಅಕ್ರಮವಾಗುತ್ತದೆ. ಅವರು ಇರುವ ದೇಶದ ಅಧಿಕಾರಿಗಳು ಕಾನೂನಿನ ಕ್ರಮಕ್ಕೆ ಮುಂದಾಗಬಹುದು ಎಂದು ಅಧಿಕಾರಿಯೊಬ್ಬರು ವಿವರಿಸಿದ್ದಾರೆ.

ಇನ್ನಷ್ಟು ಸುದ್ದಿಗಳು 11

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಅಭಿಯಂತರರ ಕಛೇರಿ,
ರಾಮನಗರ ವಿಶೇಷ ವಿಭಾಗ, ರಾಮನಗರ.

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ : 01/2024-25 ದಿನಾಂಕ : 23-05-2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ರಾಮನಗರ ವಿಶೇಷ ವಿಭಾಗ ವ್ಯಾಪ್ತಿಯಲ್ಲಿ 2024-25 ನೇ ಸಾಲಿನಲ್ಲಿ ಅರ್ಹ ಗುತ್ತಿಗೆದಾರರಿಂದ 01 ಸಂಖ್ಯೆಯ ಅಂದಾಜು ಮೊತ್ತ ರೂ. 3.00 ಲಕ್ಷಗಳ ಕಾಮಗಾರಿಗೆ ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಪ್ರತ್ಯೇಕ ಕೆಲಸಗಳ ವಿವರ, ಟೆಂಡರ್‌ಗಿಟ್ಟಿರುವ ಮೊತ್ತ, ಇ.ಎಂ.ಡಿ. ಮುಂತಾದ ಇತರೆ ಮಾಹಿತಿಗಳನ್ನು https://kppp.karnataka.gov.in ವೆಬ್‌ಸೈಟ್ ಮೂಲಕ ಅಥವಾ ಸದರಿ ಕಛೇರಿಯಿಂದ ಪಡೆಯಬಹುದಾಗಿರುತ್ತದೆ. ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ.

1) ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಟೆಂಡರ್ ಡಾಕ್ಯೂಮೆಂಟ್ ಅನ್ನು ದಿನಾಂಕ : 24-05-2024 ರಿಂದ 01-06-2024 ರವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. 2) ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ದಿನಾಂಕ : 01-06-2024 ವೇಳೆ 16.00 ಗಂಟೆಯೊಳಗೆ ಸಲ್ಲಿಸುವುದು. 3) ಟೆಂಡರ್‌ಗಳನ್ನು ತೆರೆಯುವ ದಿನಾಂಕ : 03-06-2024 ವೇಳೆ 11.30 ಗಂಟೆ (ಸಾಧ್ಯವಾದಲ್ಲಿ).

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ,
ರಾಮನಗರ.

ಡಿಐಪಿಆರ್/ರಾಮನಗರ/06/ಮಣಿಪಾಲ್/2024-25

ಬಿಎಂಟಿಸಿಗೆ 'ಹೆಲ್ತ್ ವರ್ಕ್‌ಪ್ಲೇಸ್' ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕೆಲಸದ ಸ್ಥಳಗಳಲ್ಲಿ ಸಿಬ್ಬಂದಿಯ ಆರೋಗ್ಯ, ಯೋಗಕ್ಷೇಮಕ್ಕೆ ಆದ್ಯತೆ ನೀಡಿ ಕಾರ್ಯಕ್ರಮ ರೂಪಿಸಿದ್ದಕ್ಕಾಗಿ ಆರೋಗ್ಯ ವರ್ಲ್ಡ್ ಸಂಸ್ಥೆ ನೀಡುವ 'ಹೆಲ್ತ್ ವರ್ಕ್‌ಪ್ಲೇಸ್-2024' ಬೆಳ್ಳಿ ಪ್ರಶಸ್ತಿಗೆ ಬಿಎಂಟಿಸಿ ಆಯ್ಕೆಯಾಗಿದೆ.

ಚಾಲಕರು, ನಿರ್ವಾಹಕರು ಸೇರಿದಂತೆ ಸಿಬ್ಬಂದಿಯ ದೈಹಿಕ, ಮಾನಸಿಕ ಆರೋಗ್ಯಕ್ಕಾಗಿ ಬಿಎಂಟಿಸಿ ಅನೇಕ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಕಾಲಕಾಲಕ್ಕೆ ಹೃದಯ ತಪಾಸಣಾ ಶಿಬಿರ, ಕಣ್ಣಿನ ಚಿಕಿತ್ಸಾ ಶಿಬಿರ, ಕ್ಯಾನ್ಸರ್ ತಪಾಸಣಾ ಶಿಬಿರ, ಮಾನಸಿಕ ಆರೋಗ್ಯ ಶಿಬಿರಗಳನ್ನು ನಡೆಸುತ್ತಿದೆ. ಇದನ್ನೆಲ್ಲ ಪರಿಗಣಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಡಿಸೆಂಬರ್‌ನಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

1,000 ವಿದ್ಯಾರ್ಥಿಗಳಿಗೆ ಪ್ರವೇಶ ಒದಗಿಸುವ ಗುರಿ

ಐಐಎಂ-ಬಿ: ಆನ್‌ಲೈನ್ ಬಿಬಿಎ ಕೋರ್ಸ್ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಆಡಳಿತ ನಿರ್ವಹಣಾ ಸಂಸ್ಥೆ- ಬೆಂಗಳೂರು (ಐಐಎಂ-ಬಿ) ಇದೇ ಮೊದಲ ಬಾರಿಗೆ ಮೂರು ವರ್ಷಗಳ ಆನ್‌ಲೈನ್ ಪದವಿ ಕೋರ್ಸ್ ಅನ್ನು ಪರಿಚಯಿಸಲು ಸಜ್ಜಾಗಿದೆ.

ಬ್ಯಾಚುಲರ್‌ಆಫ್‌ಬ್ಯುಸಿನೆಸ್‌ಅಡ್ಮಿನಿಸ್ಟ್ರೇಷನ್ ಇನ್ ಡಿಜಿಟಲ್ ಬ್ಯುಸಿನೆಸ್ ಅಂಡ್ ಎಂಟರ್ ಪ್ರೈನರ್‌ಶಿಪ್ (ಬಿಬಿಎ-ಡಿಬಿಇ) ಕೋರ್ಸ್ ಅನ್ನು ಸೆಪ್ಟೆಂಬರ್‌ನಲ್ಲಿ ಆರಂಭಿಸಲು ಐಐಎಂ-ಬಿ ಯೋಜಿಸಿದೆ. 1,000 ವಿದ್ಯಾರ್ಥಿಗಳಿಗೆ ಪ್ರವೇಶ ಒದಗಿಸುವ ಗುರಿಯನ್ನು ಅದು ಹೊಂದಿದೆ. 12ನೇ ತರಗತಿಯಲ್ಲಿ ಶೇ 60ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾದವರು ಈ ಕೋರ್ಸ್‌ಗೆ ಪ್ರವೇಶ ಪಡೆಯಲು ಅರ್ಹರು.

ರಾಷ್ಟ್ರೀಯ ಮಟ್ಟದ ಪ್ರವೇಶ ಪರೀಕ್ಷೆಯಲ್ಲಿ ಅರ್ಹತೆಗಳಿಸುವ ಮೂಲಕ ವಿದ್ಯಾರ್ಥಿಗಳು ಈ ಕೋರ್ಸ್‌ಗೆ ಪ್ರವೇಶ ಪಡೆಯಬಹುದು. ಕೋರ್ಸ್‌ನ ಶುಲ್ಕ ₹4.5 ಲಕ್ಷ. ಈ ಕೋರ್ಸ್ ಇಂಟರ್ನ್‌ಶಿಪ್ ಅವಕಾಶವನ್ನು ಒಳಗೊಂಡಿದೆ.

ಈ ಕೋರ್ಸ್‌ನಡಿ ಪ್ರತಿ ವರ್ಷ 45 ಕ್ರೆಡಿಟ್‌ಗಳನ್ನು ನೀಡಲಾಗುತ್ತದೆ. ಮೂರು ವರ್ಷದ ಈ ಕೋರ್ಸ್ ನಿರ್ಗಮನದ ಅವಕಾಶಗಳನ್ನು ಹೊಂದಿದ್ದು, ಮೊದಲ ವರ್ಷ ಪೂರೈಸಿದರೆ ಸರ್ಟಿಫಿಕೇಟ್, ಎರಡನೇ ವರ್ಷದ ಪೂರೈಸಿದರೆ ಡಿಪ್ಲೊಮಾ ಮತ್ತು ಮೂರನೇ ವರ್ಷ ಪೂರ್ಣಗೊಳಿಸಿದರೆ ಪದವಿ ನೀಡಲಾಗುತ್ತದೆ. ಐಐಎಂ-ಬಿ ಈ ಕೋರ್ಸ್‌ಗೆ ಜೂನ್ 15ರೊಳಗೆ ಅರ್ಜಿಗಳನ್ನು ಆಹ್ವಾನಿಸಲಿದೆ.

ಈ ಕುರಿತ ಸುದ್ದಿಗೋಷ್ಠಿಯಲ್ಲಿ ಐಐಎಂ-ಬಿ ನಿರ್ದೇಶಕ ಪ್ರೊ. ಋಷಿಕೇಶ ಟಿ. ಕೃಷ್ಣನ್, ಪ್ರಮುಖವಾಗಿ ಪಿ.ಜಿ ಕೋರ್ಸ್‌ಗಳನ್ನು ಕೇಂದ್ರೀಕರಿಸಿರುವ ಸಂಸ್ಥೆಯು ಪದವಿ ಕೋರ್ಸ್‌ಗಳತ್ತಲೂ ತನ್ನ ದೃಷ್ಟಿ ಹರಿಸಿದೆ. ಕೌಶಲ ಹೊಂದಿದ ಉದ್ಯೋಗಿಗಳನ್ನು ಸೃಷ್ಟಿಸುವ ಉದ್ದೇಶ ಸಂಸ್ಥೆಯದ್ದಾಗಿದೆ ಎಂದರು.

'ಆನ್‌ಲೈನ್ ಕೋರ್ಸ್‌ಗಳಲ್ಲಿ ಹೆಚ್ಚಿನ ಸಂಖ್ಯೆಯ ಪ್ರವೇಶಕ್ಕೆ ಅವಕಾಶವಿದ್ದು, ವೆಚ್ಚವೂ ಕಡಿಮೆ. ನಾವು ಒಂದು ಸಂಸ್ಥೆಯಾಗಿ 10 ವರ್ಷಗಳಿಂದ ಗುಣಮಟ್ಟದ ಆನ್‌ಲೈನ್ ಶಿಕ್ಷಣ ನೀಡುತ್ತಿದ್ದು, ಈಗ ಪೂರ್ಣ ಪ್ರಮಾಣದ ಕೋರ್ಸ್‌ಗಳನ್ನು ಪರಿಚಯಿಸುತ್ತಿದ್ದೇವೆ ಎಂದು ವಿವರಿಸಿದರು.

'ಏಕಕಾಲದಲ್ಲಿ ಪದವಿ, ಮತ್ತು ಡಿಜಿಟಲ್ ಕೌಶಲ ಪಡೆಯ ಬಯಸುವವರಿಗೆ ಈ ಕೋರ್ಸ್ ಸೂಕ್ತ' ಎಂದು ಕೃಷ್ಣನ್ ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಬಿಬಿಎ-ಡಿಬಿಇ ಕಾರ್ಯಕ್ರಮ ನಿರ್ದೇಶಕ ಪ್ರೊ. ಸುರೇಶ್ ಭಾಗವತುಲಾ, ಐಐಎಂ-ಬಿ ನಿರ್ದೇಶಕ ಪ್ರೊ. ಋಷಿಕೇಶ ಟಿ. ಕೃಷ್ಣನ್ ಮತ್ತು ಐಐಎಂ-ಬಿ ಡಿಜಿಟಲ್ ಕಲಿಕಾ ಕಾರ್ಯಕ್ರಮದ ಅಧ್ಯಕ್ಷರಾದ ಪ್ರೊ. ವಸಂತಿ ಶ್ರೀನಿವಾಸನ್ ಪಾಲ್ಗೊಂಡಿದ್ದರು.

ಜೆಡ್-28016/19/2024-ಪಿಎಂಎಸ್‌ಎಸ್‌ವೈ-4
ಭಾರತ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ
(ಪಿಎಂಎಸ್‌ಎಸ್‌ವೈ ಡಿವಿಜನ್)
ಕೊಠಡಿ ಸಂ. 201-ಡಿ, ನಿರ್ಮಾಣ ಭವನ, ನವದೆಹಲಿ-110011

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ (ಪಿಎಂಎಸ್‌ಎಸ್‌ವೈ ಡಿವಿಜನ್) ಇವರು, ವಿಜಯಪುರ (ಸಾಂಬಾ) (ಜಮ್ಮು & ಕಾಶ್ಮೀರ) ಮತ್ತು ಗುವಾಹಟಿ (ಅಸ್ಸಾಂ) ಗಳಲ್ಲಿ ತಲಾ ಒಂದು ಡೆಪ್ಯೂಟಿ ಡೈರೆಕ್ಟರ್ (ಆಡಳಿತ) ಹುದ್ದೆಯನ್ನು ಹಂತ-13 ರಲ್ಲಿ (ರೂ. 123100-215900) (7ನೇ ಸಿಪಿಸಿ ಪ್ರಕಾರ) ಟ್ರಾನ್ಸ್‌ಫರ್ ಆನ್ ಡೆಪ್ಯುಟೇಶನ್ ಆಧಾರದಲ್ಲಿ ಭರ್ತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.
ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಸಚಿವಾಲಯದ ಮತ್ತು ಡಿವಿಜನ್ ವೆಬ್‌ಸೈಟ್‌ಗೆ ಭೇಟಿ ಕೊಡಿ https://www.mohfw.gov.in ಮತ್ತು https://pmssy-mohfw.gov.in.
ವಿವರವಾದ ಜಾಹೀರಾತನ್ನು ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯಲ್ಲಿ ಜಾಹೀರಾತು ಪ್ರಕಟಗೊಂಡ ದಿನಾಂಕದಿಂದ 45ನೇ ದಿನ, ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿರುತ್ತದೆ.

ಸಹಿ/-
ದಿನೇಶ್ ಕುಮಾರ್
ಜಂಟಿ ನಿರ್ದೇಶಕರು
ಫೋನ್: 011-23061730

CBC 17101/11/0005/2425

19ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಚೆನ್ನಮ್ಮನವರು
(ಲೇಟ್ ಮೊಳ್ಳೇಕರೀಗೌಡರ ಧರ್ಮಪತ್ನಿ, ಬೊಮ್ಮನದೊಡ್ಡಿ, ಮದ್ದೂರು ತಾ||)
ನಿಧನ : 25-05-2005

ನೀವುಗಳು ನಮ್ಮನ್ನಗಲಿದರೂ ನಿಮ್ಮ ಸರಳತೆ
ಪ್ರೀತಿ ಮತ್ತು ಆದರ್ಶಗಳೆ ನಮಗೆ ದಾರಿದೀಪ ನಿಮ್ಮ ಸವಿನೆನಪು
ಸದಾ ಹಸಿರಾಗಿ ನಮ್ಮ ಮನದಲ್ಲಿರುತ್ತದೆ.
ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುವ

ಸದಾ ನಿಮ್ಮ ನೆನಪಿನಲ್ಲಿರುವ : ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮುಮ್ಮಕ್ಕಳು, ಬಂಧು-ಮಿತ್ರರು, ಅವ್ವ ಕುಟುಂಬ, ಬೊಮ್ಮನದೊಡ್ಡಿ, ಮದ್ದೂರು ತಾ|| ಮತ್ತು ಜೆ.ಪಿ. ನಗರ, ಬೆಂಗಳೂರು
ಪ್ಯಾರಾಮೌಂಟ್ ಸಮೂಹ ವರ್ಗದ ಸಿಬ್ಬಂದಿಗಳು ಮತ್ತು ಕಾರ್ಮಿಕ ವರ್ಗ, ಬಿಡದಿ

ತಂದೆ ಭಯ: ಎಎಸ್‌ಐ ಪುತ್ರನಿಂದ ಅಪಹರಣ ನಾಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಹಾಯಕ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಎಎಸ್‌ಐ) ಮಗನೆಂಬ ಕಾರಣಕ್ಕೆ ಯಾರೋ ಅಪರಿಚಿತರು ನನ್ನನ್ನು ಅಪಹರಣ ಮಾಡಿದ್ದರು' ಎಂಬುದಾಗಿ ನಾಟಕವಾಡಿದ್ದ ಯುವಕನನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. 'ಜ್ಞಾನಭಾರತಿ ಬಳಿಯ ಬಸವೇಶ್ವರ ಬಡಾವಣೆಯ ಗೌತಮ್ ಸುಭಾಷ್ ಎಸ್. ಅವರು ಅಪಹರಣ ಹಾಗೂ ಹಲ್ಲೆ ಸಂಬಂಧ ದೂರು ನೀಡಿದ್ದರು. ತನಿಖೆ ಕೈಗೊಂಡಾಗ, ಗೌತಮ್ ನಾಟಕವಾಡಿದ್ದ ಸಂಗತಿ ಗೊತ್ತಾಗಿದೆ. ಸುಳ್ಳು ದೂರು ನೀಡಿದ್ದ ಯುವಕನ ಮೇಲೆ ಕಾನೂನು ಕ್ರಮ ಕೈಗೊಳ್ಳಲು ಚಿಂತಸುತ್ತಿದ್ದೇವೆ' ಎಂದು ಪೊಲೀಸರು ಹೇಳಿದರು.

'ಗೌತಮ್ ಮೇ 20ರಂದು ಸ್ನೇಹಿತರನ್ನು ಭೇಟಿಯಾಗಲು ಕೆಂಗೇರಿಗೆ ಬೈಕ್‌ನಲ್ಲಿ ಹೋಗಿದ್ದ. ಸ್ನೇಹಿತರ ಜೊತೆ ಸೇರಿ ಮದ್ಯ ಕುಡಿದಿದ್ದ. ವಾಪಸು ಮನೆಗೆ ಹೋಗುತ್ತಿದ್ದಾಗ, ಬೈಕ್ ಉರುಳಿ ಬಿದ್ದು ಅಪಘಾತ ಸಂಭವಿಸಿ, ಬೈಕ್ ಜಖಂಗೊಂಡಿತ್ತು. ಗೌತಮ್‌ನ ಮೊಬೈಲ್ ಸಹ ರಸ್ತೆಗೆ ಬಿದ್ದು ಒಡೆದು ಹೋಗಿತ್ತು.'

'ಅಪಘಾತದ ಸುದ್ದಿ ತಂದೆಗೆ ಗೊತ್ತಾದರೆ ಬೈಯುತ್ತಾರೆಂದು ಭಾವಿಸಿದ್ದ ಗೌತಮ್, ಅಪಹರಣ ನಾಟಕವಾಡಲು ತೀರ್ಮಾನಿಸಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

ತಂಬಾಕು ಉತ್ಪನ್ನ: ಕ್ರಮಕ್ಕೆ ಮನವಿ

ಬೆಂಗಳೂರು: ರಾಜ್ಯದಲ್ಲಿ ಇ-ಕಾಮರ್ಸ್ ಜಾಲತಾಣ ಮತ್ತು ಆ್ಯಪ್‌ಗಳಲ್ಲಿ ತಂಬಾಕು ಉತ್ಪನ್ನಗಳನ್ನು ಅಕ್ರಮವಾಗಿ ಮಾರಲಾಗುತ್ತಿದೆ. ಈ ಬಗ್ಗೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್ ಅವರು ಸಿಐಡಿ ಸೈಬರ್ ವಿಭಾಗದ ಎಸ್‌ಪಿ ಅವರಿಗೆ ಮನವಿ ಮಾಡಿದ್ದಾರೆ.

'ಅಪಪ್ರಚಾರದಲ್ಲಿ ಬಿಜೆಪಿಯದು ಎತ್ತಿದ ಕೈ'

ಕೋಲಾರ: 'ಬಿಜೆಪಿ ಸರ್ಕಾರದ ಅವಧಿಯಲ್ಲಿ ಎಷ್ಟು ಕೊಲೆಗಳಾಗಿದ್ದವು, ಎಷ್ಟು ಹೆಣ್ಣುಮಕ್ಕಳ ಮೇಲೆ ದೌರ್ಜನ್ಯ ನಡೆದಿತ್ತು ಎಂಬುದನ್ನು ಹೇಳಲು ನಾನು ಹೋಗುವುದಿಲ್ಲ. ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಅಪರಾಧ ಪ್ರಕರಣಗಳು ತಗ್ಗಿವೆ. ಅಪಪ್ರಚಾರದಲ್ಲಿ ಬಿಜೆಪಿಯದ್ದು ಎತ್ತಿದ ಕೈ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಸುರೇಶ್ ಹರಿಹಾಯ್ದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಬಿಜೆಪಿ ಅವಧಿಯಲ್ಲಿ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಅತ್ಯಾಚಾರ ನಡೆದಿತ್ತು. ಹೆಣ್ಣುಮಗಳು ರಾತ್ರಿ 9 ಗಂಟೆಗೆ ಅಲ್ಲಿಗೆ ಏಕೆ ಹೋಗಿದ್ದರು ಎಂಬುದಾಗಿ ಅಂದಿನ ಗೃಹಸಚಿವರು ಬೇಜವಾಬ್ದಾರಿ ಹೇಳಿಕೆ ನೀಡಿದ್ದರು. ಇಂಥ ಬಿಜೆಪಿಯವರಿಗೆ ನಮ್ಮ ಸರ್ಕಾರದ ಬಗ್ಗೆ ಮಾತನಾಡಲು ಯಾವ ನೈತಿಕತೆ ಇದೆ' ಎಂದು ಪ್ರಶ್ನಿಸಿದರು.

ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರ,
ಡಿ.ದೇವರಾಜ ಅರಸು ಬಡಾವಣೆ, ಟಮಕ, ಕೋಲಾರ -563103.
ದೂರವಾಣಿ ಸಂಖ್ಯೆ:08152-243142, ಇಮೇಲ್:kudakolar@gmail.com.
ಸಂಖ್ಯೆ:ಕೋನಪ್ರಾಕೋ:ಭೂಸ್ವಾ:ಪ:ಪ್ರಕಟಣೆ:08:2023-24
ದಿನಾಂಕ:20.05.2024

"ಸಾರ್ವಜನಿಕ ಪ್ರಕಟಣೆ"

ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಬರುವ ಕೋಲಾರ ಅಮಾನಿಕೆರೆ ಗ್ರಾಮದ ಜಮೀನುಗಳಲ್ಲಿ ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ನಿವೇಶನಗಳನ್ನು ಹಂಚಿಕೆ ಮಾಡುವ ಸಂಬಂಧ ವಸತಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿರುತ್ತದೆ. ಹಾಗಾಗಿ, ಪ್ರಾಧಿಕಾರವು ಜಂಟಿ ಅಭಿವೃದ್ಧಿ ಯೋಜನೆಗಾಗಿ 50:50ರ ಅನುಪಾತದಲ್ಲಿ ಕೋಲಾರ ಅಮಾನಿಕೆರೆ ಗ್ರಾಮದ ಜಮೀನುಗಳಲ್ಲಿ ವಸತಿ ಯೋಜನೆ ರೂಪಿಸಲು ಉದ್ದೇಶಿಸಲಾಗಿದ್ದು, ಉದ್ದೇಶಿತ ಬಡಾವಣೆಗಾಗಿ ಸ್ವ-ಇಚ್ಛೆಯಿಂದ ಭೂಮಿಯನ್ನು ನೀಡಲು ಆಸಕ್ತಿ ಇರುವ ಜಮೀನಿನ ಮಾಲೀಕರುಗಳು ಈ ಪ್ರಾಧಿಕಾರವನ್ನು ಸಂಪರ್ಕಿಸಲು ಕೋರಲಾಗಿದೆ.

ಒಂದು ವೇಳೆ ಜಮೀನಿನ ಮಾಲೀಕರುಗಳು ಸ್ವ-ಇಚ್ಛೆಯಿಂದ ಜಮೀನುಗಳನ್ನು ಬಿಟ್ಟುಕೊಡಲು ಮುಂದೆ ಬಾರದೇ ಇದ್ದಲ್ಲಿ ಕೋಲಾರ ತಾಲ್ಲೂಕು, ಕಸಬಾ ಹೋಬಳಿ, ಕೋಲಾರ ಅಮಾನಿಕೆರೆ ಗ್ರಾಮದ ಜಮೀನುಗಳನ್ನು ಹಂತ ಹಂತವಾಗಿ ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದಿಂದ ವಸತಿ ಯೋಜನೆ ಕೈಗೆತ್ತಿಕೊಳ್ಳುವ ಸಂಬಂಧ ಭೂಸ್ವಾಧೀನಪಡಿಸಿಕೊಳ್ಳಲು ಕ್ರಮವಹಿಸಲಾಗುವುದು ಎಂಬ ಮಾಹಿತಿಯನ್ನು ಕೋಲಾರ ಅಮಾನಿಕೆರೆ ಗ್ರಾಮದ ಜಮೀನುಗಳ ಮಾಲೀಕರುಗಳಿಗೆ ಈ ಮೂಲಕ ತಿಳಿಯಪಡಿಸಿದೆ.

ಸಹಿ/- ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:03/ಕೆಎಸ್‌ಎಂ.ಸಿ.ಎ/2024-25

Azadi Ka Amrit Mahotsav | WDRA Warehousing Development & Regulatory Authority

ಉಗ್ರಾಣ ಅಭಿವೃದ್ಧಿ ಮತ್ತು ನಿಯಂತ್ರಣ ಪ್ರಾಧಿಕಾರ
ಭಾರತ ಸರ್ಕಾರ
ಎನ್‌ಸಿಯುಐ ಬಿಲ್ಡಿಂಗ್, 4ನೇ ಮಹಡಿ, 3, ಸಿರಿ ಇನ್‌ಸ್ಟಿಟ್ಯೂಷನಲ್ ಏರಿಯಾ, ಆಗಸ್ಟ್ ಕ್ರಾಂತಿ ಮಾರ್ಗ, ಹೌಜ್ ಖಾಸ್, ನವದೆಹಲಿ - 110016,
ದೂರವಾಣಿ ಸಂ. 49536496, 49092978

ಎಫ್. ನಂ. ಡಬ್ಲ್ಯುಡಿಆರ್‌ಎ-ಹೆಚ್‌ಆರ್‌ಒಡಿಪಾ(ಡಿಡಿಎಸ್‌ಆರ್)/1/2023-ಎಚ್‌ಆರ್/736 ದಿನಾಂಕ: 14.05.2024

ಉಗ್ರಾಣ ಅಭಿವೃದ್ಧಿ ಮತ್ತು ನಿಯಂತ್ರಣ ಪ್ರಾಧಿಕಾರ (ವೇರ್‌ಹೌಸಿಂಗ್ ಡೆವಲಪ್‌ಮೆಂಟ್ ಅಂಡ್ ರೆಗ್ಯುಲೇಟರಿ ಅಥಾರಿಟಿ - ಡಬ್ಲ್ಯುಡಿಆರ್‌ಎ) ಇವರು ಕೆಳಕಂಡ ಹುದ್ದೆಗಳನ್ನು ಡೆಪ್ಯುಟೇಶನ್/ಅಬ್ಸಾರ್ಪ್ಷನ್ ಆಧಾರದಲ್ಲಿ ಭರ್ತಿ ಮಾಡಿಕೊಳ್ಳಲು ಕೇಂದ್ರ/ರಾಜ್ಯ ಸರ್ಕಾರಗಳ/ಕೇಂದ್ರ ಮತ್ತು ರಾಜ್ಯ ಪಿಎಸ್‌ಯು'ಗಳ/ ಸ್ವಾಯುತ್ತ/ ಶಾಸನಬದ್ಧ ಅಂಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ ಸಿಬ್ಬಂದಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ:

ಕ್ರ.ಸಂ.	ಹುದ್ದೆಯ ಹೆಸರು	ಖಾಲಿಹುದ್ದೆಗಳ ಸಂಖ್ಯೆ	ಜಾಹೀರಾತು ಸಂಖ್ಯೆ ಮತ್ತು ದಿನಾಂಕ
1	ಅಂಡರ್ ಸೆಕ್ರೆಟರಿ (ಟೆಕ್ನಿಕಲ್) [ಹಂತ-11 (ರೂ. 67700-208700) (7ನೇ ಸಿಪಿಸಿ)]	01	ನಂ. ಡಬ್ಲ್ಯುಡಿಆರ್‌ಎ-ಎಚ್‌ಆರ್‌ಒಡೆಪಾ (ಯುಎಸ್‌ಟಿ)/1/2023-ಎಚ್‌ಆರ್/3048 ದಿನಾಂಕ: 08.03.2024
2	ಡೆಪ್ಯೂಟಿ ಡೈರೆಕ್ಟರ್ (ಸ್ಟ್ರಾಟೆಜಿ ರಿಸ್ಕ್ & ರಿಸರ್ಚ್) [ಹಂತ-11 (ರೂ. 67700-208700) (7ನೇ ಸಿಪಿಸಿ)]	01	ನಂ. ಡಬ್ಲ್ಯುಡಿಆರ್‌ಎ-ಎಚ್‌ಆರ್‌ಒಡೆಪಾ(ಡಿಡಿಎಸ್‌ಆರ್)/1/2023-ಎಚ್‌ಆರ್/3064 ದಿನಾಂಕ: 11.03.2024
3	ಪ್ರಿನ್ಸಿಪಾಲ್ ಪ್ರೈವೇಟ್ ಸೆಕ್ರೆಟರಿ (ಪಿಪಿಎಸ್) [ಹಂತ-11 (ರೂ. 67700-208700) (7ನೇ ಸಿಪಿಸಿ)]	01	ನಂ. ಡಬ್ಲ್ಯುಡಿಆರ್‌ಎ-ಎಚ್‌ಆರ್‌ಒಡೆಪಾ(ಯುಎಸ್‌ಟಿ)/1/2023-ಎಚ್‌ಆರ್/3048 ದಿನಾಂಕ: 08.03.2024
4	ಡೆಪ್ಯೂಟಿ ಡೈರೆಕ್ಟರ್ (ಲೀಗಲ್) [ಹಂತ-11 (ರೂ. 67700-208700) (7ನೇ ಸಿಪಿಸಿ)]	01	ನಂ. ಡಬ್ಲ್ಯುಡಿಆರ್‌ಎ-ಎಚ್‌ಆರ್‌ಒಡೆಪಾ(ಡಿಡಿಎಸ್‌ಆರ್)/1/2023-ಎಚ್‌ಆರ್/735 ದಿನಾಂಕ: 14.05.2024
5	ಡೆಪ್ಯೂಟಿ ಡೈರೆಕ್ಟರ್ (ಮಾನವ ಸಂಪನ್ಮೂಲ) [ಹಂತ-11 (ರೂ. 67700-208700) (7ನೇ ಸಿಪಿಸಿ)]	01	ನಂ. ಡಬ್ಲ್ಯುಡಿಆರ್‌ಎ-ಎಚ್‌ಆರ್‌ಒಡೆಪಾ(ಡಿಡಿಎಸ್‌ಆರ್)/1/2023-ಎಚ್‌ಆರ್/735 ದಿನಾಂಕ: 14.05.2024
6	ಅಸಿಸ್ಟಂಟ್ ಡೈರೆಕ್ಟರ್ (ಸ್ಟೇಕ್‌ಹೋಲ್ಡರ್ಸ್ ಅಫೇರ್ಸ್) [ಹಂತ-8 (ರೂ. 47600-151100) (7ನೇ ಸಿಪಿಸಿ)]	01	ನಂ. ಡಬ್ಲ್ಯುಡಿಆರ್‌ಎ-ಎಚ್‌ಆರ್‌ಒಡೆಪಾ(ಡಿಡಿಎಸ್‌ಆರ್)/1/2023-ಎಚ್‌ಆರ್/735 ದಿನಾಂಕ: 14.05.2024

ವಿವರವಾದ ಮಾಹಿತಿಯನ್ನು ಪ್ರಾಧಿಕಾರದ www.wdra.gov.in ವೆಬ್‌ಸೈಟ್‌ನಲ್ಲಿ ಕಾಣಬಹುದು. ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯಲ್ಲಿ ಖಾಲಿಹುದ್ದೆಗಳ ಸುತ್ತೋಲೆ ಪ್ರಕಟಗೊಂಡ ದಿನಾಂಕದಿಂದ 30 ದಿನಗಳೊಳಗೆ, ವೆಬ್‌ಸೈಟ್‌ನಲ್ಲಿ ಲಭ್ಯವಿರುವ ನಿರ್ದಿಷ್ಟ ನಮೂನೆಯ ಅರ್ಜಿಯನ್ನು ಭರ್ತಿ ಮಾಡಿ ಸಹಾಯಕ ನಿರ್ದೇಶಕರು (ಮಾನವ ಸಂಪನ್ಮೂಲ), ಉಗ್ರಾಣ ಅಭಿವೃದ್ಧಿ ಮತ್ತು ನಿಯಂತ್ರಣ ಪ್ರಾಧಿಕಾರ, ನವದೆಹಲಿ ಇವರಿಗೆ ಸಲ್ಲಿಸುವುದು. ತಿದ್ದುಪಡಿ ಮುಂತಾದವುಗಳು ಎದುರಾದಲ್ಲಿ, ಅಂತಹವುಗಳನ್ನು ಡಬ್ಲ್ಯುಡಿಆರ್‌ಎ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ.

ಸೂಚನೆ: ದಿನಾಂಕ 21.02.2024ರ ಜಾಹೀರಾತು ಸಂಖ್ಯೆ ಡಬ್ಲ್ಯುಡಿಆರ್‌ಎ-ಎಚ್‌ಆರ್‌ಒಡೆಪಾ(ಡಿಡಿಎಲ್‌ಜಿ)/1/2023-ಎಚ್‌ಆರ್/2985 ಮುಖೇನ ಹೊರಡಿಸಲಾಗಿದ್ದ ಡೆಪ್ಯೂಟಿ ಡೈರೆಕ್ಟರ್ (ಲೀಗಲ್) ಹುದ್ದೆಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಪುನಃ ಅರ್ಜಿ ಸಲ್ಲಿಸಬೇಕಾಗಿಲ್ಲ. ಅದಾಗ್ಯೂ, ಅವರು ಬಯಸುವುದಾದಲ್ಲಿ, ತಮ್ಮ ಅರ್ಜಿಯನ್ನು ಅಪ್‌ಡೇಟ್ ಮಾಡಬಹುದು. ಈ ಜಾಹೀರಾತಿಗೆ ಪ್ರತಿಯಾಗಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಜೊತೆಯಲ್ಲಿಯೇ ಅವರ ಅಭ್ಯರ್ಥಿತನವನ್ನೂ ಡಬ್ಲ್ಯುಡಿಆರ್‌ಎ ಇವರು ಪರಿಗಣಿಸುತ್ತಾರೆ.

ಸಹಿ/-
ವಿನಿತಾ ಸೊಲೊಮನ್
ಸಹಾಯಕ ನಿರ್ದೇಶಕರು (ಎಚ್‌ಆರ್)

CBC 08109/12/0001/2425

IN THE COURT OF THE 3rd ADDL CIVIL JUDGE AND JMFC AT ANEKAL
C. Misc. No.530/2024.
BETWEEN: Sri.Nataraju S/o Munikrishnappa Aged about 39 years R/at Maranayakanahalli Village, Attibele Hobli, Anekal Taluk, Banglaore District, ...Petitioner.
AND: The Tahasildhar Anekal Taluk ...Respondent.
PAPER PUBLICATION
Whereas the petitioner have filed the above petition for seeking the death certificate of Petitioner mother namely **Papamma W/o Late Munikrishnappa,** who was died on **10-01-1998** at Maranayakanahalli Village, Attibele Hobli, Anekal Taluk, Bangalore District, before the 3rd Addl Civil Judge at Anekal, whereas the above petition is fixed for hearing date.15/06/24 at 11.00 AM if anybody interest in this matter regard to appear in this court in personally or by a pleader to file objections the same of you failing which the petition will be disposed on enquiry.
Given under my hand and seal of the Court on this 23th day of May 2024.
By Order of the Court
Sd/- Sheristedar
Civil Judge Jr(DVN) and JMFC Court, Anekal
Advocate for Petitioner Sri. M.A. Shivaraju Advocate,
1st Floor, Venkatachalaiah Building Attibele Main Road, Anekal Town, Anekal Taluk, Bangalore District

IN THE COURT OF THE 3rd ADDL CIVIL JUDGE AND JMFC AT ANEKAL
C. Misc. No.531/2024.
BETWEEN: Sri.Nataraju S/o Munikrishnappa Aged about 39 years R/at Maranayakanahalli Village, Attibele Hobli, Anekal Taluk, Banglaore District, ...Petitioner.
AND: The Tahasildhar Anekal Taluk ...Respondent.
PAPER PUBLICATION
Whereas the petitioner have filed the above petition for seeking the death certificate of Petitioner father namely **Munikrishnappa S/o Late Arasappa,** who was died on **01-06-1992** at Maranayakanahalli Village, Attibele Hobli, Anekal Taluk, Bangalore District, before the 3rd Addl Civil Judge at Anekal, whereas the above petition is fixed for hearing date.15/6/24 at 11.00 AM if anybody interest in this matter regard to appear in this court in personally or by a pleader to file objections the same of you failing which the petition will be disposed on enquiry.
Given under my hand and seal of the Court on this 23th day of May 2024.
By Order of the Court
Sd/- Sheristedar
Civil Judge Jr(DVN) and JMFC Court, Anekal
Advocate for Petitioner Sri. M.A. Shivaraju Advocate,
1st Floor, Venkatachalaiah Building Attibele Main Road, Anekal Town, Anekal Taluk, Bangalore District

ನೈಋತ್ಯ ರೈಲ್ವೆ
ಇ-ಟೆಂಡರು ಸೂಚನೆ ಸಂ.: 18/2024, ದಿನಾಂಕ: 20.05.2024
ಭಾರತದ ರಾಷ್ಟ್ರಪತಿಯವರ ಪರವಾಗಿ, ಕೆಳಗೆ ಸಹಿಮಾಡಿದವರು ಆರ್‌ಇಪಿಎಸ್ ಮೂಲಕ ಕೆಳಗಿನ ಸಾಮಗ್ರಿಗಳನ್ನು ಒದಗಿಸಲು ಇ-ಟೆಂಡರನ್ನು ಆಹ್ವಾನಿಸಲಾಗಿದೆ.

ಕ್ರ.	ಟೆಂಡರು ಸಂ.:	ಸಂಕ್ಷಿಪ್ತ ವಿವರಣೆ
1	ಎಲ್ 8245765	140ಟಿ ಬಿಡಿ ಗೊಟ್ಟ್‌ವಾಲ್ಡ್ ಕ್ರೇನ್‌ಗಾಗಿ 2 ವರ್ಷಗಳ ವಾರಂಟಿಯೊಂದಿಗೆ ಅಡ್ವಾನ್ಸ್‌ಡ್ ಟಚ್ ಸ್ಕ್ರೀನ್ ಆಧಾರಿತ ಎಸ್‌ಎಲ್‌ಐ ಸಿಸ್ಟಮ್ (ಮೆಕ್ಯಾನಿಕಲ್ ಮೇಕ್ ಮಾದರಿ: ಎಂಎಸ್‌ಟಿಎಸ್9000 ಸಮಾನತೆಯ) ನ ಪೂರೈಕೆ ಮತ್ತು ಅಳವಡಿಕೆ. (ಪರಿಮಾಣ: 01 ನಂ.)
2	ಎಲ್ 8245759	ಹಕ್ ಬೋಲ್ಟಿಂಗ್ ಯಂತ್ರ - ಎಲ್ಲಾ ಮಾದರಿಯ ಬೋಲ್ಟಿಂಗ್ ಗನ್‌ಗಳು, ಸಾಧಾರಣ ಬಿಡಿಭಾಗಗಳೊಂದಿಗೆ - ಪೂರೈಕೆ, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವಿಕೆ. (ಪರಿಮಾಣ: 02 ಸೆಟ್)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 10.06.2024, 10:30 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
PUB/103/AAD/PRB/SWR/2024-25 ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು, ಬೆಂಗಳೂರು
South Western Railway - SWR | SWRRLY | SWRRLY

ನಿಧನ ವಾರ್ತೆ

ಎನ್.ಎಸ್. ಶ್ರೀನಾಥ್

ಬೆಂಗಳೂರು: ಕರೂರು ವೈಶ್ಯ ಬ್ಯಾಂಕ್‌ನ ನಿವೃತ್ತ ಅಧ್ಯಕ್ಷ ಎನ್.ಎಸ್. ಶ್ರೀನಾಥ್ (72) ಅವರು ನಗರದಲ್ಲಿ ಶುಕ್ರವಾರ ನಿಧನರಾದರು.



ಮೃತರಿಗೆ ಪತ್ನಿ ನಳಿನಿ ಮತ್ತು ಇಬ್ಬರು ಪುತ್ರಿಯರು ಇದ್ದಾರೆ. ಮೃತರ ಇಚ್ಛೆ ಅನುಸಾರ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ದೇಹದಾನ ಮಾಡಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

70ರ ದಶಕದಲ್ಲಿ ಕೆನರಾ ಬ್ಯಾಂಕ್‌ಗೆ ಸೇರ್ಪಡೆಯಾಗುವ ಮೂಲಕ ಶ್ರೀನಾಥ್ ಅವರು ಬ್ಯಾಂಕಿಂಗ್ ಕ್ಷೇತ್ರಕ್ಕೆ ಅಡಿ ಇಟ್ಟಿದ್ದರು. 2006ರಲ್ಲಿ ಕೆನರಾ ಬ್ಯಾಂಕ್‌ನ ಪ್ರಧಾನ ವ್ಯವಸ್ಥಾಪಕರಾಗಿ ಬಡ್ತಿ ಹೊಂದಿದ್ದರು. 2009ರಲ್ಲಿ ಕೇಂದ್ರ ಸರ್ಕಾರವು ಅವರನ್ನು ಬ್ಯಾಂಕ್ ಆಫ್ ಬರೋಡಾದ ಕಾರ್ಯ ನಿರ್ವಾಹಕ ನಿರ್ದೇಶಕರನ್ನಾಗಿ ನೇಮಿಸಿತ್ತು. ಬಳಿಕ ಅವರು ಕರೂರು ವೈಶ್ಯ ಬ್ಯಾಂಕ್‌ನ ನಿರ್ದೇಶಕ ಮತ್ತು ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್
DIAGEO INDIA
ನೋಂದಾಯಿತ ಕಛೇರಿ: 'ಯುಬಿ ಟವರ್', # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001.
ಫೋನ್: +91 80 4544 8000, 2221 0705; ಫ್ಯಾಕ್ಸ್: +91 80 3985 6862
ಇಮೇಲ್: contactus.India@diageo.com ವೆಬ್‌ಸೈಟ್: www.diageoindia.com
ಕಾರ್ಪೋರೇಟ್ ಐಡೆಂಟಿಟಿ ನಂಬರ್: L01551KA1999PLC024991

ಮಾರ್ಚ್ 31, 2024ಕ್ಕೆ ಅಂತ್ಯವಾದ ತ್ರೈಮಾಸಿಕ ಮತ್ತು ವರ್ಷದ ಪ್ರತ್ಯೇಕಿತ ಮತ್ತು ಕ್ರೋಢೀಕೃತ ಆರ್ಥಿಕ ಫಲಿತಾಂಶಗಳ ವಿವರಣೆ

(ರೂ. ಕೋಟಿಗಳಲ್ಲಿ, ಪ್ರತಿ ಷೇರಿನ ಡೇಟಾದ ಆದಾಯವನ್ನು ಹೊರತುಪಡಿಸಿ)

ಕ್ರ. ಸಂಖ್ಯೆ	ವಿವರಗಳು	ಪ್ರತ್ಯೇಕಿತ			ಕ್ರೋಢೀಕೃತ		
		ಮಾರ್ಚ್ 31, 2024 ತ್ರೈಮಾಸಿಕ ಪರಿಶೋಧಿಸದಿರುವ	ಮಾರ್ಚ್ 31, 2024 ವಾರ್ಷಿಕ (ಪರಿಶೋಧಿಸಿದ)	ಮಾರ್ಚ್ 31, 2023 ತ್ರೈಮಾಸಿಕ ಪರಿಶೋಧಿಸದಿರುವ	ಮಾರ್ಚ್ 31, 2024 ತ್ರೈಮಾಸಿಕ ಪರಿಶೋಧಿಸದಿರುವ	ಮಾರ್ಚ್ 31, 2024 ವಾರ್ಷಿಕ (ಪರಿಶೋಧಿಸಿದ)	ಮಾರ್ಚ್ 31, 2023 ತ್ರೈಮಾಸಿಕ ಪರಿಶೋಧಿಸದಿರುವ
1.	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	6,394	25,389	5,783	6,511	26,018	5,792
2.	ಅವಧಿಗೆ ನಿವ್ವಳ ಲಾಭ (ಅಸಾಧಾರಣ ವಸ್ತುಗಳು ಮತ್ತು ತೆರಿಗೆಯ ಮೊದಲು)	491	1,703	250	343	1,874	148
3.	ತೆರಿಗೆಗೆ ಮುಂಚಿನ ಅವಧಿಯ ನಿವ್ವಳ ಲಾಭ (ಅಸಾಧಾರಣ ವಸ್ತುಗಳ ನಂತರ)	460	1,686	239	312	1,857	130
4.	ತೆರಿಗೆಯ ನಂತರದ ಅವಧಿಗೆ ನಿವ್ವಳ ಲಾಭ (ಅಸಾಧಾರಣ ವಸ್ತುಗಳ ನಂತರ)	384	1,312	204	241	1,408	102
5.	ಅವಧಿಯ ಒಟ್ಟು ಸಮಗ್ರ ಆದಾಯ	387	1,310	203	240	1,405	95
6.	ಈಕ್ವಿಟಿ ಷೇರು ಬಂಡವಾಳ	145	145	145	145	145	145
7.	ಇತರ ಈಕ್ವಿಟಿ	6,818	6,818	5,799	6,976	6,976	5,854
8.	ಗಳಿಕೆ/ (ನಷ್ಟ) ಪ್ರತಿ ಷೇರಿಗೆ (INR 2/- ಪ್ರತಿ) [ಕೆಳಗೆ ಟಿಪ್ಪಣಿ (ಬಿ) ಗಮನಿಸಿ] ಮೂಲ ಮತ್ತು ದುರ್ಬಲ (INR ಗಳಲ್ಲಿ)	5.28	18.04	2.80	3.40	19.83	1.45

ಟಿಪ್ಪಣಿಗಳು
ಎ) ಮೇಲಿನದು 2015ರ ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ನಿಯಂತ್ರಣಗಳ (ಪಟ್ಟಿ ಮಾಡುವಿಕೆ ಮತ್ತು ಇತರೆ ಘೋಷಣೆಗಳ ಅವಶ್ಯಕತೆಗಳು) 33ನೇ ನಿಯಂತ್ರಣದಡಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಫೈಲ್ ಮಾಡಿರುವ ಫಲಿತಾಂಶಗಳ ವಿವರವಾದ ನಮೂನೆಯ ಸಾರಾಂಶವಾಗಿದೆ. ಫಲಿತಾಂಶಗಳ ವಿವರವಾದ ನಮೂನೆಯು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್ www.bseindia.com ಮತ್ತು www.nseindia.com ಮತ್ತು ಕಂಪನಿಯ ವೆಬ್‌ಸೈಟ್ www.diageoindia.com ನಲ್ಲಿ ಲಭ್ಯವಿರುತ್ತದೆ.
ಬಿ) ಏಕೀಕೃತ ಹಣಕಾಸು ಅಡಿಯಲ್ಲಿ ವರ್ಷದ ಬಾಕಿ ಇರುವ ಈಕ್ವಿಟಿ ಷೇರುಗಳ ಸರಾಸರಿ ಸಂಖ್ಯೆಯನ್ನು ಲೆಕ್ಕಹಾಕುವಲ್ಲಿ, ಕಂಪನಿಯು ಯುಎಸ್‌ಎಲ್ ಬೆನಿಫಿಟ್ ಟ್ರಸ್ಟ್‌ನಲ್ಲಿ ಹೊಂದಿರುವ (ಕಂಪನಿಯ ಏಕೈಕ ಫಲಾನುಭವಿಯಾಗಿರುವ) ಸ್ವಂತ ಷೇರುಗಳನ್ನು ಕಡಿಮೆ ಮಾಡಿದೆ.

ನಿರ್ದೇಶಕರ ಮಂಡಳಿಯ ನಿಮಿತ್ತ ಮತ್ತು ಅವರ ಪರವಾಗಿ
ಸಹಿ/-
ಹಿನಾ ನಾಗರಾಜನ್
ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ

ಸ್ಥಳ : ಮುಂಬಯಿ
ದಿನಾಂಕ : ಮೇ 24, 2024

ನೈಋತ್ಯ ರೈಲ್ವೆ
ಇ-ಟೆಂಡರು ಸೂಚನೆ ಸಂ.: B/TRD.2024-25/03
ದಿನಾಂಕ: 17.05.2024
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
(1) ಮೈಸೂರು-ಬೆಂಗಳೂರು & ಬೆಂಗಳೂರು-ಧರ್ಮಾವರಂ ವಿಭಾಗದಲ್ಲಿರುವ ವಕ್ರ ರೇಖೆಗಳಲ್ಲಿ ಎಸ್‌ಇಗಳ ನಾಶಗೊಳಿಸುವಿಕೆ ಮತ್ತು ಬೆಳೆಸುವಿಕೆಯ ಕಾರಣ, ಓಹೆಚ್‌ಇ ಯ ಪ್ರೊಫೈಲ್ ಮತ್ತು ಸದೃಢತೆಯನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಓಹೆಚ್‌ಇ ಮೇಲಿನ ಮಾರ್ಪಾಡು ಕೆಲಸಗಳು. (2) ಮೈಸೂರಿನ ಕೊನೆಯಲ್ಲಿ ನಾಯಂಡಹಳ್ಳಿಯಲ್ಲಿ ಪ್ಲಾಟ್‌ಫಾರ್ಮ್ ವಿಸ್ತರಣೆಯ ಕಾರಣ ಓಹೆಚ್‌ಇ ಮೇಲಿನ ಮಾರ್ಪಾಡು ಕೆಲಸಗಳು. (3) ಎಸ್‌ಜಿಟಿ ಯಾರ್ಡ್ ರೋಡ್-01 ರಲ್ಲಿ 150 ಮೀ ಉದ್ದದ ಪಿಟ್ ಲೈನ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಓಹೆಚ್‌ಇ ಮೇಲಿನ ಮಾರ್ಪಾಡು ಕೆಲಸಗಳು. (4) ಬಿಡದಿ ಮತ್ತು ಮಂಡ್ಯ ಟಿಆರ್‌ಡಿ ಡಿಪೋನಲ್ಲಿ ಪ್ರಸ್ತಾವಿತ ಟವರ್ ಕಾರ್ ಷೆಡ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಓಹೆಚ್‌ಇ ಮೇಲಿನ ಮಾರ್ಪಾಡು ಕೆಲಸಗಳು. (5) ಎಲ್‌ಸಿಗಳ ಇಂಟರ್‌ಲಾಕಿಂಗ್‌ಗಾಗಿ ಸಹಾಯಕ ಟ್ರಾನ್ಸ್‌ಫಾರ್ಮರ್‌ಗಳ ಪೂರೈಕೆ (ಎಲ್‌ಸಿ ಸಂ. 31/ಕಿಮೀ 34 (ಬಿಡದಿ-ರಾಮನಗರಂ), ಎಲ್‌ಸಿ ಸಂ. 34/ಕಿಮೀ. 40 (ಬಿಡದಿ-ರಾಮನಗರಂ), ಎಲ್‌ಸಿ ಸಂ. 46/ಕಿಮೀ. 78 (ಗೌರಿಬಿದನೂರು-ವಿದುರಸ್ವತಾ), ಎಲ್‌ಸಿ ಸಂ. 50/ಕಿಮೀ. 58 (ಚನ್ನಪಟ್ಟಣ-ಶೆಟ್ಟಿಹಳ್ಳಿ), ಎಲ್‌ಸಿ ಸಂ. 24/ಕಿಮೀ. 26 (ಹೆಜ್ಜಾಲ-ಬಿಡದಿ). (6) ಬೆಂಗಳೂರು - ಯಶವಂತಪುರ - ಯಲಹಂಕ ವಿಭಾಗದಲ್ಲಿ ಸ್ವಯಂಚಾಲಿತ ಸಿಗ್ನಲಿಂಗ್‌ನ ವ್ಯವಸ್ಥೆ.	ರೂ. 2,41,17,098.16

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 10.06.2024, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್ ಟ್ರ್ಯಾಕ್ಷನ್ ವಿನಿಯೋಗ/ಬೆಂಗಳೂರು
PUB/100/AAD/PRB/SWR/2024-25
South Western Railway - SWR | SWRRLY | SWRRLY

ಲಾಲ್‌ಬಾಗ್‌ನಲ್ಲಿ ಮಾವು, ಹಲಸು ಮೇಳಕ್ಕೆ ಚಾಲನೆ ನೀಡಿದ ಪ್ರಕಾಶ್ ಎಂ. ಸೊಬರದ

‘ಮಾವು ಮೇಳದಲ್ಲಿ 18ಕ್ಕೂ ಹೆಚ್ಚು ತಳಿಗಳು’

ಪ್ರಜಾವಾಣಿ ವಾರ್ತೆ



ತೋಟಗಾರಿಕೆ ಇಲಾಖೆ ಸಹಯೋಗದಲ್ಲಿ ರಾಜ್ಯ ಮಾವು ಅಭಿವೃದ್ಧಿ ನಿಗಮವು ಲಾಲ್‌ಬಾಗ್‌ನಲ್ಲಿ ಆಯೋಜಿಸಿರುವ ಮಾವು ಮತ್ತು ಹಲಸಿನ ಮೇಳದಲ್ಲಿ ವಿದೇಶಿ ಮಹಿಳೆಯರು ಶುಕ್ರವಾರ ಮಾವಿನ ಹಣ್ಣುಗಳನ್ನು ಸವಿದರು.
ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್‌

ಬೆಂಗಳೂರು: ತೋಟಗಾರಿಕೆ ಇಲಾಖೆ ಸಹಯೋಗದಲ್ಲಿ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ (ಕೆಎಸ್‌ಎಂಡಿಎಂಸಿಎಲ್) ಲಾಲ್‌ಬಾಗ್‌ನಲ್ಲಿ ಆಯೋಜಿಸಿದರುವ ಮಾವು ಮತ್ತು ಹಲಸು ಮೇಳಕ್ಕೆ ತೋಟಗಾರಿಕೆ ಇಲಾಖೆಯ ಹೆಚ್ಚುವರಿ ನಿರ್ದೇಶಕ ಪ್ರಕಾಶ್ ಎಂ. ಸೊಬರದ ಶುಕ್ರವಾರ ಚಾಲನೆ ನೀಡಿದರು.

ರೈತರು ನೇರವಾಗಿ ಗ್ರಾಹಕರಿಗೆ ಉತ್ಪನ್ನಗಳನ್ನು ಮಾರಾಟ ಮಾಡಲು ಮೇಳದಲ್ಲಿ ಅವಕಾಶ ಕಲ್ಪಿಸಲಾಗಿದೆ. ಜೂನ್ 10ರವರೆಗೆ ಈ ಮೇಳ ನಡೆಯಲಿದೆ.

‘ಹದಿನೆಂಟಕ್ಕೂ ಹೆಚ್ಚು ಮಾವಿನ ತಳಿಗಳು ಮತ್ತು ವಿವಿಧ ಹಲಸಿನ ತಳಿಗಳು ಮೇಳದಲ್ಲಿ ಲಭ್ಯ ಇವೆ. ರೈತರು ಮತ್ತು ಗ್ರಾಹಕರನ್ನು ಒಳಗೊಂಡ ಸಮಿತಿಯು ಹಣ್ಣಿನ ದರಗಳನ್ನು ನಿಗದಿಪಡಿಸಿದೆ. ಇದರಿಂದ ಗ್ರಾಹಕರಿಗೆ ಹೊರೆ ಯಾಗುವುದಿಲ್ಲ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಾವು ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಸಿ.ಜಿ. ನಾಗರಾಜ್, ‘ಮಾವು ಪ್ರಿಯರಿಗೆ ಹೊರೆಯಾಗದಂತೆ ಮತ್ತು ರೈತರಿಗೆ ನಷ್ಟವಾಗದಂತೆ ಬೆಲೆ ನಿಗದಿ ಮಾಡಲಾಗಿದೆ. ಆ ಬೆಲೆಗೆ ಮಾತ್ರ ಮಾರಾಟ ಮಾಡಬೇಕು. ಮಧ್ಯವರ್ತಿಗಳ ಹಾವಳಿ ಇಲ್ಲದೆ ಗ್ರಾಹಕರಿಗೆ ಉತ್ತಮ ಬೆಲೆಗೆ ಮಾವಿನ ಹಣ್ಣು ಸಿಗಬೇಕು ಎಂಬುದು ಸರ್ಕಾರದ ಉದ್ದೇಶವಾಗಿದೆ. ಆದ್ದರಿಂದ ಗ್ರಾಹಕರು ಮತ್ತು ರೈತರಿಗೆ ನೆರವಾಗುವ ಉದ್ದೇಶದಿಂದ ಮೇಳ ಆಯೋಜಿಸಲಾಗಿದೆ’ ಎಂದು ಹೇಳಿದರು.

‘ರಾಜ್ಯದಲ್ಲಿ 1.49 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತದೆ. ಪ್ರತಿವರ್ಷ ಸರಾಸರಿ 12 ಲಕ್ಷದಿಂದ 14 ಲಕ್ಷ ಟನ್‌ಗಳಷ್ಟು ಇಳುವರಿ ನಿರೀಕ್ಷಿಸಲಾಗುತ್ತಿತ್ತು. ಆದರೆ, ಈ ಸಾಲಿನಲ್ಲಿ ಹವಾಮಾನ ವೈಪರೀತ್ಯದಿಂದ ಮಾವು ಬೆಳೆಯ ಉತ್ಪಾದನೆಯಲ್ಲಿ ಶೇ 30ರಷ್ಟು ಫಸಲು ಮಾತ್ರ ಲಭ್ಯವಾಗಿದೆ. ಕೋಲಾರ, ರಾಮನಗರ, ತುಮಕೂರು, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಾವು ಬೆಳೆಯಲಾಗುತ್ತದೆ’ ಎಂದರು.

‘ಮಾವಿನ ಹಣ್ಣನ್ನು ನೈಸರ್ಗಿಕವಾಗಿ ಮಾಗಿಸಲಾಗುತ್ತದೆ. ರಾಸಾಯನಿಕ ಮುಕ್ತ ಮಾವಿನ ಹಣ್ಣನ್ನು ಗ್ರಾಹಕರಿಗೆ ತಲುಪಿಸುವ ಉದ್ದೇಶದಿಂದ ಮೇಳವನ್ನು ಪ್ರತಿ ವರ್ಷ ಆಯೋಜಿಸಲಾಗುತ್ತಿದೆ. ಮಾವು, ಹಲಸು ಹಣ್ಣುಗಳ ಬೆಳೆಗಾರರು ಮತ್ತು ಗ್ರಾಹಕರ ನಡುವೆ ನೇರ ಸಂಪರ್ಕ ಕಲ್ಪಿಸಿ, ಬೆಳೆಗಾರರಿಗೆ ಯೋಗ್ಯ ಬೆಲೆ ಹಾಗೂ ಗ್ರಾಹಕರಿಗೆ ರುಚಿಯಾದ ಉತ್ಕೃಷ್ಟ ಗುಣಮಟ್ಟದ ತಾಜಾ ಹಣ್ಣುಗಳು ಸಿಗುವಂತೆ ಮಾಡುವುದು ಈ ಮೇಳದ ಉದ್ದೇಶವಾಗಿದೆ’ ಎಂದು ತಿಳಿಸಿದರು. ‘ಹಲಸು ಕೂಡ ಒಂದು ಪ್ರಮುಖ ತೋಟಗಾರಿಕೆ ಬೆಳೆಯಾಗಿದ್ದು, ರಾಜ್ಯದಲ್ಲಿ ಒಟ್ಟು 2,309 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತದೆ’ ಎಂದರು. ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಜಗದೀಶ್ ಭಾಗವಹಿಸಿದ್ದರು.

ತಳಿ ಮತ್ತು ಮೇಳದಲ್ಲಿನ ದರ (ಒಂದು ಕೆ.ಜಿ.ಗೆ ₹ಗಳಲ್ಲಿ)

ತಳಿ	ದರ
ಬಾದಾಮಿ	130
ರಸಪುರಿ	100
ಮಲ್ಲಿಕಾ	130
ಸೇಂದೂರು	60
ಸಕ್ಕರೆ ಗುತ್ತಿ	200
ಮಲಗೋವಾ	220
ಬಂಗನಪಲ್ಲಿ	80
ಇಮಾಮ್ ಪಸಂದ್	250
ಆಮ್ರಪಾಲಿ	120
ತೋತಾಪುರಿ	50
ದಶೇರಿ	135
ಕೇಸರ್	130
ಕಾಲಾಪಾಡ್	135
ಆಮ್ಲೆಟ್	100

‘ಮಾವಿನ ಹಣ್ಣಿಗೆ ಹೆಚ್ಚಿದ ಬೇಡಿಕೆ’

‘ಮಾರುಕಟ್ಟೆಯಲ್ಲಿ ಮಾವಿನ ಹಣ್ಣುಗಳಿಗೆ ಬೇಡಿಕೆ ಹೆಚ್ಚಿದ್ದು, ಪೂರೈಕೆ ಕಡಿಮೆ ಇದೆ. ಹಾಗಾಗಿ, ಈ ಬಾರಿ ದರಗಳು ಸ್ವಲ್ಪ ಹೆಚ್ಚಾಗಿವೆ’ ಎಂದು ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲ್ಲೂಕಿನ ಮಾವು ಬೆಳೆಗಾರ ಹಾಗೂ ಮಾರಾಟಗಾರ ಬಾಬು ರೆಡ್ಡಿ ತಿಳಿಸಿದರು.

‘ಹೋದ ವರ್ಷ ಆರಂಭಿಕ ಹಂತದಲ್ಲಿ ಮಳೆ ಕೈಕೊಟ್ಟ ಪರಿಣಾಮ ಹೂ ಬಿಡುವ ಹಂತದಲ್ಲೇ ಮಾವಿನ ಫಸಲು ಉದುರಿತ್ತು. ಡಿಸೆಂಬರ್ ತಿಂಗಳಿನಲ್ಲಿ ಬರಬೇಕಿದ್ದ ಹೂವು ಜನವರಿ, ಫೆಬ್ರುವರಿ ತಿಂಗಳಲ್ಲಿ ಬಂದಿತ್ತು. ಫಸಲು ತಡವಾಗುವುದರ ಜೊತೆಗೆ ಬಿಸಿಲಿನ ತಾಪಕ್ಕೆ ಕಾಯಿ ಆಗಬೇಕಿದ್ದ ಪಿಂದೆ, ಹಳದಿ ಬಣ್ಣಕ್ಕೆ ತಿರುಗಿ ನೆಲಕ್ಕೆ ಉದುರಿದ್ದರಿಂದ, ಮಾವಿನ ಬೆಳೆ ಕುಂಠಿತಗೊಂಡಿದೆ’ ಎಂದರು.

ರೇವ್ ಪಾರ್ಟಿ: ಫಾರ್ಮ್‌ಹೌಸ್ ಮಾಲೀಕರಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೇವ್ ಪಾರ್ಟಿ ಪ್ರಕರಣದ ತನಿಖೆ ನಡೆಸುತ್ತಿರುವ ಸಿಸಿಬಿ ಪೊಲೀಸರು, ಜಿ.ಆರ್. ಫಾರ್ಮ್ ಹೌಸ್ ಮಾಲೀಕರಾಗಿರುವ ‘ಕಾನ್‌ಕಾರ್ಡ್’ ರಿಯಲ್ ಎಸ್ಟೇಟ್ ಕಂಪನಿ ಸಂಸ್ಥಾಪಕ ಆರ್. ಗೋಪಾಲ್ ರೆಡ್ಡಿ ಅವರಿಗೆ ಸಿಸಿಬಿ ಪೊಲೀಸರು ನೋಟಿಸ್ ನೀಡಿದ್ದಾರೆ.

‘ಜನ್ಮದಿನ ಆಚರಣೆ ನೆಪದಲ್ಲಿ ‘ಸನ್‌ಸೆಟ್ ಟು ಸನ್‌ರೈಸ್ ವಿಕ್ಟರಿ’ ಹೆಸರಿನಲ್ಲಿ ಜಿ.ಆರ್. ಫಾರ್ಮ್‌ಹೌಸ್‌ನಲ್ಲಿ ಪಾರ್ಟಿ ಆಯೋಜಿಸಲಾಗಿತ್ತು. ಪಾರ್ಟಿಗೆ ಜಾಗ ನೀಡಿದ್ದ ಆರೋಪದ ಬಗ್ಗೆ ವಿಚಾರಣೆ ನಡೆಸಲು ಗೋಪಾಲ್ ರೆಡ್ಡಿ ಅವರಿಗೆ ನೋಟಿಸ್ ನೀಡಲಾಗಿದೆ’ ಎಂದು ಸಿಸಿಬಿ ಮೂಲಗಳು ಹೇಳಿವೆ.

‘ಮೇ 19ರಂದು ರಾತ್ರಿ ಆಯೋಜಿಸಿದ್ದ ಪಾರ್ಟಿಗೆ ಕೆಲವರು, ‘ಜನ್ಮ ದಿನಾಚರಣೆ ಪಾರ್ಟಿ’ ಎಂಬುದಾಗಿ ಹೇಳಿ ಪೊಲೀಸ್ ಠಾಣೆಯಿಂದ ಅನುಮತಿ ಪಡೆದಿದ್ದರೆಂಬುದು ಗೊತ್ತಾಗಿದೆ. ಈ ಬಗ್ಗೆ ಪರಿಶೀಲಿಸಲಾಗುತ್ತಿದೆ’ ಎಂದು ತಿಳಿಸಿವೆ.

‘ಪಾರ್ಟಿಯಲ್ಲಿ ತೆಲುಗಿನ ಕೆಲ ನಟ–ನಟಿಯರು ಪಾಲ್ಗೊಂಡಿದ್ದರು. ಈ ಪೈಕಿ ನಟಿ ಹೇಮಾ ಅವರು ಡ್ರಗ್ಸ್ ತೆಗೆದುಕೊಂಡಿದ್ದು ಈಗಾಗಲೇ ಗೊತ್ತಾಗಿದೆ. ಉಳಿದ ಐವರು ನಟ–ನಟಿಯರು ನಾಪತ್ತೆಯಾಗಿದ್ದು, ಅವರ ಪತ್ತೆಗೂ ತನಿಖೆ ಮುಂದುವರಿಸಲಾಗಿದೆ’ ಎಂದು ಮೂಲಗಳು ಹೇಳಿವೆ.

ದೂರು ದಾಖಲಿಸಿದ ಗೋಪಾಲ್ ರೆಡ್ಡಿ: ‘ನನ್ನ ಫಾರ್ಮ್‌ಹೌಸ್‌ನಲ್ಲಿ ಕೆಲವರು ಅನಧಿಕೃತವಾಗಿ ಪಾರ್ಟಿ ಮಾಡಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳಿ’ ಎಂಬುದು ಆರೋಪಿಸಿ ಗೋಪಾಲ್ ರೆಡ್ಡಿ ಅವರು ಹೈದರಾಬಾದ್ ಪೊಲೀಸರಿಗೆ ದೂರು ನೀಡಿರುವುದಾಗಿ ಮಾಹಿತಿ ಲಭ್ಯವಾಗಿದೆ.

2013ರಲ್ಲಿ ನಡೆದಿದ್ದ ಕೃತ್ಯ • ಕೆನರಾ ಬ್ಯಾಂಕ್ ವ್ಯವಸ್ಥಾಪಕ ಸೇರಿ ಮೂವರ ಸೆರೆ

ಮಹಿಳೆ ಮೇಲೆ ಅತ್ಯಾಚಾರ, ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲಸ ಮುಗಿಸಿ ಮನೆಗೆ ಹೊರಟಿದ್ದ ಮಹಿಳೆಯೊಬ್ಬರನ್ನು ಅಪಹರಿಸಿ ಸಾಮೂಹಿಕ ಅತ್ಯಾಚಾರ ಎಸಗಿ ಕೊಲೆ ಮಾಡಿದ್ದ ಆರೋಪದಡಿ ಕೆನರಾ ಬ್ಯಾಂಕ್ ವ್ಯವಸ್ಥಾಪಕ ಸೇರಿದಂತೆ ಮೂವರ ವಿರುದ್ಧ ಸಿಐಡಿ ಅಧಿಕಾರಿಗಳು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

‘ಸಂಜಯನಗರ ಠಾಣೆ ವ್ಯಾಪ್ತಿಯಲ್ಲಿ ನೆಲಸಿದ್ದ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿ ಕೊಲೆ ಮಾಡಲಾಗಿತ್ತು. ಚಿಕ್ಕಜಾಲ ಬಳಿಯ ಮುತ್ತುಕದಹಳ್ಳಿಯ ನೀಲಗಿರಿ ತೋಪಿನಲ್ಲಿ 2013ರ ಫೆಬ್ರುವರಿ 15ರಂದು ಮೃತದೇಹ ಪತ್ತೆಯಾಗಿತ್ತು’ ಎಂದು ಸಿಐಡಿ ಮೂಲಗಳು ಹೇಳಿವೆ.

‘ಕೃತ್ಯ ಎಸಗಿದ್ದ ಆರೋಪದಡಿ ಕೆನರಾ ಬ್ಯಾಂಕ್ ಮಹಾಲಕ್ಷ್ಮಿ ಲೇಔಟ್ ಶಾಖೆಯ ವ್ಯವಸ್ಥಾಪಕ ನರಸಿಂಹಮೂರ್ತಿ, ಈತನ ಸಹಚರರಾದ ಎನ್. ಹರಿಪ್ರಸಾದ್ ಹಾಗೂ ಸಿ. ದೀಪಕ್ ಅವರನ್ನು ಬಂಧಿಸಲಾಗಿದೆ. ಇವರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಪತಿಯನ್ನೇ ಬಂಧಿಸಿದ್ದ ಪೊಲೀಸರು: ‘ಕೆಲಸಕ್ಕೆ ಹೋಗಿದ್ದ ಮಹಿಳೆ ವಾಪಸು ಮನೆಗೆ ಬಂದಿರಲಿಲ್ಲ. ಗಾಬರಿಗೊಂಡಿದ್ದ ಪತಿ, ಠಾಣೆಗೆ ದೂರು ನೀಡಿದ್ದರು. ಇದಾದ ಮರುದಿನವೇ ಮಹಿಳೆಯ ಮೃತದೇಹ ಪತ್ತೆಯಾಗಿತ್ತು. ಅದನ್ನು ಪತಿ ಗುರುತಿಸಿದ್ದರು’ ಎಂದು ಸಿಐಡಿ ಮೂಲಗಳು ಹೇಳಿವೆ.

‘ಮಹಿಳೆ ಕೊಲೆ ಬಗ್ಗೆ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಪತಿಯೇ ಆರೋಪಿ ಎಂಬುದಾಗಿ ಶಂಕಿಸಿ ಬಂಧಿಸಿದ್ದರು. ಹಲವು ದಿನಗಳವರೆಗೆ ಪತಿ ನ್ಯಾಯಾಂಗ ಬಂಧನದಲ್ಲಿದ್ದರು. ದೋಷಾರೋಪ ಪಟ್ಟಿ ಸಿದ್ಧಪಡಿಸುವ ಸಂದರ್ಭದಲ್ಲಿ ಪತಿ ವಿರುದ್ಧ ಯಾವುದೇ ಪುರಾವೆಗಳು ಲಭ್ಯವಾಗಿರಲಿಲ್ಲ. ಹೀಗಾಗಿ, ಪತಿ ಬಿಡುಗಡೆ ಆಗಿದ್ದರು. ‘ಮಹಿಳೆ ಕೊಲೆ ನಡೆದಿದೆ. ಆರೋಪಿಗಳು ಪತ್ತೆಯಾಗಿಲ್ಲ’ ಎಂಬುದಾಗಿ ಹೇಳಿ ಪೊಲೀಸರು ನ್ಯಾಯಾಲಯಕ್ಕೆ ‘ಸಿ’ ರಿಪೋರ್ಟ್ ಸಲ್ಲಿಸಿದ್ದರು’ ಎಂದು ತಿಳಿಸಿವೆ.

ಹೈಕೋರ್ಟ್‌ನಲ್ಲಿ ಮೊಕದ್ದಮೆ: ‘ಪತ್ನಿ ಕೊಲೆ ಮಾಡಿದವರನ್ನು ಪತ್ತೆ ಮಾಡಲು ಉನ್ನತ ಮಟ್ಟದ ತನಿಖೆ ನಡೆಸುವಂತೆ ಸರ್ಕಾರಕ್ಕೆ ಸೂಚಿಸಬೇಕು’ ಎಂದು ಕೋರಿ ಪತಿ ಹೈಕೋರ್ಟ್‌ನಲ್ಲಿ ಮೊಕದ್ದಮೆ ಹೂಡಿದ್ದರು. ಹೈಕೋರ್ಟ್ ಸೂಚನೆಯಂತೆ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಲಾಗಿತ್ತು.

‘ತನಿಖೆ ಆರಂಭಿಸಿದಾಗ, ಯಾವುದೇ ಸುಳಿವು ಇರಲಿಲ್ಲ. ಹಲವರ ವಿಚಾರಣೆ ನಡೆಸಿದಾಗ, ಆರೋಪಿ ಸಿ. ದೀಪಕ್ ಬಗ್ಗೆ ಮಾಹಿತಿ ಲಭ್ಯವಾಗಿತ್ತು. ಈತನನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ನರಸಿಂಹಮೂರ್ತಿ ಹಾಗೂ ಹರಿಪ್ರಸಾದ್ ಸಿಕ್ಕಿಬಿದ್ದರು’ ಎಂದು ಸಿಐಡಿ ಮೂಲಗಳು ಹೇಳಿವೆ.

‘ಮೂವರು ಸೇರಿಕೊಂಡು ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿ ಕೊಲೆ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ. ಎಲ್ಲ ಪುರಾವೆಗಳನ್ನು ಲಗತ್ತಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

ಅಸಲಿ ಚಿನ್ನದ ಜಾಗದಲ್ಲಿ ನಕಲಿ ಚಿನ್ನ: ಮಹಿಳೆ ಬಂಧನ

ಬೆಂಗಳೂರು: ಕೆಲಸಕ್ಕಿದ್ದ ಮನೆಯಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಮಹಿಳೆಯೊಬ್ಬರನ್ನು ಕಾಡುಗೋಡಿ ಠಾಣೆ ಪೊಲೀಸರು ಬಂಧಿಸಿದ್ದು, ₹12 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಿದ್ದಾರೆ.

‘ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಮಹಿಳೆ, ಕೊಡಿಗೇಹಳ್ಳಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್‌ನಲ್ಲಿ ಕೆಲಸಕ್ಕೆ ಇದ್ದರು’ ಎಂದು ಪೊಲೀಸರು ಹೇಳಿದರು.

‘ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ಆರೋಪಿ, ಅಸಲಿ ಚಿನ್ನಾಭರಣ ಕದಿಯುತ್ತಿದ್ದರು. ನಂತರ, ಅದೇ ಸ್ಥಳದಲ್ಲಿ ನಕಲಿ ಚಿನ್ನಾಭರಣ ಇರಿಸುತ್ತಿದ್ದರು. ಎಂಟು ತಿಂಗಳಿನಿಂದ ಮಹಿಳೆ ಕೃತ್ಯ ಎಸಗುತ್ತಿದ್ದರು. ನಕಲಿ ಚಿನ್ನವನ್ನೇ ಅಸಲಿ ಎಂಬುದಾಗಿ ನಂಬಿ ಮಾಲೀಕರು ಸುಮ್ಮನಾಗಿದ್ದರು.’

‘ಮನೆ ಮಾಲೀಕರು ಇತ್ತೀಚೆಗೆ ಸಂಬಂಧಿಕರೊಬ್ಬರ ಕಾರ್ಯಕ್ರಮಕ್ಕೆ ಹೊರಟಿದ್ದರು. ಚಿನ್ನಾಭರಣ ಧರಿಸಿದ್ದರು. ಆದರೆ, ಚಿನ್ನಾಭರಣ ವಿನ್ಯಾಸದಲ್ಲಿ ಬದಲಾವಣೆ ಇರುವುದನ್ನು ಗಮನಿಸಿದ್ದರು. ಮಳಿಗೆಯೊಂದಕ್ಕೆ ತೆರಳಿ ಪರಿಶೀಲಿಸಿದ್ದರು. ಅವಾಗಲೇ, ನಕಲಿ ಚಿನ್ನವೆಂಬುದು ಗೊತ್ತಾಗಿತ್ತು. ಕೆಲಸದ ಮಹಿಳೆ ಮೇಲೆಯೇ ಅನುಮಾನ ವ್ಯಕ್ತಪಡಿಸಿ ದೂರು ನೀಡಿದ್ದರು’ ಎಂದು ಪೊಲೀಸರು ಹೇಳಿದರು.

‘ಕೆಲಸ ಬಿಟ್ಟು ತಮ್ಮೂರಿಗೆ ಹೋಗಿದ್ದ ಮಹಿಳೆಯನ್ನು ಬಂಧಿಸಿ ನಗರಕ್ಕೆ ಕರೆತರಲಾಗಿದೆ. ₹12 ಲಕ್ಷ ಮೌಲ್ಯದ 150 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ’ ಎಂದು ತಿಳಿಸಿದರು.

ಯುವತಿ ಮೇಲೆ ದೌರ್ಜನ್ಯ ಆಟೊ ಚಾಲಕನಿಗೆ ಮಚ್ಚಿನೇಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ ಯುವತಿಯೊಬ್ಬರನ್ನು ಮನೆಗೆ ಕರೆದೊಯ್ದು ಲೈಂಗಿಕ ದೌರ್ಜನ್ಯ ಎಸಗಿದ್ದ’ ಎನ್ನಲಾದ ಆಟೊ ಚಾಲಕನ ಮೇಲೆ ಯುವಕನೊಬ್ಬ ಮಚ್ಚಿನಿಂದ ಹಲ್ಲೆ ಮಾಡಿದ್ದು, ಈ ಸಂಬಂಧ ಕೋಣನಕುಂಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಮೇ 4ರಂದು ರಾತ್ರಿ ನಡೆದಿರುವ ಘಟನೆ ಸಂಬಂಧ ಎರಡು ಪ್ರತ್ಯೇಕ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆಟೊ ಚಾಲಕನ ಮೇಲೆ ಹಲ್ಲೆ ಮಾಡಿದ್ದ ಆರೋಪದಡಿ ಯುವಕನನ್ನು ಬಂಧಿಸಲಾಗಿದೆ. ಯುವತಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದಡಿ ಆಟೊ ಚಾಲಕನನ್ನೂ ಸೆರೆ ಹಿಡಿಯಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಚಿಕ್ಕಮಗಳೂರಿನ ಯುವತಿ ಹಾಗೂ ಕೇರಳದ ಯುವಕ, ಪರಸ್ಪರ ಪರಿಚಯವಾಗಿ ಸ್ನೇಹಿತರಾಗಿದ್ದರು. ಕೆಲಸ ಹುಡುಕಿಕೊಂಡು ಮೇ 4ರಂದು ಒಟ್ಟಿಗೆ ಬೆಂಗಳೂರಿಗೆ ಬಂದಿದ್ದರು. ಜಯನಗರದಲ್ಲಿದ್ದ ಸ್ನೇಹಿತರೊಬ್ಬರನ್ನು ಭೇಟಿಯಾಗಲು ಮೆಟ್ರೊ ನಿಲ್ದಾಣ ಬಳಿ ರಾತ್ರಿ ಕಾಯುತ್ತಿದ್ದರು. ಆದರೆ, ಸ್ನೇಹಿತ ಸ್ಥಳಕ್ಕೆ ಬಂದಿರಲಿಲ್ಲ. ಹೀಗಾಗಿ, ವಾಪಸು ಊರಿಗೆ ಹೋಗಲು ತೀರ್ಮಾನಿಸಿದ್ದರು. ರೈಲು ನಿಲ್ದಾಣಕ್ಕೆ ತೆರಳಲು ಆಟೊಗಾಗಿ ಹುಡುಕಾಡುತ್ತಿದ್ದರು’ ಎಂದು ತಿಳಿಸಿವೆ.

‘ಸ್ಥಳಕ್ಕೆ ಬಂದಿದ್ದ ಚಾಲಕ, ಯುವಕ– ಯುವತಿಯನ್ನು ಆಟೊದಲ್ಲಿ ಹತ್ತಿಸಿಕೊಂಡಿದ್ದ. ಮೆಜೆಸ್ಟಿಕ್ ರೈಲು ನಿಲ್ದಾಣದತ್ತ ಹೊರಟಿದ್ದ. ಯುವಕ–ಯುವತಿಯನ್ನ ಮಾತನಾಡಿಸಿ, ಅವರ ಬಗ್ಗೆ ತಿಳಿದುಕೊಂಡಿದ್ದ. ‘ಕೊಠಡಿ ಬೇಕಾ’ ಎಂದು ಚಾಲಕ ಕೇಳಿದ್ದ. ‘ಬೇಡ’ ಎಂದಿದ್ದ ಯುವಕ–ಯುವತಿ, ಆಟೊ ನಿಲ್ದಾಣಕ್ಕೆ ಬಿಡುವಂತೆ ಹೇಳಿದ್ದರು. ‘ಕೆಲಸ ಹುಡುಕಿಕೊಂಡು ಬಂದಿದ್ದೀರಾ. ನನ್ನದೇ ಮನೆ ಇದೆ. ಅದನ್ನು ನೋಡಿ. ಬಾಡಿಗೆಗೆ ಇರಿ’ ಎಂದಿದ್ದ. ಅದಕ್ಕೆ ಒಪ್ಪಿದ್ದ ಯುವಕ–ಯುವತಿ, ಚಾಲಕನ ಜೊತೆ ಹೊರಟಿದ್ದರು’ ಎಂದು ಮೂಲಗಳು ಹೇಳಿವೆ.

ಮಾರ್ಗಮಧ್ಯೆ ಮದ್ಯ ಖರೀದಿ: ‘ಪಿಳ್ಳೆಗಾನಹಳ್ಳಿಯಲ್ಲಿರುವ ತನ್ನ ಮನೆಯತ್ತ ಹೊರಟಿದ್ದ ಚಾಲಕ, ಮಾರ್ಗ ಮಧ್ಯೆ ಮದ್ಯ ಖರೀದಿಸಿಟ್ಟುಕೊಂಡಿದ್ದ. ಮನೆಗೆ ಹೋಗುತ್ತಿದ್ದಂತೆ ಚಾಲಕ ಮದ್ಯ ಕುಡಿದಿದ್ದ. ಯುವಕನಿಗೂ ಕುಡಿಸಿದ್ದ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ತಡರಾತ್ರಿ ಯುವತಿಯನ್ನು ಎಳೆದಾಡಿದ್ದ ಚಾಲಕ, ತನ್ನ ಪಕ್ಕದಲ್ಲಿ ಮಲಗುವಂತೆ ಒತ್ತಾಯಿಸಿದ್ದ. ಅದಕ್ಕೆ ಒಪ್ಪದ ಯುವತಿ, ಕೂಗಾಡಿದ್ದರು. ಮಚ್ಚು ತೋರಿಸಿದ್ದ ಚಾಲಕ, ಕೊಲೆ ಮಾಡುವುದಾಗಿ ಬೆದರಿಸಿದ್ದ. ರಕ್ಷಣೆಗೆ ಹೋಗಿದ್ದ ಯುವಕ, ಅದೇ ಮಚ್ಚಿನಿಂದ ಚಾಲಕನ ತಲೆಗೆ ಹೊಡೆದಿದ್ದ. ನಂತರ, ಯುವಕ–ಯುವತಿ ಮನೆಯಿಂದ ಹೊರಟು ಮೆಜೆಸ್ಟಿಕ್‌ಗೆ ತೆರಳಿ ತಮ್ಮೂರಿಗೆ ಹೋಗಿದ್ದರು’ ಎಂದು ಮೂಲಗಳು ಹೇಳಿವೆ. ‘ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದ ಚಾಲಕ, ‘ಪ್ರಯಾಣಿಕರೊಬ್ಬರು ಹಲ್ಲೆ ಮಾಡಿದ್ದಾರೆ’ ಎಂದು ಸುಳ್ಳು ಹೇಳಿ ದೂರು ನೀಡಿದ್ದ. ತನಿಖೆ ಕೈಗೊಂಡಾಗ, ಯುವಕ–ಯುವತಿ ಪತ್ತೆಯಾಗಿದ್ದರು. ಯುವತಿ ಹೇಳಿಕೆ ಪಡೆದಾಗಲೇ ಚಾಲಕನ ಕೃತ್ಯ ಪತ್ತೆ ಆಯಿತು. ಎರಡೂ ಕಡೆಯಿಂದಲೂ ದೂರು ಪಡೆದು, ಇಬ್ಬರನ್ನೂ ಬಂಧಿಸಲಾಗಿದೆ’ ಎಂದು ತಿಳಿಸಿವೆ.

ಮಾನಹಾನಿ ಪ್ರಕರಣ: ಮೇಧಾ ಅಪರಾಧಿ



ನವದೆಹಲಿ (ಪಿಟಿಐ): ನರ್ಮದಾ ಬಚಾವೋ ಆಂದೋಲನದ ನಾಯಕಿ, ಸಾಮಾಜಿಕ ಕಾರ್ಯಕರ್ತೆ ಮೇಧಾ ಪಾಟ್ಕರ್ ಅವರನ್ನು ದೆಹಲಿಯ ನ್ಯಾಯಾಲಯವೊಂದು ಕ್ರಿಮಿನಲ್ ಮಾನನಷ್ಟ ಮೊಕದ್ದಮೆಯಲ್ಲಿ ಅಪರಾಧಿ ಎಂದು ಘೋಷಿಸಿದೆ. ದೂರು ದಾಖಲಾಗಿ 23 ವರ್ಷಗಳಿಗೂ ಹೆಚ್ಚಿನ ಅವಧಿಯ ನಂತರ ಈ ಆದೇಶ ಬಂದಿದೆ.

ಈಗ ದೆಹಲಿಯ ಲೆಫ್ಟಿನೆಂಟ್ ಗವರ್ನರ್ ಆಗಿರುವ ವಿ.ಕೆ. ಸಕ್ಸೇನಾ ಅವರು ಈ ದೂರು ದಾಖಲಿಸಿದ್ದರು. ಪಾಟ್ಕರ್ ಅವರ ಮಾತುಗಳು ಮಾನಹಾನಿಕರವಾಗಿದ್ದವು ಎಂದು ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ರಾಘವ್ ಶರ್ಮ ಅವರು ಹೇಳಿದ್ದಾರೆ. ಈ ಅಪರಾಧಕ್ಕೆ ಗರಿಷ್ಠ ಎರಡು ವರ್ಷಗಳ ಸಾದಾ ಜೈಲು ಶಿಕ್ಷೆ ಅಥವಾ ದಂಡ ಅಥವಾ ಅವೆರಡನ್ನೂ ವಿಧಿಸಲು ಅವಕಾಶ ಇದೆ.

ಪಾಟ್ಕರ್ ತಮ್ಮ ವಿರುದ್ಧ ಹೊರಡಿಸಿದ ಪತ್ರಿಕಾ ಹೇಳಿಕೆಯೊಂದು ಮಾನ ಹಾನಿಕರವಾಗಿದೆ ಎಂದು ದೂರಿ ಸಕ್ಸೇನಾ ಅವರು 2000ನೆಯ ಇಸವಿಯಲ್ಲಿ ದೂರು ದಾಖಲಿಸಿದ್ದರು.

ತಲಾ 75 ವಾರ್ಡ್‌ಗಳ 3 ಪಾಲಿಕೆ ರಚನೆಗೆ ತಜ್ಞರ ಸಮಿತಿ ಸಲಹೆ

ಬಿಬಿಎಂಪಿ ಪುನರ್‌ರಚನೆ: ಮತ್ತೆ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಲೋಕಸಭೆ ಚುನಾವಣೆ ಫಲಿತಾಂಶದ ನಂತರ ಚುನಾವಣೆ ನಡೆಯಬಹುದು ಎಂಬ ವಿಷಯ ಚರ್ಚೆ ಬರುತ್ತಿರುವ ಸಂದರ್ಭದಲ್ಲೇ ಬಿಬಿಎಂಪಿ ಪುನರ್‌ರಚನೆ ಕುರಿತ ಮಾತು ಮುನ್ನೆಲೆಗೆ ಬಂದಿದೆ.

ಬಿಬಿಎಂಪಿ ಪುನರ್‌ರಚನೆ ಕುರಿತು ವರದಿ ಸಲ್ಲಿಸಲು ರಚಿಸಲಾಗಿರುವ ನಿವೃತ್ತ ಮುಖ್ಯ ಕಾರ್ಯದರ್ಶಿ ಬಿ.ಎಸ್. ಪಾಟೀಲ್ ನೇತೃತ್ವದ ತಜ್ಞರ ಸಮಿತಿಯ ಸದಸ್ಯರೊಂದಿಗೆ ಬೆಂಗಳೂರು ನಗರಾಭಿವೃದ್ಧಿ ಸಚಿವರಾಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಶುಕ್ರವಾರ ಚರ್ಚೆ ನಡೆಸಿದರು.

‘ಬಿಬಿಎಂಪಿಯನ್ನು ಮೂರು ಭಾಗಗಳನ್ನಾಗಿಸಿ, ತಲಾ 75 ವಾರ್ಡ್‌ಗಳಿಗೆ ಒಂದು ಪಾಲಿಕೆಯನ್ನಾಗಿಸಬೇಕು. ಇದರಿಂದ ಆಡಳಿತ ಹಾಗೂ ಕಾಮಗಾರಿಗಳ ಮೇಲೆ ನಿಯಂತ್ರಣ ಸಾಧಿಸಬಹುದು. ಮೂರೂ ಪಾಲಿಕೆ ಜೊತೆಗೆ ಜಲಮಂಡಳಿ, ಬೆಸ್ಕಾಂ, ಬಿಡಿಎ ಹಾಗೂ ನಗರಕ್ಕೆ ಸಂಬಂಧಿಸಿದ ಎಲ್ಲ ಇಲಾಖೆಗಳನ್ನು ಒಂದು ಸಂಸ್ಥೆಯಡಿ ತಂದು, ಅದನ್ನು ‘ಗ್ರೇಟರ್ ಬೆಂಗಳೂರು’ ಎಂದು ಹೆಸರಿಸಬೇಕು. ಅದರಲ್ಲಿ ಹಿರಿಯ ಅಧಿಕಾರಿಗಳನ್ನು ನೇಮಿಸಿ ಸಮನ್ವಯದಿಂದ ಕಾರ್ಯನಿರ್ವಹಿಸುವಂತೆ ಮಾಡಬೇಕು ಎಂಬ ಸಲಹೆಗಳು ಬಂದಿವೆ. ಇಂತಹ ಸಲಹೆಗಳನ್ನು ಒಳಗೊಂಡ ವರದಿಯನ್ನು ಲೋಕಸಭೆ ಚುನಾವಣೆಯ ಫಲಿತಾಂಶದ ನಂತರ ತಜ್ಞರ ಸಮಿತಿ ವರದಿ ನೀಡಲಿದೆ’ ಎಂದು ಮೂಲಗಳು ತಿಳಿಸಿವೆ.



ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಜ್ಞರ ಸಮಿತಿ ಸದಸ್ಯರೊಂದಿಗೆ ಶುಕ್ರವಾರ ಮಾತುಕತೆ ನಡೆಸಿದರು

2014ರಲ್ಲಿ ಬಿಬಿಎಂಪಿ ವಿಭಜಿಸಲು ವರದಿ ನೀಡಲು ರಚಿಸಲಾಗಿದ್ದ ನಿವೃತ್ತ ಮುಖ್ಯ ಕಾರ್ಯದರ್ಶಿ ಬಿ.ಎಸ್. ಪಾಟೀಲ ನೇತೃತ್ವದ ‘ತಜ್ಞರ ಸಮಿತಿ’ಯನ್ನೇ 2023ರ ಜೂನ್ 12ರಂದು ಪುನರ್–ರಚಿಸಲಾಗಿತ್ತು. 2023ರ ಜುಲೈ 18ರಂದು ಮತ್ತೊಮ್ಮೆ ಈ ಸಮಿತಿಯನ್ನು ಪುನರ್ ರಚಿಸಿದ್ದು, ಬಿಬಿಎಂಪಿ– ಬಿಡಿಎ ಆಯುಕ್ತರಾಗಿದ್ದ ಸಿದ್ದಯ್ಯ ಮತ್ತು ಹಿಂದಿನ ಬೆಂಗಳೂರು ಅಜೆಂಡಾ ಕಾರ್ಯಪಡೆಯ ಸದಸ್ಯ ರವಿಚಂದರ್ ಅವರ ಜೊತೆಗೆ ರಾಜ್ಯಸಭೆ ಮಾಜಿ ಸದಸ್ಯ ಎಂ.ವಿ. ರಾಜೀವ್‌ಗೌಡ ಸದಸ್ಯರಾಗಿದ್ದಾರೆ.

ಉತ್ತಮ ‘ಬ್ರ್ಯಾಂಡ್–ಬೆಂಗಳೂರು’ ಮತ್ತು ಜಾಗತಿಕ ನಗರವನ್ನಾಗಿ ಮಾಡಲು ಅಧ್ಯಯನ ವರದಿಯನ್ನು ಸಲ್ಲಿಸಲು ಕೂಡ ಈ ‘ತಜ್ಞರ ಸಮಿತಿ’ಗೆ ಸೂಚಿಸಲಾಗಿತ್ತು. ಆದರೆ, ಬಿಬಿಎಂಪಿಯನ್ನು ಮೂರು ಭಾಗವಾಗಿಸುವುದೇ ಪ್ರಥಮ ಆದ್ಯತೆ ಈ ಸಮಿತಿಯದ್ದಾಗಿದೆ.

ಸಮಿತಿ ರಚನೆಯಾದ ಮೇಲೆ, 243 ವಾರ್ಡ್‌ಗಳನ್ನು 225 ವಾರ್ಡ್‌ಗಳನ್ನಾಗಿ ಪುನರ್ ರಚನೆ ಮಾಡಲಾಯಿತು. ಇದಕ್ಕೆ ಮೀಸಲಾತಿಯನ್ನು ನಿಗದಿಪಡಿಸಿ, ಡಿಸೆಂಬರ್‌ನೊಳಗೆ ಚುನಾವಣೆ ನಡೆಸುವುದಾಗಿ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಯವರೂ ಹೇಳಿದ್ದರು. ಆದರೆ, ಮೀಸಲಾತಿ ವರದಿಯಲ್ಲಿನ ಗೊಂದಲದಿಂದ ವಾರ್ಡ್ ಮೀಸಲು ನಿಗದಿಪಡಿಸಲು ಸಾಧ್ಯವಿಲ್ಲ ಎಂದು ಸಬೂಬು ನೀಡಲಾಯಿತು. ಮೀಸಲು ಹಾಗೂ ವಾರ್ಡ್ ರಚನೆ ಬಗ್ಗೆ ನ್ಯಾಯಾಲಯದಲ್ಲೂ ಪ್ರಕರಣವಿದೆ.

ಸಭೆಯಲ್ಲಿ ಸಚಿವ ಜಮೀರ್ ಅಹ್ಮದ್ ಖಾನ್, ಬಿಡಿಎ ಅಧ್ಯಕ್ಷ ಎನ್.ಎ. ಹ್ಯಾರಿಸ್, ತಜ್ಞರ ಸಮಿತಿಯ ಸದಸ್ಯರಾದ ಸಿದ್ದಯ್ಯ, ರವಿಚಂದರ್, ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ಡಿಸಿಎಂ ಕಾರ್ಯದರ್ಶಿ ರಾಜೇಂದ್ರ ಚೋಳನ್ ಭಾಗವಹಿಸಿದ್ದರು.

ಬಿಡಿಎ ಸಭೆ: ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಹೊಸ ಬಡಾವಣೆಗಳ ನಿರ್ಮಾಣ ಹಾಗೂ ಹೊರ ವಲಯದಲ್ಲಿ ಬೆಂಗಳೂರು ಬಿಸಿನೆಸ್ ಕಾರಿಡಾರ್ ರಸ್ತೆ ನಿರ್ಮಾಣ ಸಂಬಂಧ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಶುಕ್ರವಾರ ಉನ್ನತ ಮಟ್ಟದ ಅಧಿಕಾರಿಗಳ ಸಭೆ ನಡೆಸಿದರು.

ಮುಖ್ಯ ಆಯುಕ್ತರಿಗೆ ಡಿಸಿಎಂ ಪತ್ರ

‘ಬಿಬಿಎಂಪಿ ವ್ಯಾಪ್ತಿಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳಿಗೆ ಅಧಿಕಾರಿಗಳು ಖುದ್ದು ಭೇಟಿ ನೀಡಿ, ಘಟಕ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ನೀರಿನ ಗುಣಮಟ್ಟವನ್ನು ಪರೀಕ್ಷಿಸಿ ಖಾತರಿಪಡಿಸಿಕೊಂಡು, ನಂತರ ಕುಡಿಯಲು ಸರಬರಾಜು ಮಾಡಬೇಕು. ಈ ಕ್ರಮಗಳನ್ನು ಕೈಗೊಳ್ಳದ ಅಧಿಕಾರಿಯ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಶುಕ್ರವಾರ ಪತ್ರ ಬರೆದಿದ್ದಾರೆ.

ಇದೇ ರೀತಿಯ ಪತ್ರವನ್ನು ಬೆಂಗಳೂರು ಜಿಲ್ಲೆಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ (ಸಿಇಒ) ಹಾಗೂ ಜಲಮಂಡಳಿ ಅಧ್ಯಕ್ಷರಿಗೂ ಬರೆದಿದ್ದು, ನೀರಿನ ಗುಣಮಟ್ಟವನ್ನು ಖಾತರಿಪಡಿಸಿಕೊಂಡು ಸರಬರಾಜು ಮಾಡಲು ಸೂಚಿಸಿದ್ದಾರೆ.

ಸುದ್ದಿ 2 ನಿಮಿಷ

ಖಾಸಗಿ ವಿ.ವಿ ಪ್ರವೇಶಕ್ಕೂ ಸಿಇಟಿ

ಬೆಂಗಳೂರು: ಖಾಸಗಿ ವಿಶ್ವವಿದ್ಯಾಲಯಗಳಲ್ಲಿನ ವಿವಿಧ ಕೋರ್ಸ್‌ಗಳ ಪ್ರವೇಶಕ್ಕೆ ಸಾಮಾನ್ಯ ಪ್ರವೇಶ ನಡೆಸಲು ಕರ್ನಾಟಕ ರಾಜ್ಯ ಖಾಸಗಿ ವಿಶ್ವವಿದ್ಯಾಲಯಗಳ ಸಂಘ ನಿರ್ಧರಿಸಿದೆ.

ಖಾಸಗಿ ವಿಶ್ವವಿದ್ಯಾಲಯಗಳ ಪ್ರವೇಶ ಪ್ರಕ್ರಿಯೆಗಳು ಆಯಾ ಆಡಳಿತ ಮಂಡಳಿಗಳ ನಿರ್ಧಾರದಂತೆ ನಡೆಯುತ್ತಿವೆ. ಇದರಿಂದ ಪ್ರವೇಶ ಬಯಸುವ ವಿದ್ಯಾರ್ಥಿಗಳು ಹಲವು ಪ್ರವೇಶ ಪರೀಕ್ಷೆಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಇಂತಹ ಹೊರೆ ತಪ್ಪಿಸಲು ಎಲ್ಲ ಖಾಸಗಿ ವಿಶ್ವವಿದ್ಯಾಲಯಗಳೂ ಸೇರಿ ಒಂದೇ ಪ್ರವೇಶ ಪರೀಕ್ಷೆ ನಡೆಸಬೇಕು ಎಂದು ಈಚೆಗೆ ಉನ್ನತ ಶಿಕ್ಷಣ ಇಲಾಖೆ ಪತ್ರ ಬರೆದು, ಜೂನ್ 30ರ ಒಳಗೆ ಜಾಲತಾಣದಲ್ಲಿ ಪ್ರಕಟಿಸುವಂತೆ ಸೂಚಿಸಿತ್ತು.

‘ವಿಶ್ವವಿದ್ಯಾಲಯಗಳಲ್ಲಿ ಲಭ್ಯವಿರುವ ಸರ್ಕಾರಿ ಕೋಟಾದ ಸೀಟುಗಳನ್ನು ಮೊದಲಿನಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಕೆ–ಸಿಇಟಿ ಮೂಲಕ ಹಾಗೂ ಶೇ 60 ಸೀಟುಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆ ಮೂಲಕ ಭರ್ತಿ ಮಾಡಿಕೊಳ್ಳುವುದು ಅಥವಾ ಸಾಮಾನ್ಯ ವಿಶ್ವವಿದ್ಯಾಲಯ ಪ್ರವೇಶ ಪರೀಕ್ಷೆ ಮಾದರಿಯಲ್ಲಿ ಸೀಟುಗಳನ್ನು ಹಂಚಿಕೆ ಮಾಡುವ ಕುರಿತು ಸಂಘದ ಸಭೆಯಲ್ಲಿ ಚರ್ಚೆ ನಡೆಸಲಾಗಿದೆ’ ಎಂದು ಸಂಘದ ಸಂಚಾಲಕ ನಾಗರಾಜ್ ಹೇಳಿದ್ದಾರೆ.

ರಾಜ್ಯದಲ್ಲಿ 31 ಖಾಸಗಿ ವಿಶ್ವವಿದ್ಯಾಲಯಗಳಿವೆ. ಅವುಗಳಲ್ಲಿ 20 ವಿಶ್ವವಿದ್ಯಾಲಯಗಳಲ್ಲಿ ವೃತ್ತಿಪರ ಕೋರ್ಸ್‌ಗಳಿವೆ. ಸಾಮಾನ್ಯ ಪ್ರವೇಶ ಪ್ರಕ್ರಿಯೆ ನಡೆಸುವ ಕುರಿತು ಅಂತಿಮ ರೂಪುರೇಷೆ ಸಿದ್ಧಪಡಿಸಲು ತಜ್ಞರನ್ನು ಒಳಗೊಂಡ ಸಮಿತಿ ರಚಿಸಲಾಗಿದೆ.

ಪರಿಷತ್: ತಿಗಳ ಸಮುದಾಯಕ್ಕೆ ಅವಕಾಶ ನೀಡಲು ಆಗ್ರಹ



ಬೆಂಗಳೂರು: ಮುಂದಿನ ವಿಧಾನ ಪರಿಷತ್ ಚುನಾವಣೆಯಲ್ಲಿ ತಿಗಳ ಸಮಾಜಕ್ಕೆ ಕಾಂಗ್ರೆಸ್ ಮತ್ತು ಬಿಜೆಪಿ ಅವಕಾಶ ನೀಡಬೇಕು ಎಂದು ರಾಜ್ಯ ತಿಗಳ ಕ್ಷತ್ರಿಯ ಮಹಾಸಭಾ ಉಪಾಧ್ಯಕ್ಷ ಎ.ಎಚ್. ಬಸವರಾಜು ಆಗ್ರಹಿಸಿದರು.

‘ಕೋಲಾರ, ತುಮಕೂರು, ಚಾಮರಾಜನಗರ, ರಾಮನಗರ, ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ಜಿಲ್ಲೆಗಳಲ್ಲಿ ಹೆಚ್ಚು ಜನಸಂಖ್ಯೆ ಹೊಂದಿರುವ ಸಮಾಜ ನಮ್ಮದು. ರಾಜಕೀಯ ಪ್ರಾತಿನಿಧ್ಯವೇ ಇಲ್ಲದಿದ್ದ ಈ ಸಮಾಜವನ್ನು ಮೊದಲು ಕಾಂಗ್ರೆಸ್ ಗುರುತಿಸಿತ್ತು. ಪಿ.ಆರ್. ರಮೇಶ್ ಅವರು ಮೂರು ಬಾರಿ ಬಿಬಿಎಂಪಿ ಸದಸ್ಯರಾಗಲು ಅವಕಾಶ ಕಲ್ಪಿಸಿತ್ತು. ಒಂದು ಬಾರಿ ಮೇಯರ್ ಆಗಿದ್ದರು. ಕೊಳೆಗೇರಿ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾಗಿದ್ದರು. 2017ರಲ್ಲಿ ಅವರನ್ನು ವಿಧಾನ ಪರಿಷತ್ ಸದಸ್ಯ ಸ್ಥಾನಕ್ಕೆ ಕಾಂಗ್ರೆಸ್ ನಾಮನಿರ್ದೇಶನ ಮಾಡಿತ್ತು. ಅದರ ಅವಧಿ ಮುಗಿದು 1 ವರ್ಷ ಕಳೆದಿದೆ’ ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಳೆದ ವರ್ಷ ವಿಧಾನಸಭೆ ಚುನಾವಣೆಗೂ ಮುನ್ನ ತಿಗಳರ ಅಭಿವೃದ್ಧಿ ನಿಗಮ ಸ್ಥಾಪಿಸಿ ₹100 ಕೋಟಿ ನೀಡಲಾಗುವುದು, ಸಮಾಜಕ್ಕೆ ಒಂದು ವಿಧಾನ ಪರಿಷತ್ ಸ್ಥಾನ ಕಲ್ಪಿಸಲಾಗುವುದು ಎಂದು ಆಗ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಭರವಸೆ ನೀಡಿದ್ದರು.

ತಿಗಳ ಸಮಾಜದ ಮುಖಂಡ ಎಲ್.ಎನ್. ಮಂಜುನಾಥ ಮಾತನಾಡಿ, ‘ತಿಗಳ ಸಮಾಜವು ಕಾಂಗ್ರೆಸ್‌ಗಷ್ಟೇ ಅಲ್ಲ, ಬಿಜೆಪಿಯನ್ನು ಕೂಡ ಬೆಂಬಲಿಸಿದೆ. ಬಿಜೆಪಿ ಮುಖಂಡರಾದ ಎ.ಎಚ್. ಬಸವರಾಜು ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡಬೇಕು’ ಎಂದರು.

ಬಿಎಸ್‌ಡಬ್ಲ್ಯುಎಂಎಲ್‌ನಿಂದ ಜೂನ್ 1ರಿಂದ ತ್ಯಾಜ್ಯ ನಿರ್ವಹಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಘನತ್ಯಾಜ್ಯ ಸಂಗ್ರಹ, ಸಾಗಣೆ ಮತ್ತು ಸಂಸ್ಕರಣೆಯ ಜವಾಬ್ದಾರಿಯನ್ನು ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್) ಜೂನ್ 1ರಿಂದ ನಿರ್ವಹಿಸಲಿದೆ.

ಬಿಬಿಎಂಪಿ ಮುಖ್ಯ ಆಯುಕ್ತ ಈ ಬಗ್ಗೆ ಕಚೇರಿ ಆದೇಶ ಹೊರಡಿಸಿದ್ದಾರೆ. ಘನತ್ಯಾಜ್ಯ ಸಂಗ್ರಹ, ಸಾಗಣೆ ಮತ್ತು ಸಂಸ್ಕರಣೆ ಕಾರ್ಯವನ್ನು ಬಿಎಸ್‌ಡಬ್ಲ್ಯುಎಂಎಲ್ ನಿರ್ವಹಿಸಬೇಕು ಎಂದು 2022ರಲ್ಲಿ ನಿರ್ಣಯಿಸಲಾಗಿತ್ತು. ಇದೀಗ ಆ ನಿರ್ಣಯವನ್ನು ಜಾರಿಗೆ ತರಲು ನಿರ್ಧರಿಸಲಾಗಿದೆ.

2021ರಲ್ಲಿ ಬಿಎಸ್‌ಡಬ್ಲ್ಯುಎಂಎಲ್ ಸ್ಥಾಪಿಸಲಾಗಿದ್ದು, ಯಾವುದೇ ರೀತಿಯ ಜವಾಬ್ದಾರಿಯನ್ನು ನೀಡಿರಲಿಲ್ಲ. ಜೂನ್ 1ರಿಂದ ತ್ಯಾಜ್ಯ ಸಂಗ್ರಹ, ಸಾಗಣೆ, ಸಂಸ್ಕರಣೆ ಸೇರಿದಂತೆ ಕಟ್ಟಡ ತ್ಯಾಜ್ಯ (ಸಿಆ್ಯಂಡ್‌ಡಿ), ತ್ಯಾಜ್ಯ ಸಂಸ್ಕರಣೆ ಘಟಕಗಳ ನಿರ್ವಹಣೆ, ಸುತ್ತಮುತ್ತಲ ಪ್ರದೇಶಗಳ ಅಭಿವೃದ್ಧಿ ಕಾರ್ಯವನ್ನೂ ಬಿಎಸ್‌ಡಬ್ಲ್ಯುಎಂಎಲ್ ನಿರ್ವಹಿಸಲಿದೆ.

ಪಾಲಿಕೆಯಲ್ಲಿ ತ್ಯಾಜ್ಯ ನಿರ್ವಹಣೆ ಮಾಡುತ್ತಿರುವ ಗುತ್ತಿಗೆದಾರರೇ ಬಿಎಸ್‌ಡಬ್ಲ್ಯುಎಂಎಲ್‌ನಡಿ ಕಾರ್ಯ ನಿರ್ವಹಿಸಲಿದ್ದಾರೆ. ಅವರಿಗೆ ಬಿಲ್ ಪಾವತಿ ಈ ಕಂಪನಿಯಿಂದಲೇ ಆಗಲಿದೆ.

ಬಿಎಸ್‌ಡಬ್ಲ್ಯುಎಂಎಲ್‌ನಲ್ಲಿ ಸಿಬ್ಬಂದಿ ಕೊರತೆ ಇದ್ದು, ಇದೀಗ ಪೂರ್ಣ ಪ್ರಮಾಣದ ತ್ಯಾಜ್ಯ ನಿರ್ವಹಣೆ ಕಾರ್ಯದ ಜವಾಬ್ದಾರಿ ನೀಡಲಿದೆ. ಇದೀಗ ಹೊಸ ಸಿಬ್ಬಂದಿ ನೇಮಕ ಅಥವಾ ವರ್ಗಾವಣೆ ಮೂಲಕ ಸಿಬ್ಬಂದಿಯನ್ನು ನಿಯೋಜಿಸಿಕೊಳ್ಳಬೇಕಿದೆ ಎಂದು ಅಧಿಕಾರಿಗಳು ತಿಳಿಸಿದರು.

ಆರೋಗ್ಯ ಮತ್ತು ನೈರ್ಮಲ್ಯ ಶಾಖೆ

ಸಾರ್ವಜನಿಕ ಸ್ಥಳಗಳ ಸ್ವಚ್ಛತೆ, ಪೌರಕಾರ್ಮಿಕರಿಗೆ ಸೌಲಭ್ಯಗಳು, ಶೌಚಾಲಯಗಳ ನಿರ್ವಹಣೆ, ಸ್ವಚ್ಛ ಸರ್ವೇಕ್ಷಣ ಕಾರ್ಯಗಳು ಬಿಬಿಎಂಪಿಯಲ್ಲಿಯೇ ಉಳಿದುಕೊಳ್ಳಲಿವೆ. ಈ ಕಾರ್ಯಗಳನ್ನು ಆರೋಗ್ಯ ವಿಭಾಗವೇ ನಿರ್ವಹಿಸಲಿದೆ.

ಬಿಬಿಎಂಪಿಯ ಆರೋಗ್ಯ ಶಾಖೆಯನ್ನು ಆರೋಗ್ಯ ಮತ್ತು ನೈರ್ಮಲ್ಯ ಶಾಖೆ ಎಂದು ಮಾರ್ಪಡಿಸಲಾಗಿದೆ. ಪಾಲಿಕೆಯ ಘನತ್ಯಾಜ್ಯ ನಿರ್ವಹಣೆ ವಿಭಾಗದ ವಿಶೇಷ ಆಯುಕ್ತರು ಮತ್ತು ಜಂಟಿ ಆಯುಕ್ತರ ಕಾರ್ಯಭಾರವನ್ನು ಆರೋಗ್ಯ ಮತ್ತು ನೈರ್ಮಲ್ಯ ಶಾಖೆಯಲ್ಲಿ ವಿಲೀನಗೊಳಿಸಲಾಗಿದೆ. ಆರೋಗ್ಯ ಮತ್ತು ನೈರ್ಮಲ್ಯ ಶಾಖೆಯ ವಿಶೇಷ ಆಯುಕ್ತರು ಪದನಿಮಿತ್ತ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತದಲ್ಲಿ ನಿರ್ದೇಶಕರಾಗಿರುತ್ತಾರೆ.

ಇದೇ 28ರಂದು ಬಿಜೆಪಿ ಪ್ರತಿಭಟನೆ

ಬೆಂಗಳೂರು ಸಮಸ್ಯೆ– ಪ್ರತಿ ವಾರ್ಡ್‌ನಲ್ಲೂ ಹೋರಾಟ: ಬಿ.ವೈ.ವಿಜಯೇಂದ್ರ

ಪ್ರಜಾವಾಣಿ ವಾರ್ತೆ



ವಿಜಯೇಂದ್ರ

ಬೆಂಗಳೂರು: ಬೆಂಗಳೂರು ನಗರದ ಸಮಸ್ಯೆಗಳು ಮತ್ತು ಅವ್ಯವಸ್ಥೆಗಳ ವಿರುದ್ಧ ಇದೇ 28ರಂದು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಬೆಂಗಳೂರು ನಗರದ ಸಮಸ್ಯೆಗಳ ಕುರಿತು ನಗರದ ಶಾಸಕರು, ಮಾಜಿ ಶಾಸಕರು ಮತ್ತು ಮಾಜಿ ಕಾರ್ಪೊರೇಟರ್‌ಗಳ ಜತೆಗಿನ ಸಭೆ ನಡೆಸಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿ ಈ ವಿಷಯ ತಿಳಿಸಿದರು.

‘ನಗರದ ಸಮಸ್ಯೆಗಳಿಗೆ ಪರಿಹಾರ ದೊರಕಿಸಿಕೊಡುವ ನಿಟ್ಟಿನಲ್ಲಿ ಪ್ರತಿ ವಾರ್ಡಿನಲ್ಲಿ ಬಿಜೆಪಿ ವತಿಯಿಂದ ಹೋರಾಟ ಕೈಗೆತ್ತಿಕೊಳ್ಳಲಾಗುವುದು. ಇದು ನಾಮಕಾವಸ್ತೆ ಹೋರಾಟವಲ್ಲ. ಸಮಸ್ಯೆಗಳಿಗೆ ಪರಿಹಾರ ಮತ್ತು ಹೋರಾಟಕ್ಕೆ ಜಯ ಸಿಗಬೇಕು’ ಎಂದು ಅವರು ವಿವರಿಸಿದರು.

‘ನಗರದಲ್ಲಿ ಆಗುತ್ತಿರುವ ಅವ್ಯವಸ್ಥೆಗಳ ಬಗ್ಗೆ ಚರ್ಚಿಸಿದ್ದೇವೆ. ಕೇವಲ ಎರಡು ದಿನ ಮಳೆ ಬಂದಾಗ ರಸ್ತೆಗಳು ವಾಹನ ಓಡಾಡದಂತೆ ಬ್ಲಾಕ್ ಆಗಿದ್ದವು. ನಗರದ ಜನ ಅತಿ ಹೆಚ್ಚು ತೆರಿಗೆ ಪಾವತಿಸುತ್ತಾರೆ. ಆದರೆ, ಹೊಸ ಸರ್ಕಾರ ಬಂದ ಬಳಿಕ ಅಭಿವೃದ್ಧಿಗೆ ಒಂದು ರೂಪಾಯಿಯನ್ನೂ ಕೊಟ್ಟಿಲ್ಲ’ ಎಂದರು.

‘ರಾಜ್ಯ ಸರ್ಕಾರ ಆಸ್ತಿ ತೆರಿಗೆ, ಮೋಟಾರು ವಾಹನ ತೆರಿಗೆ ಸೇರಿ ಎಲ್ಲ ರೀತಿಯ ತೆರಿಗೆಗಳನ್ನು ಹೆಚ್ಚಿಸಿದೆ. ಆದರೆ, ಜನತೆಗೆ ಯಾವುದೇ ಪ್ರಯೋಜನ ಆಗುತ್ತಿಲ್ಲ. ರಸ್ತೆಗಳು ಗುಂಡಿಗಳಿಂದ ತುಂಬಿಹೋಗಿವೆ. ಕಸ ವಿಲೇವಾರಿಯೂ ಸರಿಯಾಗಿ ಆಗುತ್ತಿಲ್ಲ. ಅತಿ ಹೆಚ್ಚು ಸಚಿವರಿದ್ದರೂ ನಗರದ ಅಭಿವೃದ್ಧಿ ಕುರಿತು ಯಾರೂ ಕೂಡ ಚಿಂತನೆ ಮಾಡದೇ ಇರುವುದು ದುರಂತ’ ಎಂದು ತಿಳಿಸಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಮಾತನಾಡಿ, ‘ಮಳೆ ಬಂದಾಗ ಮುಖ್ಯಮಂತ್ರಿಯವರ ಹೋಗಿ ಫೋಟೊ ಷೋ ಮಾಡುವುದು ಬಿಟ್ಟರೆ ಬೇರೇನೂ ಕೆಲಸ ಆಗುತ್ತಿಲ್ಲ. ಕಮಿಷನರ್ ಅವರು ಮಳೆಗೆ ಸಂಬಂಧಿಸಿ ಎಲ್ಲ ಸಿದ್ಧತೆ ಮಾಡಿರುವುದಾಗಿ ಒಂದು ತಿಂಗಳ ಹಿಂದೆಯೇ ಹೇಳಿಕೆ ನೀಡಿದ್ದರು. ಪಾಲಿಕೆ ಎಲ್ಲ ಸಿದ್ಧತೆ ಮಾಡಿದ್ದರೆ ಮುಖ್ಯಮಂತ್ರಿ ಸ್ಥಳ ಭೇಟಿ ಮಾಡುವ ಪ್ರಮೇಯ ಯಾಕೆ ಬಂತು’ ಎಂದು ಪ್ರಶ್ನಿಸಿದರು.

‘ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಒಂದು ವರ್ಷದಲ್ಲಿ ₹7,000 ಕೋಟಿ ವಿಶೇಷ ಅನುದಾನ ನೀಡಿದ್ದರು. ಬಸವರಾಜ ಬೊಮ್ಮಾಯಿ ಅವರು ₹6,700 ಕೋಟಿ ಬಿಡುಗಡೆ ಮಾಡಿದ್ದರು. ಕಾಂಗ್ರೆಸ್‌ನವರು ಅವರ ಯೋಗ್ಯತೆಗೆ ಎಷ್ಟು ಬಿಡುಗಡೆ ಮಾಡಿದ್ದಾರೆಂದು ಹೇಳಲಿ’ ಎಂದು ಸವಾಲು ಹಾಕಿದರು.

‘ಉಡ್ತಾ ಬೆಂಗಳೂರು’: ಆರೋಪ

‘ಸಿಲಿಕಾನ್ ವ್ಯಾಲಿ, ಗಾರ್ಡನ್ ಸಿಟಿ ಎಂದು ಹೆಸರು ಮಾಡಿದ್ದ ಬೆಂಗಳೂರು ಈಗ ‘ಉಡ್ತಾ ಬೆಂಗಳೂರು’ ಆಗಿದೆ. ಮಾದಕ ದ್ರವ್ಯ ಚಟುವಟಿಕೆ ಮಿತಿ ಮೀರಿದೆ’ ಎಂದು ಬಿ.ವೈ. ವಿಜಯೇಂದ್ರ ‘ಎಕ್ಸ್’ ಮೂಲಕ ತಿಳಿಸಿದ್ದಾರೆ.

> **ಮಾದಕವಸ್ತು ಮಾರಾಟ, ಸಾಗಣೆ ಮತ್ತು ಸೇವನೆ ತಡೆಗೆ ನಮ್ಮ ಸರ್ಕಾರ ಬಿಗಿ ಕ್ರಮಗಳನ್ನು ಕೈಗೊಂಡಿದೆ. ಬಿಜೆಪಿಯ ‘ಉಡ್ತಾ ಬೆಂಗಳೂರು’ ಆರೋಪದಲ್ಲಿ ಹುರುಳಿಲ್ಲ**
> **ಜಿ. ಪರಮೇಶ್ವರ,** ಗೃಹ ಸಚಿವ

‘ಕರ್ನಾಟಕದ ಸ್ಥಿತಿ ಅದರಲ್ಲೂ ಬೆಂಗಳೂರು ನಗರ ಮಾದಕದ್ರವ್ಯ ವ್ಯಸನಿಗಳು ಮತ್ತು ರೇವ್ ಪಾರ್ಟಿಗಳನ್ನು ಮಾಡುವವರ ಸ್ವರ್ಗವಾಗಿ ಮಾರ್ಪಾಡಾಗಿರುವುದು ಆತಂಕದ ಮತ್ತು ಬೇಸರದ ಸಂಗತಿ’ ಎಂದು ಹೇಳಿದ್ದಾರೆ.

‘ಹೊರ ರಾಜ್ಯದವರು ಬೆಂಗಳೂರಿಗೆ ಬಂದು ಇಲ್ಲಿ ರೇವ್ ಪಾರ್ಟಿಗಳನ್ನು ಮಾಡುವುದು ಸುರಕ್ಷಿತ ಎಂದು ಭಾವಿಸಿದ್ದಾರೆ. ಇದಕ್ಕೆ ಕಾಂಗ್ರೆಸ್ ಸರ್ಕಾರ ಬೇಜವಾಬ್ದಾರಿ ಧೋರಣೆಯೇ ಕಾರಣ. ಕಾಂಗ್ರೆಸ್ ಪಕ್ಷ ಇಂತಹ ಅಪರಾಧಿಗಳಿಗೆ ರಕ್ಷಣೆ ನೀಡುತ್ತಿದೆಯೆ ಎಂಬ ಸಂದೇಹವೂ ಉಂಟಾಗುತ್ತಿದೆ’ ಎಂದಿದ್ದಾರೆ.

‘ಬುದ್ಧನ ಬೋಧನೆಗಳು ಇಂದಿಗೂ ಪ್ರಸ್ತುತ’

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಶಾಂತಿ, ಏಕಾಗ್ರತೆ ಮತ್ತು ಶಿಸ್ತಿನ ಕುರಿತು ಬುದ್ಧನ ಬೋಧನೆಗಳು ಆಧುನಿಕ ಕಾಲದಲ್ಲಿ ಇನ್ನೂ ಪ್ರಸ್ತುತ ಎಂದು ಬುದ್ಧ ಭೂಮಿ ಪ್ರತಿಷ್ಠಾನದ ಅಧ್ಯಕ್ಷ ಎಂ.ಆರ್.ವೆಂಕಟೇಶ್ ತಿಳಿಸಿದರು.

ಕೆ.ಆರ್.ಪುರ ಸಮೀಪದ ದೊಡ್ಡಬನಹಳ್ಳಿ ಬುದ್ಧ ವಿಹಾರದಲ್ಲಿ ಬುದ್ಧ ಭೂಮಿ ಪ್ರತಿಷ್ಠಾನ ಟ್ರಸ್ಟ್ ಆಯೋಜಿಸಿದ್ದ ಬುದ್ಧ ಪೂರ್ಣಿಮೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಜಗತ್ತಿಗೆ ಶಾಂತಿ ಬೆಳಕಿನ ಸಂದೇಶ ಸಾರಿದ ಮಹಾಯೋಗಿ, ದಾರ್ಶನಿಕ ಭಗವಾನ್ ಬುದ್ಧ ಅವರ ಸಂದೇಶಗಳನ್ನು ಎಲ್ಲೆಡೆ ಸಾರೋಣ. ಅವರಂತೆ ಸರಳ ಬದುಕು, ಶಾಂತಿ, ಅಹಿಂಸೆ, ಸನ್ಮಾರ್ಗದ ದಾರಿಯಲ್ಲಿ ಸಾಗೋಣ’ ಎಂದು ಹೇಳಿದರು.



ಬುದ್ಧ ಭೂಮಿ ಪ್ರತಿಷ್ಠಾನದ ಅಧ್ಯಕ್ಷ ಎಂ.ಆರ್.ವೆಂಕಟೇಶ್ ಅವರು ಮಕ್ಕಳೊಂದಿಗೆ ಕಾರ್ಯಕ್ರಮದಲ್ಲಿ ಪಾಲ್ಗೊಂಡರು

ನಗರದಲ್ಲಿ ಇಂದು

‘ಹಾಸನ ಪೆನ್‌ಡ್ರೈವ್ ಪ್ರಕರಣ’ ಭಿತ್ತಿಚಿತ್ರ ಅನಾವರಣ: ಭಾಗವಹಿಸುವವರು: ಕೆ. ಮರುಳಸಿದ್ದಪ್ಪ, ಗೊ.ರು. ಚನ್ನಬಸಪ್ಪ, ಜಿ. ರಾಮಕೃಷ್ಣ, ವಿಜಯ, ಡಾ. ವಸುಂಧರಾ ಭೂಪತಿ, ಬಿ. ಸುರೇಶ, ಕಾ.ತ. ಚಿಕ್ಕಣ್ಣ, ಎಲ್.ಎನ್. ಮುಕುಂದರಾಜ್, ಎಸ್.ಜಿ. ಸಿದ್ದರಾಮಯ್ಯ, ಕೆ.ವಿ. ನಾಗರಾಜಮೂರ್ತಿ, ಶಶಿಧರ್ ಭಾರೀಘಾಟ್, ಆಯೋಜನೆ: ಪ್ರಗತಿಪರ ಚಿಂತಕರ ವೇದಿಕೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

‘ಆಧುನಿಕ ಜಗತ್ತಿಗೆ ಬಸವಣ್ಣನವರ ವಚನಗಳ ಅಗತ್ಯತೆ’ ಉಪನ್ಯಾಸ: ಸಿ. ಸೋಮಶೇಖರ್, ಎಸ್.ಆರ್. ಅನಂತನಾರಾಯಣ, ಭಾಗ್ಯಲಕ್ಷ್ಮಿ ಮಗ್ಗೆ, ಆಯೋಜನೆ: ಬಸವೇಶ್ವರನಗರ ಹಿರಿಯ ನಾಗರಿಕರ ವೇದಿಕೆ, ಸ್ಥಳ: ಹಿರಿಯ ನಾಗರಿಕರ ವೇದಿಕೆ ಸಭಾಂಗಣ, ಬೆಳಿಗ್ಗೆ 11

ಕ್ಲಬ್‌ಡೇ–2024 ಮತ್ತು ಮಹಿಳಾ ದಿನಾಚರಣೆ: ಅಧ್ಯಕ್ಷತೆ: ಎಚ್.ಎಂ. ಮಂಜೇಶ್, ಅತಿಥಿಗಳು: ಸೆಲ್ವಿ ಸಿ., ಕೆ. ಶ್ರೀನಿವಾಸ ರೆಡ್ಡಿ, ಮೇರಿ ವಿನಯಾ ವಿಮಲ್, ರೂಪೇಶ್ ಕುಮಾರ್ ಕೆ.ಎನ್., ಬಿ. ಸುರೇಶ, ಸವಿತಕ್ಕ, ಸಿತಾರಾ, ಆಯೋಜನೆ: ಅಂಚೆ ಮನರಂಜನಾ ಕೂಟ, ಸ್ಥಳ: ಮೇಘದೂತ ಸಭಾಂಗಣ, ಐದನೇ ಮಹಡಿ, ಜಿಪಿಒ, ಮಧ್ಯಾಹ್ನ 3

ಪುನೀತ್ ರಾಜ್‌ಕುಮಾರ್ ಸಾಹಿತ್ಯ ಮತ್ತು ಸಂಸ್ಕೃತಿ ದತ್ತಿ ಪ್ರಶಸ್ತಿ ಪ್ರದಾನ: ಗೀತಾ ರಾಮಾನುಜಂ, ಅಧ್ಯಕ್ಷತೆ: ಶಶಿಕಾಂತ್ ರಾವ್, ಅತಿಥಿಗಳು: ಲಕ್ಷ್ಮೀಪತಯ್ಯ, ವಾಸುದೇವ್ ಹೊಸಹಳ್ಳಿ, ಪ್ರಾಸ್ತಾವಿಕ ನುಡಿ: ಎಸ್. ರಾಮಲಿಂಗೇಶ್ವರ, ಪ್ರಶಸ್ತಿ ಪುರಸ್ಕೃತರು: ಅಶ್ವತ್ಥ ನಾರಾಯಣ ಕಂಟನಕುಂಟೆ, ಪೂಜಾ ರಂಗನಾಥ್, ಸದಾಶಿವ ಡಿ.ಓ., ಮಧು ಕಾರಗಿ, ಆಯೋಜನೆ: ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 11.30

ವಸಂತೋತ್ಸವ: ಸುನಿಲ್ ಕುಮಾರ್ ಧಾರೇಶ್ವರ್, ಅತಿಥಿಗಳು: ಶತಾವಧಾನಿ ಆರ್. ಗಣೇಶ್, ಚಿರಂಜೀವಿ ಸಿಂಘ್, ‘ವಸಂತೋತ್ಸವ ವೈಭವ’ ಭರತನಾಟ್ಯ ಪ್ರದರ್ಶನ: ಮಿಥುನ್ ಮತ್ತು ತಂಡ, ಆಯೋಜನೆ: ಇನ್ಫೊಸಿಸ್ ಪ್ರತಿಷ್ಠಾನ, ಭಾರತೀಯ ವಿದ್ಯಾಭವನ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 5ರಿಂದ

ಇಂದಿರಾಧೀಶ ವೈಭವ: ಉದ್ಘಾಟನೆ: ವ್ಯಾಸನಕೆರೆ ಪ್ರಭಂಜನಾಚಾರ್ಯ, ಸತ್ಯಧ್ಯಾನಾಚಾರ್ಯ ಕಟ್ಟಿ, ಸಂಗೀತ ಕಛೇರಿ: ಜಯತೀರ್ಥ ಮೇವುಂಡಿ, ಪುತ್ತೂರು ನರಸಿಂಹ ನಾಯಕ್, ವಾಣಿ, ರಾಜಶ್ರೀ, ಲಲಿತ್ ಮೇವುಂಡಿ, ಶೇಷಗಿರಿ ಕೆ.ಎಂ., ಆಯೋಜನೆ: ಇಂದಿರೇಶ ಸೇವಾ ಟ್ರಸ್ಟ್, ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ, ಸಂಜೆ 5.30

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಐಶಾನಿ ರೈ, ಶ್ರೇಯಾ ಶೆಟ್ಟಿ, ಅತಿಥಿಗಳು: ಅಶೋಕ ಕುಮಾರ್, ಅನುಪಮಾ ಹೊಸಕೆರೆ, ರೀನಾ ರಘು ಸುವರ್ಣ, ಸತೀಶ್ ರಾವ್, ಆಯೋಜನೆ: ನೃತ್ಯಾರಾಧನ, ಸ್ಥಳ: ಡಾ.ಡಿ. ಪ್ರೇಮಚಂದ್ರ ಸಾಗರ್ ಸಭಾಂಗಣ, ಕುಮಾರಸ್ವಾಮಿ ಲೇಔಟ್, ಸಂಜೆ 6

ಸಂಗೀತ ಕಛೇರಿ: ಗಾಯನ: ರಮ್ಯ ಸುಧೀರ್ ಮತ್ತು ತಂಡ, ಕೀ–ಬೋರ್ಡ್: ಅಮಿತ್ ಶರ್ಮಾ, ತಬಲಾ: ಸರ್ವೋತ್ತಮ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಶ್ರೀ ಪಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

‘ಪುಕ್ಕಟೆ ಸಲಹೆ’ ನಾಟಕ ಪ್ರದರ್ಶನ: ರಚನೆ: ಎಚ್. ಡುಂಡಿರಾಜ್, ನಿರ್ದೇಶನ: ಅಶೋಕ್ ಬಿ., ಪ್ರಸ್ತುತಿ: ವಿಶ್ವಪಥ ಕಲಾ ಸಂಗಮ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

‘ಮಧ್ವನಾಮ’ ಪ್ರವಚನ: ಹರಿಪೂಜಾರ್ ಮಾದನೂರು, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ. nagaradalli_indu@prajavani.co.in

ಸಂಸದ ಪ್ರಜ್ವಲ್ ರೇವಣ್ಣ ಬಂಧನಕ್ಕೆ ಆಗ್ರಹ

ಹಾಸನ: 30ಕ್ಕೆ ಬೃಹತ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮೈಸೂರು: ‘ಸಂಸದ ಪ್ರಜ್ವಲ್ ರೇವಣ್ಣ ಬಂಧನಕ್ಕೆ ರಾಜ್ಯ ಸರ್ಕಾರ ರೆಡ್ ಕಾರ್ನರ್ ನೋಟಿಸ್ ಹೊರಡಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಜನಪರ ಚಳವಳಿಗಳ ಒಕ್ಕೂಟದಿಂದ ಮೇ 30ರಂದು ಹಾಸನದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಯಲಿದೆ’ ಎಂದು ಪ್ರಗತಿಪರ ಸಂಘಟನೆಯ ಜಿ.ಎಸ್.ಸೀಮಾ ತಿಳಿಸಿದರು.

ನಗರದಲ್ಲಿ ಶುಕ್ರವಾರ ಮಾತನಾಡಿ, ‘ಪ್ರಜ್ವಲ್ ಅವರನ್ನು ಭಾರತಕ್ಕೆ ಕರೆತಂದು ಬಂಧಿಸಿ, ಕಠಿಣ ಶಿಕ್ಷೆ ವಿಧಿಸಬೇಕು ಹಾಗೂ ಸಂತ್ರಸ್ತ ಮಹಿಳೆಯರಿಗೆ ರಕ್ಷಣೆ ಒದಗಿಸಬೇಕು ಎಂಬ ಹಕ್ಕೊತ್ತಾಯದೊಂದಿಗೆ ಮೆರವಣಿಗೆ ನಡೆಯಲಿದ್ದು, ನಂತರ ಬಹಿರಂಗ ಸಭೆ ನಡೆಯಲಿದೆ. ರಾಜ್ಯದ ವಿವಿಧ ಭಾಗಗಳಿಂದ 10 ಸಾವಿರಕ್ಕೂ ಹೆಚ್ಚು ಜನ ಸೇರಲಿದ್ದಾರೆ. ಮೈಸೂರಿನಿಂದ 300ಕ್ಕಿಂತ ಹೆಚ್ಚು ಜನ ತೆರಳಲಿದ್ದೇವೆ’ ಎಂದರು.

‘ಕೇಂದ್ರವು ರಾಜತಾಂತ್ರಿಕ ಪಾಸ್‌ಪೋರ್ಟ್ ಮತ್ತು ವೀಸಾ ಕೂಡಲೇ ರದ್ದುಪಡಿಸಬೇಕು. ಆತನ ಬ್ಯಾಂಕ್ ಖಾತೆ ಮುಟ್ಟುಗೋಲು ಹಾಕಿಕೊಳ್ಳಬೇಕು. ವಿಕೃತ ಲೈಂಗಿಕ ಹಗರಣದ ವಿಡಿಯೋ ಮತ್ತು ಪೆನ್‌ಡ್ರೈವ್‌ನಲ್ಲಿನ ಚಿತ್ರಣಗಳನ್ನು ವಿವಿಧ ಸಂವಹನ ಮಾಧ್ಯಮಗಳ ಮೂಲಕ ಹಂಚುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದರು.

‘ಮುಖ್ಯಮಂತ್ರಿ ಹಾಗೂ ಗೃಹ ಸಚಿವರು ಹಾಸನಕ್ಕೆ ಭೇಟಿ ನೀಡಿ ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಸಾಂತ್ವನ ಹೇಳಿ ಆತ್ಮಸ್ಥೈರ್ಯ ತುಂಬಬೇಕು. ಗೌಪ್ಯತೆ ಕಾಪಾಡುವ ಭರವಸೆ ನೀಡಬೇಕು. ಸಂತ್ರಸ್ತೆಯರಿಗೆ ಎಲ್ಲ ರೀತಿಯ ಕಾನೂನು ನೆರವು, ಭದ್ರತೆ, ಪರಿಹಾರ, ಪುನರ್ವಸತಿ, ಆಪ್ತ ಸಮಾಲೋಚನೆಯ ಅವಕಾಶ ಒದಗಿಸಬೇಕು. ಶಾಸಕ ಎಚ್.ಡಿ.ರೇವಣ್ಣ ಅವರ ವಿರುದ್ಧವೂ ಪ್ರಕರಣ ದಾಖಲಾಗಿರುವುದರಿಂದ ಅವರನ್ನು ಬಂಧಿಸಬೇಕು’ ಎಂದರು.

‘ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಸಮತಾ ವೇದಿಕೆ, ಸಮತಾ ಅಧ್ಯಯನ ಕೇಂದ್ರ, ಆರ್‌ಎಲ್‌ಎಚ್‌ಪಿ, ಧ್ವನಿ ಮಹಿಳಾ ಒಕ್ಕೂಟ, ಎಐಎಂಎಸ್‌ಎಸ್, ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ, ಪಿಯುಸಿಎಲ್, ದಲಿತ ಸಂಘರ್ಷ ಸಮಿತಿ, ದಲಿತ ಸಂಘಟನೆಗಳು, ಸಿಪಿಐ, ಸಿಪಿಎಂ, ಸಿಪಿಐ ಎಂಎಲ್, ಎಸ್‌ಯುಸಿಐಸಿ, ಎನ್‌ಎಫ್‌ಡಬ್ಲ್ಯುಐ, ನೆಲೆ ಹಿನ್ನೆಲೆ, ಜನಮನ ಸಾಂಸ್ಕೃತಿಕ ವೇದಿಕೆ, ಒಡನಾಡಿ, ದೇಸಿರಂಗ ಹಾಗೂ ಮೈಸೂರಿನ ಪ್ರಗತಿಪರ ಸಂಘಟನೆಗಳು ಭಾಗವಹಿಸಲಿವೆ’ ಎಂದು ತಿಳಿಸಿದರು.

ಜಿ.ಪಿ. ಬಸವರಾಜು, ಕೆ.ಆರ್. ಗೋಪಾಲಕೃಷ್ಣ, ಒಡನಾಡಿ ಸ್ಟ್ಯಾನ್ಲಿ, ಪ್ರೊ. ಸಬಿಹಾ ಭೂಮಿಗೌಡ, ಉಗ್ರ ನರಸಿಂಹೇಗೌಡ ಗೋಷ್ಠಿಯಲ್ಲಿ ಪಾಲ್ಗೊಂಡಿದ್ದರು.

ಅತ್ಯಾಚಾರ ‘ಚಿತ್ರೀಕರಣ’: ನಾಲ್ವರ ಬಂಧನ

ಮಂದವಲ್ಲಿ, ಆಂಧ್ರಪ್ರದೇಶ (ಪಿಟಿಐ): ಬಾಲಕಿ ಮೇಲೆ ಬಾಲಕನೊಬ್ಬನು ಅತ್ಯಾಚಾರ ಎಸಗಿದ್ದಾನೆ ಎನ್ನಲಾದ ಕೃತ್ಯವನ್ನು ‘ಚಿತ್ರೀಕರಿಸಿ’, ವಿಡಿಯೊ ಹಂಚಿಕೊಂಡಿದ್ದ ಆರೋಪದಡಿ ಆಂಧ್ರಪ್ರದೇಶ ಪೊಲೀಸರು ನಾಲ್ವರನ್ನು ಬಂಧಿಸಿದ್ದಾರೆ.

ಮೇ 15ರಂದು ನಡೆದಿದ್ದ ಈ ಕೃತ್ಯ ಈಚೆಗೆ ಬಯಲಾಗಿತ್ತು. ಬಾಳೆ ಬಾಲಸುಬ್ರಹ್ಮಣ್ಯಂ (22), ಗಂಟಶಾಲಾ ಚಂದ್ರಶೇಖರ (28), ಪೆದ್ದಿರೆಡ್ಡಿ ಧರ್ಮತೇಜ (19), ಜಯಮಂಗಲ ಹರಿಕೃಷ್ಣ (20) ಬಂಧಿತರು.

ಬಾಲಕನನ್ನು ಬಾಲಮಂದಿರಕ್ಕೆ ಕಳುಹಿಸಲಾಗಿದೆ. ಮನೆಯಲ್ಲಿ ಬಾಲಕಿ ಒಬ್ಬಳೇ ಇದ್ದುದನ್ನು ಗಮನಿಸಿದ್ದ 10ನೇ ತರಗತಿ ವಿದ್ಯಾರ್ಥಿ, ಶಾಲೆಗೆ ಕರೆದೊಯ್ಯುವ ನೆಪದಲ್ಲಿ ಕೃತ್ಯ ಎಸಗಿದ್ದ. ಬಾಲಕನಿಗೆ ಪರಿಚಿತರಾಗಿದ್ದ ನಾಲ್ವರು ಇದನ್ನು ಕ್ಯಾಮೆರಾದಲ್ಲಿ ಸೆರೆಹಿಡಿದಿದ್ದು, ಹಲವರೊಂದಿಗೆ ಹಂಚಿಕೊಂಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಸೌರ ಚಾವಣಿ ಯೋಜನೆ: ತ್ವರಿತ ಅನುಷ್ಠಾನಕ್ಕೆ ಮಾರ್ಗಸೂಚಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸೌರ ಚಾವಣಿ ಯೋಜನೆ ಅನುಷ್ಠಾನವನ್ನು ತ್ವರಿತಗೊಳಿಸಲು ಇಂಧನ ಇಲಾಖೆಯು ಹೊಸದಾಗಿ ಮಾರ್ಗಸೂಚಿ ಪ್ರಕಟಿಸಿದೆ. ಎಲ್ಲ ಎಸ್ಕಾಂಗಳು ಈ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಇಂಧನ ಇಲಾಖೆ ಸೂಚಿಸಿದೆ.

ದೊಡ್ಡ ಪ್ರಮಾಣದಲ್ಲಿ ಈ ಯೋಜನೆ ಅನುಷ್ಠಾನಗೊಳಿಸಲು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಈ ಹಿಂದೆ ತಜ್ಞರ ಸಮಿತಿ ರಚಿಸಲಾಗಿತ್ತು. ತಜ್ಞರ ಸಮಿತಿ, ಸರ್ಕಾರಕ್ಕೆ ವರದಿ ಸಲ್ಲಿಸಿದ್ದು ವರದಿ ಆಧರಿಸಿ ಈಗ ಮಾರ್ಗಸೂಚಿ ಪ್ರಕಟಿಸಲಾಗಿದೆ.

ಮಾರ್ಗಸೂಚಿಯಲ್ಲಿ ಏನಿದೆ?: ಸೌರ ಯೋಜನೆ ಅನುಷ್ಠಾನಕ್ಕೆ ಎಲ್ಲ ಎಸ್ಕಾಂಗಳು ಗ್ರಾಹಕರಲ್ಲಿ ಜಾಗೃತಿ ಮೂಡಿಸಬೇಕು. ಹೆಚ್ಚಿನ ಗ್ರಾಹಕರನ್ನು ತಲುಪಲು ವ್ಯಾಪಕವಾದ ಜಾಗೃತಿ ಚಟುವಟಿಕೆ ಕೈಗೊಳ್ಳಬೇಕು. ಸಣ್ಣ ಗ್ರಾಹಕರು 1 ಕೆ.ವಿಯಿಂದ 3 ಕೆ.ವಿ. ಸಾಮರ್ಥ್ಯದ ಸೌರ ಚಾವಣಿ ಸ್ಥಾವರಗಳನ್ನು ಸ್ಥಾಪಿಸುವತ್ತ ಹೆಚ್ಚಿನ ಗಮನ ಹರಿಸಬೇಕು ಎಂದು ಸೂಚಿಸಿದೆ.



ಗ್ರಾಹಕರು ಸಲ್ಲಿಸುವ ಅರ್ಜಿ ಪ್ರಕ್ರಿಯೆಗೆ ಸಾಮಾನ್ಯ ವಿಆರ್‌ಎಲ್ ಹಾಗೂ ವೆಬ್‌ಸೈಟ್ ರಚಿಸಲು ಬೆಸ್ಕಾಂ ನೋಡಲ್ ಕೇಂದ್ರ ಆಗಿರುತ್ತದೆ. ಎಲ್ಲ ಎಸ್ಕಾಂಗಳಿಗೆ ಒಂದೇ ವೇದಿಕೆ ಒದಗಿಸಲು ಲಾಗಿನ್ ಒದಗಿಸಬೇಕು ಎಂದು ತಿಳಿಸಿದೆ.

ಅರ್ಜಿಗಳು, ವಿದ್ಯುತ್ ಖರೀದಿ ಒಪ್ಪಂದಗಳು ಮತ್ತು ಗ್ರಿಡ್‌ಗೆ ಮಾರಾಟದ ವ್ಯವಹಾರಗಳು ಆನ್‌ಲೈನ್‌ನಲ್ಲೇ ನಡೆಯಬೇಕು. ಸೌರ ಬಿಲ್ಲಿಂಗ್ ಸಾಫ್ಟ್‌ವೇರ್ ಮೇ 31ರ ಒಳಗೆ ಆನ್‌ಲೈನ್ ಲಭ್ಯವಾಗುವಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿದೆ.

ಜಾರಿಯಲ್ಲಿ ವಿಳಂಬವಾದರೆ ಸಿಬ್ಬಂದಿಗೆ ದಂಡ ವಿಧಿಸಲು ಎಸ್ಕಾಂಗಳಿಗೆ ಅಧಿಕಾರ ನೀಡಲಾಗಿದೆ. ಸ್ಮಾರ್ಟ್ ಮೀಟರ್ ಕಾರ್ಯ ವಿಧಾನದಂತೆಯೇ ಖರೀದಿ ಪ್ರಕ್ರಿಯೆಗಾಗಿ ಬೆಸ್ಕಾಂ ಮೊಬೈಲ್ ತಂತ್ರಾಂಶವನ್ನು ಅಭಿವೃದ್ಧಿಪಡಿಸಬೇಕು. ಎಲ್ಲ ಎಸ್ಕಾಂಗಳು ಪಿಪಿಎ ಮಾದರಿ ಅನುಮೋದಿಸಲು ಏಕರೂಪದ ವಿಧಾನ ಅನುಸರಿಸಬೇಕು. ಮೀಟರ್ ಪರೀಕ್ಷೆಯು ಒಂದೇ ಕಡೆ ಆಗಬೇಕು. ಎಲ್ಲ ಎಸ್ಕಾಂಗಳು ಮೇಲಿನ ಮಾರ್ಗಸೂಚಿ ಪಾಲಿಸಿ ಸರ್ಕಾರಕ್ಕೆ ವರದಿ ಸಲ್ಲಿಸಬೇಕು ಎಂದು ಆದೇಶದಲ್ಲಿ ತಿಳಿಸಿದೆ.

ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ ಚೋಟು

ಸ್ಫೋಟ: ‘ಎಲ್‌ಇಟಿ’ ಶಂಕಿತ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟದ ಸಂಚಿನಲ್ಲಿ ಭಾಗಿಯಾಗಿದ್ದ ಆರೋಪದಡಿ ಶೋಯಿಬ್ ಅಹ್ಮದ್ ಮಿರ್ಜಾ ಅಲಿಯಾಸ್ ಚೋಟುನನ್ನು (35) ಎನ್‌ಐಎ ಅಧಿಕಾರಿಗಳು ಶುಕ್ರವಾರ ಬಂಧಿಸಿದ್ದಾರೆ.

‘ಹುಬ್ಬಳ್ಳಿಯ ಚೋಟುನನ್ನು ವಿಧ್ವಂಸಕ ಕೃತ್ಯಕ್ಕೆ ಸಂಚು ರೂಪಿಸಿದ್ದ ಆರೋಪದಡಿ ಈ ಹಿಂದೆ ಬಂಧಿಸಲಾಗಿತ್ತು. ಕೆಲ ತಿಂಗಳು ಜೈಲಿನಲ್ಲಿದ್ದ ಈತ, 2018ರಲ್ಲಿ ಜಾಮೀನು ಪಡೆದುಕೊಂಡು ಜೈಲಿನಿಂದ ಹೊರಗೆ ಬಂದಿದ್ದ’ ಎಂದು ಎನ್‌ಐಎ ಮೂಲಗಳು ಹೇಳಿವೆ.

‘ಹುಬ್ಬಳ್ಳಿಯಲ್ಲಿ ಅಂಗಡಿ ಇಟ್ಟುಕೊಂಡಿದ್ದ ಚೋಟು, ಭಯೋತ್ಪಾದನಾ ಕೃತ್ಯಕ್ಕೆ ಸಂಚು ರೂಪಿಸುತ್ತಿದ್ದ. ಲಷ್ಕರ್–ಎ–ತಯಬಾ (ಎಲ್‌ಇಟಿ) ಉಗ್ರ ಸಂಘಟನೆಯಲ್ಲೂ ಸಕ್ರಿಯನಾಗಿದ್ದ. ಹಲವು ಶಂಕಿತರ ಉಗ್ರರ ಜೊತೆಯಲ್ಲೂ ಒಡನಾಟ ವಿಟ್ಟುಕೊಂಡಿದ್ದ ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಮೂಲಗಳು ತಿಳಿಸಿವೆ.

‘ಪ್ರಕರಣದಲ್ಲಿ ಬಂಧಿಸಲಾಗಿದ್ದ ಶಂಕಿತರಾದ ಮುಸಾವೀರ್ ಹುಸೇನ್ ಶಾಜೀಬ್ ಹಾಗೂ ಅಬ್ದುಲ್ ಮತೀನ್ ಅಹಮ್ಮದ್ ತಾಹಾ ವಿಚಾರಣೆಯಿಂದ ಹಲವು ಮಾಹಿತಿ ಲಭ್ಯವಾಗಿತ್ತು. ಇದನ್ನು ಆಧರಿಸಿ, ಚೋಟು ಸೇರಿದಂತೆ 11 ಮಂದಿಯ ಸ್ಥಳಗಳ ಮೇಲೆ ಇತ್ತೀಚೆಗೆ ದಾಳಿ ಮಾಡಲಾಗಿತ್ತು. ಚೋಟುನನ್ನೂ ವಶಕ್ಕೆ ಪಡೆಯಲಾಗಿತ್ತು’ ಎಂದು ಹೇಳಿವೆ.

‘ಸ್ಫೋಟದ ಪ್ರಮುಖ ಆರೋಪಿ ಎನ್ನಲಾದ ವಿದೇಶಿ ಹ್ಯಾಂಡ್ಲರ್ ಜೊತೆ ಚೋಟು ಸಾಮಾಜಿಕ ಮಾಧ್ಯಮಗಳ ಮೂಲಕ ಸಂಪರ್ಕವಿಟ್ಟುಕೊಂಡಿದ್ದ. ಅಬ್ದುಲ್ ಮತೀನ್ ಅಹಮ್ಮದ್ ತಾಹಾನನ್ನು ವಿದೇಶಿ ಹ್ಯಾಂಡ್ಲರ್‌ಗೆ ಪರಿಚಯ ಮಾಡಿಸಿದ್ದ’ ಎಂದು ಮೂಲಗಳು ತಿಳಿಸಿವೆ.

5ನೇ ಆರೋಪಿ: ‘ಚೋಟು ಸೇರಿದಂತೆ 11 ಶಂಕಿತರು, ಬಾಂಬ್ ಸ್ಫೋಟದ ಸಂಚು ಹಾಗೂ ಇತರೆ ಕೆಲಸಕ್ಕೆ ಹಣಕಾಸು ನೆರವು ನೀಡಿದ್ದಾರೆ. ಇವರಲ್ಲಿ ಕೆಲವರು, ವಿದೇಶಿ ಹ್ಯಾಂಡ್ಲರ್ ಜೊತೆ ಒಡನಾಟವಿಟ್ಟುಕೊಂಡಿದ್ದರು. ಚೋಟು ಕೃತ್ಯಕ್ಕೆ ಸಹಕಾರ ನೀಡಿದ್ದ ಪುರಾವೆಗಳು ಲಭ್ಯವಾಗಿವೆ. ಹೀಗಾಗಿ, ಈತನನ್ನು ಬಂಧಿಸಲಾಗಿದೆ. ಈತ ಪ್ರಕರಣದ 5ನೇ ಆರೋಪಿ. ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ನೀಡುವಂತೆ ಕೋರಲಾಗುವುದು’ ಎಂದು ಎನ್‌ಐಎ ಮೂಲಗಳು ಹೇಳಿವೆ.

ಚೋಟು ಬಂಧನದ ಬೆನ್ನಲ್ಲೇ, ಪ್ರಕರಣದ ಶಂಕಿತರಾದ ಮುಸಾವೀರ್ ಹುಸೇನ್ ಶಾಜೀಬ್ ಹಾಗೂ ಅಬ್ದುಲ್ ಮತೀನ್ ಅಹಮ್ಮದ್ ತಾಹಾನನ್ನು ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆದಿದ್ದಾರೆ.

‘ಮಾರ್ಚ್ 1ರಂದು ನಡೆದಿದ್ದ ಬಾಂಬ್ ಸ್ಫೋಟ ಪ್ರಕರಣದಲ್ಲಿ ಮುಸಾವೀರ್ ಹಾಗೂ ತಾಹಾನನ್ನು ಏಪ್ರಿಲ್ 12ರಂದು ಕೋಲ್ಕತ್ತಾ ಬಳಿ ಬಂಧಿಸಲಾಗಿತ್ತು. ತನಿಖೆಯಲ್ಲಿ ಹೊಸ ಸಂಗತಿಗಳು ಪತ್ತೆಯಾಗಿವೆ. ಇದೇ ಕಾರಣಕ್ಕೆ, ನ್ಯಾಯಾಂಗ ಬಂಧನದಲ್ಲಿದ್ದ ಮುಸಾವೀರ್ ಹಾಗೂ ಅಬ್ದುಲ್ ತಾಹಾನನ್ನು ಮೇ 27ರವರೆಗೆ ಕಸ್ಟಡಿಗೆ ಪಡೆಯಲಾಗಿದೆ’ ಎಂದು ಮೂಲಗಳು ಹೇಳಿವೆ.

ಎಸ್‌ಎಸ್‌ಎಲ್‌ಸಿಯಲ್ಲಿ ಕನಿಷ್ಠ ಅಂಕ: ಶಾಲೆಗಳಿಂದ ವಿವರಣೆ ಕೇಳಿದ ಬಿಬಿಎಂಪಿ

ಶಿಕ್ಷಕರಿಗೆ ನೋಟಿಸ್: ನಿರ್ಧಾರ

• ಆರ್. ಮಂಜುನಾಥ್

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ 50ಕ್ಕಿಂತ ಕಡಿಮೆ ಫಲಿತಾಂಶ ಪಡೆದಿರುವ ಬಿಬಿಎಂಪಿಯ ಏಳು ಶಾಲೆಗಳ ಮುಖ್ಯ ಶಿಕ್ಷಕರು ಹಾಗೂ 30 ಶಿಕ್ಷಕರಿಗೆ ಬಿಬಿಎಂಪಿ ನೋಟಿಸ್ ಜಾರಿ ಮಾಡಲು ನಿರ್ಧರಿಸಿದೆ.

2023–24ನೇ ಸಾಲಿನಲ್ಲಿ ಫಲಿತಾಂಶ ಕಡಿಮೆಯಾಗಲು ಕಾರಣ ಏನು ಎಂಬ ಬಗ್ಗೆ ವಿವರಣೆ ನೀಡುವಂತೆ ಶಾಲೆಗಳ ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕರಿಗೆ ನೋಟಿಸ್ ಜಾರಿಯಾಗಲಿದೆ.

ಗಾಂಧಿನಗರ (ಶೇ 50), ಪಾದರಾಯನಪುರ (ಶೇ 48.53), ಮಲ್ಲೇಶ್ವರ (ಶೇ 48.39), ಮರ್ಫಿಟೌನ್ (ಶೇ 41.67), ಪಿಳ್ಳಣ್ಣ ಗಾರ್ಡನ್ (ಶೇ 24.50), ಆಸ್ಟಿನ್ ಟೌನ್ (ಶೇ 23.68), ಕೆ.ಜಿ. ನಗರ (ಶೇ 20) ಪ್ರೌಢಶಾಲೆಗಳಲ್ಲಿ ಶೇ 50ಕ್ಕಿಂತ ಕಡಿಮೆ ಫಲಿತಾಂಶ ಬಂದಿದೆ.

ಪಿಳ್ಳಣ್ಣ ಗಾರ್ಡನ್ ಪ್ರೌಢಶಾಲೆಯಲ್ಲಿ 249 ವಿದ್ಯಾರ್ಥಿಗಳಲ್ಲಿ 61 ಮಂದಿ ಮಾತ್ರ ಉತ್ತೀರ್ಣರಾಗಿದ್ದಾರೆ. ಪಾದರಾಯನಪುರ ಶಾಲೆಯಲ್ಲಿ 136ರಲ್ಲಿ 66 ಮಂದಿ, ಆಸ್ಟಿನ್ ಟೌನ್‌ನಲ್ಲಿ 38ರಲ್ಲಿ 9 ವಿದ್ಯಾರ್ಥಿಗಳು ಮಾತ್ರ ಉತ್ತೀರ್ಣರಾಗಿದ್ದಾರೆ.

ಶಾಲೆಗಳಲ್ಲಿನ ಕಡಿಮೆ ಫಲಿತಾಂಶದ ಕುರಿತು ವಿವರಣೆ ನೀಡಲು ಮುಖ್ಯ ಶಿಕ್ಷಕರಿಗೆ ನೋಟಿಸ್ ಜಾರಿ ಮಾಡಲಾಗುತ್ತಿದೆ. ಇನ್ನು, ವಿಷಯಗಳಲ್ಲಿ ಹಲವಾರು ವಿದ್ಯಾರ್ಥಿಗಳು ಅತಿ ಕಡಿಮೆ ಅಂಕ ಪಡೆದಿರುವುದು ಬಿಬಿಎಂಪಿ ಶಿಕ್ಷಣ ವಿಭಾಗದ ಗಮನಕ್ಕೆ ಬಂದಿದೆ. ಅಂತಹ ಸುಮಾರು 30 ವಿಷಯ ಶಿಕ್ಷಕರಿಗೆ ನೋಟಿಸ್ ಜಾರಿ ಮಾಡಲಾಗುತ್ತಿದೆ. 'ನೀವು ಬೋಧಿಸುವ ವಿಷಯಗಳಲ್ಲಿ ವಿದ್ಯಾರ್ಥಿಗಳು ಕಡಿಮೆ ಅಂಕ ಗಳಿಸಲು ಕಾರಣವೇನು ಎಂಬುದರ ವಿವರಣೆ ಜೊತೆಗೆ ಸಲಹೆಗಳನ್ನೂ ನೀಡಬೇಕು' ಎಂದು ನೋಟಿಸ್‌ನಲ್ಲಿ ಸೂಚಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದರು.

ಹೊರಗುತ್ತಿಗೆ ಶಿಕ್ಷಕರ ಮುಂದುವರಿಕೆ: ಬಿಬಿಎಂಪಿ ಶಾಲೆಗಳಲ್ಲಿ 746 ಹೊರಗುತ್ತಿಗೆ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದು, 2024–25ನೇ ಶೈಕ್ಷಣಿಕ ವರ್ಷದಲ್ಲಿ ಅವರನ್ನೇ ಮುಂದುವರಿಸಲು ನಿರ್ಧರಿಸಲಾಗಿದೆ. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್‌ಡಿಎಂಸಿ) ಸಮ್ಮತಿಸುವ ಸಿಬ್ಬಂದಿಯನ್ನು ಹೊರಗುತ್ತಿಗೆಯಲ್ಲಿ ಒದಗಿಸಲು ಕ್ರಿಸ್ಟಲ್ ಸೇರಿದಂತೆ ಮೂರು ಏಜೆನ್ಸಿಗಳಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಬಿಬಿಎಂಪಿ ಶಿಕ್ಷಣ ವಿಭಾಗದ ಅಧಿಕಾರಿಗಳು ಮಾಹಿತಿ ನೀಡಿದರು.

ಬಿಬಿಎಂಪಿಯಿಂದ ಹೊರಗುತ್ತಿಗೆ ಮೂಲಕ ಶಿಕ್ಷಕರನ್ನು ನೇಮಿಸಿಕೊಳ್ಳುವ ಪ್ರಕ್ರಿಯೆಯನ್ನು ಕೈಬಿಡಲಾಗಿದೆ. ಶಿಕ್ಷಣ ಇಲಾಖೆಯ ಮೂಲಕ ಪ್ರಕ್ರಿಯೆ ಆರಂಭಿಸಲಾಗಿದೆ. ಹೀಗಾಗಿ, ಹೊರಗುತ್ತಿಗೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದವರಿಗೆ ಪ್ರಥಮ ಆದ್ಯತೆ ನೀಡಲು ನಿರ್ಧರಿಸಲಾಗಿದೆ. ಆದ್ದರಿಂದ ಅವರಿಗೆ ಮೇ 21ರಿಂದ 23ರವರೆಗೆ ತರಬೇತಿ ನೀಡಲಾಗಿದೆ. ಎಸ್‌ಡಿಎಂಸಿ ಮೂಲಕ ಅವರು ಕಾರ್ಯನಿರ್ವಹಿಸಲಿದ್ದಾರೆ. ಪೂರ್ವ, ಪಶ್ಚಿಮ, ದಕ್ಷಿಣ ವಲಯಗಳನ್ನಾಗಿ ವಿಭಾಗಿಸಿ ಏಜೆನ್ಸಿಗಳಿಂದ ಈ ಶಿಕ್ಷಕರು ನೇಮಕವಾಗಲಿದ್ದಾರೆ.

'ಎಸ್‌ಡಿಎಂಸಿ ಪ್ರಕಾರ, ಶಿಕ್ಷಕರಿಗೆ ₹12,500 ವೇತನ ನೀಡಲಾಗುತ್ತಿದೆ. ಬಿಬಿಎಂಪಿ ಈ ಹಿಂದೆ ಹೆಚ್ಚಿನ ವೇತನ ನೀಡುತ್ತಿತ್ತು. ಆದ್ದರಿಂದ ಬಿಬಿಎಂಪಿ ವತಿಯಿಂದ ಸುಮಾರು ₹5 ಸಾವಿರವನ್ನು ನೀಡಲಾಗುತ್ತದೆ. ಹೀಗಾಗಿ, ಶಿಕ್ಷಕರು ₹17,500 ವೇತನ ಪಡೆಯಲಿದ್ದಾರೆ. ಇಷ್ಟಾದರೂ ಹಿಂದಿಗಿಂತ ₹1000ದಷ್ಟು ವೇತನ ಕಡಿಮೆಯಾಗಲಿದೆ' ಎಂದು ಶಿಕ್ಷಕರೊಬ್ಬರು ಮಾಹಿತಿ ನೀಡಿದರು.



ಕೆಂಪೇಗೌಡನಗರದಲ್ಲಿರುವ ಬಿಬಿಎಂಪಿಯ ಬಾಲಕಿಯರ ಪ್ರೌಢಶಾಲೆ

ಶೂ ವಿತರಣೆ ಈ ವರ್ಷವೂ ವಿಳಂಬ

ಬಿಬಿಎಂಪಿ ನರ್ಸರಿ, ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಸುಮಾರು 15,500 ವಿದ್ಯಾರ್ಥಿಗಳಿಗೆ ಈ ವರ್ಷವೂ ಶೂ ವಿತರಣೆ ವಿಳಂಬವಾಗಲಿದೆ.

ಕಪ್ಪು ಮತ್ತು ಕ್ಯಾನ್ವಾಸ್ ಶೂ ವಿತರಣೆಗೆ ಟೆಂಡರ್ ಆಹ್ವಾನಿಸಲಾಗಿತ್ತು. ಒಬ್ಬರೇ ಭಾಗವಹಿಸಿದ್ದರು. ಲೋಕಸಭಾ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದ್ದರೂ ಅಗತ್ಯ ಅನುಮತಿ ಪಡೆದು ಎರಡನೇ ಬಾರಿಗೆ ಟೆಂಡರ್ ಕರೆಯಲಾಗಿದೆ. ಮೇ 31ರಂದು ಟೆಂಡರ್ ತೆರೆಯಲಾಗುತ್ತದೆ.

ಈ ಟೆಂಡರ್‌ನಲ್ಲಿ ಹೆಚ್ಚಿನವರು ಭಾಗವಹಿಸಿದರೆ, ಜೂನ್ 6ರ ನಂತರವಷ್ಟೇ ಗುತ್ತಿಗೆದಾರರನ್ನು ಅಂತಿಮಗೊಳಿಸುವ ಪ್ರಕ್ರಿಯೆ ಆರಂಭವಾಗುತ್ತದೆ. ಅವರಿಗೆ ಕಾರ್ಯಾದೇಶ ನೀಡಿ, ಅವರು ವಿತರಣೆ ಆರಂಭಿಸಲು ಕನಿಷ್ಠ ಒಂದು ತಿಂಗಳಾಗುತ್ತದೆ. ಎಲ್ಲವೂ ಇದೇ ರೀತಿ ನಡೆದರೆ ಜುಲೈ ಮೊದಲ ವಾರದಲ್ಲಿ ಶೂಗಳನ್ನು ವಿತರಿಸಬಹುದು ಎಂದು ಬಿಬಿಎಂಪಿ ಶಿಕ್ಷಣ ವಿಭಾಗದ ಅಧಿಕಾರಿಗಳು ಮಾಹಿತಿ ನೀಡಿದರು.




ಪಾದಚಾರಿಗಳಿಗೆ ಫುಟ್‌ಪಾತ್ ಕಂಟಕ...

ನಗರದಲ್ಲಿರುವ ಫುಟ್‌ಪಾತ್‌ಗಳು ಹಾಳಾಗಿದ್ದು, ಪಾದಚಾರಿಗಳಿಗೆ ಸಂಕಟ ತರುತ್ತಿವೆ. ಕರ್ನಾಟಕ ಲೋಕಾಯುಕ್ತ ಕಚೇರಿ ಎದುರು ಶುಕ್ರವಾರ ವೃದ್ಧರೊಬ್ಬರು ಗುಂಡಿಗೆ ಬಿದ್ದು ಗಾಯಗೊಂಡರು. ಸ್ಥಳದಲ್ಲಿದ್ದ ಕಬ್ಬನ್‌ಪಾರ್ಕ್ ಸಂಚಾರ ಠಾಣೆ ಪೊಲೀಸರು ವೃದ್ಧರನ್ನು ಮೇಲೆತ್ತಿ ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕಳುಹಿಸಿ ಮಾನವೀಯತೆ ತೋರಿದರು – ಪ್ರಜಾವಾಣಿ ಚಿತ್ರ/ರಂಜು ಪಿ.

ಮಿಟ್ರಲ್ ಶೃಂಗದಲ್ಲಿ ಡಾ.ಪ್ರಸನ್ನ ಸಿಂಹ ಮೋಹನ್ ರಾವ್ ಮಾಹಿತಿ

'ಜಯದೇವ: 2,614 ಎಂವಿಆರ್ ಶಸ್ತ್ರಚಿಕಿತ್ಸೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೃದಯದ ನಾಲ್ಕು ಪ್ರಧಾನ ಕವಾಟಗಳಲ್ಲಿ ಒಂದಾದ ಮಿಟ್ರಲ್ ಕವಾಟದ (ಎಡ ಹೃತ್ಕರ್ಣ) ಸಮಸ್ಯೆ ನಿವಾರಣೆಯ ಶಸ್ತ್ರಚಿಕಿತ್ಸೆಯಲ್ಲಿ (ಮಿಟ್ರಲ್ ವಾಲ್ವ್ ರಿಪೈರ್ಸ್-ಎಂವಿಆರ್) ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯು ಮುಂಚೂಣಿಯಲ್ಲಿದ್ದು, ಈವರೆಗೆ 2,614 ಮಿಟ್ರಲ್ ಕವಾಟಗಳ ಸಮಸ್ಯೆ ನಿವಾರಣೆ ಶಸ್ತ್ರಚಿಕಿತ್ಸೆ ಮಾಡಲಾಗಿದೆ' ಎಂದು ಸಂಸ್ಥೆಯ ಹೃದಯ ಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ.ಪ್ರಸನ್ನ ಸಿಂಹ ಮೋಹನ್ ರಾವ್ ತಿಳಿಸಿದರು.

ಸಂಸ್ಥೆ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ 'ಜಯದೇವ ಮಿಟ್ರಲ್' ಶೃಂಗಸಭೆ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ, ಮಾತನಾಡಿದರು.

'ಮಿಟ್ರಲ್ ಕವಾಟ ಬದಲಿಗಿಂತ ಎಂವಿಆರ್ ಶಸ್ತ್ರಚಿಕಿತ್ಸೆಯು ರೋಗಿಗೆ ಹೆಚ್ಚು ಅನುಕೂಲಕರವಾಗಿದೆ. ಆದರೆ, ಈ ಶಸ್ತ್ರಚಿಕಿತ್ಸೆ ಸಂಕೀರ್ಣ ಪ್ರಕ್ರಿಯೆ. ಎಂವಿಆರ್ ಶಸ್ತ್ರಚಿಕಿತ್ಸೆ ಪ್ರಾರಂಭವಾದದ್ದು ನೂರು ವರ್ಷಗಳ ಹಿಂದೆ. ಸಂಕೀರ್ಣವಾದ ಈ ಶಸ್ತ್ರಚಿಕಿತ್ಸೆಯನ್ನು ತಂತ್ರಜ್ಞಾನ ಹಾಗೂ ತಜ್ಞವೈದ್ಯರ ನೆರವಿನಿಂದ ಸಂಸ್ಥೆಯಲ್ಲಿ ಮಾಡಲಾಗುತ್ತಿದೆ. ಈ ಶಸ್ತ್ರಚಿಕಿತ್ಸೆಯಲ್ಲಿ ಸಂಸ್ಥೆಯು ಆಗ್ನೇಯ ಏಷ್ಯಾದಲ್ಲಿಯೇ ಮುಂಚೂಣಿಯಲ್ಲಿದೆ. ಎಂವಿಆರ್ ಶಸ್ತ್ರಚಿಕಿತ್ಸೆಯ ಶತಮಾನೋತ್ಸವದ ಸ್ಮರಣಾರ್ಥ, ಈ ಶಸ್ತ್ರಚಿಕಿತ್ಸೆಯ ಹೊಸ ವಿಧಾನಗಳ ಬಗ್ಗೆ ಹೃದಯ ಶಸ್ತ್ರಚಿಕಿತ್ಸಾ ತಜ್ಞರಿಗೆ ತರಬೇತಿ ನೀಡಲಾಗುತ್ತಿದೆ' ಎಂದು ಹೇಳಿದರು.

ಸಂಸ್ಥೆಯ ನಿರ್ದೇಶಕ ಡಾ.ಕೆ.ಎಸ್. ರವೀಂದ್ರನಾಥ್, 'ಮಿಟ್ರಲ್ ಕವಾಟ ಸಮಸ್ಯೆ ನಿವಾರಣೆ ಶಸ್ತ್ರಚಿಕಿತ್ಸೆಗೆ ಸಾಕಷ್ಟು ಅನುಭವ ಹಾಗೂ ತರಬೇತಿ ಬೇಕಾಗುತ್ತದೆ. ಆದ್ದರಿಂದ ವೈದ್ಯಕೀಯ ತಜ್ಞರು ಯುವ ವೈದ್ಯರಿಗೆ ಈ ವಿಧಾನದಲ್ಲಿ ಅಗತ್ಯ ಮಾರ್ಗದರ್ಶನದ ಜತೆಗೆ ತರಬೇತಿಯನ್ನು ಒದಗಿಸಬೇಕು. ರೋಗಿಗಳ ಆರೋಗ್ಯ ಸುಧಾರಣೆಯೇ ನಮ್ಮ ಆದ್ಯತೆಯಾಗಬೇಕು. ಆ ನಿಟ್ಟಿನಲ್ಲಿ ಎಲ್ಲರೂ ಒಟ್ಟಾಗಿ ಕಾರ್ಯನಿರ್ವಹಿಸಬೇಕು' ಎಂದು ತಿಳಿಸಿದರು.

ಫ್ರಾನ್ಸ್ ಸೇರಿ ವಿವಿಧ ದೇಶಗಳ 180 ಹೃದಯ ಚಿಕಿತ್ಸಾ ತಜ್ಞರು ಈ ಶೃಂಗಸಭೆಯಲ್ಲಿ ಭಾಗವಹಿಸಿದ್ದರು. ಎಂವಿಆರ್ ಶಸ್ತ್ರಚಿಕಿತ್ಸೆಗೆ ಇರುವ ಅವಕಾಶಗಳ ಬಗ್ಗೆ ಚರ್ಚಿಸಲಾಯಿತು. ಶನಿವಾರವೂ ಈ ಶೃಂಗ ನಡೆಯಲಿದ್ದು, ರೋಬೋಗಳ ನೆರವಿನಿಂದ ಸಮಸ್ಯೆ ನಿವಾರಣೆ ಸೇರಿ ವಿವಿಧ ವಿಷಯಗಳ ಬಗ್ಗೆ ವಿಚಾರಗೋಷ್ಠಿ ನಡೆಯಲಿದೆ.



ಶೃಂಗಸಭೆಯಲ್ಲಿ ಫ್ರಾನ್ಸ್‌ನ ಪ್ರೊ.ಪ್ಯಾಟ್ರಿಕ್ ಪೆರಿಯರ್ ಅವರನ್ನು ಡಾ.ಕೆ.ಎಸ್. ರವೀಂದ್ರನಾಥ್ ಸ್ವಾಗತಿಸಿದರು. ಪ್ರೊ.ಗೆಲ್ಲಸ್ ಡ್ರೇಫಸ್ ಹಾಗೂ ಡಾ.ಪ್ರಸನ್ನ ಸಿಂಹ ಮೋಹನ್ ರಾವ್ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

'ಕಾರ್ ರೆಂಟಲ್' ಆ್ಯಪ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ 'ಇ ಟ್ರ್ಯಾವೆಲ್ ಮೇಟ್' ಸಂಸ್ಥೆಯ 'ಕಾರ್ ರೆಂಟಲ್' ಆ್ಯಪ್ ಅನ್ನು ಚಿಕ್ಕಮಗಳೂರು ಜಿಲ್ಲೆಯ ಗೌರಗದ್ದೆ ಆಶ್ರಮದ ವಿನಯ್ ಗುರೂಜಿ ಲೋಕಾರ್ಪಣೆ ಮಾಡಿದರು.

ರೆಂಟ್ ಎನ್ ಗೋ ಕಂಪನಿ ಅಭಿವೃದ್ಧಿಪಡಿಸಿರುವ ಆ್ಯಪ್ ಬಿಡುಗಡೆ ಮೂಲಕ ಈ ಟ್ರ್ಯಾವೆಲ್ ಮೇಟ್ ಸಂಸ್ಥೆ ನಗರದಲ್ಲಿ ಕಾರು ಬಾಡಿಗೆ ಸೇವೆ ಆರಂಭಿಸಿತು. ಈ ಆ್ಯಪ್ ಸದ್ಯ ಸೇವೆ ನೀಡುತ್ತಿರುವ ಕಂಪನಿಗಳಿಗಿಂತ ಹೆಚ್ಚು ಸರಳ ಮತ್ತು ಸುರಕ್ಷಿತವಾಗಿದೆ ಎಂದು ಸಂಸ್ಥೆಯವರು ತಿಳಿಸಿದರು.

ವಿನಯ್ ಗುರೂಜಿ ಮಾತನಾಡಿ, ಕಳೆದ ಹತ್ತು ವರ್ಷಗಳಿಂದ ಸಾರಿಗೆ ಉದ್ಯಮದಲ್ಲಿರುವ 'ಇ-ಟ್ರ್ಯಾವೆಲ್ ಮೇಟ್' ಕಂಪನಿಯ ಹೊಸ ಸೇವೆ ಇದಾಗಿದ್ದು, ಇದು ಅತ್ಯಂತ ಗ್ರಾಹಕ-ಸ್ನೇಹಿ' ಎಂದರು.

ನಗರದ ವಿವಿಧೆಡೆ ಉತ್ತಮ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಎರಡು ದಿನ ಬಿಡುವು ನೀಡಿದ್ದ ಮಳೆ ಶುಕ್ರವಾರ ವಿವಿಧೆಡೆ ಉತ್ತಮವಾಗಿ ಸುರಿಯಿತು.

ಶುಕ್ರವಾರ ಬೆಳಿಗ್ಗೆ ಮೋಡ ಕವಿದ ವಾತಾವರಣವಿತ್ತು. ಮಧ್ಯಾಹ್ನ ಕೆಲವು ಭಾಗದಲ್ಲಿ ಮಳೆಯಾಯಿತು. ಸಂಜೆ ವೇಳೆಗೆ ಹಲವೆಡೆ ಮಳೆಯಾಯಿತು. ಹೇರೋಹಳ್ಳಿ, ಚೌಡೇಶ್ವರಿ ವಾರ್ಡ್, ಯಲಹಂಕ, ಪೀಣ್ಯ, ನಂದಿನಿ ಬಡಾವಣೆ, ಮಾರುತಿ ಮಂದಿರ, ಹಂಪಿನಗರ, ಶೆಟ್ಟಿಹಳ್ಳಿ, ಬಾಗಲಗುಂಟೆ, ಕೆಂಗೇರಿ, ನಾಯಂಡಹಳ್ಳಿ, ಆರ್‌ಆರ್ ನಗರ, ಯಶವಂತಪುರ, ಹೆಬ್ಬಾಳ, ವನ್ನಾರ್‌ಪೇಟೆ, ಬಿಟಿಎಂ ಲೇಔಟ್, ಮಾರತ್‌ಹಳ್ಳಿ, ಮಹದೇವಪುರ, ವಿಜ್ಞಾನನಗರ, ಹೂಡಿ, ಪುಲಕೇಶಿನಗರ, ಸಂಪಂಗಿರಾಮನಗರ, ಕಾಟನ್‌ಪೇಟೆ, ರಾಜಮಹಲ್ ಗುಟ್ಟಹಳ್ಳಿ, ವಿಶ್ವನಾಥ್ ನಾಗೇನಹಳ್ಳಿ, ಕೊಡಿಗೆಹಳ್ಳಿ ಸಹಿತ ವಿವಿಧೆಡೆ ಮಳೆ ಸುರಿಯಿತು.

ಮಿಂಚು, ಗುಡುಗು ಅಬ್ಬರ ಕಡಿಮೆಯಾಗಿತ್ತು. ಚರಂಡಿ ವ್ಯವಸ್ಥೆ ಸರಿ ಇಲ್ಲದೇ ಹಲವು ಕಡೆಗಳಲ್ಲಿ ರಸ್ತೆಯಲ್ಲಿಯೇ ಮಳೆನೀರು ಹರಿಯಿತು.

ಮಳೆ ಪ್ರಮಾಣ: ಹೇರೋಹಳ್ಳಿ 2.7 ಸೆಂ.ಮೀ., ಚೌಡೇಶ್ವರಿ ವಾರ್ಡ್ 1.6 ಸೆಂ.ಮೀ., ಯಲಹಂಕ 1.5 ಸೆಂ.ಮೀ., ಪೀಣ್ಯ ಕೈಗಾರಿಕಾ ಪ್ರದೇಶ–1.4 ಸೆಂ.ಮೀ., ನಂದಿನಿ ಬಡಾವಣೆ 1.3 ಸೆಂ.ಮೀ.,ಮಾರುತಿ ಮಂದಿರ 1.2 ಸೆಂ.ಮೀ. ಮಳೆ ದಾಖಲಾಗಿದೆ.

ನೆಲಗದರನಹಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿ ಕುಂಠಿತ

• ಪ್ರಸನ್ನಕುಮಾರ್ ಯಾದವ್

ಪೀಣ್ಯ ದಾಸರಹಳ್ಳಿ: ಒಂದೂವರೆ ವರ್ಷದ ಹಿಂದೆ ಆರಂಭವಾಗಿದ್ದ ನೆಲಗದರನಹಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿ ಕುಂಟುತ್ತಾ ಸಾಗಿದೆ.

ಸದ್ಯಕ್ಕೆ ಹೂಳೆತ್ತುವ ಕಾರ್ಯ ಪೂರ್ಣಗೊಂಡಿದೆ. ಕೆರೆಯ ಸುತ್ತಲೂ ನಡಿಗೆ ಪಥ ನಿರ್ಮಾಣದ ಕಾರ್ಯ ಪ್ರಗತಿಯಲ್ಲಿದೆ. ತ್ಯಾಜ್ಯ ನೀರು ಸೇರದಂತೆ ತಡೆಯುವ ಕೊಳವೆಗಳ ಅನುಷ್ಠಾನ, ತಂತಿ ಬೇಲಿ ಮತ್ತು ಗೇಟ್ ಹಾಕುವ ಕಾರ್ಯ ಹಾಗೂ ಶೌಚಾಲಯ ನಿರ್ಮಾಣ ಕಾರ್ಯ ಬಾಕಿ ಇದೆ.

ನೆಲಗದರನಹಳ್ಳಿ ಭಾಗದ ಜನರ ಜೀವನಾಡಿಯಂತಿದ್ದ ಈ ಕೆರೆಗೆ ಕೈಗಾರಿಕೆಗಳ ತ್ಯಾಜ್ಯ ಮತ್ತು ಒಳಚರಂಡಿ ನೀರು ಹರಿದು, ಕೆರೆಯ ನೀರು ಕಲುಷಿತಗೊಂಡಿತ್ತು. ಕೆರೆಯಲ್ಲಿನ ಜಲಚರಗಳಿಗೂ ಧಕ್ಕೆ ಉಂಟಾಗಿತ್ತು. ಕೆರೆ ಸ್ವಚ್ಛಗೊಳಿಸಿ, ಅಭಿವೃದ್ಧಿಪಡಿಸುವಂತೆ ಸ್ಥಳೀಯರು ಸರ್ಕಾರವನ್ನು ಒತ್ತಾಯಿಸಿದ್ದರು.

ಜನರ ಮನವಿಗೆ ಸ್ಪಂದಿಸಿದ ಸರ್ಕಾರ, ಒಂದೂವರೆ ವರ್ಷದ ಹಿಂದೆ ಅಮೃತ ನಗರೋತ್ಥಾನದ ಅನುದಾನದಲ್ಲಿ ಕೆರೆ ಅಭಿವೃದ್ಧಿಗಾಗಿ ₹4 ಕೋಟಿ ಅನುದಾನ ಬಿಡುಗಡೆ ಮಾಡಿತು. ಕೆರೆಯ ಅಭಿವೃದ್ಧಿ ಕಾರ್ಯಗಳು ಆರಂಭವಾದವು. ಆದರೆ ಕಾಮಗಾರಿ ಕುಟುಂತ್ತಾ ಸಾಗಿದೆ. 'ಬೇಗ ಕಾಮಗಾರಿಯನ್ನು ಪೂರ್ಣಗೊಳಿಸಿದರೆ, ಈ ಮಳೆಗಾಲದಲ್ಲಿ ಕೆರೆ ತುಂಬುತ್ತದೆ. ಸುತ್ತಲಿನ ಅಂತರ್ಜಲ ವೃದ್ಧಿಗೆ ಸಹಾಯವಾಗುತ್ತದೆ' ಎಂಬುದು ಸ್ಥಳೀಯರು ಅಭಿಪ್ರಾಯವಾಗಿದೆ.

'ಶೀಘ್ರ ಪೂರ್ಣ': ಕೆರೆಯು 19 ಎಕರೆ 22 ಗುಂಟೆ ವಿಸ್ತೀರ್ಣವಿದ್ದು, ಅದರಲ್ಲಿ 3 ಎಕರೆ 17 ಗುಂಟೆ ಒತ್ತುವರಿಯಾಗಿದೆ. ಒತ್ತುವರಿ ತೆರವು ಪ್ರಕ್ರಿಯೆ ಬಹುತೇಕ ಪೂರ್ಣಗೊಂಡಿದೆ. ಈ ತಿಂಗಳಲ್ಲೇ ಕಾಮಗಾರಿ ಪೂರ್ಣ ಗೊಳ್ಳುವ ನಿರೀಕ್ಷೆ ಇದೆ' ಎಂದು ಸಹಾಯಕ ಎಂಜಿನಿಯರ್ ಶ್ರೀಧರ್ ಮಾಹಿತಿ ನೀಡಿದರು.

ಆರ್‌.ಟಿ. ನಗರ ಮುಖ್ಯರಸ್ತೆ: ಮಳೆ ಬಂದರೆ ಕೆಸರು.. ಬಾರದಿದ್ದರೆ ದೂಳು..

ಕಾಮಗಾರಿ ನಿಧಾನ, ಸಂಚಾರ ಅಧ್ವಾನ

• ಬಾಲಕೃಷ್ಣ ಪಿ.ಎಚ್.



ಆರ್‌.ಟಿ.ನಗರದ ರಸ್ತೆಯಲ್ಲಿ ಬಿಬಿಎಂಪಿ ಸ್ಯಾನಿಟರಿ ಪೈಪ್ ಲೈನ್ ಅಳವಡಿಕೆ ಕಾಮಗಾರಿ ಕೈಗೊಂಡಿದೆ. ಪಾದಚಾರಿ ರಸ್ತೆಯನ್ನು ಇದಕ್ಕಾಗಿ ಆಗೆಯಲಾಗಿದೆ. –ಚಿತ್ರ ಕಿಶೋರ್ ಕುಮಾರ್ ಬೋಳಾರ್

ಬೆಂಗಳೂರು: ಮಳೆ ಬಂದರೆ ಕಾಲು ಊರಲು ಆಗದಷ್ಟು ಕೆಸರು, ಮಳೆ ಬರದಿದ್ದರೆ ಉಸಿರುಗಟ್ಟುವಷ್ಟು ದೂಳು..

ಇದು ರವೀಂದ್ರನಾಥ ಟ್ಯಾಗೋರ್ ನಗರದ (ಆರ್‌.ಟಿ. ನಗರ) ಮುಖ್ಯರಸ್ತೆಯಲ್ಲಿನ ಸಾರ್ವಜನಿಕರ ಅಳಲು.

ಬಿಬಿಎಂಪಿ ವತಿಯಿಂದ ವೈಟ್ ಟಾಪಿಂಗ್ ರಸ್ತೆ ಕಾಮಗಾರಿಯ ಭಾಗವಾಗಿ ನೀರು ಸರಬರಾಜು ಕೊಳವೆ, ಭೂಗತ ವಿದ್ಯುತ್ ಕೇಬಲ್ ಅಳವಡಿಸಲು ರಸ್ತೆಯುದ್ದಕ್ಕೂ ಎರಡೂ ಬದಿ ಅಗೆದು ಹಾಕಿರುವುದೇ ಸಮಸ್ಯೆಗೆ ಕಾರಣವಾಗಿದೆ. ಟ್ಯಾಗೋರ್ ಪುತ್ಥಳಿ ಇರುವ ಜಂಕ್ಷನ್‌ನಿಂದ ಆನಂದನಗರ ಕಡೆಗೆ ಹೋಗುವ ಈ ರಸ್ತೆಯಲ್ಲಿ ಎರಡು ಬಸ್ ತಂಗುದಾಣಗಳಿದ್ದವು. ಈ ಕಾಮಗಾರಿಯಿಂದ ಅವು ನೆಲಸಮಗೊಂಡಿವೆ. ಪ್ರಯಾಣಿಕರು ಕೆಸರಿನಲ್ಲೇ ನಿಂತು ಬಸ್‌ಗಳಿಗೆ ಕಾಯುವಂತಾಗಿದೆ.

ಮಂದಗತಿಯ ಕಾಮಗಾರಿಯಿಂದ ಸುತ್ತಲಿನ ಅಂಗಡಿ, ಹೋಟೆಲ್‌ಗಳಿಗೆ ಕಳೆದ ಆರು ತಿಂಗಳಿನಿಂದ ವ್ಯಾಪಾರ ಇಲ್ಲದಾಗಿದೆ. ವಾಹನ ಪಾರ್ಕಿಂಗ್‌ಗೆ ಜಾಗವಿಲ್ಲ. ವಾಹನಗಳು ಮುಖಾಮುಖಿ ಆದರೆ ಸಂಚಾರಕ್ಕೆ ಅಡ್ಡಿಯಾಗುತ್ತಿದೆ.

‘ರಸ್ತೆ ಬದಿಯಲ್ಲಿ ಅಂಗಡಿ ಎದುರು ವಾಹನಗಳು ನಿಲ್ಲಲು ಜಾಗವೇ ಇಲ್ಲದ ಮೇಲೆ ಗ್ರಾಹಕರಾದರೂ ಎಲ್ಲಿಂದ ಬರುತ್ತಾರೆ. ಬಿಬಿಎಂಪಿ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಿ ತೊಂದರೆ ನಿವಾರಿಸಬೇಕು’ ಎಂದು ವ್ಯಾಪಾರಿ ತಬ್ರಜ್ ಒತ್ತಾಯಿಸಿದರು.

ಪೈಪ್‌ಲೈನ್ ಅಳವಡಿಸುವ ಕಾಮಗಾರಿ ಆರಂಭವಾಗಿ ಐದಾರು ತಿಂಗಳು ದಾಟಿದೆ. ಒಂದು ಕಡೆ ಪೈಪ್ ಅಳವಡಿಸಿ ಕೂಡಲೇ ಮುಚ್ಚುವ ಕಾರ್ಯಗಳಾಗುತ್ತಿಲ್ಲ. ಅಲ್ಲಲ್ಲಿ ಗುಂಡಿ ತೋಡಿದ್ದಾರೆ. ತೋಡಿದ ಮಣ್ಣು, ಕಲ್ಲು, ಇತರ ಸಲಕರಣೆಗಳನ್ನು ಪಾದಚಾರಿ ಮಾರ್ಗದ ಮೇಲೆ ಹಾಕಿದ್ದಾರೆ. ವಾಹನ ಚಾಲಕರು ಸ್ವಲ್ಪ ಯಾಮಾರಿದರೂ ಗುಂಡಿಗೆ ಬೀಳುತ್ತಾರೆ. ಪಾದಚಾರಿಗಳು ಬೀಳುವ ಅಪಾಯವಿದೆ ಎಂದು ಸ್ಥಳೀಯ ನಿವಾಸಿ ಸಂತೋಷ್ ತಿಳಿಸಿದರು.

ಪೈಪ್‌ಗಳನ್ನು ಅಳವಡಿಸುವ ಕಾಮಗಾರಿ ಆರಂಭವಾಗಿ ಐದಾರು ತಿಂಗಳು ದಾಟಿದೆ. ಅಲ್ಲಲ್ಲಿ ಗುಂಡಿ ತೋಡಿದ್ದಾರೆ ಎಂದು ಔಷಧ ಅಂಗಡಿಯ ಜಗನ್ನಾಥ್ ಹೇಳಿದರು.

ಪಾದಚಾರಿ ಮಾರ್ಗ ಅಗೆದಿದ್ದು ಜನರು ನಡೆದಾಡುವುದೂ ಕಷ್ಟವಾಗಿದೆ. ಮಳೆ ಬಂದಾಗ ವಾಹನಗಳಿಂದ ಕೆಸರು ನೀರು ಪಾದಚಾರಿಗಳ ಮೇಲೆ ಹಾರುತ್ತದೆ. ಮಳೆ ಬಿಟ್ಟರೆ ಕೆಸರು ಒಣಗಿ ದೂಳು ಏಳುತ್ತದೆ. ಜನರ ಬಟ್ಟೆಗಳೆಲ್ಲ ಕೆಂಪಾಗುತ್ತದೆ. ನಾವು ಅದೇ ಗಾಳಿಯನ್ನು ಸೇವಿಸುತ್ತಿರುವುದರಿಂದ ಸೀನಿದರೆ ದೂಳೇ ಹೊರಬರುತ್ತಿದೆ ಎಂದು ಅಲವತ್ತುಕೊಂಡರು.

‘ಕೇಬಲ್ ಬದಲಾಯಿಸಲು, ಅಳವಡಿಸಲು, ಪೈಪ್‌ಗಳನ್ನು ಹಾಕಲು, ಚರಂಡಿ ನಿರ್ಮಿಸಲು ಸ್ವಲ್ಪ ಸಮಯ ಹಿಡಿಯಿತು. ಎಲ್ಲ ಕಾಮಗಾರಿಗಳು ಜೂನ್ ಅಂತ್ಯದ ಒಳಗೆ ಪೂರ್ಣಗೊಳ್ಳಲಿದೆ’ ಎಂದು ಬಿಬಿಎಂಪಿ ಎಂಜಿನಿಯರ್ ಮಾಹಿತಿ ನೀಡಿದರು.

ಶೇ 50ರಷ್ಟೂ ವ್ಯಾಪಾರವಿಲ್ಲ




ಜಗನ್ನಾಥ್

ಬಿಬಿಎಂಪಿ ಈ ಕಾಮಗಾರಿ ಕೈಗೊಂಡಲ್ಲಿಂದ ರಸ್ತೆ ಎರಡೂ ಬದಿಯ ಅಂಗಡಿಗಳಿಗೆ ವ್ಯಾಪಾರ ಕಡಿಮೆಯಾಗಿದೆ. ಐದಾರು ತಿಂಗಳಿನಿಂದ ಶೇ 50ರಷ್ಟು ವ್ಯಾಪಾರ ಆಗುತ್ತಿಲ್ಲ. ಈಗ ಕಾಮಗಾರಿ ನಡೆಯುತ್ತಿರುವ ವೇಗ ನೋಡಿದರೆ ಇನ್ನು ಆರು ತಿಂಗಳಾದರೂ ಪೂರ್ಣಗೊಳ್ಳುವ ಲಕ್ಷಣ ಕಾಣುತ್ತಿಲ್ಲ.

ಜಗನ್ನಾಥ, ಎಸ್‌ಆರ್‌ಎ ಮೆಡಿಕಲ್ ಶಾಪ್, ಆರ್‌.ಟಿ.ನಗರ

ಅಡ್ಡರಸ್ತೆಗಳಲ್ಲೂ ಸಮಸ್ಯೆ



ಸೈಫ್

80 ಅಡಿ ಮುಖ್ಯರಸ್ತೆಯನ್ನು ಅಗೆದು ಹಾಕಿ ವಾಹನಗಳು, ಜನ ಸಂಚಾರಕ್ಕೆ ಒಂದೆಡೆ ತೊಂದರೆ ಆಗಿದೆ. ಇನ್ನೊಂದೆಡೆ, ಈ ರಸ್ತೆಯನ್ನು ಸಂಪರ್ಕಿಸುವ ಅಡ್ಡ ರಸ್ತೆಗಳಿಗೂ ಇದರಿಂದ ತೊಂದರೆಯಾಗಿದೆ. ಮುಖ್ಯರಸ್ತೆಯಲ್ಲಿ ಸಾಲು ಸಾಲು ಅಂಗಡಿ, ಹೋಟೆಲ್‌ಗಳಿವೆ. ಅಲ್ಲಿ ವಾಹನ ನಿಲ್ಲಿಸಲು ಜಾಗವಿಲ್ಲ. ಅಡ್ಡರಸ್ತೆಗಳಲ್ಲಿ ನಿಲ್ಲಿಸುತ್ತಾರೆ. ಇದರಿಂದ ಅಲ್ಲಿಯೂ ಸಂಚಾರಕ್ಕೆ ತೊಡಕಾಗಿದೆ. ಸಂಜೆ ತಳ್ಳುಗಾಡಿಗಳು ಸಾಲು ಸಾಲು ನಿಂತರಂತೂ ಇಲ್ಲಿ ಅತ್ತಿತ್ತ ಓಡಾಡಲೂ ಕಷ್ಟ.

ಸೈಫುದ್ದೀನ್, ಕೆಟರ್ ಕೆಫೆ, ತರಳಬಾಳು ರಸ್ತೆ, ಆರ್‌.ಟಿ. ನಗರ



ಬೆಂಗಳೂರು ಹೊರವಲಯದ ಬೇಗೂರಿನ ನಾಗನಾಥೇಶ್ವರ ಬ್ರಹ್ಮ ರಥೋತ್ಸವ ಶುಕ್ರವಾರ ವಿಜೃಂಭಣೆಯಿಂದ ನಡೆಯಿತು.

ಬೇಗೂರು: ಬ್ರಹ್ಮರಥೋತ್ಸವ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಬೇಗೂರಿನ ನಾಗನಾಥೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಹಾಗೂ ಬ್ರಹ್ಮರಥೋತ್ಸವವು ಶುಕ್ರವಾರ ವಿಜೃಂಭಣೆಯಿಂದ ಜರುಗಿತು.

ಮುಂಜಾನೆ ದೇವರಿಗೆ ವಿಶೇಷ ಪೂಜೆಗಳನ್ನು ನೆರವೇರಿಸಿದ ಬಳಿಕ ಅಲಂಕೃತಗೊಂಡ ಉತ್ಸವ ಮೂರ್ತಿಯನ್ನು ರಥದಲ್ಲಿರಿಸಲಾಯಿತು. ಶಾಸಕ ಎಂ.ಕೃಷ್ಣಪ್ಪ ರಥೋತ್ಸವಕ್ಕೆ ಚಾಲನೆ ನೀಡಿದರು.

ಸಹಸ್ರಾರು ಭಕ್ತರು ಮತ್ತು ಗ್ರಾಮಸ್ಥರು ಸೇರಿ ತೇರಿಗೆ ದವನ ಚುಚ್ಚಿದ ಬಾಳೆಹಣ್ಣನ್ನು ತೇರಿಗೆ ಎಸೆದು ರಥವನ್ನು ಎಳೆದು ಭಕ್ತಿ ಸಮರ್ಪಿಸಿದರು. ಸಂಜೆ ಗ್ರಾಮ ದೇವತೆಗಳ ಪಲ್ಲಕ್ಕಿ ಉತ್ಸವ ಸಮೇತ ಕರಗ ಮಹೋತ್ಸವ ನಡೆಯಿತು. ಪಟ ಕುಣಿತ, ಡಮರುಗ, ಗಾಡಿ ಗೊಂಬೆ, ದೇಶಿಯ ಕಲಾತಂಡಗಳು, ಅಂಬಾರಿ ಉತ್ಸವ , ತಮಟೆ, ಡೊಳ್ಳು ಕುಣಿತ ಮತ್ತು ವೀರಗಾಸೆ ಸೇರಿದಂತೆ ಹಲವು ಸಾಂಸ್ಕೃತಿಕ ಕಲಾ ತಂಡಗಳು ವೈಭವದ ರಥೋತ್ಸವ ಕಾರ್ಯಕ್ರಮಕ್ಕೆ ಸಾಕ್ಷಿಯಾದವು.

ನಾಗನಾಥೇಶ್ವರ ಸ್ವಾಮಿ ದೇವಸ್ಥಾನದ ಪುರಾತನ ಕಾಲದ ರಥದ ಮೇಲೆ ಮಂಟಪ ಕುಸಿದು ರಥ ಸಂಪೂರ್ಣ ಹಾನಿಗೀಡಾಗಿತ್ತು. ದಾನಿಗಳು ಹಾಗೂ ಗ್ರಾಮಸ್ಥರ ನೆರವಿನೊಂದಿಗೆ ನೂತನ ರಥವನ್ನು ನಿರ್ಮಾಣ ಮಾಡಲಾಗಿತ್ತು.

ಪಾಲಿಕೆ ಮಾಜಿ ಸದಸ್ಯ ಎಂ.ಆಂಜನಪ್ಪ, ದೇವಸ್ಥಾನ ಆಡಳಿತ ಮಂಡಳಿ ಸಮಿತಿ ಅಧ್ಯಕ್ಷ ಹುಲ್ಲಹಳ್ಳಿ ಶ್ರೀನಿವಾಸ್, ಸದಸ್ಯರಾದ ಲೋಕೇಶ್, ಹರೀಶ್, ಪ್ರಶಾಂತ್, ರಾಮಮೂರ್ತಿ, ಮಧುಸೂದನ್, ಸಾವಿತ್ರಿ ನಾಗೇಂದ್ರ, ಕಲಾ ಲೋಕೇಶ್ ಪಾಲ್ಗೊಂಡಿದ್ದರು.

‘ಎಸ್‌ಟಿಎಸ್, ಹೆಬ್ಬಾರ್ ದಾರಿತಪ್ಪಿದ ಮಕ್ಕಳು’

ಬೆಂಗಳೂರು: ‘ಶಾಸಕರಾದ ಎಸ್‌.ಟಿ. ಸೋಮಶೇಖರ್, ಶಿವರಾಂ ಹೆಬ್ಬಾರ್ ದಾರಿ ತಪ್ಪಿದ ಮಕ್ಕಳು. ಇವರಿಗೆ ಪಕ್ಷ ನೋಟಿಸ್ ನೀಡಿದೆ’. ಎಂದು ವಿರೋಧಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ಈ ಇಬ್ಬರೂ ಡಿ.ಸಿ.ಎಂ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿದ್ದಕ್ಕೆ ಸಂಬಂಧಿಸಿದ ಪ್ರಶ್ನೆಗೆ ಹೀಗೆ ಪ್ರತಿಕ್ರಿಯಿಸಿದರು. ‘ಬಿಬಿಎಂಪಿ ಚುನಾವಣೆ ನಡೆಸುವ ಬಗ್ಗೆ ಸರ್ಕಾರದ ಮೇಲೆ ನಂಬಿಕೆಯೇ ಇಲ್ಲ’ ಎಂದರು.

ಪಂಡಿತ್ ರಾಜೀವ ತಾರಾನಾಥ ಆಸ್ಪತ್ರೆಗೆ ದಾಖಲು



ಪಂಡಿತ್ ರಾಜೀವ ತಾರಾನಾಥ

ಮೈಸೂರು: ಸರೋದ್ ವಾದಕ ಪಂಡಿತ್ ರಾಜೀವ ತಾರಾನಾಥ ಅವರು ಇಲ್ಲಿನ ಕುವೆಂಪು ನಗರದ ನಿವಾಸದಲ್ಲಿ ಕುಸಿದು ಬಿದ್ದು ಮಣಿಪಾಲ್ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಾಗಿದ್ದಾರೆ.

‘23 ದಿನಗಳ ಬಿದ್ದ ಅವರ ತೊಡೆ ಮೂಳೆ ಮುರಿದಿತ್ತು. ವೈದ್ಯ ಪ್ರಶಾಂತ್ ಶಸ್ತ್ರಚಿಕಿತ್ಸೆ ನಡೆಸಿದ್ದು, ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ’ ಎಂದು ಅವರ ಆಪ್ತ, ಲೇಖಕ ಟಿ.ಎಸ್.ವೇಣುಗೋಪಾಲ್ ‘ಪ್ರಜಾವಾಣಿ’ಗೆ ಶುಕ್ರವಾರ ತಿಳಿಸಿದರು.

‘ಎರಡು ದಿನದ ಹಿಂದೆ ಮೂತ್ರಕೋಶದ ಸೋಂಕು ಉಂಟಾಗಿದ್ದು, ಚಿಕಿತ್ಸೆ ನೀಡಲಾಗುತ್ತಿದೆ. ಅವರು ಈಗ ನಿತ್ಯ ಭೇಟಿಯಾಗುವ ಸಂಗೀತಗಾರರು ಹಾಗೂ ಲೇಖಕರೊಂದಿಗೆ ಮಾತನಾಡುತ್ತಿದ್ದಾರೆ’ ಎಂದು ಹೇಳಿದರು.

‘ಗುರುವಾರ ಪಂಡಿತ್ ವೆಂಕಟೇಶ್ ಕುಮಾರ್ ಬಂದಿದ್ದರು. ಅವರಿಂದ ಹಾಡಿಸಿ, ತಾವೂ ಹಾಡಿದರು. 93 ವರ್ಷವಾದ್ದರಿಂದ ಚೇತರಿಕೆ ನಿಧಾನವಾಗಿದೆ. ಆಸ್ಪತ್ರೆಯಿಂದ ಬಿಡುಗಡೆ ಕುರಿತು ಬಗ್ಗೆ ವೈದ್ಯರು ಇನ್ನೂ ಏನು ಹೇಳಿಲ್ಲ’ ಎಂದು ತಿಳಿಸಿದರು.

ಜೋಯಾಲುಕ್ಕಾಸ್ ಮಳಿಗೆ ಉದ್ಘಾಟನೆ

ಬೆಂಗಳೂರು: ಅಮೆರಿಕದ ಹ್ಯೂಸ್ಟನ್‌ನಲ್ಲಿ ಜೋಯಾಲುಕ್ಕಾಸ್‌ನ ನವೀಕೃತ ಮಳಿಗೆ ಈಚೆಗೆ ಉದ್ಘಾಟಿಸಲಾಯಿತು.

ಪೋರ್ಟ್ ಬೆಂಡ್ ಕೌಂಟಿ ನ್ಯಾಯಾಧೀಶ ಕೆ.ಪಿ. ಜಾರ್ಜ್ ಮತ್ತು ಕೌಂಟಿ ಕೋರ್ಟ್ ಕಾನೂನು ವಿಭಾಗದ ಅಧ್ಯಕ್ಷೆ ಜೂಲಿ ಮ್ಯಾಥ್ಯೂ ಉದ್ಘಾಟಿಸಿದರು.

‘ಗ್ರಾಹಕರ ಬೆಂಬಲಕ್ಕೆ ಧನ್ಯವಾದ. ಇದು ಜೋಯಾಲುಕ್ಕಾಸ್ ಆಕರ್ಷಣೆಯನ್ನು ಇಮ್ಮಡಿಗೊಳಿಸಿದೆ’ ಎಂದು ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಜೋಯ್ ಆಲುಕ್ಕಾಸ್ ತಿಳಿಸಿದ್ದಾರೆ.



ಅಮೆರಿಕದ ಹ್ಯೂಸ್ಟನ್‌ನಲ್ಲಿ, ಜೋಯಾಲುಕ್ಕಾಸ್‌ನ ನವೀಕೃತ ಮಳಿಗೆಯನ್ನು ಪೋರ್ಟ್ ಬೆಂಡ್ ಕೌಂಟಿ ನ್ಯಾಯಾಧೀಶ ಕೆ.ಪಿ.ಜಾರ್ಜ್ ಮತ್ತು ಕೌಂಟಿ ಕೋರ್ಟ್ ಕಾನೂನು ವಿಭಾಗದ ಅಧ್ಯಕ್ಷೆ ಜೂಲಿ ಮ್ಯಾಥ್ಯೂ ಉದ್ಘಾಟಿಸಿದರು. ಸಮೂಹದ ಅಧ್ಯಕ್ಷ ಜೋಯ್ ಆಲುಕ್ಕಾಸ್ ಇದ್ದರು

ಟಿಎಸ್‌ಎಸ್ ಗೆ ವಿಶೇಷಾಧಿಕಾರಿ ನೇಮಕ

ಪ್ರಜಾವಾಣಿ ವಾರ್ತೆ

ಶಿರಸಿ: ರಾಜ್ಯದ ಪ್ರತಿಷ್ಠಿತ ಅಡಿಕೆ ವಹಿವಾಟು ಸಂಸ್ಥೆ ತೋಟಗಾರ್ಸ್ ಕೋ ಆಪರೇಟಿವ್ ಸೇಲ್ ಸೊಸೈಟಿಗೆ (ಟಿ.ಎಸ್.ಎಸ್.) ಆರು ತಿಂಗಳ ಅವಧಿಗೆ ವಿಶೇಷಾಧಿಕಾರಿ ನೇಮಿಸಿ ಸಹಕಾರ ಸಂಘಗಳ ಜಿಲ್ಲಾ ಉಪನಿಬಂಧಕರು ಶುಕ್ರವಾರ ಆದೇಶಿಸಿದ್ದಾರೆ.

2023ರ ಆ.20ರಂದು ಆಡಳಿತ ಮಂಡಳಿಗೆ ಚುನಾವಣೆ ನಡೆಸಲಾಗಿತ್ತು. ಆಯ್ಕೆಯಾದ ನಿರ್ದೇಶಕರ ಪಟ್ಟಿಯನ್ನು ಚುನಾವಣಾಧಿಕಾರಿ ಘೋಷಿಸಿದ್ದರು. ಆದರೆ, ಚುನಾವಣಾ ಪ್ರಕ್ರಿಯೆಯಲ್ಲಿ ತೀವ್ರ ಲೋಪ ಜರುಗಿದೆ ಎಂದು ಸಂಘದ ಸದಸ್ಯರಾಗಿದ್ದ ಗಣಪತಿ ರಾಯ್ಸದ್ ಮತ್ತು ವಿನಾಯಕ ಭಟ್ ಅವರು ಎರಡು ಚುನಾವಣಾ ದಾವಾ ಅರ್ಜಿಗಳನ್ನು ದಾಖಲಿಸಿದ್ದರು.

2024ರ ಮೇ 24ರಂದು ಈ ದಾವಾ ಅರ್ಜಿಗಳನ್ನು ಇತ್ಯರ್ಥಪಡಿಸಿದ ಜಿಲ್ಲಾ ಉಪನಿಬಂಧಕರ ನ್ಯಾಯಾಲಯವು ಫಲಿತಾಂಶವನ್ನು ರದ್ದುಪಡಿಸಿದೆ. ವಿಶೇಷಾಧಿಕಾರಿಯಾಗಿ ಶಾಲಾ ಶಿಕ್ಷಣ ಇಲಾಖೆ ಶಿಕ್ಷಣಾಧಿಕಾರಿ ಎಂ.ಎಚ್.ನಾಯ್ಕ ಅವರನ್ನು ನೇಮಿಸಲಾಗಿದೆ.

ಹುಬ್ಬಳ್ಳಿ: ಸ್ಥಳ ಮಹಜರು ನಡೆಸಿದ ಸಿಐಡಿ ಅಧಿಕಾರಿಗಳು

ಅಂಜಲಿ ಹತ್ಯೆ: ತನಿಖೆ ಚುರುಕು

ಪ್ರಜಾವಾಣಿ ವಾರ್ತೆ



ಹುಬ್ಬಳ್ಳಿಯ ಅಂಜಲಿ ಅಂಬಿಗೇರ ಹತ್ಯೆ ಪ್ರಕರಣದ ಆರೋಪಿ ಗಿರೀಶ ಸಾವಂತನನ್ನು ಸ್ಥಳ ಮಹಜರಿಗಾಗಿ ವೀರಾಪುರ ಓಣಿಗೆ ಪೊಲೀಸರು ಶುಕ್ರವಾರ ಕರೆತಂದರು

ಹುಬ್ಬಳ್ಳಿ: ನಗರದ ವೀರಾಪೂರ ಓಣಿಯಲ್ಲಿ ನಡೆದ ಅಂಜಲಿ ಅಂಬಿಗೇರ ಹತ್ಯೆ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಐಡಿ ಅಧಿಕಾರಿಗಳು, ಹತ್ಯೆ ನಡೆದ ಸ್ಥಳಕ್ಕೆ ಶುಕ್ರವಾರ ಆರೋಪಿ ಗಿರೀಶ ಸಾವಂತನನ್ನು ಕರೆತಂದು ಸ್ಥಳ ಮಹಜರು ನಡೆಸಿದರು.

ವೀರಾಪೂರ ಓಣಿಯಲ್ಲಿರುವ ಮನೆಯಲ್ಲಿ ಅಂಜಲಿಯನ್ನು ಹತ್ಯೆ ಮಾಡಲಾಗಿತ್ತು. ಆರೋಪಿಯನ್ನು ಅಲ್ಲಿಗೆ ಕರೆದುಕೊಂಡು ಬಂದ ಸಿಐಡಿ ಅಧಿಕಾರಿಗಳು, ಘಟನಾ ಸ್ಥಳ ಹಾಗೂ ಸುತ್ತಲಿನ ಪ್ರದೇಶ ಪರಿಶೀಲಿಸಿದರು. ಕೊಲೆ ನಡೆದ ಸಂದರ್ಭದ ಬಗ್ಗೆ ಆರೋಪಿಯಿಂದ ಮಾಹಿತಿ ಪಡೆದರು. ಆರೋಪಿ ಕೃತ್ಯಕ್ಕೆ ಬಳಸಿದ್ದ ಚಾಕು ಪತ್ತೆಗಾಗಿ ಓಣಿಯ ಚರಂಡಿಗಳಲ್ಲಿ ತ್ಯಾಜ್ಯ ಹೊರತೆಗೆಸಿ, ಲೋಹ ಪತ್ತೆ ಯಂತ್ರದ ಮೂಲಕ ತೀವ್ರ ಶೋಧ ನಡೆಸಿದರು.

ಈ ವೇಳೆ ಆರೋಪಿಯನ್ನು ಕಂಡು ಅಂಜಲಿ ಕುಟುಂಬಸ್ಥರು ಆಕ್ರೋಶ ವ್ಯಕ್ತಪಡಿಸಿದರು. ಸಿಐಡಿ ಅಧಿಕಾರಿಗಳೇ ಸಮಾಧಾನಪಡಿಸಿದರು. ಪೊಲೀಸ್ ಬಿಗಿ ಬಂದೋಬಸ್ತ್ ಮಾಡಲಾಗಿತ್ತು. ಅಲ್ಲಿಂದ, ಗೋಕುಲ ರಸ್ತೆಯಲ್ಲಿರುವ ಹೊಸ ಬಸ್ ನಿಲ್ದಾಣಕ್ಕೆ ತೆರಳಿದ ಅಧಿಕಾರಿಗಳು, ಸಿಸಿಟಿವಿ ಕ್ಯಾಮೆರಾಗಳಲ್ಲಿ ದಾಖಲಾದ ದೃಶ್ಯಗಳನ್ನು ಪರಿಶೀಲಿಸಿದರು.

ಸಿಐಡಿ ಎಸ್.ಪಿ. ವೆಂಕಟೇಶ್ ನೇತೃತ್ವದ ಅಧಿಕಾರಿಗಳ ತಂಡ ಪ್ರಕರಣದ ತನಿಖೆ ನಡೆಸುತ್ತಿದ್ದು, ಇಲ್ಲಿನ ಜೆಎಂಎಫ್ ನ್ಯಾಯಾಲಯದ ಆದೇಶದಂತೆ ಆರೋಪಿಯನ್ನು ಎಂಟು ದಿನ ತನ್ನ ಕಸ್ಟಡಿಗೆ ಪಡೆದಿದೆ.

ವಿಚಾರಣೆ: ‘ಸ್ಥಳ ಮಹಜರು ಮಾಡಲು ಮನೆಗೆ ಬಂದ ಸಿಐಡಿ ಅಧಿಕಾರಿಗಳು, ಹತ್ಯೆ ನಡೆದ ದಿನ ಮನೆಯ ಬಾಗಿಲನ್ನು ಯಾರು ತೆಗೆದರು? ಮನೆಯಲ್ಲಿ ಯಾರೆಲ್ಲ ಇದ್ದರು? ಎಂದು ಆರೋಪಿ ಗಿರೀಶನನ್ನು ವಿಚಾರಿಸಿದರು’ ಎಂದು ಅಂಜಲಿ ತಂಗಿ ಯಶೋಧ ಅಂಬಿಗೇರ ಸುದ್ದಿಗಾರರಿಗೆ ತಿಳಿಸಿದರು.

‘ಅಂಜಲಿ ಬಾಗಿಲು ತೆರೆದರು. ನಿದ್ದೆ ಮಾಡುತ್ತಿದ್ದ ಅಜ್ಜಿಯನ್ನು ದಾಟಿ ಅಂಜಲಿ ಮಾತನಾಡಿಸಲು ಮುಂದಾದೆ ಎಂದು ಗಿರೀಶ ತಿಳಿಸಿದ’ ಎಂದು ಮಾಹಿತಿ ನೀಡಿದರು.

ರಾಜ್ಯದ ವಿವಿಧೆಡೆ ತಾಪಮಾನ ಕಡಿಮೆಗೊಳಿಸಿದ ಮುಂಗಾರು ಪೂರ್ವ ವರ್ಷಧಾರೆ

ಮೇನಲ್ಲಿ ಶೇ 118ರಷ್ಟು ಅಧಿಕ ಮಳೆ

• ಆದಿತ್ಯ ಕೆ.ಎ.

ಬೆಂಗಳೂರು: ಮುಂಗಾರು ಪೂರ್ವ ಮಳೆಯ ಅಬ್ಬರದಿಂದ ರಾಜ್ಯವು ಉಷ್ಣ ಅಲೆಯ ಆಘಾತದಿಂದ ಹೊರಬಂದಿದ್ದು ಉತ್ತರ, ದಕ್ಷಿಣ ಹಾಗೂ ಮಲೆನಾಡು ಭಾಗಗಳಲ್ಲಿ ತಂಪಿನ ಹವೆ ಆವರಿಸುತ್ತಿದೆ.

ಮಾರ್ಚ್ ಹಾಗೂ ಏಪ್ರಿಲ್ ತಿಂಗಳಲ್ಲಿ ರಾಜ್ಯದಲ್ಲಿ ಮಳೆಯ ಕೊರತೆ ಎದುರಾಗಿತ್ತು. ಉಷ್ಣ ಅಲೆಯ ಪರಿಣಾಮ ಹಲವು ಜಿಲ್ಲೆಗಳಲ್ಲಿ ಶಾಖಾಘಾತ ಪ್ರಕರಣಗಳು ವರದಿಯಾಗಿದ್ದವು. ಮೇ ತಿಂಗಳ 24 ದಿನಗಳಲ್ಲೇ ವಾಡಿಕೆಗಿಂತ ಶೇ 118ರಷ್ಟು ಅಧಿಕ ಮಳೆ ಸುರಿದಿದ್ದು ಬಹುತೇಕ ಜಿಲ್ಲೆಗಳಲ್ಲಿ 3ರಿಂದ 4 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಇಳಿಕೆಯಾಗಿದೆ.

ಮೇನಲ್ಲಿ ವಾಡಿಕೆ ಮಳೆ ಪ್ರಮಾಣ 5.1 ಸೆಂ.ಮೀ ಆಗಿತ್ತು. ಆದರೆ, 11 ಸೆಂ.ಮೀ ಮಳೆಯಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಮೇನಲ್ಲಿ ದುಪ್ಪಟ್ಟು ಮಳೆಯಾಗಿದ್ದು, ರಾಜ್ಯವು ಬರದ ಬೇಗೆಯಿಂದ ಹೊರಬರುತ್ತಿದೆ.

31 ಜಿಲ್ಲೆಗಳಲ್ಲೂ ಮೇ ತಿಂಗಳಲ್ಲಿ ವಾಡಿಕೆಗಿಂತ ಅಧಿಕ ಮಳೆಯಾಗಿದ್ದರ ಪರಿಣಾಮ ಕೃಷಿ ಚಟುವಟಿಕೆಗಳು ಗರಿಗೆದರಿವೆ. ಬೆಂಗಳೂರು, ತುಮಕೂರು, ಮೈಸೂರು, ಮಂಡ್ಯ, ರಾಯಚೂರು, ಹಾಸನ, ಚಿಕ್ಕಮಗಳೂರು, ಕೊಡಗು, ಉತ್ತರ ಕನ್ನಡ ಜಿಲ್ಲೆಯಲ್ಲಿ ವಾಡಿಕೆಗಿಂತ ಅಧಿಕ ಮಳೆ ಸುರಿದು ಭೂಮಿ ಹದಗೊಂಡಿದೆ. ರಾಜ್ಯದಲ್ಲಿ ಒಟ್ಟಾರೆ ಜನವರಿಯಿಂದ ಮೇ 24ರ ವರೆಗೆ ವಾಡಿಕೆ ಮಳೆ ಪ್ರಮಾಣವು ಶೇ 9.7 ಸೆಂ.ಮೀ ಆಗಿತ್ತು. 14.1 ಸೆಂ.ಮೀ ಮಳೆಯೊಂದಿಗೆ ಶೇ 46ರಷ್ಟು ಅಧಿಕ ಮಳೆ ಸುರಿದಂತಾಗಿದೆ.

ಏಪ್ರಿಲ್‌ನಲ್ಲಿ ದಕ್ಷಿಣ ಒಳನಾಡು ಭಾಗದ 11 ಜಿಲ್ಲೆಗಳಲ್ಲಿ ಶೇ 86ರಷ್ಟು ಕೊರತೆಯಾಗಿತ್ತು. ಆ ಭಾಗದಲ್ಲಿ ಈಗ ಶೇ 29ರಷ್ಟು ಅಧಿಕ ಮಳೆ ಸುರಿದಿದೆ. ಉತ್ತರ ಒಳನಾಡು ಪ್ರದೇಶದ 13 ಜಿಲ್ಲೆಗಳಲ್ಲಿ ಏಪ್ರಿಲ್‌ನಲ್ಲಿ ಶೇ 124ರಷ್ಟು ಮಳೆ ಕೊರತೆಯಿತ್ತು. ಕುಡಿಯುವ ನೀರಿಗೂ ಸಮಸ್ಯೆ ಉಂಟಾಗಿತ್ತು. ಈಗ ಅಲ್ಲಿ ಶೇ 36ರಷ್ಟು ಹೆಚ್ಚು ಮಳೆಯಾಗಿದೆ. ಮಲೆನಾಡು ಭಾಗದಲ್ಲಿ ಮುಂಗಾರು ಪ್ರವೇಶಕ್ಕೂ ಮುನ್ನವೇ ಜೋರು ಮಳೆ ಆಗುತ್ತಿದ್ದು, ಶೇ 70ರಷ್ಟು ಹೆಚ್ಚು ಮಳೆಯಾದ ವರದಿಯಾಗಿದೆ. ಮಲೆನಾಡಿನಲ್ಲಿ ಕೆರೆ–ಕಟ್ಟೆಗಳು ತುಂಬುವ ಹಂತಕ್ಕೆ ಬಂದಿವೆ.

24.4 ಬೆಂಗಳೂರು ನಗರ ವ್ಯಾಪ್ತಿ						
ಕಡಿಮೆ ಉಷ್ಣಾಂಶದ ಪ್ರದೇಶಗಳು: ಕನಿಷ್ಠ ಉಷ್ಣಾಂಶ (ಡಿಗ್ರಿ ಸೆಲ್ಸಿಯಸ್‌ನಲ್ಲಿ)						
17.6 ಚಿಕ್ಕಮಗಳೂರು	20 ಧಾರವಾಡ	20.7 ಮಡಿಕೇರಿ	20 ಗದಗ	22.5 ಬೆಳಗಾವಿ ನಗರ	21.6 ಬೆಳಗಾವಿಯ ವಿಮಾನ ನಿಲ್ದಾಣದ ಸುತ್ತಮುತ್ತ	



ಹಾಸನದ ಬಿಎಸ್‌ಎನ್‌ಎಲ್ ಭವನದ ಬಳಿ ಶುಕ್ರವಾರ ಸಂಜೆ ಮಳೆ ನೀರಿನಲ್ಲಿ ಮುಳಗಿದ್ದ ದ್ವಿಚಕ್ರ ವಾಹನಗಳು.

ಜನವರಿ 1ರಿಂದ ಮೇ 24ರ ವರೆಗೆ ಪ್ರದೇಶವಾರು ಸುರಿದ ಮಳೆ (ಸೆಂ.ಮೀಗಳಲ್ಲಿ)

ಪ್ರದೇಶ	ವಾಡಿಕೆ	ಸುರಿದ ಮಳೆ
ದಕ್ಷಿಣ ಒಳನಾಡು	12.1	15.6
ಉತ್ತರ ಒಳನಾಡು	6.7	9.1
ಮಲೆನಾಡು	13.9	23.7
ಕರಾವಳಿ	9.7	14.1

ಅಲ್ಲಲ್ಲಿ ಗುಡುಗು ಸಹಿತ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಕೆಲವು ಭಾಗಗಳಲ್ಲಿ ಶನಿವಾರ ಹಾಗೂ ಭಾನುವಾರ ಸಹ ಗುಡುಗು ಸಹಿತ ಭಾರಿ ಮಳೆ ಆಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬಾಗಲಕೋಟೆ, ಬೆಳಗಾವಿ, ಬೀದರ್, ಧಾರವಾಡ, ಗದಗ, ಹಾವೇರಿ, ಕಲಬುರಗಿ, ಕೊಪ್ಪಳ, ರಾಯಚೂರು, ವಿಜಯಪುರ, ಯಾದಗಿರಿ ಜಿಲ್ಲೆಗಳಲ್ಲಿ ಶನಿವಾರ ಗುಡುಗು ಸಹಿತ ಮಳೆ ಆಗಲಿದೆ. ಈ ಜಿಲ್ಲೆಗಳಲ್ಲಿ ಗಾಳಿಯು ಪ್ರತಿಗಂಟೆಗೆ 40ರಿಂದ 50 ಕಿ.ಮೀ ವೇಗದಲ್ಲಿ ಬೀಸಲಿದೆ. ಉತ್ತರ ಕನ್ನಡ, ಹಾಸನ, ಮಂಡ್ಯ, ದಾವಣಗೆರೆ ಜಿಲ್ಲೆಯ ಕೆಲವು ಭಾಗದಲ್ಲಿ ಸಾಧಾರಣ ಮಳೆಯಾಗಲಿದೆ. ಬೆಂಗಳೂರು ನಗರ– ಗ್ರಾಮಾಂತರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರದಲ್ಲಿ ಸಾಧಾರಣಕ್ಕಿಂತ ಕಡಿಮೆ ಮಳೆಯಾಗಲಿದೆ ಎಂದು ಸೂಚನೆ ನೀಡಿದೆ.

ಉಡುಪಿ, ಉತ್ತರ ಕನ್ನಡ, ಹಾವೇರಿ ಜಿಲ್ಲೆಗಳಲ್ಲಿ ಭಾನುವಾರ ಉತ್ತಮ ಮಳೆಯಾಗಲಿದೆ. ಗಾಳಿಯು ಪ್ರತಿ ಗಂಟೆಗೆ 40ರಿಂದ 50 ಕಿ.ಮೀ ವೇಗದಲ್ಲಿ ಬೀಸಲಿದೆ ಎಂದು ಸೂಚನೆ ನೀಡಿದೆ.

ಸಂಕೇಶ್ವರದಲ್ಲಿ 7 ಸೆಂ.ಮೀ ಮಳೆ: ಶುಕ್ರವಾರ ಬೆಳಿಗ್ಗೆ 8.30ಕ್ಕೆ ಕೊನೆಯಾದಂತೆ ಕಳೆದ 24 ಗಂಟೆಗಳ ಅವಧಿಯಲ್ಲಿ ಬೆಳಗಾವಿಯ ಸಂಕೇಶ್ವರ ಹಾಗೂ ಕೊಡಗಿನ ನಾಪೋಕ್ಲು ಹೋಬಳಿಯಲ್ಲಿ 7 ಸೆಂ.ಮೀ ಮಳೆಯಾಗಿದೆ. ಉತ್ತರ ಕನ್ನಡ ಜಿಲ್ಲೆಯ ಕಿರವತ್ತಿ, ಕೊಡಗಿನ ಮೂರ್ನಾಡು– ಭಾಗಮಂಡಲ 5 ಸೆಂ.ಮೀ, ಬೆಳಗಾವಿ ನಿಪ್ಪಾಣಿ–ಚಿಕ್ಕೋಡಿ, ಕೊಡಗಿನ ಹಾರಂಗಿಯಲ್ಲಿ 4 ಸೆಂ.ಮೀ, ವಿಜಯಪುರದ ಮುದ್ದೇಬಿಹಾಳ, ಬಾಗಲಕೋಟೆ ಮಹಾಲಿಂಗಪುರ, ಧಾರವಾಡದಲ್ಲಿ 3 ಸೆಂ.ಮೀ ಮಳೆಯಾಗಿದೆ.

ಹಸಿರು ವಾತಾವರಣ ಸೃಷ್ಟಿಯಾಗಿದೆ. ಕರಾವಳಿ ಪ್ರದೇಶದ ಮೂರು ಜಿಲ್ಲೆಗಳಲ್ಲೂ ಶೇ 70ರಷ್ಟು ಅಧಿಕ ಮಳೆಯಾಗಿದೆ ಎಂದು ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ (ಕೆಎಸ್‌ಎನ್‌ಡಿಎಂಸಿ) ಅಧಿಕಾರಿಯೊಬ್ಬರು ಹೇಳಿದರು.

ಕಳೆದ ವರ್ಷ ಮುಂಗಾರು ಕೈಕೊಟ್ಟಿದ್ದರಿಂದ ರಾಜ್ಯದ ಹಲವು ತಾಲ್ಲೂಕುಗಳನ್ನು ಬರಪೀಡಿತ ಪಟ್ಟಿಗೆ ಸೇರಿಸಲಾಗಿತ್ತು. ಈಗ 36 ತಾಲ್ಲೂಕಿನಲ್ಲಿ ಅತ್ಯಧಿಕ, 27 ತಾಲ್ಲೂಕಿನಲ್ಲಿ ಅಧಿಕ, 37 ತಾಲ್ಲೂಕುಗಳಲ್ಲಿ ವಾಡಿಕೆಯಷ್ಟು ಮಳೆ ಸುರಿದ ವರದಿಯಾಗಿದೆ.

ಹಾಸನದಲ್ಲಿ ಧಾರಾಕಾರ ಮಳೆ

ಮೈಸೂರು: ಮೈಸೂರು: ಮೈಸೂರು ಭಾಗದ ಹಾಸನ, ಚಾಮರಾಜನಗರದಲ್ಲಿ ಶುಕ್ರವಾರ ಸಂಜೆ, ಕೊಡಗಿನಲ್ಲಿ ಗುರುವಾರ ರಾತ್ರಿ ಧಾರಾಕಾರ ಮಳೆ ಸುರಿದಿದೆ.

ಹಾಸನದಲ್ಲಿ ಬಿರುಗಾಳಿ ಸಹಿತ ಮಳೆ ಅರ್ಧಗಂಟೆಗೂ ಹೆಚ್ಚು ಕಾಲ ಬಿಟ್ಟೂ ಬಿಡದೆ ಸುರಿದು, ತಗ್ಗು ಪ್ರದೇಶಗಳಲ್ಲಿ ನೀರು ನುಗ್ಗಿತ್ತು. ನಗರದ ಬಿಎಸ್ ಎನ್ ಎಲ್‌ಭವನದ ಬಳಿ ವಾಹನಗಳು ನೀರಿನಲ್ಲಿ ಮುಳುಗಿದ್ದವು. ಹಲವೆಡೆ ಮರ, ವಿದ್ಯುತ್ ಕಂಬಗಳು ನೆಲಕ್ಕೆ ಉರುಳಿದ್ದು, ವಿದ್ಯುತ್ ವ್ಯತ್ಯಯ, ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿತ್ತು.

ಬಸ್‌ನಿಲ್ದಾಣದ ಬಳಿ ರೈಲ್ವೆ ಕ್ರಾಸಿಂಗ್ ಗೇಟ್ ಮುರಿದು ಬಿದ್ದ ಕಾರಣ ಅರ್ಧ ಗಂಟೆವರೆಗೆ ವಾಹನ ಸಂಚಾರ ಸ್ಥಗಿತಗೊಂಡಿತ್ತು. ನಗರದ ಹೌಸಿಂಗ್ ಬೋರ್ಡ್ ಬಡಾವಣೆಯಲ್ಲಿ ರಸ್ತೆಗೆ ಅಡ್ಡಲಾಗಿ ಮರ ಬಿದ್ದು, ಒಂದು ಕಾರು ಜಖಂಗೊಂಡಿದೆ. ಕೆಂಚಟ್ಟಳ್ಳಿಯಲ್ಲಿ ಹೆದ್ದಾರಿ ಪಕ್ಕದಲ್ಲಿರುವ ವಿದ್ಯುತ್ ಕಂಬಗಳು ರಸ್ತೆ ಕಡೆಗೆ ವಾಲಿದ್ದು, ವಿದ್ಯುತ್ ಸ್ಥಗಿತಗೊಳಿಸಲಾಗಿದೆ. ನಗರದ ಕೆ.ಆರ್.ಪುರಂ ಸೇರಿದಂತೆ ಅನೇಕ ಬಡಾವಣೆಗಳಲ್ಲಿ ಮರದ ಕೊಂಬೆಗಳು ಬಿದ್ದಿದ್ದು, ಅಲ್ಲಲ್ಲಿ ವಿದ್ಯುತ್ ತಂತಿಗಳು ಹರಿದು ಬಿದ್ದಿವೆ. ಸೆಸ್ಕ್ ಸಿಬ್ಬಂದಿ ವಿದ್ಯುತ್ ಸಂಪರ್ಕ ಸರಿಪಡಿಸಲು ಹರಸಾಹಸ ಪಟ್ಟರು. ಅರಕಲಗೂಡು, ಬಾಣಾವರ, ನುಗ್ಗೇಹಳ್ಳಿ, ಕೊಣನೂರು, ಚನ್ನರಾಯಪಟ್ಟಣದಲ್ಲೂ ಮಳೆಯಾಗಿದೆ.

ನೀರಿನ ಮಟ್ಟ ಏರಿಕೆ: ಮೈಸೂರು ಜಿಲ್ಲೆಯ ಎಚ್.ಡಿ. ಕೋಟೆ ತಾಲ್ಲೂಕಿನ ಬೀಚನಹಳ್ಳಿಯ ಕಬಿನಿ ಜಲಾಶಯದ ನೀರಿನ ಮಟ್ಟ, ಶುಕ್ರವಾರ 2,259.74 ಅಡಿಗೆ ಏರಿಕೆಯಾಗಿತ್ತು. 6,473 ಕ್ಯುಸೆಕ್ ಒಳಹರಿವಿತ್ತು. ಚಾಮರಾಜನಗರ ಸೇರಿದಂತೆ ತಾಲ್ಲೂಕು ವ್ಯಾಪ್ತಿಯಲ್ಲಿ ಶುಕ್ರವಾರ ಸಂಜೆ 5.30ರ ನಂತರ ಬಿರುಗಾಳಿ ಸಹಿತ ಮಳೆಯಾಗಿದೆ. ಮೈಸೂರು ನಗರ, ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ವಿವಿಧೆಡೆ ಮಳೆ ತಂಪೆರೆಯಿತು.


ಉಡುಪಿ ವರದಿ: ಜಿಲ್ಲೆಯಾದ್ಯಂತ ಮಳೆ ಸುರಿದಿದ್ದು, ಕಾಪು ತಾಲ್ಲೂಕಿನ ಶಿರ್ವ ಗ್ರಾಮದಲ್ಲಿ ಗುರುವಾರ ರಾತ್ರಿ ಸಿಡಿಲು ಬಡಿದು ದ್ವಿತೀಯ ವರ್ಷದ ಬಿಸಿಎ ವಿದ್ಯಾರ್ಥಿ ರಕ್ಷಿತ್ ಪೂಜಾರಿ (19) ಮೃತಪಟ್ಟಿದ್ದಾರೆ.

ಜಲಾಶಯಗಳಿಗೆ ಒಳಹರಿವು

ರಾಜ್ಯದ ಕೆಲವು ಜಲಾಶಯಗಳಿಗೆ ನಿಧಾನವಾಗಿ ಒಳಹರಿವು ಆರಂಭವಾಗಿದ್ದು ರೈತರ ಮೊಗದಲ್ಲಿ ಮಂದಹಾಸ ತಂದಿದೆ.

ಶುಕ್ರವಾರ ಸಂಜೆ ವೇಳೆಗೆ ರಾಜ್ಯದ ಎಲ್ಲ ಜಲಾಶಯಗಳಿಗೆ ಒಟ್ಟಾರೆ 10,542 ಕ್ಯುಸೆಕ್ ನೀರು ಹರಿದು ಬರುತ್ತಿತ್ತು. ಕಳೆದ ವರ್ಷ ಇದೇ ಅವಧಿಯಲ್ಲಿ ಒಳ ಹರಿವು ಕ್ಷೀಣಿಸಿತ್ತು.

ಕೆಆರ್‌ಎಸ್‌ಗೆ 2,509 ಕ್ಯುಸೆಕ್, ಕಬಿನಿಗೆ 6,473 ಕ್ಯುಸೆಕ್, ಹಾರಂಗಿಗೆ 460, ನಾರಾಯಣಪುರ ಜಲಾಶಯಕ್ಕೆ 2,248, ವಾಣಿವಿಲಾಸ ಸಾಗರಕ್ಕೆ 780 ಕ್ಯುಸೆಕ್ ನೀರು ಹರಿದು ಬರುತ್ತಿದೆ ಎಂದು ಅಧಿಕಾರಿಗಳು ಹೇಳುತ್ತಾರೆ.



ಎನ್‌ಡಬ್ಲ್ಯುಕೆಆರ್‌ಟಿಸಿ ಚಾಲಕ ಒಂದು ಕೈಯಲ್ಲಿ ಛತ್ರಿ ಹಿಡಿದು ಬಸ್ ಚಾಲನೆ ಮಾಡಿದರು

ಚಾಲಕ, ನಿರ್ವಾಹಕಿ ಅಮಾನತು

ಧಾರವಾಡ: ಮಳೆ ಸುರಿಯುವಾಗ, ಒಂದು ಕೈಯಲ್ಲಿ ಛತ್ರಿ ಹಿಡಿದು ಮತ್ತೊಂದು ಕೈಯಲ್ಲಿ ಸ್ಟೀರಿಂಗ್ ಹಿಡಿದು, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಚಾಲಕ ಹನುಮಂತಪ್ಪ ಅ. ಕಿಲ್ಲೇದಾರ ಅವರು ಬಸ್ ಚಾಲನೆ ಮಾಡಿರುವ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ. ವಿಡಿಯೊ ಪ್ರಕರಣದಲ್ಲಿ ಚಾಲಕ ಮತ್ತು ನಿರ್ವಾಹಕಿ ಅನಿತಾ ಅವರನ್ನು ಅಮಾನತು ಮಾಡಲಾಗಿದೆ.

'ಗುರುವಾರ ಮಧ್ಯಾಹ್ನ 4.30ರ ವೇಳೆಯಲ್ಲಿ ಮಳೆ ಸುರಿಯುವಾಗ ವಿಡಿಯೊ ಮಾಡಿದ್ದಾರೆ. ಬಸ್‌ನಲ್ಲಿ ಪ್ರಯಾಣಿಕರು ಇರಲಿಲ್ಲ. ಉಪ್ಪಿನಬೆಟಗೇರಿಯಿಂದ ಧಾರವಾಡ ಕಡೆಗೆ ಬಸ್ ಸಂಚರಿಸುವಾಗ ಚಾಲಕ ಕೈಯಲ್ಲಿ ಕೊಡೆ ಹಿಡಿದು ಚಾಲನೆ ಮಾಡಿದ್ದಾರೆ' ಎಂದು ವಾಕರಸಾಸಂ ವ್ಯವಸ್ಥಾಪಕ ನಿರ್ದೇಶಕಿ ಪ್ರಿಯಾಂಗಾ ಎಂ ತಿಳಿಸಿದ್ದಾರೆ.

'ನಿರ್ವಾಹಕಿ ಅನಿತಾ ಎಚ್.ಬಿ. ಅವರು ಮೊಬೈಲ್ ಫೋನ್‌ನಲ್ಲಿ ವಿಡಿಯೊ ಮಾಡಿದ್ದಾರೆ. ಮನರಂಜನೆಗಾಗಿ ಮಳೆ ಸುರಿಯುವಾಗ ಛತ್ರಿ ಹಿಡಿದು ಬಸ್ ಚಾಲನೆ ಮಾಡಿದೆ ಎಂದು ಚಾಲಕ ವಿವರಣೆ ನೀಡಿದ್ದಾರೆ. ತಾಂತ್ರಿಕ ವಿಭಾಗದವರು ವಾಹನವನ್ನು ಪರಿಶೀಲನೆ ಮಾಡಿದ್ದಾರೆ. ಬಸ್‌ನಲ್ಲಿ ಚಾಲಕನ ಆಸನ ಭಾಗ ಮತ್ತು ಪ್ರಯಾಣಿಕರ ಆಸನ ಭಾಗದಲ್ಲಿ ಎಲ್ಲಿಯೂ ಸೋರಿಕೆಯಾಗುತ್ತಿರಲಿಲ್ಲ ಎಂದು ಖಚಿತಪಡಿಸಿದ್ದಾರೆ. ಚಾಲಕ ಮತ್ತು ನಿರ್ವಾಹಕಿಯನ್ನು ಅಮಾನತುಗೊಳಿಸಲಾಗಿದೆ' ಎಂದು ಅವರು ತಿಳಿಸಿದ್ದಾರೆ.

ವಾರದಲ್ಲಿ 4,748 ಅತಿಸಾರ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲುಷಿತ ನೀರು ಮತ್ತು ಆಹಾರ ಸೇವನೆಯಿಂದ ರಾಜ್ಯದಲ್ಲಿ ಅತಿಸಾರ (ಡಯೇರಿಯಾ) ಪ್ರಕರಣಗಳು ಏರಿಕೆಯಾಗಿದ್ದು, ಕಳೆದೊಂದು ವಾರದಲ್ಲಿ 4,748 ಪ್ರಕರಣಗಳು ದೃಢಪಟ್ಟಿವೆ.

ಆರೋಗ್ಯ ಇಲಾಖೆಯು ಸೋಂಕು ರೋಗಗಳ ವರದಿಯನ್ನು ಬಿಡುಗಡೆ ಮಾಡಿದ್ದು, ಇದರ ಪ್ರಕಾರ ಈ ವರ್ಷ ವರದಿಯಾದ ಒಟ್ಟು ಅತಿಸಾರ ಪ್ರಕರಣಗಳ ಸಂಖ್ಯೆ 65,800ಕ್ಕೆ ಏರಿಕೆಯಾಗಿದೆ. ಕಳೆದೊಂದು ತಿಂಗಳಿಂದ ಪ್ರಕರಣಗಳು ಹೆಚ್ಚಳವಾಗಿವೆ. ಮಾರ್ಚ್ ಅಂತ್ಯಕ್ಕೆ 36,814 ಅತಿಸಾರ ಪ್ರಕರಣಗಳು ವರದಿಯಾಗಿದ್ದವು. ಬಳಿಕ ಬಿಸಿಲು ಮಳೆಯ ವಾತಾವರಣದಿಂದಾಗಿ ಪ್ರಕರಣಗಳು ಏರುಗತಿ ಪಡೆದಿವೆ.

ನಾಯಿ ಹಾಗೂ ಹಾವು ಕಡಿತ ಪ್ರಕರಣಗಳೂ ಏರಿಕೆ ಕಂಡಿವೆ. ಕಳೆದೊಂದು ವಾರದಲ್ಲಿ 7,722 ಮಂದಿ ನಾಯಿ ಕಡಿತಕ್ಕೆ ಒಳಗಾಗಿದ್ದಾರೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 1.28 ಲಕ್ಷಕ್ಕೆ ತಲುಪಿದೆ. ವಾರದಲ್ಲಿ 354 ಹಾವು ಕಡಿತ ಪ್ರಕರಣ ವರದಿಯಾಗಿದೆ. ಈವರೆಗೆ ವರದಿಯಾದ ಒಟ್ಟು ಹಾವು ಕಡಿತ ಪ್ರಕರಣಗಳು 3,034ಕ್ಕೆ ಏರಿಕೆಯಾಗಿದೆ. 17 ಮಂದಿ ಹಾವು ಕಡಿತದಿಂದ ಮೃತಪಟ್ಟಿದ್ದಾರೆ.

ವಾರದಲ್ಲಿ 144 ಡೆಂಗಿ ಹಾಗೂ 11 ಚಿಕೂನ್‌ಗುನ್ಯ ಪ್ರಕರಣಗಳು ದೃಢಪಟ್ಟಿವೆ. ಈ ಪ್ರಕರಣಗಳ ಒಟ್ಟು ಸಂಖ್ಯೆ ಕ್ರಮವಾಗಿ 3,012 ಹಾಗೂ 620ಕ್ಕೆ ತಲುಪಿದೆ.

ಪ್ರಾಣಿಗಳ ಮೂಲಕ ಹರಡುವ ಬ್ಯಾಕ್ಟೀರಿಯಾ ಸೋಂಕು (ಲೆಪ್ಟೊಸ್ಪಿರೋಸಿಸ್) ವಾರದಲ್ಲಿ 25 ಮಂದಿಗೆ ದೃಢಪಟ್ಟಿದೆ. ಈವರೆಗೆ ಒಟ್ಟು 422 ಮಂದಿ ಸೋಂಕಿತರಾಗಿದ್ದಾರೆ. ಮಂಗನ ಕಾಯಿಲೆಯೂ (ಕೆಎಫ್‌ಡಿ) ವಾರದಲ್ಲಿ ಒಂಬತ್ತು ಮಂದಿಯಲ್ಲಿ ಖಚಿತಪಟ್ಟಿದೆ. ಒಟ್ಟು ಕೆಎಫ್‌ಡಿ ಪ್ರಕರಣಗಳ ಸಂಖ್ಯೆ 339ಕ್ಕೆ ಏರಿಕೆಯಾಗಿದೆ.

'ನೋಟಿಸ್ ಬಂದರೆ ಉತ್ತರಿಸುವೆ'

ಪ್ರಜಾವಾಣಿ ವಾರ್ತೆ

ಮಡಿಕೇರಿ: 'ನನಗೆ ಬಿಜೆಪಿಯಿಂದ ಯಾವುದೇ ನೋಟಿಸ್ ಬಂದಿಲ್ಲ. ಬಂದರೆ ವಿವರವಾದ ಉತ್ತರ ಕೊಡುವೆ. ಪಕ್ಷದ ಶಿಸ್ತು ಸಮಿತಿ ವಿಚಾರಣೆಗೆ ಕರೆದರೆ ಹಾಜರಾಗಿ ವಿವರಣೆ ಕೊಡುವೆ. ಕಣದಿಂದ ಯಾವುದೇ ಕಾರಣಕ್ಕೂ ಹಿಂದೆ ಸರಿಯುವುದಿಲ್ಲ' ಎಂದು ನೈರುತ್ಯ ಪದವೀಧರರ ಕ್ಷೇತ್ರದ ಸ್ವತಂತ್ರ ಅಭ್ಯರ್ಥಿ ಕೆ.ರಘುಪತಿ ಭಟ್ ಸ್ಪಷ್ಟಪಡಿಸಿದರು.

'ನನಗೆ ಎರಡು ಬಾರಿ ಏಕೆ ಟಿಕೆಟ್ ಕೊಡಲಿಲ್ಲವೆಂದು ಗೊತ್ತಿಲ್ಲ. ಯಾರು ಟಿಕೆಟ್ ತಪ್ಪಿಸಿದರೆಂದೂ ಗೊತ್ತಿಲ್ಲ. ಯಾರೋ ನಾಯಕರು ತಪ್ಪಿಸಿದ್ದಂತೂ ಹೌದು' ಎಂದು ಅವರು ಇಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಲಿಂಗಾಯತರಿಗೇ ಟಿಕೆಟ್ ಕೊಡಬೇಕೆನ್ನುವುದಾಗಿದ್ದರೆ, ಶಿವಮೊಗ್ಗದಲ್ಲಿ 35 ವರ್ಷಗಳ ಕಾಲ ಬಿಜೆಪಿ ಕಾರ್ಯಕರ್ತರಾಗಿರುವ ಗಿರೀಶ ಪಟೇಲ್ ಅವರಿಗೆ ಅಥವಾ ಬೇರೆ ಹಿರಿಯ ಕಾರ್ಯಕರ್ತರಿಗೆ ನೀಡಿದ್ದರೆ ನನಗೆ ಸಮಾಧಾನವಾಗುತ್ತಿತ್ತು. ಆದರೆ, ಹಿಂದೆ ಪಕ್ಷದ ವಿರುದ್ಧವೇ ಇದ್ದು, ಈಗಷ್ಟೇ ಸೇರ್ಪಡೆಯಾದವರಿಗೆ ಟಿಕೆಟ್ ನೀಡಿರುವುದು ಸರಿಯಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ನಾನು ಯಾರನ್ನೋ ಸೋಲಿಸಲೆಂದೋ ಅಥವಾ ಗೆಲ್ಲಿಸಲೆಂದೋ ಚುನಾವಣೆಗೆ ಸ್ಪರ್ಧಿಸಿಲ್ಲ. ಗೆದ್ದೇ ಗೆಲ್ಲುವ ವಿಶ್ವಾಸದಲ್ಲಿ ಸ್ಪರ್ಧಿಸಿದ್ದೇನೆ. ಗೆದ್ದ ಮೇಲೆ ಪಕ್ಷಕ್ಕೆ ಬೆಂಬಲ ನೀಡುತ್ತೇನೆ' ಎಂದರು.

'ಹಿಂದುತ್ವ ಮತ್ತು ರಾಷ್ಟ್ರೀಯವಾದವನ್ನು ಪ್ರಬಲವಾಗಿ ಪ್ರತಿಪಾದಿಸಿದವರಿಗೆ ಪಕ್ಷದಲ್ಲಿ ಟಿಕೆಟ್ ತಪ್ಪುತ್ತಿದೆ ಎಂಬ ಭಾವನೆ ಬಲವಾಗುತ್ತಿದೆ. ಹಿಜಾಬ್ ವಿಷಯವನ್ನು ನಾನು ಸೃಷ್ಟಿಸಿದ್ದಲ್ಲ. ಕೆಲವು ಹೆಣ್ಣು ಮಕ್ಕಳನ್ನು ಕೆಲವು ಸಂಘಟನೆಗಳು ದಾರಿ ತಪ್ಪಿಸಿದವು. ನಾನು ಮುಸ್ಲಿಮರು ಮತ್ತು ಕ್ರೈಸ್ತರ ವಿರೋಧಿ ಅಲ್ಲ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಬಾಲಕನ ಹೊತ್ತೊಯ್ದ ಮೊಸಳೆ

ಶಕ್ತಿನಗರ (ರಾಯಚೂರು ಜಿಲ್ಲೆ): ಸಮೀಪದ ಗಂಜಳ್ಳಿ ಗ್ರಾಮದಲ್ಲಿ ಶುಕ್ರವಾರ ಕುರಿಗಳಿಗೆ ನೀರು ಕುಡಿಸಲು ನದಿಗೆ ಇಳಿದಿದ್ದ ಬಾಲಕನನ್ನು ಮೊಸಳೆ ಎಳೆದೊಯ್ದಿದೆ.

ರಾಯಚೂರು ತಾಲ್ಲೂಕಿನ ಗಂಜಳ್ಳಿ ಗ್ರಾಮದ ಜಯಪ್ಪ ಅವರ ಮಗ ವಿಶ್ವ (12) ಕುರಿಗಳನ್ನು ಮೇಯಿಸಲು ಹೋಗಿದ್ದಾಗ ಅವುಗಳಿಗೆ ನೀರು ಕುಡಿಸಲು ಕೃಷ್ಣಾ ನದಿಗೆ ಇಳಿದಾಗ ಮೊಸಳೆ ದಾಳಿ ಮಾಡಿ ಬಾಲಕನನ್ನು ಎಳೆದೊಯ್ದಿದೆ.

ಮಾಹಿತಿ ತಿಳಿಯುತ್ತಿದ್ದಂತೆ ಗ್ರಾಮಸ್ಥರು ರಾಯಚೂರು ಗ್ರಾಮಾಂತರ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ದೌಡಾಯಿಸಿದ ಪೊಲೀಸರು, ಅಗ್ನಿಶಾಮಕದಳದ ಸಿಬ್ಬಂದಿಯನ್ನು ಕರೆಸಿ ಪರಿಶೀಲನೆ ನಡೆಸಿದ್ದಾರೆ. ಆದರೆ ಬಾಲಕ ಇನ್ನೂ ಪತ್ತೆಯಾಗಿಲ್ಲ.

ಬ್ಯಾಂಕ್‌ಗೆ ವಂಚನೆ: ಮೃತ ಸಿಬ್ಬಂದಿ ವಿರುದ್ಧ ದೂರು!

ಕಾರವಾರ: ಇಲ್ಲಿನ ಕಾರವಾರ ಅರ್ಬನ್ ಕೋ–ಆಪ್ ಬ್ಯಾಂಕ್‌ನಲ್ಲಿ ಅಂದಾಜು ₹ 54 ಕೋಟಿಯಷ್ಟು ವಂಚನೆ ನಡೆದಿದ್ದು, ಎಂಟು ತಿಂಗಳ ಹಿಂದೆ ರಸ್ತೆ ಅಪಘಾತದಲ್ಲಿ ಮೃತಪಟ್ಟ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಗುರುದಾಸ ಬಾಂದೇಕರ ಎಂಬುವರು ಇದಕ್ಕೆ ಕಾರಣವೆಂದು ಬ್ಯಾಂಕ್ ಆಡಳಿತ ಮಂಡಳಿಯ ಅಧ್ಯಕ್ಷ ಚಂದ್ರಹಾಸ ಸ್ವಾರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

'2014ರಿಂದಲೂ ಬ್ಯಾಂಕಿನ ನಿಯಮಾವಳಿಗೆ ವಿರುದ್ಧವಾಗಿ ಬೇರೆ ಬೇರೆ ಖಾತೆಗಳಿಗೆ ಹಣ ಜಮಾ ಆಗಿದೆ. ಬಿಲ್ಡರ್, ಉದ್ಯಮಿಗಳು ಸೇರಿದಂತೆ ಹಲವರಿಗೆ ಬ್ಯಾಂಕ್ ನಿಯಮಾವಳಿ ಪಾಲಿಸದೆ ಹಣ ವರ್ಗಾಯಿಸಲಾಗಿದೆ. ಇದರಲ್ಲಿ ಪ್ರಧಾನ ವ್ಯವಸ್ಥಾಪಕ, ಶಾಖಾ ವ್ಯವಸ್ಥಾಪಕರು ಶಾಮೀಲಾಗಿರುವ ಶಂಕೆ ಇದೆ. ಈ ಬಗ್ಗೆ ತನಿಖೆ ನಡೆಸಬೇಕು' ಎಂದು ಅವರು ಒತ್ತಾಯಿಸಿದ್ದಾರೆ.

'ಹತ್ತು ವರ್ಷಗಳ ಆಡಿಟ್ ವರದಿ ಸೇರಿದಂತೆ ಹಲವು ದಾಖಲೆಗಳನ್ನು ಬ್ಯಾಂಕ್ ಪೂರೈಸಬೇಕಿದೆ. ಪ್ರಾಥಮಿಕ ತನಿಖೆ ನಡೆಸಿದ ಬಳಿಕ ಎಫ್.ಐ.ಆರ್ ದಾಖಲು ಮಾಡಿಕೊಳ್ಳಬೇಕಾಗುತ್ತದೆ' ಎಂದು ಪೊಲೀಸರು ಪ್ರತಿಕ್ರಿಯಿಸಿದ್ದಾರೆ.

₹2 ಸಾವಿರ ವಾಪಸು ಕೇಳಿದ್ದಕ್ಕೆ ಹತ್ಯೆ

ಒಂದನೇ ಪುಟದಿಂದ

'ಮತ್ತೊಬ್ಬ ಸ್ನೇಹಿತನಾದ ಪ್ರಬುದ್ಧಾ ತಮ್ಮನನ್ನು ಮಾತನಾಡಿಸುವ ಸೋಗಿನಲ್ಲಿ ಅವರ ಮನೆಗೆ ಹೋಗಿದ್ದ ಬಾಲಕ, ಪರ್ಸ್‌ನಲ್ಲಿದ್ದ ₹ 2 ಸಾವಿರ ಕದ್ದೊಯ್ದಿದ್ದ. ಇದು ಪ್ರಬುದ್ಧಾಗೆ ಗೊತ್ತಾಗಿತ್ತು. ಹಣ ವಾಪಸು ತಂದುಕೊಡುವಂತೆ ಅವರು ಒತ್ತಾಯಿಸಿದ್ದರು. ಮನೆಗೆ ಬಂದು ಮಾತನಾಡುವುದಾಗಿ ಬಾಲಕ ಹೇಳಿದ್ದ' ಎಂದು ಮೂಲಗಳು ಹೇಳಿವೆ.

ಕ್ಷಮೆ ಕೋರಿ, ನಂತರ ಹತ್ಯೆ: 'ಮೇ 15ರಂದು ಪ್ರಬುದ್ಧಾ ಮನೆಗೆ ಹೋಗಿದ್ದ ಬಾಲಕ, 'ಅಕ್ಕ, ನನ್ನಿಂದ ತಪ್ಪಾಗಿದೆ. ನನ್ನ ಬಳಿ ಈಗ ಹಣವಿಲ್ಲ. ಹಣವಿದ್ದಾಗ ಕೊಡುತ್ತೇನೆ' ಎಂದು ಕಾಲಿಗೆ ಬಿದ್ದು ಕ್ಷಮೆ ಕೋರಿದ್ದ. 'ಕ್ಷಮಿಸುವುದಿಲ್ಲ; ಹಣ ಕೊಡು' ಎಂದು ಪ್ರಬುದ್ಧಾ ಹೇಳಿದ್ದರು. ಆಗ ಆರೋಪಿ, ಪ್ರಬುದ್ಧಾ ಅವರ ಕಾಲು ಎಳೆದು ಬೀಳಿಸಿದ್ದ. ತಲೆಗೆ ತೀವ್ರ ಪೆಟ್ಟಾಗಿತ್ತು ಪ್ರಬುದ್ಧಾ ಪ್ರಜ್ಞೆ ಕಳೆದುಕೊಂಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ. 'ಪ್ರಬುದ್ಧಾ ಅವರು ಈ ಹಿಂದೆ ಕೈ ಕೊಯ್ದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದ ವಿಷಯ ಬಾಲಕನಿಗೆ ಗೊತ್ತಿತ್ತು. ಇದೇ ಕಾರಣಕ್ಕೆ ಈತ, ಪ್ರಬುದ್ಧಾ ಕೈಯಲ್ಲಿದ್ದ ಹಳೇ ಗಾಯದ ಕಲೆಯ ಮೇಲೆಯೇ ಪುನಃ ಬ್ಲೇಡ್‌ನಿಂದ ಕೊಯ್ದಿದ್ದ. ನಂತರ, ಕತ್ತಿನ ಭಾಗದಲ್ಲಿ ಬ್ಲೇಡ್‌ನಿಂದ ಕೊಯ್ದು ಮೃತದೇಹವನ್ನು ಸ್ನಾನದ ಕೊಠಡಿಯಲ್ಲಿ ಇರಿಸಿ ಪರಾರಿಯಾಗಿದ್ದ. ಇದೊಂದು ಆತ್ಮಹತ್ಯೆ ಎಂಬುದಾಗಿ ಬಿಂಬಿಸುವುದು ಬಾಲಕನ ಉದ್ದೇಶವಾಗಿತ್ತು' ಎಂದು ಪೊಲೀಸರು ತಿಳಿಸಿದರು.


ಮೈತ್ರಿಕೂಟ ಸರ್ಕಾರ ರಚಿಸುವ ಸಾಧ್ಯತೆ: ಖರ್ಗೆ ವಿಶ್ವಾಸ

ದಕ್ಷಿಣದಲ್ಲಿ ಕಾಂಗ್ರೆಸ್‌ಗೆ ಹೆಚ್ಚು ಸ್ಥಾನ

ಪ್ರಜಾವಾಣಿ ವಾರ್ತೆ

ಕಲಬುರಗಿ: 'ದಕ್ಷಿಣ ಭಾರತದಲ್ಲಿ ಕಾಂಗ್ರೆಸ್ ನೇತೃತ್ವದ 'ಇಂಡಿಯಾ' ಒಕ್ಕೂಟವು ಅತ್ಯಧಿಕ ಸ್ಥಾನಗಳನ್ನು ಗೆಲ್ಲಲಿದೆ. ಈ ಕುರಿತ ಸೂಚನೆಗಳು ಈಗಾಗಲೇ ಕಾಣುತ್ತಿವೆ. ಈ ಬಾರಿ ನಮ್ಮ ಮೈತ್ರಿಕೂಟ ಸರ್ಕಾರ ರಚಿಸುವ ಸಾಧ್ಯತೆ ಇದೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿಶ್ವಾಸ ವ್ಯಕ್ತಪಡಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಇಲ್ಲಿಯವರೆಗೆ 'ಇಂಡಿಯಾ' ಮೈತ್ರಿಕೂಟಕ್ಕೆ ಒಳ್ಳೆಯ ಮತ ಬಂದಿದೆ. ಜನ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಈ ಚುನಾವಣೆ ನರೇಂದ್ರ ಮೋದಿ ಮತ್ತು ದೇಶದ ನಡುವಿನ ಚುನಾವಣೆಯಾಗಿದೆ. ಇಷ್ಟೇ ಸೀಟುಗಳು ನಮಗೆ ಬರುತ್ತವೆ ಎಂದು ನಾನು ಹೇಳುವುದಿಲ್ಲ. ರಾಜಕೀಯದಲ್ಲಿ ಅದು ಬಹಳ ವಿರಳ. ಆದರೆ, ಕರ್ನಾಟಕ, ತೆಲಂಗಾಣ, ತಮಿಳನಾಡು, ಮಹಾರಾಷ್ಟ್ರದಲ್ಲಿ ಹೆಚ್ಚು ಸ್ಥಾನಗಳನ್ನು ಗೆಲ್ಲುತ್ತೇವೆ' ಎಂದರು.



ಮೋದಿಯವರು ಚಿಲ್ಲರೆ ಮಾತನಾಡಿದರೆ ಅವರಿಗೂ ಗೌರವ ಬರೋದಿಲ್ಲ, ನಮಗೂ ಗೌರವ ಬರಲ್ಲ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮಂಗಳ ಸೂತ್ರ ಇರಲ್ಲ, ಮುಸ್ಲಿಮರಿಗೆ ಆಸ್ತಿ ಹಂಚುತ್ತಾರೆ ಎನ್ನುವುದನ್ನು ಬಿಡಬೇಕು

ಮಲ್ಲಿಕಾರ್ಜುನ ಖರ್ಗೆ ಎಐಸಿಸಿ ಅಧ್ಯಕ್ಷ

'ರಾಜಸ್ಥಾನದಲ್ಲಿ ಈ ಬಾರಿ 7 ಸ್ಥಾನ ಬರಬಹುದು. ಮಧ್ಯಪ್ರದೇಶದಲ್ಲಿ ಕೂಡಾ ಒಳ್ಳೆಯ ವಾತಾವರಣವಿದೆ. ಇಲ್ಲೆಲ್ಲಾ ನಮಗೆ ಹೆಚ್ಚಿನ ಸ್ಥಾನಗಳು ಬರುತ್ತವೆ. ಆದರೂ ಬಿಜೆಪಿಯವರಿಗೆ ಎಲ್ಲಿಂದ ಹೆಚ್ಚಿನ ಸ್ಥಾನ ಬರುತ್ತದೆ. ಮೋದಿಯವರಿಗೆ 400 ಪಾರ್ ಹೇಗೆ ಗೊತ್ತಾಯಿತೋ ತಿಳಿಯುತ್ತಿಲ್ಲ' ಎಂದು ವ್ಯಂಗ್ಯವಾಡಿದರು.

'ನಾವು ಎಲ್ಲಾ ಧರ್ಮ, ಜಾತಿಯಲ್ಲಿ ನಂಬಿಕೆಯಿಟ್ಟಿದ್ದೇವೆ. ಮೋದಿಯವರೇ ಎಷ್ಟು ಬಾರಿ ರಾಮನ ಹೆಸರು ತರುತ್ತೀರಿ?' ಎಂದು ಪ್ರಶ್ನಿಸಿದರು.

ಪ್ರಜ್ವಲ್ ರೇವಣ್ಣ ಪ್ರಕರಣದ ಕುರಿತು ಮಾತನಾಡಿದ ಖರ್ಗೆ, 'ಕಾನೂನಿನ ಪ್ರಕಾರ ಕ್ರಮ ಆಗಬೇಕು. ಅದು ಪ್ರಜ್ವಲ್ ಇರಲಿ, ಕೇಜ್ರಿವಾಲ್ ಕಾರ್ಯದರ್ಶಿ ಇರಲಿ, ಕಾನೂನು ಎಲ್ಲರಿಗೂ ಒಂದೇ' ಎಂದರು.

ಸಿಎಂ, ಡಿಸಿಎಂ ಧರ್ಮಸ್ಥಳ ಭೇಟಿ ಇಂದು

ಮಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಶನಿವಾರ ಮಂಗಳೂರಿನಿಂದ ಒಟ್ಟಾಗಿ ಧರ್ಮಸ್ಥಳಕ್ಕೆ ತೆರಳಿ ಮಂಜುನಾಥ ದೇವರ ದರ್ಶನ ಪಡೆಯಲಿದ್ದಾರೆ.

ಮೈಸೂರಿನಿಂದ ವಿಶೇಷ ವಿಮಾನದಲ್ಲಿ ಮಧ್ಯಾಹ್ನ 12.15ಕ್ಕೆ ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿಯುವ ಅವರು, ಅಲ್ಲಿಂದ ಧರ್ಮಸ್ಥಳಕ್ಕೆ ತೆರಳಲಿದ್ದಾರೆ. ಅಲ್ಲಿಂದ ವಾಪಸ್ ಬಂದು, ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಅವರ ಸಹೋದರನ ಮಗಳ ಮದುವೆಯಲ್ಲಿ ಭಾಗಿಯಾಗಲಿದ್ದಾರೆ.

'ಧರ್ಮಸ್ಥಳದಲ್ಲಿ ಈ ವರೆಗೆ ಯಾವುದೇ ಕಾರ್ಯಕ್ರಮ ನಿಗದಿಯಾಗಿಲ್ಲ. ಈ ಮೊದಲು ಯಾವುದೋ ಸಂದರ್ಭದಲ್ಲಿ ಕೇಳಿಕೊಂಡಿದ್ದ ಹರಕೆ ಪೂರೈಸಲು ಇಬ್ಬರೂ ಒಟ್ಟಿಗೆ ಹೋಗುತ್ತಿದ್ದಾರೆ' ಎಂದು ಕಾಂಗ್ರೆಸ್ ಮೂಲಗಳು ಖಚಿತಪಡಿಸಿವೆ.

ಕುಲಪತಿ ವಿರುದ್ಧ ಹಕ್ಕುಚ್ಯುತಿ ಮಂಡನೆ?

ಪ್ರಜಾವಾಣಿ ವಾರ್ತೆ

ಕಲಬುರಗಿ: ಜಿಲ್ಲೆಯ ಆಳಂದ ತಾಲ್ಲೂಕಿನ ಕಡಗಂಚಿಯ ಕರ್ನಾಟಕ ಕೇಂದ್ರೀಯ ವಿ.ವಿ.ಯಲ್ಲಿ ಈಚೆಗೆ ನಡೆದಿದ್ದ ಡಾ.ಬಿ.ಆರ್. ಅಂಬೇಡ್ಕರ್ ಪರಿನಿರ್ವಾಣ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾಗ ತಮಗೆ ಹಕ್ಕುಚ್ಯುತಿಯಾಗಿದೆ ಎಂದು ಆರೋಪಿಸಿ ಸ್ಥಳೀಯ ಶಾಸಕರೂ ಆದ ಮುಖ್ಯಮಂತ್ರಿ ಸಲಹೆಗಾರ ಬಿ.ಆರ್. ಪಾಟೀಲ ಅವರು ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ವಿರುದ್ಧ ಹಕ್ಕುಚ್ಯುತಿ ಮಂಡನೆಗೆ ಮುಂದಾಗಿದ್ದಾರೆ.

ಈ ಕುರಿತ ನೋಟಿಸ್ ಅನ್ನು ವಿಧಾನಸಭೆ ಸ್ಪೀಕರ್ ಕಚೇರಿಗೆ ನೀಡಿದ್ದಾರೆ. 'ಕಳೆದ ಮಾರ್ಚ್ 11ರಂದು ಸಿಯುಕೆ ಸಭಾಂಗಣದಲ್ಲಿ ಎಸ್ಸಿ, ಎಸ್ಟಿ ನೌಕರರ ಕಲ್ಯಾಣ ಸಂಘವು ಬಾಬಾಸಾಹೇಬ್ ಅಂಬೇಡ್ಕರ್ ಹಾಗೂ ಸಂವಿಧಾನದ ತತ್ವಗಳು ವಿಷಯ ಕುರಿತು ವಿಚಾರ ಸಂಕಿರಣ ಆಯೋಜಿಸಿತ್ತು. ಕಾರ್ಯಕ್ರಮಕ್ಕೆ ಕುಲಪತಿ ಹಲವು ಷರತ್ತುಗಳನ್ನು ವಿಧಿಸಿದ್ದರು. ನಂತರ ಸಂಘದ ಪದಾಧಿಕಾರಿಗಳಿಗೆ ನೋಟಿಸ್ ಸಹ ನೀಡಿದ್ದರು. ಇದು ವಿಶ್ವವಿದ್ಯಾಲಯದ ಅಧಿಕೃತ ಕಾರ್ಯಕ್ರಮವಲ್ಲ ಎಂಬ ಕಾರಣಕ್ಕೆ ಕುಲಪತಿ ಹಾಜರಾಗಿರಲಿಲ್ಲ. ಅಲ್ಲದೇ, ಸಮಾರಂಭದಲ್ಲಿ ಭಾಗವಹಿಸಲು ಬಂದಿದ್ದ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ನನ್ನನ್ನು ಸ್ವಾಗತಿಸಲೂ ಬಂದಿರಲಿಲ್ಲ. ಇದರಿಂದಾಗಿ ಶಾಸಕನಾದ ನನ್ನ ಹಕ್ಕಿಗೆ ಚ್ಯುತಿ ಬಂದಿದೆ' ಎಂದು ಬಿ.ಆರ್. ಪಾಟೀಲ ದೂರು ನೀಡಿದ್ದಾರೆ.



ಪ್ರೊ.ಸತ್ಯ ನಾರಾಯಣ



ಬಿ.ಆರ್. ಪಾಟೀಲ

ಈ ಕುರಿತು 'ಪ್ರಜಾವಾಣಿ'ಗೆ ಮಾಹಿತಿ ನೀಡಿದ ಬಿ.ಆರ್. ಪಾಟೀಲ, 'ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿದಾಗಲೂ ಶಾಸಕನಾದ ನನ್ನನ್ನು ವಿಶ್ವವಿದ್ಯಾಲಯದ ಯಾವೊಬ್ಬ ಸಿಬ್ಬಂದಿಯೂ ಸ್ವಾಗತಿಸಲಿಲ್ಲ. ಅಲ್ಲದೇ, ನಾನು ಹಾಗೂ ಸಚಿವ ಪ್ರಿಯಾಂಕ್ ಅವರು ಭಾಗವಹಿಸಿದ್ದ ಈ ಕಾರ್ಯಕ್ರಮದಲ್ಲಿ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗಬಹುದು ಎಂಬ ಅರ್ಥದಲ್ಲಿ ಸಂಘಟಕರಿಗೆ ಕುಲಪತಿ ಪತ್ರ ಬರೆದಿದ್ದಾರೆ. ಹೀಗಾಗಿ, ಹಕ್ಕುಚ್ಯುತಿ ಮಂಡನೆಗೆ ಅವಕಾಶ ನೀಡುವಂತೆ ಮನವಿ ಸಲ್ಲಿಸಿದ್ದೇನೆ. ಕಾರ್ಯಕ್ರಮದಲ್ಲಿ ಭಾಷಣ ಮಾಡಿದ ಸಾಹಿತಿ ಆರ್.ಕೆ. ಹುಡಗಿ, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷೆ ಕೆ. ನೀಲಾ ಅವರ ಸಿದ್ಧಾಂತ ಒಪ್ಪಿಗೆಯಾಗದ್ದಕ್ಕೆ ಕುಲಪತಿ ಇಂತಹ ಕ್ರಮಕ್ಕೆ ಮುಂದಾಗಿದ್ದಾರೆ' ಎಂದರು.

ಈ ಕುರಿತು ಪ್ರತಿಕ್ರಿಯಿಸಿದ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ, 'ವಿಶ್ವವಿದ್ಯಾಲಯದ ಕಾರ್ಯಕ್ರಮಕ್ಕೆ ಸಚಿವರು, ಶಾಸಕರನ್ನು ಹೊರತುಪಡಿಸಿ, ಶೈಕ್ಷಣಿಕ ಕ್ಷೇತ್ರಕ್ಕೆ ಸಂಬಂಧವಿರದವರನ್ನು ಕರೆಸದಂತೆ ಸೂಚಿಸಿದ್ದೆ. ಅದನ್ನು ಮೀರಿ ಕೆಲವರನ್ನು ಭಾಷಣ ಮಾಡಲು ಕರೆಸಿದ್ದಾರೆ. ವಿ.ವಿ. ವಾತಾವರಣವನ್ನು ರಾಜಕೀಯಕರಣ ಮಾಡಬಾರದು ಎಂಬ ಉದ್ದೇಶದಿಂದ ನೋಟಿಸ್ ನೀಡಿದ್ದೇನೆ' ಎಂದು ಸಮರ್ಥಿಸಿಕೊಂಡರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಚಿವ ಪ್ರಿಯಾಂಕ್ ಖರ್ಗೆ ಅವರೂ ಕುಲಪತಿಯವರ ವರ್ತನೆ ಬಗ್ಗೆ ಅಸಮಾಧಾನ ಹೊರಹಾಕಿದ್ದನ್ನು ಈ ವೇಳೆ ಸ್ಮರಿಸಬಹುದು.

ಕಾಮೆಡ್–ಕೆ: ಬೆಂಗಳೂರಿನ ವಿದ್ಯಾರ್ಥಿಗಳ ಮೇಲುಗೈ

ಬೆಂಗಳೂರು: ಕರ್ನಾಟಕ ವೈದ್ಯಕೀಯ, ಎಂಜಿನಿಯರಿಂಗ್ ಮತ್ತು ದಂತ ವೈದ್ಯಕೀಯ ಕಾಲೇಜುಗಳ ಒಕ್ಕೂಟ (ಕಾಮೆಡ್–ಕೆ) ನಡೆಸಿದ್ದ 2024ನೇ ಸಾಲಿನ ಪ್ರವೇಶ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ಮೊದಲ 10 ಸ್ಥಾನಗಳಲ್ಲಿ ಬೆಂಗಳೂರಿನ ಎಂಟು ವಿದ್ಯಾರ್ಥಿಗಳು ಸ್ಥಾನ ಪಡೆದಿದ್ದಾರೆ.

ಬೆಂಗಳೂರಿನ ಬಾಲಸತ್ಯ ಸರವಣನ್ ಮೊದಲಿಗರಾಗಿ ಹೊರಹೊಮ್ಮಿದ್ದಾರೆ. ದೇವಾಂಶ್ ತ್ರಿಪಾಠಿ, ಸನಾ ತಬಸ್ಸುಮ್, ಪ್ರಕೇತ್ ಗೋಯಲ್ ಕ್ರಮವಾಗಿ ಎರಡು, ಮೂರು ಹಾಗೂ ನಾಲ್ಕನೇ ಸ್ಥಾನ ಪಡೆದಿದ್ದಾರೆ. ಹಿಮಾಚಲ ಪ್ರದೇಶದ ವಿದ್ಯಾರ್ಥಿ ಮಾನಸ್ ಸಿಂಗ್ ರಜಪೂತ್ ಐದು, ಆಂಧ್ರಪ್ರದೇಶದ ಗಣಿಪಿಸೆಟ್ಟಿ ನಿಶ್ಚಲ್ ಆರನೇ ಸ್ಥಾನ ಗಳಿಸಿದ್ದಾರೆ. ಬೆಂಗಳೂರಿನ ನಿಕೇತ್ ಪ್ರಕಾಶ್ ಅಚಂತಾ (ಏಳು) ನೇಹಾ ಪ್ರಭು (ಎಂಟು), ಜಗದೀಶ್ ರೆಡ್ಡಿ ಮಾರ್ಲಾ (ಒಂಬತ್ತು), ಈಶ್ವರಚಂದ್ರ ರೆಡ್ಡಿ ಮುಲ್ಕಾ 10ನೇ ಸ್ಥಾನ ಪಡೆದಿದ್ದಾರೆ. ಮೊದಲ 100 ಸ್ಥಾನಗಳಲ್ಲಿ 58 ವಿದ್ಯಾರ್ಥಿಗಳು ಕರ್ನಾಟಕದವರು.

ಕರ್ನಾಟಕದ 3,126 ಮಂದಿ ಸೇರಿ 10,575 ವಿದ್ಯಾರ್ಥಿಗಳು ಶೇ 90ರಿಂದ 100 ಪರ್ಸೆಂಟೈಲ್ ಗಳಿಸಿದ್ದಾರೆ. 10,538 ಅಭ್ಯರ್ಥಿಗಳು ಶೇ 80ರಿಂದ 90 ಹಾಗೂ 10,648 ಅಭ್ಯರ್ಥಿಗಳು 70 ಮತ್ತು 80 ಪರ್ಸೆಂಟೈಲ್ ಪಡೆದಿದ್ದಾರೆ.

ಈ ಬಾರಿಯೂ ಆನ್‌ಲೈನ್ ಮೂಲಕವೇ ಕೌನ್ಸೆಲಿಂಗ್ ನಡೆಸಲಾಗುವುದು. ವಿದ್ಯಾರ್ಥಿಗಳು ದಾಖಲೆಗಳ ಸ್ಕ್ಯಾನ್ ಮಾಡಿದ ಪ್ರತಿಗಳನ್ನು ಅಪ್‌ಲೋಡ್ ಮಾಡಬೇಕು. ಶುಲ್ಕ ವಿವರಗಳು ಮತ್ತು ಕೌನ್ಸೆಲಿಂಗ್ ದಿನಾಂಕಗಳನ್ನು www.comedk.org ನಲ್ಲಿ ವೀಕ್ಷಿಸಬಹುದು.

ಕರ್ನಾಟಕದ 150 ಎಂಜಿನಿಯರಿಂಗ್ ಕಾಲೇಜುಗಳು ಹಾಗೂ ಭಾರತದ 50ಕ್ಕೂ ಹೆಚ್ಚು ಖಾಸಗಿ ಹಾಗೂ ಡೀಮ್ಡ್ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶಕ್ಕಾಗಿ ಕಾಮೆಡ್–ಕೆ ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕೆ ಮೇ 12ರಂದು ಪರೀಕ್ಷೆ ನಡೆಸಿತ್ತು. 28 ರಾಜ್ಯಗಳು, 189 ನಗರಗಳು ಮತ್ತು 264 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆದಿದ್ದವು. ಕರ್ನಾಟಕದ 35,124 ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 1,03,799 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು.

ಸೀಟಿಗಾಗಿ ಪರದಾಟ ತಪ್ಪಿಸಲು ಈ ಕ್ರಮ • ಮೂರು ಪಟ್ಟು ಹೆಚ್ಚಳ

'ಶಕ್ತಿ' ಹೆಚ್ಚಿಸಿದ ಮುಂಗಡ ಕಾಯ್ದಿರಿಸುವಿಕೆ

• ಬಾಲಕೃಷ್ಣ ಪಿ.ಎಚ್.

61,000	60,566	1,68,910	1,83,803
2023ರ ಜನವರಿಯಿಂದ ಮೇ ವರೆಗೆ ಆಸನ ಕಾಯ್ದಿರಿಸಿದವರ ಸರಾಸರಿ	'ಶಕ್ತಿ' ಜಾರಿಯಾದ ಜೂನ್ 30ಗಳಲ್ಲಿ ಕಾಯ್ದಿರಿಸಿದವರು	2023ರ ಡಿಸೆಂಬರ್‌ನಲ್ಲಿ ಕಾಯ್ದಿರಿಸಿದವರು	2024ರ ಏಪ್ರಿಲ್‌ನಲ್ಲಿ ಕಾಯ್ದಿರಿಸಿದವರು

563	627
ಶಕ್ತಿ ಜಾರಿಯಾಗುವ ಮೊದಲು ಇದ್ದ ಸಾರಿಗೆ ಬಸ್‌ಗಳ ಸಂಖ್ಯೆ	ಈಗ ರಾಜ್ಯದಲ್ಲಿ ಸಂಚರಿಸುವ ಸಾರಿಗೆ ಬಸ್‌ಗಳ ಸಂಖ್ಯೆ



ಬೆಂಗಳೂರು: ಶಕ್ತಿ ಯೋಜನೆ ಜಾರಿಯಾದ ಮೇಲೆ ಸಾರಿಗೆ ನಿಗಮಗಳ ಕೆಂಪು ಬಸ್‌ಗಳಲ್ಲಿ ಸೀಟಿಲ್ಲದೇ ಕಷ್ಟ ಅನುಭವಿಸುವುದನ್ನು ತಪ್ಪಿಸಲು ದೂರದ ಪ್ರಯಾಣಿಕರು ಆಸನ ಕಾಯ್ದಿರಿಸಲು ಆದ್ಯತೆ ನೀಡುತ್ತಿದ್ದಾರೆ. ಇದರಿಂದ ಕಾಯ್ದಿರಿಸುವ ಪ್ರಮಾಣ ಮೂರು ಪಟ್ಟು ಹೆಚ್ಚಾಗಿದೆ.

ಮಹಿಳೆಯರಿಗೆ ಉಚಿತ ಪ್ರಯಾಣದ ಅವಕಾಶ ನೀಡುವ 'ಶಕ್ತಿ' ಜಾರಿಯಾಗುವ ಮೊದಲು ತಿಂಗಳಿಗೆ ಸರಾಸರಿ 61 ಸಾವಿರ ಪ್ರಯಾಣಿಕರು ಮುಂಗಡವಾಗಿ ಕಾಯ್ದಿರಿ ಸುತ್ತಿದ್ದರು. ಆಗ ರಾಜ್ಯದಲ್ಲಿ ನಿತ್ಯ ಪ್ರಯಾಣಿಸುವವರ ಸರಾಸರಿ ಸಂಖ್ಯೆ 84.5 ಲಕ್ಷ ಇತ್ತು. ಯೋಜನೆ ಜಾರಿಯಾದ ಮೇಲೆ ಪ್ರಯಾಣಿಕರ ಸಂಖ್ಯೆ 30 ಲಕ್ಷ ಹೆಚ್ಚಾಗಿತ್ತು. ಇದರಿಂದ ಬಸ್‌ಗಳಲ್ಲಿ ಸೀಟ್ ಸಿಗುವುದು ಕಷ್ಟವಾಗತೊಡಗಿತ್ತು. ಕೆಲವೆಡೆ ಸೀಟ್‌ಗಾಗಿ ಹೊಡೆದಾಟಗಳೂ ನಡೆದಿದ್ದವು. ಇದರಿಂದ ತಪ್ಪಿಸಿಕೊಳ್ಳಲು ದೂರದ ಊರಿಗೆ ಪ್ರಯಾಣಿಸುವವರು ಆಸನ ಕಾಯ್ದಿರಿಸಿಯೇ ಹೋಗುವುದನ್ನು ರೂಢಿಸಿಕೊಳ್ಳತೊಡಗಿದರು. ಇದರಿಂದಾಗಿ ಕಾಯ್ದಿರಿಸುವ ಪ್ರಮಾಣ ನಿಧಾನಕ್ಕೆ ಏರಿಕೆ ಕಾಣುತ್ತಾ ಬಂದಿದ್ದು, ಏಪ್ರಿಲ್ ತಿಂಗಳಲ್ಲಿ 1.83 ಲಕ್ಷಕ್ಕೆ ತಲುಪಿದೆ.

ಜನರಿಗೆ ಉಪಯೋಗ: ರಾಮಲಿಂಗಾರೆಡ್ಡಿ

'ಶಕ್ತಿ ಯೋಜನೆ ಜಾರಿಯಾದ ಮೇಲೆ ದೂರದ ಊರಿಗೆ ಸಾರಿಗೆ ಬಸ್‌ಗಳನ್ನು ಕೂಡ ಜಾಸ್ತಿ ಮಾಡಿದ್ದೇವೆ. ಉತ್ತಮ ಆಸನಗಳನ್ನು ಹೊಂದಿರುವ 'ಅಶ್ವಮೇಧ' ಬಸ್‌ಗಳಿಗೆ 'ಶಕ್ತಿ' ಪ್ರಯಾಣಿಕರು ಹೆಚ್ಚು ಆದ್ಯತೆ ನೀಡುತ್ತಿದ್ದಾರೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ 'ಪ್ರಜಾವಾಣಿ'ಗೆ ತಿಳಿಸಿದರು.

'ಪತಿ ಮತ್ತು ಮಗಳೊಂದಿಗೆ ನಾನು ಸುಬ್ರಹ್ಮಣ್ಯಕ್ಕೆ ಹೋಗಿ ಬಂದೆ. ಹಿಂದೆ ರಜೆ ಮತ್ತು ವಿಶೇಷ ದಿನಗಳನ್ನು ಹೊರತುಪಡಿಸಿದರೆ ಬಸ್‌ನಲ್ಲಿ ಹೆಚ್ಚು ದಟ್ಟಣೆ ಇರುತ್ತಿರಲಿಲ್ಲ. ಶಕ್ತಿ ಯೋಜನೆ ಜಾರಿಯಾದ ಮೇಲೆ ಪ್ರಯಾಣಿಕರ ಸಂಖ್ಯೆ ಬಹಳ ಹೆಚ್ಚಾಗಿದೆ. ಸೀಟ್ ಸಿಗದೇ ನಿಂತುಕೊಂಡು ಅಷ್ಟು ದೂರ ಪ್ರಯಾಣಿಸುವುದು ಕಷ್ಟ. ಒಂದು ವೇಳೆ ಸೀಟು ಸಿಕ್ಕಿದರೂ ಒಂದೇ ಕಡೆ ಇರುವ ಬದಲು ಎಲ್ಲೆಲ್ಲೋ ಕುಳಿತು ಕೊಳ್ಳಬೇಕು. ಮೊದಲೇ ಟಿಕೆಟ್ ಬುಕ್ಕಿಂಗ್ ಮಾಡಿ ಹೋಗುವುದರಿಂದ ಈ ಯಾವ ಸಮಸ್ಯೆಗಳೂ ಇರುವುದಿಲ್ಲ. ನಾವು ಸುಬ್ರಹ್ಮಣ್ಯಕ್ಕೆ ಹೋಗುವ ಮತ್ತು ಬರುವ ಟಿಕೆಟ್ ಒಮ್ಮೆಲೇ ಬುಕ್ ಮಾಡಿದೆವು. ಶಕ್ತಿ ಯೋಜನೆಯಿಂದ ನನಗೆ ಮತ್ತು ಮಗಳಿಗೆ ಉಚಿತವಾಗಿದ್ದಲ್ಲದೇ, ಎರಡು ಕಡೆಯ ಟಿಕೆಟ್ ಕಾಯ್ದಿರಿಸಿದ್ದರಿಂದ ಮನೆಯವರಿಗೂ ಶೇ 5ರಷ್ಟು ರಿಯಾಯಿತಿ ಸಿಕ್ಕಿತು' ಎಂದು ಜೆ.ಪಿ. ನಗರದ ಕೃಷ್ಣವೇಣಿ ತಿಳಿಸಿದರು.

'ಧರ್ಮಸ್ಥಳಕ್ಕೆ ತೆರಳಲು ನಾವು ಟಿಕೆಟ್ ಬುಕ್ ಮಾಡಿ, ಮೆಜೆಸ್ಟಿಕ್‌ನಲ್ಲಿರುವ ಕೆಎಸ್‌ಆರ್‌ಟಿಸಿ ಬಸ್‌ನಿಲ್ದಾಣಕ್ಕೆ ಹೋದೆವು. ಅಲ್ಲಿ ನೋಡಿದರೆ ಆ ಬಸ್‌ನಲ್ಲಿ ಬುಕ್ ಮಾಡಿದವರು ಮಾತ್ರ ಇದ್ದರು. ಅನೇಕರು ಬಂದು ಸೀಟ್ ಇದೆಯೇ ಎಂದು ನಿರ್ವಾಹಕರಲ್ಲಿ ಕೇಳಿ ಇಲ್ಲ ಎಂಬುದನ್ನು ತಿಳಿದು ವಾಪಸ್ ಹೋಗುತ್ತಿದ್ದರು. ಇದೇ ರೀತಿ ಅನೇಕ ಬಸ್‌ಗಳು ಬುಕ್ ಮಾಡಿದವರಿಂದಲೇ ಭರ್ತಿಯಾಗಿದ್ದವು. ಪ್ರಯಾಣಿಕರ ಸಂಖ್ಯೆ ಹೆಚ್ಚಿರುವುದನ್ನು ಕಂಡು ಹೆಚ್ಚುವರಿ ಬಸ್‌ಗಳನ್ನು ಹಾಕಿದಾಗ ಟಿಕೆಟ್ ಬುಕ್ ಮಾಡದವರಿಂದಲೇ ಒಮ್ಮೆಲೇ ತುಂಬಿ ಹೋಗಿತ್ತು. ಇದೆಲ್ಲ ನೋಡುವಾಗ ನಾವು ಮುಂಗಡ ಕಾಯ್ದಿರಿಸಿದ್ದು ಎಷ್ಟು ಉಪಯೋಗವಾಯಿತು ಎಂಬುದು ಗೊತ್ತಾಯಿತು' ಎಂದು ರಾಜಾಜಿನಗರದ ಶೋಭಾ ಅವರು ತಿಳಿಸಿದರು.

ಪ್ರಜಾವಾಣಿ ಶನಿವಾರ, 25 ಮೇ 2024 6

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ

ನಳನಳಿಸುತ್ತಿವೆ 77 ರಾಗಿತಳಿ



24 ವರ್ಷಗಳ ಹಿಂದೆ ಕೇವಲ 10 ರೂಪಾಯಿ ದಿನಗೂಲಿಗೆ ಹೋಗುತ್ತಿದ್ದ ನಾರಿಯರು ಇಂದು ಅರ್ಧ ಎಕರೆ ಜಮೀನನ್ನು ಲೀಸ್‌ಗೆ ಪಡೆದು 77 ರಾಗಿ ತಳಿಯನ್ನು ಉಳಿಸಿ ಬೆಳೆಸಲು ಕೈಜೋಡಿಸಿದ್ದಾರೆ. ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಮತ್ತಿಗಟ್ಟಿಯ ವಿನಾಯಕ ಸ್ತ್ರೀ ಶಕ್ತಿ ಸಂಘದ ಮೂಲಕ ಹಲವು ಅಡ್ಡಿ ಆತಂಕಗಳನ್ನು ಮೆಟ್ಟಿನಿಂತು ಸಿರಿಧಾನ್ಯದ ಜೊತೆಗೆ ರಾಗಿಯ 77 ತಳಿಗಳ ಬೀಜ ಬೆಳೆದು ಗಮನ ಸೆಳೆದಿದ್ದಾರೆ.

ಕೃಷ್ಣಿ ಶಿರೂರ

24 ವರ್ಷಗಳ ಹಿಂದೆ ಕೇವಲ 10 ರೂಪಾಯಿ ದಿನಗೂಲಿಗೆ ಹೋಗುತ್ತಿದ್ದ ನಾರಿಯರು ಇಂದು ಅರ್ಧ ಎಕರೆ ಜಮೀನನ್ನು ಲೀಸ್‌ಗೆ ಪಡೆದು 77 ರಾಗಿ ತಳಿಯನ್ನು ಉಳಿಸಿ ಬೆಳೆಸಲು ಕೈಜೋಡಿಸಿದ್ದಾರೆ. ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಮತ್ತಿಗಟ್ಟಿಯ ವಿನಾಯಕ ಸ್ತ್ರೀ ಶಕ್ತಿ ಸಂಘದ ಮೂಲಕ ಹಲವು ಅಡ್ಡಿ ಆತಂಕಗಳನ್ನು ಮೆಟ್ಟಿನಿಂತು ಸಿರಿಧಾನ್ಯದ ಜೊತೆಗೆ ರಾಗಿಯ 77 ತಳಿಗಳ ಬೀಜ ಬೆಳೆದು ಗಮನ ಸೆಳೆದಿದ್ದಾರೆ.

ಕೂಲಿಯಾಳಾಗಿ ದುಡಿದವರು ಜಮೀನನ್ನು ಲೀಸ್‌ಗೆ ಪಡೆದು ಸಾವಯವ ಪದ್ಧತಿಯಲ್ಲಿ ಸಿರಿಧಾನ್ಯ ಬೆಳೆದು ಎಲ್ಲರೂ ಗಮನ ಸೆಳೆಯುವಂತೆ ಮಾಡಿದ್ದಾದರೂ ಹೇಗೆ ಎಂಬುದನ್ನು ವಿನಾಯಕ ಸ್ತ್ರೀ ಶಕ್ತಿ ಸಂಘದ ಸಂಚಾಲಕಿ ರತ್ನಾ ಪ್ರಕಾಶ ಹೊಸಳ್ಳಿ ಇಲ್ಲಿ ವಿವರಿಸಿದ್ದಾರೆ.

'ರಾಗಿಯಲ್ಲಿ ಇಷ್ಟೊಂದು ತಳಿಗಳಿವೆ ಅನ್ನೋದೇ ನನಗೆ ಗೊತ್ತಿರಲಿಲ್ಲ. ನಮ್ಮ ಸಂಘದ ಮಹಿಳೆಯರ 20 ವರ್ಷದ ಸಾಮೂಹಿಕ ಕೃಷಿ, ಸಾಧನೆ ಕಂಡ ಸಹಜ ಸಮೃದ್ಧಿಯವರು ರಾಗಿ ತಳಿಗಳ ಬೀಜವನ್ನು ನೀಡಿ ಬೀಜಕ್ಕಾಗಿಯೇ ಬೆಳೆದುಕೊಡಿ ಎಂದು ಕೇಳಿಕೊಂಡಾಗ ನಮಗೆ ಇಲ್ಲವೆನ್ನಲಾಗಲಿಲ್ಲ. ಅಷ್ಟರಲ್ಲಾಗಲೇ ನಾವು ಗೇಣಿ ಪಡೆದ ಜಮೀನಿನಲ್ಲಿ ಸಿರಿಧಾನ್ಯ ಬೆಳೆಯಲು ಆರಂಭಿಸಿ ಸ್ವಾವಲಂಬನೆಯ ಹಾದಿ ತುಳಿದಿದ್ದೆವು. ಅದೇ ಸಂದರ್ಭದಲ್ಲಿ ಅಂದರೆ 2021ರಲ್ಲಿ ಸಹಜ ಸಮೃದ್ಧದವರು 77 ತಳಿ ರಾಗಿಯನ್ನು ಬೀಜಕ್ಕಾಗಿ ಬೆಳೆಯುವ ಕಾಯಕವನ್ನು ಒಪ್ಪಿಸಿದ್ದು, ನಮ್ಮ ಸಂಘ ಅದನ್ನು ಒಪ್ಪಿಕೊಂಡಿತು. ಪರಿಣಾಮವೇ ಇಂದು ನಮ್ಮ ಲೀಸ್ ಹೊಲದಲ್ಲಿ ರಾಗಿಯ 77 ತಳಿಯ ತಾಕುಗಳು ನಿರ್ಮಾಣವಾಗಿ ಸಾವಯವ ಪದ್ಧತಿಯಲ್ಲಿ ಪ್ರತಿವರ್ಷ 2 ಕ್ವಿಂಟಲ್‌ನಷ್ಟು ರಾಗಿಯ ಬೀಜಗಳನ್ನು ಬೆಳೆದು ಕೊಡಲಾಗಿದೆ'.

'10 ರೂಪಾಯಿ ಕೂಲಿಗೆ ಹೋಗುತ್ತಿದ್ದ 13 ಮಂದಿ ಮಹಿಳೆಯರು 2000ರಲ್ಲಿ ಸಂಘ ಕಟ್ಟಿಕೊಂಡು ವಾರಕ್ಕೆ 10 ರೂಪಾಯಿ, ನಂತರ ತಿಂಗಳಿಗೆ 50 ರೂಪಾಯಿ, ಹಾಗೇ ಮುಂದೆ 100, 200 ರೂಪಾಯಿ ವಿನಿಯೋಗಿಸಿ ಸ್ವಸಹಾಯ ಸಂಘವನ್ನು ನಡೆಸಿದೆವು. ಕೆಲವರು ಸಾಲ ಪಡೆದು ಮನೆಯಲ್ಲೇ ಗೃಹೋದ್ಯಮ, ಟೇಲರಿಂಗ್ ಆರಂಭಿಸಿದರು. ಮುಂದೆ ಜಮೀನನ್ನೇ ಗೇಣಿಗೆ ಪಡೆದು ಶೇಂಗಾ, ಸಿರಿಧಾನ್ಯ ಬೆಳೆಯಲು ಆರಂಭಿಸಿದೆವು. 2021ರಿಂದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ₹1 ಲಕ್ಷ ಪ್ರೋತ್ಸಾಹ ಹಣ ದೊರೆತಾಗ ₹50 ಸಾವಿರ ನೀಡಿ ಅರ್ಧ ಎಕರೆ ಜಮೀನನ್ನು 2 ವರ್ಷಕ್ಕೆ ಲೀಸ್‌ಗೆ ಪಡೆದು ರಾಗಿಯ 77 ತಳಿಯನ್ನು ಬೆಳೆಯಲು ಆರಂಭಿಸಿದೆವು. ಹೇಗೆ ಬೆಳೆಯಬೇಕು ಎಂಬುದನ್ನು ಸಹಜ ಸಮೃದ್ಧದವರೇ ಮಾರ್ಗದರ್ಶನ ನೀಡಿದರು. ಈ ರಾಗಿಗಳನ್ನು ಬೀಜಕ್ಕಾಗಿ ಬೆಳೆದು ನೀಡಬೇಕಿರುವುದರಿಂದ ವಿಶೇಷ ಮುತುವರ್ಜಿ ಬೇಕು. ತಳಿಗಳು ಮಿಶ್ರವಾಗುವಂತಿಲ್ಲ. ಅದಕ್ಕಾಗಿ ಒಂದು ರಾಗಿ ತಳಿಯ ತಾಕಿನಿಂದ ಇನ್ನೊಂದು ತಾಕಿಗೆ ಹೆಚ್ಚಿನ ಜಾಗ ಬಿಡುವುದು ಅನಿವಾರ್ಯ. ಆಗ ನಾವು ಆಗ ಜಾಗವನ್ನು ವ್ಯರ್ಥಮಾಡದೆ ಎಳ್ಳನ್ನು ಬೆಳೆದೆವು. ಮಳೆಯ ಕೊರತೆಯಿಂದ ಬೆಳೆಯಲ್ಲಿ ಕೊಂಚ ಹಿನ್ನಡೆ ಅನಿಸಿದರೂ ನಷ್ಟವೇನು ಆಗಲಿಲ್ಲ'. ಸ್ವಂತ ಜಮೀನಿಲ್ಲದಿದ್ದರೂ 'ಸಾಮೂಹಿಕ ಕೃಷಿ' ಮೂಲಕ ಗೇಣಿ, ಲೀಸ್ ಹೊಲದಲ್ಲಿ ಸ್ವಾವಲಂಬನೆ ಕಂಡುಕೊಂಡಿದ್ದಾರೆ. ವಿನಾಯಕ ಸ್ತ್ರೀ ಶಕ್ತಿ ಸಂಘದ ಮಹಿಳೆಯರು. ಕೂಲಿಯಾಳಾಗಿ ದುಡಿದವರ ಸಾಮೂಹಿಕ ಕೃಷಿಯ ಯಶೋಗಾಥೆ ಗುರುತಿಸಿ ಸಾಕಷ್ಟು ಪ್ರಶಸ್ತಿ, ಪುರಸ್ಕಾರಗಳೂ ವಿನಾಯಕ ಸ್ತ್ರೀ ಶಕ್ತಿ ಸಂಘಕ್ಕೆ ಲಭಿಸಿವೆ.




ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಮತ್ತಿಗಟ್ಟಿಯ ವಿನಾಯಕ ಸ್ತ್ರೀ ಶಕ್ತಿ ಸಂಘದ ಮಹಿಳೆಯರು ರಾಗಿಯ 77 ತಳಿಗಳ ಬೀಜ ಬೆಳೆದು ಗಮನ ಸೆಳೆದಿದ್ದಾರೆ

"ರಾಗಿಯ 77 ತಳಿಯಲ್ಲಿ ಒಂದೊಂದು ತಳಿಯ 50-100 ಗ್ರಾಮ್‌ನಿಂದ ಒಟ್ಟಾರೆ 2 ಕ್ವಿಂಟಲ್‌ನಷ್ಟು ರಾಗಿಯ ಬೀಜವನ್ನು ಬೆಳೆದು ಕೊಡಲಾಗಿದೆ. ಇದರಿಂದ ನಮ್ಮ ನೆಲದ ಸಿರಿಧಾನ್ಯ ತಳಿಯ ಸಂರಕ್ಷಿಸಿದ ಸಂತೃಪ್ತಿಯೂ ನಮಗಿದೆ"

ರತ್ನಾ ಹೊಸಳ್ಳಿ, ವಿನಾಯಕ ಸ್ತ್ರೀ ಶಕ್ತಿ ಸಂಘದ ಸಂಚಾಲಕಿ





"ಕರ್ನಾಟಕ ರಾಜ್ಯ ಸರ್ಕಾರ ಸಮುದಾಯ ಬೀಜ ಬ್ಯಾಂಕ್ ಸ್ಥಾಪಿಸುವುದಾಗಿ ಬಜೆಟ್‌ನಲ್ಲಿ ಘೋಷಿಸಿದೆ. 77 ರಾಗಿ ತಳಿಗಳನ್ನು ಸಂರಕ್ಷಿಸುವಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿರುವ ವಿನಾಯಕ ಸ್ತ್ರೀ ಶಕ್ತಿ ಸಂಘದಂತ ಸ್ತ್ರೀ ಸ್ವಸಹಾಯ ಗುಂಪುಗಳಿಗೆ ಸವಲತ್ತು ಸಿಗಬೇಕು"

ಜಿ.ಕೃಷ್ಣಪ್ರಸಾದ, ಸಹಜ ಸಮೃದ್ಧ ನಿರ್ದೇಶಕ

ಬಿತ್ತಿ ಬೆಳೆದ ರಾಗಿ ತಳಿಗಳು...

ಮಳಲಿ ರಾಗಿ, 22 ತೆನೆ ರಾಗಿ, 23 ತೆನೆ ರಾಗಿ, ಪಿಚ್‌ಕಟ್ಟಿ ರಾಗಿ, ಕೆಂಪು ತೆನೆ ರಾಗಿ, ಬೆಟ್ಟದ ಕೆಳಗಿನ ರಾಗಿ, ಗುತ್ತಿ ರಾಗಿ, ಮೂರು ತಿಂಗಳ ರಾಗಿ, ಉಂಡೆ ರಾಗಿ, ಜಗಳೂರು ರಾಗಿ, ಹಸಿರು ಕಡ್ಡಿ ರಾಗಿ, ನಾಕು ರಾಗಿ, ಜೇನು ಮುಂಡಗ ರಾಗಿ, ಹಸಿರು ಕಂಬಿ ರಾಗಿ, ಮಧ್ಯಮ ರಾಗಿ, ಅಯ್ಯನ ರಾಗಿ, ಉಗಾಂಡಾ ರಾಗಿ, 140 ದಿನದ ರಾಗಿ, ಕೋಳಿ ಮೊಟ್ಟೆ ರಾಗಿ, ತೆನೆಮುದ್ದೆ ರಾಗಿ, ಬೊಂಡಾ ರಾಗಿ, ದೊಡ್ಡ ರಾಗಿ, ಹಾಲುಕುಳಿ ರಾಗಿ, ರಾಗಳ್ಳಿ-ಶಿವಳ್ಳಿ ರಾಗಿ, ಕಲ್ಲು ರಾಗಿ, ತೈದಳು ರಾಗಿ, ನೇಪಾಲ ರಾಗಿ, ಕರಿಕಡ್ಡಿ ರಾಗಿ, ನಾಶಿನಿ ರಾಗಿ, ಮಜ್ಜಿಗೆ ರಾಗಿ, ಯಾಡಾ ರಾಗಿ, ವಿಶಾಕಪಟ್ಟಣ ರಾಗಿ, ಗೆಜ್ಜೆ ರಾಗಿ, ಜೇನುಗೂಡು ರಾಗಿ, ಉದುರು ಮಲ್ಲಿಗೆ ರಾಗಿ, ಜಡೆ ರಾಗಿ, ಜೇನ ಗೌಡ್ರ ರಾಗಿ, ಬೆಣ್ಣೆ ಮುದ್ದೆ ರಾಗಿ ಸಮೇತ 77 ತಳಿಯ ರಾಗಿಯನ್ನು ವಿನಾಯಕ ಸ್ತ್ರೀ ಶಕ್ತಿ ಸಂಘದ ಮಹಿಳೆಯರು ಸಾಮೂಹಿಕ ಕೃಷಿಯಲ್ಲಿ ಬೆಳೆದಿದ್ದಾರೆ.



ತುಟಿಯ ಅಂದವೂ... ಆರೋಗ್ಯವೂ

ಕಾಳಜಿ

ಅಂದದ ಮುಖಾರವಿಂದಕೆ ಅಂದದ ತುಟಿಗಳೇ ಸೋಪಾನ. ಒಡೆದ, ಶುಷ್ಕ, ಒಣ ತುಟಿಗಳ ಸಮಸ್ಯೆ ಇರುವವರಿಗೆ ಇಲ್ಲಿವೆ ಕೆಲ ಟಿಪ್ಸ್...

ಅಧರಂ ಮಧುರಂ ವದನಂ ಮಧುರಂ

ಅಧರ ಮಧುರವಾಗಿದ್ದರೆನೇ ಮುಖವೂ ಮಧುರ ಎಂದೂ ಇದನ್ನು ಅರ್ಥೈಸಿಕೊಳ್ಳಬಹುದು. ಒಣಗಿದ, ಒಡೆದ, ಕಪ್ಪಾದ ತುಟಿಗಳಿದ್ದರೆ ಮುಖದ ಅಂದವೇ ಮರೆಮಾಚುವುದು. ಒಡೆದ ತುಟಿಯಿಂದ ಮೇಕಪ್ ಕೂಡ ಸೊಗಸಾಗಿ ಕಾಣದು. ಮೊದಲು ತುಟಿಗಳ ಅಂದವನ್ನೂ, ಆರೋಗ್ಯವನ್ನೂ ಹೆಚ್ಚಿಕೊಳ್ಳುವತ್ತ ಗಮನ ಹರಿಸಬೇಕು.

ಮುಖ ಮತ್ತು ದೇಹದ ಚರ್ಮದಂತೆಯೇ ತುಟಿಗಳು ಕೂಡ ಸೂರ್ಯನ ಕಿರಣಗಳಿಗೆ ಬಾಡುತ್ತವೆ. ಕೈಕಾಲು, ಮುಖವನ್ನು ಸೂರ್ಯನ ಕಿರಣಗಳಿಂದ ರಕ್ಷಿಸಲು ಸಾಕಷ್ಟು ಎಚ್ಚರಿಕೆ ವಹಿಸುವವರೂ ಕೆಲವೊಮ್ಮೆ ತುಟಿಗಳನ್ನು ಮರೆಯುತ್ತಾರೆ. ತುಟಿಗಳನ್ನು ಬಿಸಿಲಿನಿಂದ ರಕ್ಷಿಸಲು ಕನಿಷ್ಠ 15 SPF ಇರುವ ಸನ್‌ಸ್ಕ್ರೀನ್ ಬಳಸುವುದು ಬಹಳ ಮುಖ್ಯ.


ಮ್ಯಾಟ್ ಲಿಪ್‌ಸ್ಟಿಕ್: ಒಣ ತುಟಿ ಇರುವವರು ಮ್ಯಾಟ್ ಲಿಪ್‌ಸ್ಟಿಕ್‌ಗಳನ್ನು ಬಳಸದೇ ಇರುವುದು ಒಳ್ಳೆಯದು. ಇದೀಗ ಮ್ಯಾಟ್ ಲಿಪ್‌ಸ್ಟಿಕ್‌ಗಳೇ ಟ್ರೆಂಡ್‌ನಲ್ಲಿವೆ. ತುಟಿ ರಕ್ಷಿಸಲು ಲಿಪ್‌ಸ್ಟಿಕ್‌ಗೂ ಮೊದಲು ಹೈಡ್ರೇಟಿಂಗ್ ಪ್ರೈಮರ್‌ಗಳನ್ನು ಬಳಸಬಹುದು.

- **ಲಿಪ್ ಸ್ಕ್ರಬ್:** ಮಾರುಕಟ್ಟೆಯಲ್ಲಿ ಸಾಕಷ್ಟು ವಿಧಗಳ ಲಿಪ್ ಸ್ಕ್ರಬ್‌ಗಳು ಸಿಗುತ್ತವೆ. ಅವುಗಳಲ್ಲಿ ಅತ್ಯುತ್ತಮವಾದುದನ್ನು ಆರಿಸಿಕೊಳ್ಳುವ ಜವಾಬ್ದಾರಿ ನಿಮ್ಮದೇ. ಸಕ್ಕರೆಗೆ ಶೀಯಾ ಅಥವಾ ತೆಂಗಿನ ಎಣ್ಣೆಯನ್ನು ಸೇರಿಸಿ ತುಟಿಗಳನ್ನು ಸ್ಕ್ರಬ್ ಮಾಡಿಕೊಳ್ಳಬಹುದು. ಸ್ಟ್ರಾಬೆರಿ, ಬಾಳೆಹಣ್ಣು, ಆರೆಂಜ್, ಪುದಿನಾ, ಸೌತೆಕಾಯಿ, ಆಲೂಗಡ್ಡೆಯಂತಹ ಹಣ್ಣು ತರಕಾರಿಗಳನ್ನೂ ಸಹ ತುಟಿಗಳನ್ನು ಹೈಡ್ರೇಟ್ ಮಾಡಲು ಬಳಸಬಹುದು. ಕಣ್ಣಿನ ಮೇಲೆ ಸೌತೆಕಾಯಿ ಸ್ಲೈಸ್‌ಗಳನ್ನು ಇಡುವಂತೆಯೇ ತುಟಿಗಳ ಮಸಾಜ್‌ಗೂ ಸೌತೆ ಬಳಸಬಹುದು.
- **ಅಲೋವೆರಾ:** ಅಲೋವೆರಾ ಅಥವಾ ಲೋಳೆಸರದ ಉಪಯೋಗವಂತೂ ತಿಳಿದೇ ಇದೆ. ಲೋಳೆಸರವನ್ನು ತುಟಿಗಳ ಆರೈಕೆಗೂ ಬಳಸಬಹುದು. .ಉರಿಯೂತದ ಗುಣಲಕ್ಷಣಗಳು ಮತ್ತು ಹಿತವಾದ ಪರಿಣಾಮವು ಒಡೆದ ತುಟಿಗಳಿಗೆ ಚಿಕಿತ್ಸೆ ನೀಡಲು ಉತ್ತಮ ಆಯ್ಕೆಯಾಗಿದೆ.
- **ಒಳಗಿನ ಆರೈಕೆ:** ತುಟಿಗಳ ಅಂದ ಅಡಗಿರುವುದು ಬರೀ ಮೇಲಿನ ಆರೈಕೆಯಲ್ಲಿ ಅಲ್ಲ. ಒಳಗಿನಿಂದಲೂ ನೀವು ಆರೋಗ್ಯವಾಗಿದ್ದಾಗ ಮಾತ್ರ ಅಧರಗಳ ಅಂದ ಹೆಚ್ಚುವುದು. ಹೀಗಾಗಿ, ಸಾಕಷ್ಟು ನೀರು, ಜ್ಯೂಸ್ ಕುಡಿಯುವುದನ್ನು ರೂಢಿಸಿಕೊಳ್ಳಿ. ತರಕಾರಿ ಹಾಗೂ ಸೊಪ್ಪಿನ ಸೇವನೆ ಅಧಿಕವಾಗಿರಲಿ.

ಈ ಮೇಲಿನ ಮನೆಮದ್ದು ಹಾಗೂ ಆರೈಕೆಯಿಂದ ಒಡೆದ/ಒಣಗಿದ ತುಟಿಗಳ ಸಮಸ್ಯೆಗೆ ಮುಕ್ತಿ ಸಿಗಬಹುದು. ಒಂದು ವೇಳೆ ಇಷ್ಟೆಲ್ಲಾ ಮಾಡಿಯೂ ತುಟಿಗಳ ಸಮಸ್ಯೆ ಮುಂದುವರೆದರೆ ಚರ್ಮರೋಗ ವೈದ್ಯರನ್ನು ಭೇಟಿಯಾಗಬೇಕು. ಕೆಲವೊಮ್ಮೆ ಒಣ ಹವಾಮಾನದ ಹೊರತಾಗಿ ಬೇರೆ ಆರೋಗ್ಯ ತೊಡಕುಗಳ ಪರಿಣಾಮವೂ ಈ ರೀತಿಯ ಸಮಸ್ಯೆ ಕಾಣಿಸಿಕೊಂಡಿರುವ ಸಾಧ್ಯತೆ ಇರುತ್ತದೆ. ಅಲರ್ಜಿ, ಯೀಸ್ಟ್ ಸೋಂಕು ಅಥವಾ ಇತರೆ ಸಮಸ್ಯೆಗಳು ಶುಷ್ಕ, ಕಳಾಹೀನ, ಒಡೆದ ತುಟಿಗಳಿಗೆ ಕಾರಣವಾಗಿರಬಹುದು. ಇದನ್ನು ಚರ್ಮರೋಗ ವೈದ್ಯರು ನಿರ್ಧರಿಸುತ್ತಾರೆ.

ರಾತ್ರಿಯ ಆರೈಕೆ

ತುಟಿಗಳ ಅಂದವನ್ನೂ, ಆರೋಗ್ಯವನ್ನೂ ಕಾಪಾಡಲು ರಾತ್ರಿಯ ಆರೈಕೆಯೂ ಮುಖ್ಯ. ಮಲಗುವ ಮುನ್ನ, ನೈಸರ್ಗಿಕ ಜೇನುತುಪ್ಪ, ತೆಂಗಿನ ಎಣ್ಣೆ ಮತ್ತು ಬಾದಾಮಿ ಎಣ್ಣೆ... ಇದರಲ್ಲಿ ಯಾವುದನ್ನಾದರೂ ತುಟಿಗಳಿಗೆ ಹಚ್ಚಿ, ಮೃದುವಾಗಿ ಮಸಾಜ್ ಮಾಡಿದಾಗ ಅದರ ಹೊಳಪೇ ಬೇರೆ. ಮಾರನೇ ದಿನ ಬರೀ ಲಿಪ್‌ಬಾಮ್ ಆದರೂ ಸರಿ, ಲಿಪ್‌ಸ್ಟಿಕ್ ಆದರೂ ಸರಿ.



ಅಲೆಲೆ ಮೂಗುತಿ

ಫ್ಯಾಷನ್

ಗಾರ್ಗಿ ಸೃಷ್ಟೀಂದ್ರ

ದಿರಿಸಿಗೆ, ದೇಹಕ್ಕೆ ಎರಡಕ್ಕೂ ಹೊಂದುವ ಹಾಗೆ ಆಭರಣಗಳನ್ನು ಧರಿಸುವುದು ಟ್ರೆಂಡ್. ಸೆಳೆಯುವ ಆಭರಣಗಳಲ್ಲಿ ಮೂಗುತಿಯೂ ಒಂದು. ಮಹಿಳೆಯರಷ್ಟೆ ಅಲ್ಲ ಯುವಕರೂ ಮೂಗುತಿಯತ್ತ ಒಲವು ಬೆಳೆಸಿಕೊಳ್ಳುತ್ತಿರುವುದು ಹೊಸ ಫ್ಯಾಷನ್.

ಮೂಗುತಿಯೇ ಏಕೆ?

ಮೂಗುತಿ ತೊಡುವುದು ಸಂಪ್ರದಾಯಬದ್ಧ ಎನ್ನುವುದೆಲ್ಲ ಹಳತಾಯಿತು. ಆಧುನಿಕ ತೊಡುಗೆಗಳಿಗೂ ಸರಿ ಹೊಂದುವ ಮೂಗುತಿಗಳಿವೆ. ಮದುವೆಯಂಥ ಸಮಾರಂಭಕ್ಕೆ ಸೀರೆ ಉಟ್ಟಾಗ ಬಂಗಾರ ಅಥವಾ ಹವಳದ ಮೂಗುತಿ. ಜೀನ್ಸ್ ಪ್ಯಾಂಟ್- ಟಾಪ್ ಧರಿಸಿದಾಗ ಪುಟ್ಟ ಸ್ಟಡ್ ಅಥವಾ ಆಕ್ಸಿಡೈಸ್ಡ್ ಮೂಗುತಿ. ಹೀಗೆ ಎಲ್ಲಾ ದಿರಿಸಿಗೂ ಮೆರುಗು ನೀಡುತ್ತವೆ ಮೂಗುತಿಗಳು.

ಹೊಸದಾಗಿ ಮೂಗು ಚುಚ್ಚಿಸಿಕೊಳ್ಳುವರಿಗೆ ಸ್ಟಡ್‌ಗಳು ಸೂಕ್ತ. ನಿತ್ಯ ಬಳಕೆಗೆ ಆರಾಮ ಭಾವ ನೀಡುವ ಇವು ಸುಂದರವಾಗಿ ಕಾಣುತ್ತವೆ. ಇವುಗಳಲ್ಲಿ ಬಂಗಾರ, ಹರಳು, ವಜ್ರ ಹೀಗೆ ತರಹೇವಾರಿ ಸ್ಟಡ್‌ಗಳು ಮಾರುಕಟ್ಟೆಯಲ್ಲಿವೆ. ಇನ್ನು ಹೂಪ್ಸ್ ಎಂದು ಕರೆಯಲಾಗುವ ವೃತ್ತಾಕಾರದ ಮೂಗುತಿಗಳು ಸಣ್ಣದರಿಂದ ಶುರುವಾಗಿ ಮೂಗನ್ನೇ ಮುಚ್ಚುವಷ್ಟು ದೊಡ್ಡ ಗಾತ್ರದಲ್ಲೂ ಸಿಗುತ್ತಿವೆ. ಇನ್ನು ಕೇವಲ ಮೂಗಿನ ಇಕ್ಕೆಲಗಳಲ್ಲಷ್ಟೇ ಅಲ್ಲದೇ ಮೂಗಿನ ಮಧ್ಯಭಾಗಕ್ಕೆ 'ಸೆಪ್ಟಮ್' ಎಂಬ ಮೂಗುತಿ ಧರಿಸೋದು ಈಗಿನ ಟ್ರೆಂಡ್. ಚಪ್ಪಲಿಗಳಿಂದ ಹಿಡಿದು ಧರಿಸುವ ತೊಡುಗೆಯ ಬಣ್ಣಗಳವರೆಗೂ ಎಲ್ಲದರಲ್ಲೂ 'ಏಸ್ತೆಟಿಕ್ಸ್' ಹುಡುಕುವ ಹದಿಹರೆಯದವರು ಆಯ್ಕೆ ಮಾಡಿಕೊಂಡಿರುವ ಹೊಸ ದಾರಿ ಈ ಆಕ್ಸಿಡೈಸ್ಡ್ ಮೂಗುತಿಗಳು. ಜೆನ್-ಝಿ ಸ್ಟೈಲ್ ಐಕಾನ್‌ಗಳೆಂದೇ ಗುರುತಿಸಿಕೊಳ್ಳುವ ಎಮ್ಮಾ ಚೆಂಬರ್‌ಲೈನ್ ಹಾಗೂ ವಿಲ್ಲೋವ್ ಸ್ಮಿಥ್ ಅಂತಹ ಮಾಡೆಲ್‌ಗಳೂ ಮೂಗುತಿ ಹಾಕಲು ಶುರು ಮಾಡಿದಾಗಿನಿಂದ ಮಾರುಕಟ್ಟೆಯಲ್ಲಿ ಮೂಗುತಿಗಳಿಗೆ ಭರ್ಜರಿ ಬೇಡಿಕೆ ಬರುತ್ತಿದೆ.

'ಅನುಸರಣೆಯ ಜಗತ್ತಿನಲ್ಲಿ ಅನನ್ಯ'ವಾಗಿರೋದಕ್ಕೆ ಇಚ್ಛಿಸುವವರಿಗೆ ಮೂಗುತಿಯೊಂದು ಆಯ್ಕೆ. ಬಾಲಿವುಡ್‌ನಲ್ಲಿ ಹೊಸ ಹೊಸ ಫ್ಯಾಷನ್‌ಗಳಿಂದ ಸದಾ ಸುದ್ದಿಯಲ್ಲಿರುವ ರಣವೀರ್ ಸಿಂಗ್ ಕೂಡ ಫೋಟೊಶೂಟ್ ಒಂದರಲ್ಲಿ ಮೂಗುತಿಯನ್ನು ಧರಿಸಿ, ಸೌಂದರ್ಯ ವ್ಯಾಖ್ಯಾನದ ಎಲ್ಲೆ ಮುರಿದಿರುವಾಗ, ಇನ್ನೇಕೆ ತಡ?



ಆತ್ಮಗೌರವಕ್ಕೆ ಧಕ್ಕೆಯಾದರೆ...

ಕೌಟುಂಬಿಕ ದೌರ್ಜನ್ಯವನ್ನು ಸಂಸಾರದೊಳಗಿನ ಸಹಜ ಜಗಳಗಳು ಅಂದುಕೊಳ್ಳುವುದೇ ಮಹಿಳೆಯರು ಶೋಷಣೆಯ ಕೂಪದೊಳಗೆ ಉಳಿಯುವಂತೆ ಮಾಡುತ್ತಿವೆ. ಸಹನಾಮಯಿ ಮತ್ತು ಕ್ಷಮಯಾಧರಿತ್ರಿ ಎಂಬ ಎರಡು ಅತಿಶಯೋಕ್ತಿಯ ಮಾತುಗಳ ಹಿಂದೆ ದೌರ್ಜನ್ಯವೂ ಅಡಗಿದೆ..

ರಶ್ಮಿ ಎಸ್

'ಬಹುತೇಕ ಹೆಣ್ಣುಮಕ್ಕಳಿಗೆ ಇದು ಕೌಟುಂಬಿಕ ದೌರ್ಜನ್ಯ ಎನ್ನುವ ಪರಿಕಲ್ಪನೆಯೇ ಇರುವುದಿಲ್ಲ, ಮೊದಲು ಈ ಬಗ್ಗೆ ಜಾಗೃತಿ ಮೂಡಿಸಬೇಕಾಗಿದೆ' ಎಂದು ನಿವೃತ್ತ ನ್ಯಾಯಮೂರ್ತಿ ಮಂಜುಳಾ ಚೆಲ್ಲೂರ್ ಹೇಗೆ ಮಹಿಳೆಯರು ಈಗಲೂ ಸಾಮಾಜಿಕವಾಗಿ ಶೋಷಣೆಗೆ ಒಳಗಾಗುತ್ತಿದ್ದಾರೆ ಎಂಬುದನ್ನು ಬಿಡಿಸಿ ಹೇಳಿದರು.

ಪ್ರಜಾವಾಣಿಯೊಂದಿಗೆ ಮಾತಿಗಿಳಿದ ಅವರು ಭಾರತೀಯ ಮಹಿಳೆಯರು ಕೌಟುಂಬಿಕ ದೌರ್ಜನ್ಯ ಪ್ರಕರಣ ದಾಖಲಿಸದೇ ಇರುವ ಕುರಿತು ವಿಶ್ಲೇಷಿಸಿದರು. ಯಾಕೆ ಹೀಗೆ ಎಂಬುದನ್ನು ಅವರ ಮಾತಿನಲ್ಲಿಯೇ ಕೇಳಿ..

.ನಮ್ಮ ಭಾರತೀಯ ಕುಟುಂಬದ ಚೌಕಟ್ಟೇ ಹಂಗಿದೆ. ಗಂಡ ಹೊಡೆದರು, ಬೈದರೂ, ಹೀಗಳೆದರೂ ಅದು ಸಹಜ ಎನ್ನುವ ಸ್ಥಿತಯಲ್ಲಿಯೇ ಇದೆ. ಬಹುತೇಕ ಮಹಿಳೆಯರಿಗೆ ಇದು ಸಹ ಗಂಡನ 'ಕರ್ತವ್ಯ' ಎಂತಲೇ ಭಾವಿಸಿರುತ್ತಾರೆ. ಸಂಸಾರದಲ್ಲಿ ಹೊಡೆತ ಬಡಿತ ಇದ್ದದ್ದೇ ಎಂದೇ ನಂಬಿರುತ್ತಾರೆ. ಅದೇ ಕಾರಣಕ್ಕೆ ದೌರ್ಜನ್ಯವನ್ನೂ ಒಪ್ಪಿಕೊಳ್ಳುತ್ತಾರೆ. ದೂರಬೇಕು ಎನ್ನುವುದೂ ಅವರ ಪ್ರಜ್ಞೆಗೆ ಬರುವುದಿಲ್ಲ' ಇದೇ ನಮ್ಮ ಮಹಿಳೆಯರು ಶೋಷಣೆಗೆ ಒಳಗಾಗುವ ಮೂಲ ಕಾರಣ.

ದೈಹಿಕ ಹಲ್ಲೆ ಮಾತ್ರವಲ್ಲ, ಮಾನಸಿಕ ಕ್ಷೋಭೆಯನ್ನೂ ದೌರ್ಜನ್ಯವೆಂದೇ ಪರಿಗಣಿಸಲಾಗುತ್ತದೆ. ನಿಮ್ಮನ್ನು ಹೀಗಳೆಯುವ, ನಿಮ್ಮನ್ನು ಕ್ಷೋಭೆಗೆ ಒಳಪಡಿಸುವ, ಅವಮಾನಿಸುವ, ಅನುಮಾನಿಸುವ ಯಾವುದೇ ವರ್ತನೆಯನ್ನೂ ಕೌಟುಂಬಿಕ ದೌರ್ಜನ್ಯಕ್ಕೆ ತರಬಹುದಾಗಿದೆ.

ಶೋಚನೀಯ ಸ್ಥಿತಿ ಎಂದರೆ ಈಗಲೂ ಹೆಣ್ಣುಮಕ್ಕಳು ತಮ್ಮ ಮೇಲೆ ಆಗುವ ಹಲ್ಲೆಯನ್ನು ಕಾಲು ಜಾರಿ ಬಿದ್ದೆವೆಂದೋ, ತಲೆಸುತ್ತಿ ಬಿದ್ದು ಗಾಯವಾಯಿತೆಂದೋ ಹೇಳುತ್ತಾರೆ. ಸುಟ್ಟ ಬರೆಗಳ ಗಾಯಗಳಿದ್ದಾಗಲೂ ಕಾವಲಿ ಕೈಜಾರಿತೆಂದು ಹೇಳುವವರಿದ್ದಾರೆ.

ಹೀಗೆ ವೈದ್ಯರ ಬಳಿ ಹೋಗುವ ಪ್ರಸಂಗ ಬಂದಾಗಲಂತೂ ಮಹಿಳೆಯರು ವೈದ್ಯಕೀಯ ದಾಖಲಾತಿಯನ್ನು ಪಡೆಯಬೇಕು. ಪ್ರಕರಣ ದಾಖಲಿಸದಿದ್ದರೂ ಈ ವೈದ್ಯಕೀಯ ದಾಖಲಾತಿ ಇದ್ದಾಗ ಹಲ್ಲೆ ಮಾಡಿದ ಪುರುಷರು ಚೂರು ಹದ್ದುಬಸ್ತಿನಲ್ಲಿರುತ್ತಾರೆ. ಯಾವುದಕ್ಕೂ ಇನ್ನೊಮ್ಮೆ ಯೋಚಿಸತೊಡಗುತ್ತಾರೆ. ಮಹಿಳೆಯರು ಜಾಗೃತರಾಗಿದ್ದಾರೆ. ಅವರನ್ನು ಇನ್ನು ಬಲದಿಂದ ಹಣಿಯಲಾಗುವುದಿಲ್ಲ ಎಂಬ ಸಂದೇಶ ಒಂದು ಹರಡಿದರೂ ಸಾಕು, ಬಹುತೇಕ ಜನರು ಹಿಮ್ಮೆಟ್ಟುತ್ತಾರೆ. ಆದರೆ ನಮ್ಮಲ್ಲಿ ವೈದ್ಯರ ಬಳಿಯೂ ಅಷ್ಟೇ ಏಕೆ, ಅಮ್ಮ ಸಹೋದದರ ಬಳಿಯೂ ಸುಳ್ಳು ಹೇಳುತ್ತಾರೆ. ಗಂಡನ ಹಿಂಸೆಯ ಕುರಿತು ಮಾತಾಡುವುದೇ ಹೆಣ್ಣುಮಕ್ಕಳು ತಮಗೆ ಅವಮಾನ ಎಂದುಕೊಳ್ಳುತ್ತಾರೆ. ಈ ಯೋಚನಾ ಸರಣಿ ಬದಲಾಗಬೇಕಿದೆ. ಇದು ಗಂಡುಮಕ್ಕಳ ಅವಮಾನ. ಹೆಣ್ಣುಮಕ್ಕಳನ್ನು ಗೌರವಿಸದ ಪುರುಷರಿಗೆ ಆಗುವ ಅವಮಾನ ಎಂದುಕೊಳ್ಳಬೇಕು.

ದುಃಖದ ಸಂಗತಿಯೆಂದರೆ ಬಹುತೇಕ ಓದು ಬರೆಹ ಬಲ್ಲ ಮಹಿಳೆಯರೇ, ಮನೆಯಲ್ಲಿ ಶಾಂತಿ ಇರಲೆಂಬ ವಾದಿಂದ ಹಿಂಜರಿಯತ್ತಾರೆ. ಮತ್ತೆ ಮತ್ತೆ ಇಂಥ ದಬ್ಬಾಳಿಕೆಗೆ ಒಳಗಾಗುತ್ತಾರೆ. ದಬ್ಬಾಳಿಕೆ ಮಾಡುವ ಗಂಡುಮಕ್ಕಳಿಗೆ ಚಿಕಿತ್ಸೆಯ ಅಥವಾ ಸಮಾಲೋಚನೆಯ ಅಗತ್ಯವಿದ್ದಾಗಲೂ ಅವರ ಪುರುಷ ಅಹಮಿಕೆ ಬೆಳೆಯಲು ಆಸ್ಪದ ನೀಡುತ್ತಾರೆ. ಪುರುಷಾಹಂಕಾರದ ಅತಿದೊಡ್ಡ ಸಂಕೇತವೆಂದರೆ ಮಹಿಳೆಯರ ಮೇಲೆ ಕೈ ಮಾಡುವುದು, ನಿಯಂತ್ರಿಸಲು ಯತ್ನಿಸುವುದು.

ಮಹಿಳೆಯರ ಸಂಬಳದ ಮೇಲೆ ನಿಯಂತ್ರಣ, ಸಾಲ, ಖರ್ಚು, ವೆಚ್ಚಗಳನ್ನು ನಿಯಂತ್ರಿಸುವುದು, ಅವಳ ಚಾರಿತ್ರ್ಯವನ್ನು ಪ್ರಶ್ನಿಸುವುದು, ಎದೆಗುಂದುವಂತೆ ಮಾಡುವುದು, ಹೆತ್ತವರೊಂದಿಗೆ ಮಾತಾಡದಂತೆ, ಸ್ನೇಹಿತರೊಂದಿಗೆ ಬೆರೆಯದಂತೆ ತಡೆಯುವುದು, ಇವೆಲ್ಲವೂ ಕೌಟುಂಬಿಕ ದೌರ್ಜನ್ಯಗಳೇ ಆಗಿವೆ.

ಸ್ವಭಾವತಃ ಗಂಡುಮಕ್ಕಳು ದಬ್ಬಾಳಿಕೆ ಮಾಡುವವರೇ ಆಗಿದ್ದರೆ ಎಚ್ಚರದಿಂದ ನಿಭಾಯಿಸಬೇಕು. ಆಗಾಗ ದೌರ್ಜನ್ಯವೆಸಗುತ್ತಿದ್ದರೆ, ಮತ್ತೆ ಮತ್ತೆ ಪ್ರೀತಿಸುತ್ತ, ಮತ್ತೆ ಯಾವಾಗಲಾದರೂ ದೌರ್ಜನ್ಯ ಎಸಗುತ್ತಿದ್ದರೆ, ಅವರಿಗೆ ಚಿಕಿತ್ಸೆಯ ಅಗತ್ಯವಿದೆ ಎಂಬುದನ್ನು ಮನಗಾಣಬೇಕು.

ಮಹಿಳೆಯರೆಲ್ಲ ನೆನಪಿಟ್ಟುಕೊಳ್ಳಬೇಕಿರುವುದು ಒಂದೇ ಮಾತು, ನಮ್ಮ ಆತ್ಮಗೌರವಕ್ಕೆ ಧಕ್ಕೆಯಾದರೆ, ದೈಹಿಕವಾಗಿ ಹಲ್ಲೆ ಮಾಡಿದರೆ ಅದು ದೌರ್ಜನ್ಯವೇ. ಅದು ಗಂಡ, ಸಹೋದರ ಅಥವಾ ತಂದೆಯೂ ಆಗಿರಬಹುದು. ತಾಯಿ, ಅತ್ತೆ ಅಥವಾ ಇನ್ನಾರಾದರೂ ಆಗಿರಬಹುದು. ಮೊದಲು ಆ ಬಗ್ಗೆ ಮಾತನಾಡುವುದು ಕಲಿಯಿರಿ. ಹಿಂಸೆಯನುಭವಿಸಿ ಎಂದು ಯಾವ ಸಮಾಜವೂ ಹೇಳುವುದಿಲ್ಲ. ಹಿಂಸೆಯನುಭವಿಸಲೆಂದು ಯಾರೂ ಹುಟ್ಟಿರುವುದಿಲ್ಲ. ಮಾತಾಡಿ ಅಗತ್ಯವಿದ್ದಾಗ ದೂರು ದಾಖಲಿಸಲೂ ಹಿಂಜರಿಯದಿರಿ' ಎಂದು ಹೇಳುತ್ತ ಮಾತು ಮುಗಿಸಿದರು. ಕೊನೆಯ ಎರಡು ವಾಕ್ಯಗಳು ನೆನಪಿನಲ್ಲಿ ಉಳಿದರೆ ಈ ಕೌಟುಂಬಿಕ ಹಿಂಸೆಯಿಂದ ದೂರ ಇರಬಹುದು ಎನ್ನುತ್ತ ನಕ್ಕರು.



ಮಂಜುಳಾ ಚೆಲ್ಲೂರ್



ರಸಾಸ್ವಾದ

ಬೆಂಡೆಕಾಯಿ ಪಲ್ಯ ಎಂದಾಕ್ಷಣ ಮೂಗು ಮುರಿಯುವವರಿಗೆ, ಅಮ್ಮಾ ಬೆಂಡೆಕಾಯಿ ಪಲ್ಯ ಇದ್ದರೆ ನಾ ಊಟ ಮಾಡಾಕ ಒಲ್ಲೆ ಎಂದು ಮೊಂಡುತನ ಮಾಡುವ ಮಕ್ಕಳಿಗೆ ಇಷ್ಟವಾಗುವ, ಇಳಿ ಸಂಜೆ ಹೊತ್ತಿಗೆ ಚಹಾದ ಜೊತೆ ಬಾಯಿ ಚಪ್ಪರಿಸಿಕೊಂಡು ತಿನ್ನಲೂ, ಮಳೆ, ಚಳಿಗಾಲಕ್ಕೂ ಬಾಯಿಗೆ ರುಚಿ ನೀಡುವ ಈ ಬೆಂಡೆಕಾಯಿ ಕುರುಕಲು ತಿನಿಸನ್ನು ಮನೆಯಲ್ಲಿ ನೀವು ಒಮ್ಮೆ ಮಾಡಿ ನೋಡಿ. ಮತ್ತೆ ಮತ್ತೆ ಬೇಕೆನ್ನಿಸುತ್ತದೆ. ಬೆಂಡೆಕಾಯಿ ವಿವಿಧ ರೆಸಿಪಿ ನೀಡಿದ್ದಾರೆ ಪೂರ್ಣಿಮಾ ಗೊಂದೆನಾಯ್ಕರ

ಬೆಂಡೆ ಕುರ್‌ಕುರೆ



ಬೇಕಾಗುವ ಸಾಮಗ್ರಿಗಳು: ಬೆಂಡೆಕಾಯಿ (ಅರ್ಧ ಕೆಜಿ), ಎಣ್ಣೆ, ಒಂದು ಕಪ್ ಕಡ್ಲೆ ಹಿಟ್ಟು, ಮುಕ್ಕಾಲು ಕಪ್ಪು ಅಕ್ಕಿ ಹಿಟ್ಟು, ಎರಡು ಟೆಬಲ್ ಸ್ಪೂನ್ ಜೋಳದ ಹಿಟ್ಟು, ಗರಂ ಮಸಾಲೆ (ಒಂದು ಸ್ಪೂನ್), ತಿನ್ನೊ ಸೋಡಾ, ಕೆಂಪು ಕಾರದ ಪುಡಿ, ಕಾಳು ಮೆಣಸು ಪೌಡರ್, ಉಪ್ಪು.

ಮಾಡುವ ವಿಧಾನ: ತೊಳೆದು ಇಟ್ಟುಕೊಂಡ ಬೆಂಡೆಕಾಯಿಯನ್ನು ಸಣ್ಣಗೆ ಉದ್ದಕ್ಕೆ ಹೆಚ್ಚಿಕೊಳ್ಳಬೇಕು(ಒಂದು ಬೆಂಡೆಕಾಯಿಯನ್ನು ನಾಲ್ಕು ಭಾಗ). ಹೆಚ್ಚಿಟ್ಟುಕೊಂಡ ಬೆಂಡೆಕಾಯಿಗೆ ಕಡ್ಲೆ ಹಿಟ್ಟು, ಅಕ್ಕಿ ಹಿಟ್ಟು, ಜೋಳದ ಹಿಟ್ಟು ಹಾಕಬೇಕು. ನಂತರ ಅಡುಗೆ ಸೋಡಾ, ಕರಿಮೆಣಸಿನಪುಡಿ, ಅಚ್ಚ ಖಾರದ ಪುಡಿ, ರುಚಿಗೆ ತಕ್ಕಷ್ಟು ಉಪ್ಪು ಹಾಕಿ ನೀರು ಹಾಕದೆ ಮಿಶ್ರಣ ಮಾಡಬೇಕು. ಚೆನ್ನಾಗಿ ಮಸಾಲೆ ಪದಾರ್ಥಗಳು ಬೆಂಡೆಕಾಯಿಯೊಂದಿಗೆ ಮಿಶ್ರಣವಾದ ನಂತರ ಅವಶ್ಯಕತೆ ಇದ್ದರೆ ಮಾತ್ರ ನೀರು ಹಾಕಿ ಬೆರೆಸಬೇಕು. ನಂತರ ಒಲೆ ಮೇಲೆ ಒಂದು ಬಾಣಲೆಗೆ ಅಡುಗೆ ಎಣ್ಣೆ ಹಾಕಿ ಕಾಯಲು ಇಡಬೇಕು. ಎಣ್ಣೆ ಕಾಯ್ದ ನಂತರ ಮಿಶ್ರಣ ಮಾಡಿಟ್ಟುಕೊಂಡ ಬೆಂಡೆಕಾಯಿಯನ್ನು ಒಂದೊಂದೆ ಎಣ್ಣೆಗೆ ಹಾಕಿ ಕರೆದುಕೊಳ್ಳಬೇಕು. ಕೆಂಪು ವರ್ಣದಲ್ಲಿ ಬೆಂದನಂತರ ಒಂದು ತಟ್ಟೆಗೆ ತೆಗೆದುಕೊಳ್ಳಬೇಕು. ಬೆಂಡೆಕಾಯಿ ಕುರ್‌ಕುರೆ ತಿನ್ನಲು ಸಿದ್ಧವಾಗುತ್ತದೆ.

ಬೆಂಡೆಕಾಯಿ ಫ್ರೈ



ಬೇಕಾಗುವ ಸಾಮಗ್ರಿ: ಬೆಂಡೆಕಾಯಿ (ಅರ್ಧ ಕೆ.ಜಿ), ಎಣ್ಣೆ, ಪುಟಾಣಿ, ಕೆಂಪು ಕಾರದ ಪುಡಿ, ಸಕ್ಕರೆ ಪೌಡರ್, ಉಪ್ಪು, ತುರಿದ ಹಸಿ ಕೊಬ್ಬರಿ ಒಂದು ಕಪ್ಪ.

ಮಾಡುವ ವಿಧಾನ: ಮೊದಲು ಸ್ವಚ್ಛವಾಗಿ ಬೆಂಡೆಕಾಯಿಯನ್ನು ತೊಳೆದುಕೊಳ್ಳಬೇಕು. ಪಲ್ಯ ಮಾಡಲು ಹೆಚ್ಚಿಕೊಳ್ಳುವ ವಿಧಾನದಲ್ಲಿ ಬೆಂಡೆಕಾಯಿಯನ್ನು ದುಂಡಗೆ ಹೆಚ್ಚಿಕೊಳ್ಳಬೇಕು. ಒಲೆ ಮೇಲೆ ಎಣ್ಣೆ ಕಾಯಲು ಇಡಬೇಕು. ಕಾಯ್ದ ಎಣ್ಣೆಗೆ ಹೆಚ್ಚಿದ ಬೆಂಡೆಕಾಯಿ ಹಾಕಿ ಕೆಂಪು ವರ್ಣಕ್ಕೆ ಬರುವ ಹಾಗೆ ಕರಿದುಕೊಳ್ಳಬೇಕು. ಸರಿಯಾಗಿ ಬೆಂದ ನಂತರ ಒಂದು ಬಾಣಲೆಗೆ ಹಾಕಿ ಅದಕ್ಕೆ ಉಪ್ಪು, ಪುಠಾಣಿ (ಹುರಿಗಡಲೆಯ ಹುಡಿ)ಯನ್ನು ತರಿತರಿಯಾಗಿಸಿಕೊಂಡ ಹುಡಿಯೊಂದಿಗೆ, ಕೆಂಪು ಕಾರದ ಪುಡಿ, ಸಕ್ಕರೆ ಪುಡಿ ಹಾಕಿ ಮಿಶ್ರಣ ಮಾಡಬೇಕು. ನಂತರತೆಂಗಿನತುರಿ ಹಾಕಿ ಕಲಿಸಿದರೆ ಲೊಟ್ಟೆ ಹೊಡೆದು ತಿನ್ನುವಂಥ ಬೆಂಡೆಕಾಯಿ ಫ್ರೈ ರೆಡಿ.

ಹಣಕಾಸು ಇಲಾಖೆ ಒಪ್ಪಿಗೆ ಇಲ್ಲದಿದ್ದರೂ ಪ್ರಕ್ರಿಯೆ • ವಿಧಾನಪರಿಷತ್ ಸಚಿವಾಲಯದ ಕ್ರಮಕ್ಕೆ ಆಕ್ಷೇಪ

'ಡಿ' ಗ್ರೂಪ್ ಹುದ್ದೆಗಳ ನೇಮಕಾತಿ ವಿವಾದ

• ರವಿಪ್ರಕಾಶ್ ಎಸ್.

ಬೆಂಗಳೂರು: ಹಣಕಾಸು ಇಲಾಖೆಯ ಒಪ್ಪಿಗೆ ಪಡೆಯದೇ, ನೇಮಕಾತಿ ನಿಯಮಾವಳಿಗಳನ್ನೂ ಉಲ್ಲಂಘಿಸಿ 'ಡಿ' ಗ್ರೂಪ್‌ನ 29 ಮತ್ತು 3 ಚಾಲಕ ಹುದ್ದೆಗಳೂ ಸೇರಿ 32 ಹುದ್ದೆಗಳ ನೇಮಕಾತಿಗೆ ಮುಂದಾಗಿರುವ ವಿಧಾನಪರಿಷತ್ ಸಚಿವಾಲಯದ ಕ್ರಮ ವಿವಾದಕ್ಕೆ ಎಡೆ ಮಾಡಿಕೊಟ್ಟಿದೆ.

ಈ ಹುದ್ದೆಗಳ ನೇಮಕಕ್ಕೆ ಹಣಕಾಸು ಇಲಾಖೆ ಸ್ಪಷ್ಟವಾಗಿ ಅನುಮತಿ ನಿರಾಕರಿಸಿದೆ. ನೇಮಕಾತಿ ಸಂಬಂಧ ಅಧಿಸೂಚನೆಗಳನ್ನೂ ಹಿಂಪಡೆಯುವಂತೆಯೂ ಕಟ್ಟುನಿಟ್ಟಾಗಿ ಸೂಚಿಸಿದೆ. ಆದರೆ ವಿಧಾನಪರಿಷತ್ ಸಚಿವಾಲಯ ಮಾತ್ರ ಹಣಕಾಸು ಇಲಾಖೆಯ ನಿರ್ದೇಶನವನ್ನು ಕಡೆಗಣಿಸಿ ನೇಮಕಾತಿಗೆ ಅರ್ಜಿ ಆಹ್ವಾನಿಸಿದೆ.

ಪರಿಷತ್ ಸಚಿವಾಲಯದ ನೇಮಕಾತಿ ನಿಯಮಾವಳಿಯಲ್ಲಿ ಸಂದರ್ಶನದ ಮೂಲಕ ನೇಮಕಕ್ಕೆ ಅವಕಾಶವೇ ಇಲ್ಲ. ಮೆರಿಟ್ ಆಧಾರದಲ್ಲಿ ನೇರ ನೇಮಕಾತಿ ಮಾಡಿಕೊಳ್ಳಬೇಕು. ಆದರೆ, 'ಸಂದರ್ಶನ'ದ ಮೂಲಕ ನೇಮಕಾತಿ ಮಾಡಲು ಪರಿಷತ್ ಸಚಿವಾಲಯ ಮುಂದಾಗಿದೆ.

ಕರ್ನಾಟಕ ವಿಧಾನಪರಿಷತ್ ಸಚಿವಾಲಯ (ಅಧಿಕಾರಿಗಳು ಮತ್ತು ಸಿಬ್ಬಂದಿ ನೇಮಕಾತಿ ಸೇವಾ ಷರತ್ತುಗಳು) 2021 ನಿಯಮ 2022ರ ಏಪ್ರಿಲ್ 1ರಿಂದ ಜಾರಿಗೆ ಬಂದಿತು. ಸೆಕ್ಷನ್ 9ರ ಪ್ರಕಾರ ಗ್ರೂಪ್ 'ಡಿ' ಸಿಬ್ಬಂದಿ ನೇಮಕಾತಿಯ ಆಯ್ಕೆ ಪ್ರಕ್ರಿಯೆಯಲ್ಲಿ 'ಸಂದರ್ಶನ' ನಡೆಸುವ ಅಗತ್ಯವಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿದೆ. ಕೇಂದ್ರ ಸರ್ಕಾರವೂ 'ಸಿ' ಮತ್ತು 'ಡಿ' ಗುಂಪಿನ ಹುದ್ದೆಗಳಿಗೆ ಸಂದರ್ಶನವನ್ನು ರದ್ದುಪಡಿಸಿ 2015ರಲ್ಲಿಯೇ ಆದೇಶ ಹೊರಡಿಸಿತ್ತು. ಇದನ್ನು ಹಲವು ರಾಜ್ಯಗಳು ಅನುಸರಿಸುತ್ತಿವೆ. ನಮ್ಮ ರಾಜ್ಯದಲ್ಲೂ ಅದೇ ಪದ್ಧತಿ ಜಾರಿ ಬಂದಿದೆ. ಆದರೆ, ಪರಿಷತ್ ಸಚಿವಾಲಯವು ಸಂದರ್ಶನ ನಡೆಸುವ ಮೂಲಕ ಹೊಸ ಪರಂಪರೆಗೆ ನಾಂದಿ ಹಾಡಲು ಮುಂದಾಗಿದೆ ಎಂದು ಸಚಿವಾಲಯದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'ಸಂದರ್ಶನವನ್ನು ಕೈಬಿಟ್ಟು ಮೆರಿಟ್ ಆಧಾರದಲ್ಲಿ ನೇಮಕಾತಿ ಪ್ರಕ್ರಿಯೆ ನಡೆಸಬೇಕು. ಅದಲ್ಲದೆ ನೇಮಕಾತಿ ಸಂಬಂಧ ಹೊರಡಿಸಿರುವ ಅಧಿಸೂಚನೆಯನ್ನು ಕೂಡಲೇ ವಾಪಸ್ ಪಡೆದು ಹೊಸ ಅಧಿಸೂಚನೆ ಹೊರಡಿಸಬೇಕು' ಎಂದು ಹುದ್ದೆಯ ಆಕಾಂಕ್ಷಿಗಳು ಆಗ್ರಹಿಸಿದ್ದಾರೆ.

'ಮೆರಿಟ್ ಆಧಾರದಲ್ಲಿ ನೇಮಕಾತಿ ಮಾಡಿದರೆ ಭ್ರಷ್ಟಾಚಾರ ಮತ್ತು ಅಕ್ರಮಗಳಿಗೆ ಅವಕಾಶವಿರುವುದಿಲ್ಲ. ಸಂದರ್ಶನ ಭ್ರಷ್ಟಾಚಾರಕ್ಕೆ ಕಾರಣವಾಗುತ್ತದೆ. ನಿರುದ್ಯೋಗಿ ಯುವಕ–ಯುವತಿಯರು ಏಜೆಂಟರ ಕೈಗೆ ಸಿಲುಕಿ ಹಣ ಕೊಟ್ಟು ಮೋಸ ಹೋಗುವ ಸಾಧ್ಯತೆ ಇದೆ. ಭ್ರಷ್ಟಾಚಾರಕ್ಕೆ ಆಸ್ಪದ ಕೊಡುವುದನ್ನು ತಪ್ಪಿಸಲು ಹೊಸ ಅಧಿಸೂಚನೆ ಹೊರಡಿಸುವುದು ಸೂಕ್ತ' ಎಂದು ಆಕಾಂಕ್ಷಿಗಳು ಪ್ರತಿಪಾದಿಸಿದ್ದಾರೆ.

'ಅಧಿಸೂಚನೆ ಹಿಂಪಡೆಯಿರಿ'

'ವಿಧಾನಪರಿಷತ್ತಿನ ಸಚಿವಾಲಯದಲ್ಲಿ ಖಾಲಿ ಇರುವ ವಿವಿಧ ವೃಂದಗಳ ಹುದ್ದೆಗಳ ನೇರ ನೇಮಕಾತಿ ವಿಚಾರ ಇನ್ನೂ ಆರ್ಥಿಕ ಇಲಾಖೆ ಪರಿಶೀಲನೆಯಲ್ಲಿದೆ. ಈ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಇದುವರೆಗೆ ಒಪ್ಪಿಗೆ ನೀಡಿಲ್ಲ' ಎಂದು ಹಣಕಾಸು ಇಲಾಖೆಯು ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಮಾರ್ಚ್ 21ರಂದು ಪತ್ರ ಬರೆದಿದೆ.


'ಅನುಮತಿ ನೀಡದೇ ಇರುವುದು ಗಮನಕ್ಕೆ ಬಂದಿದ್ದರೂ ಸಚಿವಾಲಯ ಈ ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಿದೆ. ಇದು ಸರಿಯಲ್ಲ' ಎಂದು ಹೇಳಿದೆ.

'ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸುತ್ತೋಲೆಯಲ್ಲಿ ವಾಹನ ಚಾಲಕರು ಮತ್ತು ಗ್ರೂಪ್ 'ಡಿ' ವೃಂದಗಳಲ್ಲಿ ಖಾಲಿ ಇರುವ ಹುದ್ದೆಗಳ ಹಾಗೂ ಇನ್ನು ಮುಂದೆ ಖಾಲಿ ಆಗುವ ಹುದ್ದೆಗಳನ್ನು ಹೊರಗುತ್ತಿಗೆ ಮೂಲಕವೇ ಭರ್ತಿ ಮಾಡಿಕೊಳ್ಳಬೇಕು ಎಂದು ಸ್ಪಷ್ಟವಾಗಿ ತಿಳಿಸಿದ್ದು, ಇದಕ್ಕೆ ಸಂಬಂಧಿಸಿದ ಸುತ್ತೋಲೆಯನ್ನು ಎಲ್ಲ ಇಲಾಖೆಗಳು ಪಾಲಿಸುತ್ತಿವೆ' ಎಂದೂ ತಿಳಿಸಿದೆ.

'ಸಚಿವಾಲಯವು ಮಾರ್ಚ್ 4 ಮತ್ತು 12ರಂದು ಹೊರಡಿಸಿರುವ ಅಧಿಸೂಚನೆಗಳನ್ನು ಪೂರ್ಣ ನಿರ್ದೇಶನದಂತೆ ಪರಿಗಣಿಸಿ ಎಲ್ಲಾ ಆಡಳಿತ ಇಲಾಖೆಗಳು ಖಾಲಿ ಇರುವ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಾಧ್ಯತೆ ಇರುತ್ತದೆ. ಯಾವುದೇ ಹುದ್ದೆ ಭರ್ತಿ ಮಾಡಲು ಆರ್ಥಿಕ ಇಲಾಖೆಯ ಅನುಮತಿ ಕಡ್ಡಾಯ. ಈ ಎಲ್ಲ ವಿಚಾರಗಳ ಹಿನ್ನೆಲೆಯಲ್ಲಿ ಎರಡೂ ಅಧಿಸೂಚನೆಗಳನ್ನು ಹಿಂಪಡೆಯಬೇಕು' ಎಂದು ಇಲಾಖೆ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಕಟ್ಟುನಿಟ್ಟಿನಿಂದ ಆಯ್ಕೆಗೆ ಸೂಚನೆ

'ಸಿಬ್ಬಂದಿ ನೇಮಕಾತಿ ವಿಚಾರ ಪರಿಷತ್ ಕಾರ್ಯದರ್ಶಿಯವರಿಗೆ ಸಂಬಂಧಿಸಿದ್ದಾಗಿದೆ. ನೇರ ನೇಮಕಾತಿ ಬಿಟ್ಟು ಸಂದರ್ಶನದ ಮೂಲಕ ನಡೆಸಲು ಹೊರಟಿರುವುದು ನನ್ನ ಗಮನಕ್ಕೆ ಬಂದಿದೆ. ಈ ವಿಚಾರದ ಬಗ್ಗೆ ಕಾರ್ಯದರ್ಶಿ ಅವರನ್ನೂ ಪ್ರಶ್ನಿಸಿದ್ದೇನೆ' ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.



ಬಸವರಾಜ ಹೊರಟ್ಟಿ

'ಸಂದರ್ಶನದ ಮೂಲಕ ನೇಮಕಾತಿ ಎಂದು ಒಮ್ಮೆ ಅಧಿಸೂಚನೆ ಹೊರಡಿಸಿದ ಬಳಿಕ ಸಂದರ್ಶನದ ಮೂಲಕವೇ ನಡೆಸಬೇಕು ಎಂದು ಆಡಳಿತ ಮತ್ತು ಸಿಬ್ಬಂದಿ ಇಲಾಖೆ ತಿಳಿಸಿದೆ. ಒಟ್ಟು 7,500 ಅರ್ಜಿಗಳು ಬಂದಿವೆ. ಹೀಗಾಗಿ 1:5 ಅನುಪಾತದಂತೆ ಸಂದರ್ಶನ ನಡೆಸಬೇಕು. ಇಲ್ಲವೇ ಕೆಪಿಎಸ್‌ಸಿ ಯಾವ ವಿಧಾನ ಅನುಸರಿಸುತ್ತದೆಯೋ ಆ ರೀತಿ ನೇಮಕಾತಿ ಮಾಡಲು ಸೂಚಿಸಿದ್ದೇನೆ. ಯಾವುದೇ ಅಪವಾದಗಳಿಗೆ ಬರಬಾರದು' ಎಂದರು.

'ರಾಜಭವನ, ವಿಧಾನಸಭೆ ಮತ್ತು ಪರಿಷತ್‌ಗೆ ನೇಮಕಕ್ಕೆ ಹಣಕಾಸು ಇಲಾಖೆಯ ಒಪ್ಪಿಗೆ ಬೇಕಿಲ್ಲ. ಹಣಕಾಸು ಇಲಾಖೆ ಅಧಿಕಾರಿಗಳಿಗೆ ಆ ಮಾಹಿತಿ ಕೊರತೆಯಿಂದ ಪತ್ರ ಬರೆದಿದ್ದಾರೆ. ಈ ಸಂಬಂಧ ಹಣಕಾಸು ಇಲಾಖೆಗೆ ನೋಟಿಸ್ ನೀಡಿದ್ದೇನೆ' ಎಂದರು.

ಶಿಗ್ಗಾವಿ: 238 ಕ್ವಿಂಟಲ್ ಪಡಿತರ ಅಕ್ಕಿ ವಶ



ಲಾರಿಯಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ 238 ಕ್ವಿಂಟಲ್ ಪಡಿತರ ಅಕ್ಕಿಯನ್ನು ಹಾವೇರಿ ಜಿಲ್ಲೆ ಪೊಲೀಸರು ಶುಕ್ರವಾರ ವಶಕ್ಕೆ ಪಡೆದಿದ್ದಾರೆ

ಪ್ರಜಾವಾಣಿ ವಾರ್ತೆ

ಹಾವೇರಿ: ಪಡಿತರ ಅಕ್ಕಿಯನ್ನು ಲಾರಿಯಲ್ಲಿ ಅಕ್ರಮವಾಗಿ ಸಾಗಣೆ ಮಾಡುತ್ತಿದ್ದ ಸಂದರ್ಭದಲ್ಲಿ ಶಿಗ್ಗಾವಿ ತಾಲ್ಲೂಕಿನ ಬಂಕಾಪುರ ಟೋಲ್ ಹತ್ತಿರ ಆಹಾರ ನಿರೀಕ್ಷಕರು ಮತ್ತು ಪೊಲೀಸರು ಶುಕ್ರವಾರ ದಾಳಿ ನಡೆಸಿ, 238 ಕ್ವಿಂಟಲ್ ಅಕ್ಕಿ ಹಾಗೂ ಲಾರಿಯನ್ನು ವಶಪಡಿಸಿಕೊಂಡಿದ್ದಾರೆ.

ಶುಕ್ರವಾರ ಮಧ್ಯಾಹ್ನ 12.30ರ ವೇಳೆಯಲ್ಲಿ ಹುಬ್ಬಳ್ಳಿಯಿಂದ ರಾಷ್ಟ್ರೀಯ ಹೆದ್ದಾರಿ 48ರ ಮೂಲಕ ಬೆಂಗಳೂರು ಕಡೆ ಅಕ್ಕಿಯನ್ನು ಸಾಗಿಸುತ್ತಿದ್ದ ಸಂದರ್ಭ ಖಚಿತ ಮಾಹಿತಿ ಮೇರೆಗೆ ₹8.11 ಲಕ್ಷ ಮೌಲ್ಯದ 478 ಅಕ್ಕಿ ಚೀಲಗಳನ್ನು ವಶಕ್ಕೆ ಪಡೆಯಲಾಗಿದೆ.

ಡಿ.ಸಿ.ಆರ್.ಬಿಯ ಪಿಎಸ್ಐ ಕೃಷ್ಣಪ್ಪ ತೋಪಿನ ಮತ್ತು ಸಿಬ್ಬಂದಿ ವಿ.ಬಿ. ಕಾಳೆ, ಪ್ರಕಾಶ ದೇವಗಿರಿ, ಬೀರಪ್ಪ ಲಮಾಣಿ ಹಾಗೂ ಶಿಗ್ಗಾವಿ ಆಹಾರ ನಿರೀಕ್ಷಕರನ್ನು ಒಳಗೊಂಡ ತಂಡವು ಜಂಟಿ ಕಾರ್ಯಾಚರಣೆ ನಡೆಸಿ ಲಾರಿ ಚಾಲಕನನ್ನು ಬಂಧಿಸಿದೆ. ಬಂಕಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಅಕ್ರಮ ಸಾಗಣೆ ಬಗ್ಗೆ ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

7 ಸ್ಥಾನಕ್ಕೆ 70 'ಕೈ' ಆಕಾಂಕ್ಷಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಿಂದ ವಿಧಾನ ಪರಿಷತ್‌ನ 11 ಸ್ಥಾನಗಳಿಗೆ ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸ್ ಏಳು ಸ್ಥಾನಗಳಲ್ಲಿ ಗೆಲ್ಲುವ ಅವಕಾಶವಿದ್ದು, 70ಕ್ಕೂ ಹೆಚ್ಚು ಆಕಾಂಕ್ಷಿಗಳು ಮೇಲ್ಮನೆ ಪ್ರವೇಶಕ್ಕೆ ತೀವ್ರ ಪ್ರಯತ್ನ ನಡೆಸುತ್ತಿದ್ದಾರೆ.

ಜೂನ್ 17ಕ್ಕೆ ನಿವೃತ್ತರಾಗುವ 11 ಸದಸ್ಯರಲ್ಲಿ ಕಾಂಗ್ರೆಸ್‌ನ ನಾಲ್ವರು ಇದ್ದಾರೆ. ವಿಧಾನಸಭೆಯ ಈಗಿನ ಬಲಾಬಲದ ಆಧಾರದಲ್ಲಿ ಕಾಂಗ್ರೆಸ್‌ಗೆ ಏಳು ಸ್ಥಾನಗಳು ದೊರಕಲಿವೆ. ಸದಸ್ಯತ್ವದ ಅವಧಿ ಮುಗಿಯಲಿರುವ ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜು ಪುನರಾಯ್ಕೆಗಾಗಿ ವರಿಷ್ಠರ ಮನವೊಲಿಕೆಯಲ್ಲಿ ತೊಡಗಿದ್ದಾರೆ.

ಪರಿಷತ್‌ನ ಮಾಜಿ ಸಭಾಪತಿಗಳಾದ ವಿ.ಆರ್. ಸುದರ್ಶನ್, ಬಿ.ಎಲ್. ಶಂಕರ್ ಸೇರಿದಂತೆ ಪರಿಷತ್‌ನ 12ಕ್ಕೂ ಹೆಚ್ಚು ಮಾಜಿ ಸದಸ್ಯರು ಪುನಃ ಮೇಲ್ಮನೆ ಪ್ರವೇಶಿಸಲು ಬಯಸಿದವರ ಪಟ್ಟಿಯಲ್ಲಿದ್ದಾರೆ. ಐದಕ್ಕೂ ಹೆಚ್ಚು ಮಾಜಿ ಶಾಸಕರೂ ಪ್ರಯತ್ನ ನಡೆಸುತ್ತಿದ್ದಾರೆ. ಪಕ್ಷದ ವಿವಿಧ ಮುಂಚೂಣಿ ಘಟಕಗಳ ಪ್ರಮುಖರು, ಕೆಪಿಸಿಸಿ ಪದಾಧಿಕಾರಿಗಳು ಕೂಡ ಅವಕಾಶಕ್ಕಾಗಿ ಪ್ರಯತ್ನ ನಡೆಸುತ್ತಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಗ ಡಾ. ಯತೀಂದ್ರ ಸಿದ್ದರಾಮಯ್ಯ ಸೇರಿದಂತೆ ಕೆಲವರಿಗೆ ಕಾಂಗ್ರೆಸ್ ವರಿಷ್ಠರು ಹಿಂದೆಯೇ ಆಶ್ವಾಸನೆ ನೀಡಿದ್ದು, ಅವರಿಗೆ ಅವಕಾಶ ಕಲ್ಪಿಸುವ ಸಾಧ್ಯತೆಗಳಿವೆ. ಈ ಹಿಂದೆ ಪಕ್ಷದ ವರಿಷ್ಠರು ಭರವಸೆ ನೀಡಿರುವ ಆಕಾಂಕ್ಷಿಗಳ ಸಂಖ್ಯೆಯೇ 20ಕ್ಕೂ ಹೆಚ್ಚಿದೆ. ಇದರಿಂದಾಗಿ ಪರಿಷತ್ ಸದಸ್ಯ ಸ್ಥಾನಕ್ಕೆ ಅಭ್ಯರ್ಥಿಗಳ ಆಯ್ಕೆಗೆ ಭಾರಿ ಕಸರತ್ತು ನಡೆಸಬೇಕಾದ ಇಕ್ಕಟ್ಟಿಗೆ ಕಾಂಗ್ರೆಸ್ ನಾಯಕರು ಸಿಲುಕಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

'ಧರ್ಮ, ಜಾತಿ, ಉಪ ಜಾತಿ, ಪ್ರಾದೇಶಿಕತೆಯ ಆಧಾರದಲ್ಲಿ ಪರಿಷತ್ ಸದಸ್ಯ ಸ್ಥಾನಕ್ಕೆ ಬೇಡಿಕೆ ಇಡುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. 2018ರಲ್ಲಿ ಪರಿಷತ್ ಚುನಾವಣೆ ಸಂದರ್ಭದಲ್ಲಿ ಒಂದು ಸ್ಥಾನವನ್ನು ಪಕ್ಷದ ಸಂಘಟನೆಯಲ್ಲಿ ಸಕ್ರಿಯರಾಗಿರುವವರಿಗೆ ಮೀಸಲು ಇಡುವಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೂಚಿಸಿದ್ದರು. ಈಗಲೂ ಒಂದು ಸ್ಥಾನವನ್ನು ಸಂಘಟನೆಯಲ್ಲಿ ಸಕ್ರಿಯರಾಗಿರುವವರಿಗೆ ಮೀಸಲಿಡಬೇಕೆಂಬ ಬೇಡಿಕೆಯೂ ಬಲವಾಗಿದೆ' ಎಂದು ಕಾಂಗ್ರೆಸ್ ಮುಖಂಡರೊಬ್ಬರು ತಿಳಿಸಿದರು.

ಆಕಾಂಕ್ಷಿಗಳಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಹಿಂದೆಯೇ ಓಡಾಡುತ್ತಿದ್ದಾರೆ. ಎರಡೂ ಪಟ್ಟಿಗಳಲ್ಲಿ ತಮ್ಮ ಹೆಸರಿರುವಂತೆ ಮನವೊಲಿಸುವ ತಂತ್ರಗಾರಿಕೆಯನ್ನು ಹಲವರು ಅನುಸರಿಸುತ್ತಿದ್ದಾರೆ. ಎಐಸಿಸಿ ಪ್ರಮುಖರ ಮೂಲಕ ಪಟ್ಟಿಯಲ್ಲಿ ಸ್ಥಾನ ಪಡೆಯಲು ಕೆಲವರು ತಮ್ಮ ದೆಹಲಿ ಸಂಪರ್ಕ ಬಳಸುತ್ತಿದ್ದಾರೆ.

ಸಂಘದ ಹಿನ್ನೆಲೆ, ಪಕ್ಷನಿಷ್ಠೆಗೆ ಮಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿ ವಿಧಾನಸಭೆಯಿಂದ ವಿಧಾನಪರಿಷತ್‌ಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಸಂಘ ಪರಿವಾರದ ಹಿನ್ನೆಲೆ, ಪಕ್ಷ ನಿಷ್ಠೆ ಹೊಂದಿರುವವರಿಗೆ ಮತ್ತು ರಾಜಕೀಯವಾಗಿ ಹೆಚ್ಚು ಪ್ರಾತಿನಿಧ್ಯ ಸಿಗದ ಹಿಂದುಳಿದ ವರ್ಗದವರಿಗೆ ಆದ್ಯತೆ ನೀಡಲು ಬಿಜೆಪಿ ಚಿಂತನೆ ನಡೆಸಿದೆ.

11 ಸ್ಥಾನಗಳಿಗೆ ನಡೆಯಲಿರುವ ಚುನಾವಣೆಯಲ್ಲಿ ಬಿಜೆಪಿಯಿಂದ ಮೂವರಿಗೆ ಮಾತ್ರ ಅವಕಾಶ ಸಿಗಲಿದೆ. 40 ಮಂದಿ ಆಕಾಂಕ್ಷಿಗಳಿದ್ದಾರೆ. ಘಟಾನುಘಟಿ ನಾಯಕರ ಲಾಬಿ ನಡೆಸುತ್ತಿದ್ದರೂ ಈ ಬಾರಿ ಆಯ್ಕೆಯ ಮಾನದಂಡವೇ ಬೇರೆ ಆಗಿದೆ. ಆಯ್ಕೆ ಆದವರು ಪಕ್ಷಕ್ಕೆ ಹೆಚ್ಚಿನ ಶಕ್ತಿ ತುಂಬುವ ಮತ್ತು ತಮ್ಮ ಸಮುದಾಯಗಳಲ್ಲಿ ಪಕ್ಷದ ಪರ ಪರಿಣಾಮ ಬೀರುವ ಸಾಮರ್ಥ್ಯ ಹೊಂದಿರಬೇಕು ಎಂಬ ಚಿಂತನೆ ಪಕ್ಷದೊಳಗೆ ಬಲವಾಗುತ್ತಿದೆ ಎಂದು ಆ ಪಕ್ಷದ ಮೂಲಗಳು ಹೇಳಿವೆ.

ಈ ಹಿಂದಿನ ಹಲವರ ಆಯ್ಕೆಗಳು ಪಕ್ಷಕ್ಕೆ ಯಾವುದೇ ರೀತಿಯಲ್ಲಿ ಪ್ರಯೋಜನ ಆಗಲಿಲ್ಲ ಎಂಬುದು ಮನವರಿಕೆಯಾಗಿದೆ. ಇತರ ಪಕ್ಷಗಳಿಂದ ಬಂದವರಿಗೆ ಹಿಂದು–ಮುಂದು ನೋಡದೇ ಅವಕಾಶ ನೀಡಲಾಯಿತು. ಆದರೆ, ಅವರು ತಮ್ಮ ಅವಧಿ ಮುಗಿಯುತ್ತಿದ್ದಂತೆ ಗಂಟುಮೂಟೆ ಕಟ್ಟಿಕೊಂಡು ಕಾಂಗ್ರೆಸ್ ಸೇರಿದ್ದಾರೆ. ಇನ್ನು ಮುಂದೆ ಆ ರೀತಿ ಆಗದಂತೆ ಎಚ್ಚರಿಕೆ ವಹಿಸಬೇಕು ಎಂದು ತೇಜಸ್ವಿನಿ ಗೌಡ, ಕೆ.ಪಿ.ನಂಜುಂಡಿ ಅವರನ್ನು ಉಲ್ಲೇಖಿಸಿ ಪಕ್ಷದಲ್ಲಿ ಚರ್ಚೆ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

ಲೋಕಸಭಾ ಚುನಾವಣೆ ವೇಳೆಯಲ್ಲಿ ಟಿಕೆಟ್ ಸಿಗದೇ ಮುನಿಸಿಕೊಂಡವರಲ್ಲಿ ಕೆಲವರಿಗೆ ವಿಧಾನ ಪರಿಷತ್‌ನಲ್ಲಿ ಅವಕಾಶ ನೀಡಲಾಗುವುದು ಎಂದು ಭರವಸೆ ನೀಡಲಾಗಿತ್ತು. ಅವರಲ್ಲಿ ಪೈಕಿ ಜೆ.ಸಿ.ಮಾಧುಸ್ವಾಮಿ ಅವರಿಗೂ ಭರವಸೆ ನೀಡಲಾಗಿದೆ. ಅವರೂ ಕೂಡ ಪರಿಷತ್ ಪ್ರವೇಶಕ್ಕೆ ಆಕಾಂಕ್ಷಿಯಾಗಿದ್ದಾರೆ. ಆದರೆ, ಕಳೆದ ವಿಧಾನಸಭೆ ಚುನಾವಣೆಯಲ್ಲಿ ಸೋತವರಿಗೆ ಅವಕಾಶ ಕೊಡುವುದಿಲ್ಲ ಎಂಬ ನಿಯಮ ಅನುಸರಿಸಿದರೆ ಘಟಾನುಘಟಿಗಳಿಗೆ ಅವಕಾಶ ಸಿಗುವ ಸಾಧ್ಯತೆ ಇಲ್ಲ ಎಂದು ಮೂಲಗಳು ಹೇಳಿವೆ.

ಸದಸ್ಯತ್ವದ ಅವಧಿ ಮುಗಿಯಲಿರುವ ಸದಸ್ಯರ ಪೈಕಿ, ವಿರೋಧ ಪಕ್ಷದ ಮುಖ್ಯಸಚೇತಕರಾಗಿರುವ ಎನ್.ರವಿಕುಮಾರ್ ಅವರ ನಿರ್ವಹಣೆ ಬಗ್ಗೆ ಪಕ್ಷಕ್ಕೆ ತೃಪ್ತಿ ಇದೆ. ಸದನದ ಒಳಗೆ ಮತ್ತು ಹೊರಗೆ ಹೆಚ್ಚು ಸಕ್ರಿಯರಾಗಿರುವುದರಿಂದ ಅವರೊಬ್ಬರಿಗೆ ಮಾತ್ರ ಮತ್ತೊಮ್ಮೆ ಅವಕಾಶ ಸಿಗುವ ಸಾಧ್ಯತೆ ಹೆಚ್ಚು ಎಂದು ಮೂಲಗಳು ಹೇಳಿವೆ.

ಆಯೋಗಕ್ಕೆ ನಿರ್ದೇಶನ ಇಲ್ಲ

ಒಂದನೇ ಪುಟದಿಂದ

ಚುನಾವಣಾ ಪ್ರಕ್ರಿಯೆಯು ಈಗಾಗಲೇ ಚಾಲ್ತಿಯಲ್ಲಿ ಇರುವಾಗ ಮಧ್ಯಂತರ ಅರ್ಜಿಯನ್ನು ಸಲ್ಲಿಸಲಾಗಿದೆ. ಇದು ಪ್ರಕ್ರಿಯೆಯನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೆ ಒಂದು ಉತ್ತಮ ಉದಾಹರಣೆ ಎಂದು ಆಯೋಗದ ಪರ ವಕೀಲ ಮಣಿಂದರ್ ಸಿಂಗ್ ವಾದಿಸಿದರು.

ಚುನಾವಣಾ ಪ್ರಕ್ರಿಯೆಯ ಕುರಿತಾಗಿ ತಪ್ಪು ಆರೋಪಗಳನ್ನು ಆಧರಿಸಿ ಈ ಅರ್ಜಿ ಸಿದ್ಧಪಡಿಸಲಾಗಿದೆ. ಅರ್ಜಿದಾರರಿಗೆ ಭಾರಿ ಮೊತ್ತದ ದಂಡ ವಿಧಿಸಬೇಕು ಎಂದು ಸಿಂಗ್ ಕೋರಿದರು.

ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ (ಪಿಐಎಲ್) ವಿಚಾರದಲ್ಲಿ ನಿಯಮಗಳು ಹಾಗೂ ಪ್ರಕ್ರಿಯೆಗಳ ಪಾಲನೆಯನ್ನು ತೀರಾ ಕಟ್ಟುನಿಟ್ಟು ಮಾಡುವಂತಿಲ್ಲ ಎಂದು ಅರ್ಜಿದಾರರ ಪರ ವಕೀಲರು ಹೇಳಿದರು. ಇದಕ್ಕೆ ಪ್ರತಿಕ್ರಿಯೆ ನೀಡಿದ ಪೀಠವು, 'ಪಿಐಎಲ್‌ಗಳು ಇಂದು ಪ್ರಚಾರದ, ಖಾಸಗಿ ಆಯಾಮ ಹೊಂದಿರುವ, ಹಣದ ಹಿತಾಸಕ್ತಿ ಇರುವ ಅರ್ಜಿಗಳಾಗಿವೆ' ಎಂದು ಖೇದ ವ್ಯಕ್ತಪಡಿಸಿತು.

ಚುನಾವಣಾ ದಿನಾಂಕವನ್ನು ಘೋಷಿಸಿದ ದಿನವಾದ ಮಾರ್ಚ್ 16ಕ್ಕಿಂತ ಮೊದಲು ಕೋರ್ಟ್‌ಗೆ ಬರದೆ ಇದ್ದುದು ಏಕೆ ಎಂದು ಪೀಠವು ಅರ್ಜಿದಾರರನ್ನು ಪ್ರಶ್ನಿಸಿತು. ಚುನಾವಣಾ ಆಯೋಗದಿಂದ ಮತದಾನ ಪ್ರಮಾಣದ ಕುರಿತು ಮಾಹಿತಿ ಪ್ರಕಟವಾದ ನಂತರ ವಷ್ಟೇ ಈ ಮಧ್ಯಂತರ ಅರ್ಜಿ ಸಲ್ಲಿಸಲು ಸಾಧ್ಯವಿತ್ತು ಎಂದು ಅರ್ಜಿದಾರರ ಪರ ವಕೀಲ ದುಷ್ಯಂತ್ ದವೆ ತಿಳಿಸಿದರು.

ಮೊದಲ ಎರಡು ಹಂತಗಳ ಮತದಾನದ ಪ್ರಮಾಣದ ವಿವರವನ್ನು ಆಯೋಗವೇ ಪರಿಷ್ಕರಿಸಿದೆ ಎಂದು ಅವರು ಪೀಠದ ಗಮನಕ್ಕೆ ತಂದರು. ಮೊದಲು ಪ್ರಕಟಿಸುವ ಮತದಾನದ ಪ್ರಮಾಣದ ವಿವರವು ತಾತ್ಕಾಲಿಕ ಎಂದು ಸಿಂಗ್ ಸ್ಪಷ್ಟಪಡಿಸಿದರು.

ಸೆ. 22ಕ್ಕೆ ಪಿಎಸ್ಐ, ಅ.27ಕ್ಕೆ ವಿಎಒ ಪರೀಕ್ಷೆ

ಬೆಂಗಳೂರು: ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ), ಗ್ರಾಮ ಆಡಳಿತ ಅಧಿಕಾರಿ (ವಿಎಒ) ನೇಮಕಾತಿ ಪರೀಕ್ಷೆಯ ವೇಳಾಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸಿದೆ.

402 ಪಿಎಸ್‌ಐ ಹುದ್ದೆಗಳಿಗೆ ಸೆ.22ರಂದು, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಸಹಾಯಕ ಲೆಕ್ಕಿಗ, ಸಹಾಯಕ ಸಂಚಾರ ನಿರೀಕ್ಷಕ, ಕುಶಲಕರ್ಮಿ, ತಾಂತ್ರಿಕ ಸಹಾಯಕ ಸೇರಿ 36 ಹುದ್ದೆಗಳಿಗೆ ಜುಲೈ 12ರಿಂದ 14ರವರೆಗೆ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಸಹಾಯಕ ಎಂಜಿನಿಯರ್-ಸಿವಿಲ್, ಪ್ರಥಮ ದರ್ಜೆ ಲೆಕ್ಕ ಸಹಾಯಕರ 64 ಹುದ್ದೆಗಳಿಗೆ ಆ.11 ಪರೀಕ್ಷೆಗಳು ನಡೆಯಲಿವೆ.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ನಿರ್ವಾಹಕ- ದರ್ಜೆ-3 ಮೇಲ್ವಿಚಾರಕೇತರ 2,500 ಹುದ್ದೆಗಳಿಗೆ ಸೆ.1ರಂದು, 1 ಸಾವಿರ ಗ್ರಾಮ ಆಡಳಿತ ಅಧಿಕಾರಿ ಹುದ್ದೆಗಳಿಗೆ ಅ.27ರಂದು ವೇಳಾಪಟ್ಟಿ ನಿಗದಿ ಮಾಡಲಾಗಿದೆ.


ಮೈಸೂರಿನ ನಿರ್ದೇಶಕನಿಗೆ ಕಾನ್ ಪ್ರಶಸ್ತಿ

ಕಾನ್ (ಪಿಟಿಐ): ಮೈಸೂರಿನ ಡಾ. ಚಿದಾನಂದ ಎಸ್. ನಾಯ್ಕ್ ನಿರ್ದೇಶಿಸಿರುವ 'ಸೂರ್ಯಕಾಂತಿ ಹೂಗೆ ಮೊದಲು ಗೊತ್ತಾಗಿದ್ದು' ಎಂಬ ಕನ್ನಡ ಕಿರುಚಿತ್ರ ಪ್ರತಿಷ್ಠಿತ 77ನೇ ಕಾನ್ ಚಲನಚಿತ್ರೋತ್ಸವದಲ್ಲಿ ಅತ್ಯುತ್ತಮ ಕಿರುಚಿತ್ರ (ಲಾ ಸಿನೆಫ್) ವಿಭಾಗದಲ್ಲಿ ಪ್ರಶಸ್ತಿ ಗೆದ್ದಿದೆ.

ಇದು ಭಾರತಕ್ಕೆ ಸಿಕ್ಕ ಅತಿ ದೊಡ್ಡ ಗೌರವ ಕೂಡ ಹೌದು. ಈ ಕಿರುಚಿತ್ರಕ್ಕೆ ಮೊದಲ ಬಹುಮಾನವಾಗಿ 15,000 ಯೂರೊ(₹13.5 ಲಕ್ಷ) ಸಿಗಲಿದೆ.

ಪ್ರತಿ ದಿನ ಬೆಳಿಗ್ಗೆ ಸೂರ್ಯೋದಯಕ್ಕೆ ಕಾರಣವೆಂದು ಎಲ್ಲರೂ ನಂಬಿದ್ದ ಹುಂಜದೊಂದಿಗೆ ಅಜ್ಜಿ ಓಡಿಹೋಗುವ ಜನಪದ ಕಥಾವಸ್ತುವನ್ನು ಈ ಕಿರುಚಿತ್ರ ಹೊಂದಿದೆ.

ಚಿತ್ರ ನಿರ್ದೇಶಕನಾಗಿ ಬದಲಾದ ಚಿದಾನಂದ ಅವರು ಮೂಲತಃ ವೈದ್ಯ. ಪುಣೆಯ ಫಿಲ್ಮ್ ಆ್ಯಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಎಫ್‌ಟಿಐಐ) ದೂರದರ್ಶನ ವಿಭಾಗದಲ್ಲಿ ಒಂದು ವರ್ಷದ ಕೋರ್ಸ್ ಕಲಿಯುವಾಗ ಕೊನೆಯಲ್ಲಿ ಈ ಚಿತ್ರವನ್ನು ಅವರು ನಿರ್ದೇಶನ ಮಾಡಿದ್ದರು.



ಚಿದಾನಂದ ಎಸ್. ನಾಯ್ಕ್

ಎಫ್‌ಟಿಐಐ ಸಂಸ್ಥೆ ನಿರ್ಮಿಸಿರುವ ಈ ಕಿರುಚಿತ್ರದ ರಚನೆ ಹಾಗೂ ನಿರ್ದೇಶನ ಚಿದಾನಂದ ಎಸ್.ನಾಯ್ಕ್ ಅವರದ್ದು. ಇದರಲ್ಲಿ ಕನ್ನಡದ ಜನಪ್ರಿಯ ನಟ ಎಂ.ಎಸ್. ಜಹಾಂಗೀರ್ ಅಜ್ಜನಾಗಿ ನಟಿಸಿದ್ದಾರೆ. ವಿ.ಮನೋಜ್– ಸಂಕಲನ, ಸೂರಜ್ ಠಾಕೂರ್– ಛಾಯಾಗ್ರಹಣ, ಅಭಿಷೇಕ್ ಕದಂ ಅವರ ಶಬ್ದವಿನ್ಯಾಸ ಚಿತ್ರಕ್ಕಿದೆ.

ಲಾ ಸಿನೆಫ್ ವಿಭಾಗದಲ್ಲಿ ಜಗತ್ತಿನಾದ್ಯಂತ ಭಾಗವಹಿಸಿದ್ದ 2,263 ಕಿರುಚಿತ್ರಗಳಲ್ಲಿ 18 ಚಿತ್ರಗಳು ಅಂತಿಮ ಸುತ್ತಿಗೆ ಆಯ್ಕೆಯಾಗಿದ್ದವು. ಅವುಗಳಲ್ಲಿ ಇದ್ದ ಏಕೈಕ ಭಾರತೀಯ ಚಿತ್ರ ಇದಾಗಿತ್ತು. 'ಲಾ ಸಿನೆಫ್' ಬಹುಮಾನ ಗೆದ್ದ ಭಾರತದ ಎರಡನೇ ಕಿರುಚಿತ್ರವಿದು. 2020ರಲ್ಲಿ ಅಶ್ಮಿತಾ ಗುಹಾ ನಿಯೋಗಿ ನಿರ್ದೇಶನದ 'ಕ್ಯಾಟ್‌ಡಾಗ್' ಬಹುಮಾನ ಗೆದ್ದಿತ್ತು.

ಎರಡನೇ ಬಹುಮಾನವನ್ನು ಕೊಲಂಬಿಯಾ ವಿಶ್ವವಿದ್ಯಾಲಯದ ಅಸ್ಯ ಸೆಗಲೊವಿಚ್ ನಿರ್ದೇಶನದ 'ಔಟ್ ಆಫ್ ದ ವಿಡೊ ಥ್ರೂ ದ ವಾಲ್' ಮತ್ತು ಗ್ರೀಸ್‌ನ ಥೆಸಲೋನಿಕಿಯ ಅರಿಸ್ಟಾಟಲ್ ವಿಶ್ವವಿದ್ಯಾನಿಲಯದ ನಿಕೋಸ್ ಕೊಲಿಯೋಕೋಸ್ ಅವರು ನಿರ್ದೇಶಿಸಿರುವ 'ಚೋಸ್ ಶೀ ಲೆಫ್ಟ್ ಬಿಹೈಂಡ್' ಚಿತ್ರ ಹಂಚಿಕೊಂಡಿವೆ.

ಮೂರನೇ ಬಹುಮಾನವನ್ನು ಮೀರಠ್‌ನವರಾದ, ದೆಹಲಿ ಎನ್‌ಐಎಫ್‌ಟಿಯ ಮಾಜಿ ವಿದ್ಯಾರ್ಥಿನಿ ಮಾನಸಿ ಮಹೇಶ್ವರಿ ಅವರ ಆ್ಯನಿಮೇಶನ್ ಚಿತ್ರ 'ಬನ್ನಿ ಹುಡ್' ಗೆದ್ದಿದೆ. ಮಾನಸಿ ಅವರು ಈ ಚಿತ್ರವನ್ನು ಬ್ರಿಟನ್‌ನ ನ್ಯಾಷನಲ್ ಫಿಲ್ಮ್ ಆ್ಯಂಡ್ ಟೆಲಿವಿಷನ್ ಸ್ಕೂಲ್‌ನಲ್ಲಿ ನಿರ್ಮಿಸಿದ್ದಾರೆ.

ಬಹುಮಾನಿತ ಈ ಚಿತ್ರಗಳು ಫ್ರಾನ್ಸ್‌ನ ಚಿತ್ರಮಂದಿರಗಳಲ್ಲಿ ಜೂನ್ 3 ಮತ್ತು 4ರಂದು ಪ್ರದರ್ಶನವಾಗಲಿವೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಕೆಲಸವಿಲ್ಲದವರು ಯಾವತ್ತೂ ತಮಗೆ ಸಂಬಂಧವಿಲ್ಲದ ವಿಷಯಗಳ ಕುರಿತು ಮಾತನಾಡುತ್ತಾರೆ.

–ಪಾಟೀಲ ಪುಟ್ಟಪ್ಪ

ಅಂತರ್ಜಾಲ ಸೇವೆ ಸ್ಥಗಿತ ಒಪ್ಪತಕ್ಕ ನಡೆ ಅಲ್ಲ

ಅಂತರ್ಜಾಲ ಸೇವೆಯನ್ನು ಸ್ಥಗಿತಗೊಳಿಸುವ ವಿಚಾರದಲ್ಲಿ ಭಾರತವು ಸತತ ಆರನೆಯ ವರ್ಷದಲ್ಲಿಯೂ ಜಾಗತಿಕವಾಗಿ ಮುಂಚೂಣಿ ಸ್ಥಾನ ಪಡೆದಿದೆ. ಇದು ಹೆಮ್ಮೆಪಡಬೇಕಾದ ಸಂಗತಿಯೇನೂ ಅಲ್ಲ. ಭಾರತದಲ್ಲಿ ಎಷ್ಟು ಬಾರಿ ಅಂತರ್ಜಾಲ ಸೇವೆಯನ್ನು ಸ್ಥಗಿತಗೊಳಿಸಲಾಗಿತ್ತು, ಎಷ್ಟು ವಿಸ್ತಾರವಾದ ಪ್ರದೇಶಕ್ಕೆ, ಅವಧಿಗೆ ಅನ್ವಯವಾಗುವಂತೆ ಸ್ಥಗಿತಗೊಳಿಸಲಾಗಿತ್ತು ಎಂಬುದನ್ನು ಆಧರಿಸಿ ಈ ಮುಂಚೂಣಿ ಸ್ಥಾನವನ್ನು ನೀಡಲಾಗಿದೆ. ಜಾಗತಿಕ ಅಂತರ್ಜಾಲ ಸಂಘಟನೆಯಾದ 'ಕೀಪ್ ಇಟ್ ಆನ್' ನೀಡಿರುವ ಮಾಹಿತಿ ಪ್ರಕಾರ, ಭಾರತದಲ್ಲಿ ಕಳೆದ ವರ್ಷ 116 ಬಾರಿ ಅಂತರ್ಜಾಲ ಸೇವೆಯನ್ನು ಸ್ಥಗಿತಗೊಳಿಸಲಾಗಿತ್ತು. ಅಂತರ್ಜಾಲ ಸೇವೆಯು ಅತಿಹೆಚ್ಚು ಬಾರಿ ಸ್ಥಗಿತವಾಗಿದ್ದು ಮಣಿಪುರ ಹಾಗೂ ಪಂಜಾಬ್‌ನಲ್ಲಿ. ಅಂತರ್ಜಾಲ ಸೇವೆಯನ್ನು ಸೀಮಿತ ಸ್ಥಳಕ್ಕೆ ಅನ್ವಯವಾಗುವಂತೆ ಸ್ಥಗಿತಗೊಳಿಸುವ ಬದಲು, ದೊಡ್ಡ ಪ್ರದೇಶವೊಂದಕ್ಕೆ ಅನ್ವಯವಾಗುವಂತೆ ಸ್ಥಗಿತಗೊಳಿಸುವ ಪ್ರವೃತ್ತಿ ಹೆಚ್ಚಾಗುತ್ತಿದೆ ಎಂದು ಸಂಘಟನೆ ಸಿದ್ಧಪಡಿಸಿರುವ ವರದಿಯು ಹೇಳಿದೆ. ಮಣಿಪುರದಲ್ಲಿ ಈ ಸೇವೆಯನ್ನು 47 ಬಾರಿ ಸ್ಥಗಿತಗೊಳಿಸಲಾಗಿತ್ತು. ಪಂಜಾಬ್‌ನಲ್ಲಿ ಒಂದು ಬಾರಿ ರಾಜ್ಯದಾದ್ಯಂತ ಸೇವೆ ಸ್ಥಗಿತಗೊಳಿಸಲಾಗಿತ್ತು. ಮಣಿಪುರದಲ್ಲಿ 2023ರಲ್ಲಿ ಸೇವೆಯನ್ನು 212 ದಿನಗಳವರೆಗೆ ಸ್ಥಗಿತಗೊಳಿಸಲಾಗಿತ್ತು. 2023ರಲ್ಲಿ 13 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಸೇವೆಯನ್ನು ಸ್ಥಗಿತ ಮಾಡಲಾಗಿತ್ತು. ಅಂತರ್ಜಾಲ ಸೇವೆ ಸ್ಥಗಿತಗೊಳಿಸಿದ ನಿದರ್ಶನಗಳು ಹಾಗೂ ಸ್ಥಗಿತದ ಅವಧಿಯು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಸಾಗಿದೆ. ಅಂತರ್ಜಾಲ ಸೇವೆ ಸ್ಥಗಿತಗೊಳಿಸುವಲ್ಲಿ ಮುಂಚೂಣಿಯಲ್ಲಿ ಇರುವ ದೇಶಗಳ ಸಾಲಿನಲ್ಲಿ ಎರಡನೆಯ ಸ್ಥಾನದಲ್ಲಿ ಮ್ಯಾನ್ಮಾರ್ ಇದೆ. ಇಲ್ಲಿ 37 ಬಾರಿ ಸೇವೆ ಸ್ಥಗಿತಗೊಳಿಸಲಾಗಿತ್ತು. ಇದರ ನಂತರದ ಸ್ಥಾನಗಳಲ್ಲಿ ಇರಾನ್, ಪ್ಯಾಲೆಸ್ಟೀನ್ ಮತ್ತು ಉಕ್ರೇನ್ ಇವೆ. ಇದು, ಭಾರತವು ಪಡೆದಿರುವ ಸ್ಥಾನ ಎಂಥದ್ದು ಎಂಬುದನ್ನು ಹೇಳುವಂತಿದೆ.



ಅಂತರ್ಜಾಲ ಸೇವೆಯನ್ನು ಸ್ಥಗಿತಗೊಳಿಸುವುದರಿಂದ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನಿರಾಕರಿಸಿದಂತೆ ಆಗುತ್ತದೆ

ಅಂತರ್ಜಾಲ ಸೇವೆಯು ಇಂದು ಸಂವಹನಕ್ಕೆ ಅತ್ಯಂತ ಅಗತ್ಯ. ಭಾರತದಲ್ಲಿ 82.5 ಕೋಟಿಗೂ ಹೆಚ್ಚು ಜನ ಅಂತರ್ಜಾಲ ಸೇವೆಯನ್ನು ಬಳಸುತ್ತಿದ್ದಾರೆ. ಇದು ಜಗತ್ತಿನಲ್ಲಿ ಎರಡನೆಯ ಅತಿದೊಡ್ಡ ಅಂತರ್ಜಾಲ ಬಳಕೆದಾರರ ಸಮೂಹ. 2023ರಲ್ಲಿ ದೇಶದಲ್ಲಿ ಅಂತರ್ಜಾಲ ಬಳಕೆದಾರರ ಪ್ರಮಾಣವು ಅದರ ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡ 8ರಷ್ಟು ಬೆಳವಣಿಗೆ ಕಂಡಿದೆ. ಡಿಜಿಟಲ್ ಮಾಧ್ಯಮದ ಮೂಲಕ ಮನರಂಜನಾ ಕಾರ್ಯಕ್ರಮಗಳನ್ನು ವೀಕ್ಷಿಸುವುದು, ಸಂವಹನ ನಡೆಸುವುದು, ಸಾಮಾಜಿಕ ಜಾಲತಾಣಗಳನ್ನು ಬಳಕೆ ಮಾಡುವುದು ಈಗ ಬಹುತೇಕರ ಪ್ರತಿನಿತ್ಯದ ಜೀವನದ ಭಾಗ. ಅಂತರ್ಜಾಲ ಸೇವೆಯನ್ನು ಸ್ಥಗಿತಗೊಳಿಸಿದಾಗ ದಿನನಿತ್ಯದ ಸಹಜ ಚಟುವಟಿಕೆಗಳಿಗೆ ಅಡ್ಡಿ ಉಂಟಾಗುತ್ತದೆ. ಅದಕ್ಕಿಂತ ಮುಖ್ಯವಾಗಿ, ಅಂತರ್ಜಾಲ ಸೇವೆಯನ್ನು ಸ್ಥಗಿತಗೊಳಿಸಿದಾಗ ಅಭಿವ್ಯಕ್ತಿ ಸ್ವಾತಂತ್ರ್ಯವನ್ನೂ ನಿರಾಕರಿಸಿದಂತೆ ಆಗುತ್ತದೆ. ಈ ಸೇವೆ ಸ್ಥಗಿತಗೊಂಡಾಗ ಮಾಹಿತಿ ಪ್ರಸರಣವು ನಿಲ್ಲುತ್ತದೆ. ಅದು ಸೆನ್ಸಾರ್‌ನಂತಹ ಕ್ರಮಕ್ಕೆ ಸಮನಾಗುತ್ತದೆ. ತಾನು ಅಂತರ್ಜಾಲ ಸೇವೆಯನ್ನು ಸ್ಥಗಿತಗೊಳಿಸುವುದರ ವಿರುದ್ಧ ಇರುವುದಾಗಿ ಸುಪ್ರೀಂ ಕೋರ್ಟ್ ಹಲವು ಬಾರಿ ಸ್ಪಷ್ಟಪಡಿಸಿದೆ. ಅನುರಾಧಾ ಭಾಸಿನ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ಸರ್ಕಾರವು ಹೇರುವ ಅಂತರ್ಜಾಲ ಸೇವೆಯ ಸ್ಥಗಿತದ ಆದೇಶವು ತಾತ್ಕಾಲಿಕವಾಗಿರಬೇಕು, ಸೀಮಿತವಾಗಿರಬೇಕು, ಕಾನೂನುಬದ್ಧವಾಗಿರಬೇಕು ಮತ್ತು ಸಮಸ್ಯೆಯೊಂದನ್ನು ನಿಭಾಯಿಸುವುದಕ್ಕೆ ಎಷ್ಟು ಬೇಕೋ ಅಷ್ಟು ಮಾತ್ರವೇ ಇರಬೇಕು ಎಂದು ಹೇಳಿದೆ. ಸರ್ಕಾರವು ತನ್ನ ಅಧಿಕಾರವನ್ನು ನ್ಯಾಯಸಮ್ಮತವಾಗಿಯೇ ಬಳಸಬೇಕು ಎಂಬ ದೃಷ್ಟಿಯಿಂದ ಸುಪ್ರೀಂ ಕೋರ್ಟ್ ಕೆಲವು ಷರತ್ತುಗಳನ್ನೂ ವಿಧಿಸಿದೆ. ಇವೆಲ್ಲವುಗಳ ನಡುವೆಯೂ, ಅಂತರ್ಜಾಲ ಸೇವೆಯನ್ನು ಸ್ಥಗಿತಗೊಳಿಸುವ ಪ್ರವೃತ್ತಿ ಹೆಚ್ಚಾಗಿದೆ.

ಅಂತರ್ಜಾಲ ಸೇವೆ ಸ್ಥಗಿತದ ಕ್ರಮದಿಂದಾಗಿ ಅತ್ಯಂತ ಹೆಚ್ಚು ಸಂಕಷ್ಟವನ್ನು ಅನುಭವಿಸಿದ್ದು ಕಾಶ್ಮೀರ ಮತ್ತು ಮಣಿಪುರ. ಸಂವಿಧಾನದ 370ನೆಯ ವಿಧಿಯ ಅಡಿಯಲ್ಲಿ ನೀಡಿದ್ದ ವಿಶೇಷ ಸ್ಥಾನಮಾನವನ್ನು ಹಿಂಪಡೆದ ನಂತರ 2019ರಲ್ಲಿ ಕಾಶ್ಮೀರದಲ್ಲಿ ಅತಿಹೆಚ್ಚಿನ ಅವಧಿಗೆ ಸೇವೆಯನ್ನು ಸ್ಥಗಿತಗೊಳಿಸಲಾಗಿತ್ತು. ಪ್ರತಿಭಟನೆಗಳನ್ನು ನಿಯಂತ್ರಿಸುವಲ್ಲಿ ಒಂದು ಅಸ್ತ್ರವೆಂಬಂತೆ ಅಂತರ್ಜಾಲ ಸೇವೆಯನ್ನು ಸ್ಥಗಿತಗೊಳಿಸುವುದೂ ಇದೆ. ರೈತರ ಪ್ರತಿಭಟನೆಗಳ ವಿಚಾರದಲ್ಲಿಯೂ ಈ ಅಸ್ತ್ರ ಪ್ರಯೋಗ ಆಗಿತ್ತು. ಆದರೆ ಕಾನೂನು ಮತ್ತು ಸುವ್ಯವಸ್ಥೆಯನ್ನು ನಿಯಂತ್ರಣಕ್ಕೆ ತರಲು ಇದನ್ನು ಬಳಸುವುದು ತರವಲ್ಲ. ಆ ರೀತಿ ಮಾಡುವುದು ವಾಸ್ತವದಲ್ಲಿ ಸಮಸ್ಯೆಯನ್ನೇ ಸೃಷ್ಟಿಸುತ್ತದೆ. ಸಹಜ ಸಂವಹನ ಹಾಗೂ ಮಾತುಕತೆಗಳನ್ನು ನಿರ್ಬಂಧಿಸಿದಾಗ ಸುಳ್ಳುಸುದ್ದಿಗಳು ಹೆಚ್ಚಾಗುತ್ತವೆ, ಅಧಿಕಾರ ವ್ಯವಸ್ಥೆಯ ಬಗ್ಗೆ ಅಪನಂಬಿಕೆ ಹೆಚ್ಚಾಗುತ್ತದೆ. ಇದರಿಂದ ಸಾಮಾಜಿಕ ಒತ್ತಡಗಳು ಹೆಚ್ಚುತ್ತವೆ, ನಾಗರಿಕ ಸಮಾಜ ದುರ್ಬಲಗೊಳ್ಳಲು ಕಾರಣವಾಗುತ್ತದೆ. ಆಗ ಪ್ರಭುತ್ವವು ಇನ್ನಷ್ಟು ನಿರಂಕುಶವಾಗಿ ವರ್ತಿಸುತ್ತದೆ. ಪ್ರಜಾತಂತ್ರ ವ್ಯವಸ್ಥೆಗಳಲ್ಲಿ ಈ ಬಗೆಯ ಸ್ಥಗಿತದ ಕ್ರಮವು ಬಹಳ ಕಡಿಮೆ. ಅಷ್ಟೇ ಅಲ್ಲ, ಭಾರತಕ್ಕೆ ಹೋಲಿಸಿದರೆ, ಸರ್ವಾಧಿಕಾರ ಇರುವ ದೇಶಗಳಲ್ಲಿ ಹಾಗೂ ಕಲಹಪೀಡಿತ ದೇಶಗಳಲ್ಲಿ ಕೂಡ ಈ ಬಗೆಯ ನಿರ್ಬಂಧಗಳು ಕಡಿಮೆ. ಅಂತರ್ಜಾಲ ಸೇವೆಯನ್ನು ಸ್ಥಗಿತಗೊಳಿಸುವುದರಿಂದ ಆಗುವ ಆರ್ಥಿಕ ನಷ್ಟ ಸಹ ಬಹಳ ಗಣನೀಯವಾದುದು. 2023ರ ಮೊದಲಾರ್ಧದಲ್ಲಿ ಅಂತರ್ಜಾಲ ಸೇವೆಯ ಸ್ಥಗಿತದಿಂದ ದೇಶಕ್ಕೆ 1.9 ಬಿಲಿಯನ್ ಡಾಲರ್ (ಅಂದಾಜು ₹ 15 ಸಾವಿರ ಕೋಟಿ) ನಷ್ಟವಾಗಿದೆ ಎಂಬ ವರದಿಗಳು ಇವೆ. ಈ ಸೇವೆಯನ್ನು ಸ್ಥಗಿತಗೊಳಿಸುವುದು ದೇಶದಲ್ಲಿ ಪ್ರಜಾತಂತ್ರವು ದುರ್ಬಲವಾಗುತ್ತಿರುವುದರ ಇನ್ನೊಂದು ಲಕ್ಷಣವಾಗಿ ಕಾಣುತ್ತಿದೆ.

ದಿನದ ಟ್ವೀಟ್

ನ್ಯಾಯ ಒದಗಿಸಬೇಕಾಗಿದೆ



ಪುಣೆಯ ಕಾರು ಅಪಘಾತ ಪ್ರಕರಣದಲ್ಲಿ ಮೃತಪಟ್ಟಿರುವ ಅನೀಶ್ ಮತ್ತು ಅಶ್ವಿನಿ ಅವರಿಗೆ ನ್ಯಾಯ ಒದಗಿಸುವಂತೆ ಆಗ್ರಹಿಸಬೇಕಾದುದು ನಮ್ಮ ಕರ್ತವ್ಯ. ಅಧಿಕಾರ ಮತ್ತು ಹಣವು ಕಾನೂನು ಹಾಗೂ ನ್ಯಾಯದ ಮೇಲೆ ಸವಾರಿ ಮಾಡಲು ಆಸ್ಪದ ನೀಡಬಾರದು.

ಊರ್ಮಿ, ವಕೀಲೆ

ಕಿಡಿನುಡಿ

ಮೌಂಟ್ ಎವರೆಸ್ಟ್‌ನ ಬೇಸ್ ಕ್ಯಾಂಪ್ ಈಗ ಜನರು, ಟೆಂಟ್‌ಗಳು, ತ್ಯಾಜ್ಯ ಮತ್ತು ಮಾನವನ ಮಲ ಮೂತ್ರಗಳಿಂದ ತುಂಬಿಹೋಗಿದೆ. ನೈಸರ್ಗಿಕ ವಿಸ್ಮಯದ ಮತ್ತೊಂದು ತಾಣ ಹಾಳಾಗಿದೆ.

ಸಾರಾ ಕಾನರ್

25 ವರ್ಷಗಳ ಹಿಂದೆ

ಮಂಗಳವಾರ, 25-5-1999

● **ಬಿಜೆಪಿ ವಿರುದ್ಧ ಜಯಲಲಿತಾ ಗದಾಪ್ರಹಾರ ಆರಂಭ**

ಚೆನ್ನೈ, ಮೇ 24 (ಪಿಟಿಐ)– ಎಐಎಡಿಎಂಕೆಯ ಪ್ರಧಾನ ಕಾರ್ಯದರ್ಶಿ ಜಯಲಲಿತಾ ಅವರು ಬಿಜೆಪಿ ವಿರುದ್ಧ ಹಲವಾರು ಆರೋಪಗಳನ್ನು ಮಾಡುವ ಮೂಲಕ ವ್ಯವಸ್ಥಿತ ಗದಾಪ್ರಹಾರವನ್ನು ಆರಂಭಿಸಿದ್ದಾರೆ.

ಕೆಲವು ಬಿಜೆಪಿ ನಾಯಕರು ದೇಶದ್ರೋಹಿ ಶಕ್ತಿಗಳು ಮತ್ತು ವಿದೇಶಿ ಶಸ್ತ್ರಾಸ್ತ್ರ ವ್ಯಾಪಾರಿಗಳ ಜತೆ ಸಂಬಂಧವನ್ನು ಹೊಂದಿದ್ದಾರೆ ಎಂದು ಹೇಳಿರುವ ಅವರು, ಇಷ್ಟರಲ್ಲೇ ಇದರ ಬಗ್ಗೆ ವಿವರ ನೀಡುವುದಾಗಿ ಬೆದರಿಕೆ ಹಾಕಿದ್ದಾರೆ.

ಪತ್ರಿಕಾ ಪ್ರಕಟಣೆಯೊಂದನ್ನು ನೀಡಿರುವ ಅವರು, ಭಾರತದ ಸಾರ್ವಭೌಮತ್ವದ ವಿರುದ್ಧ ಬಿಜೆಪಿಯಲ್ಲಿ ಹಿಂಸಾತ್ಮಕ ಗುಂಪೊಂದು ಕಾರ್ಯ ನಿರ್ವಹಿಸುತ್ತಿದೆ. ಆದರೆ ಜನರ ಮುಂದೆ ಸಾಧಾರಣ ನಾಯಕರನ್ನು ಮುಂದಿಟ್ಟು ಮುಗ್ಧತೆ ಮತ್ತು ಒಳ್ಳೆಯತನವನ್ನು ಪ್ರದರ್ಶಿಸಲಾಗುತ್ತಿದೆ ಎಂದು ಜಯಲಲಿತಾ ಆರೋಪಿಸಿದ್ದಾರೆ.

● **ರಾಜೀವ್ ಹತ್ಯೆ: ಗಲ್ಲು ಶಿಕ್ಷೆ ಜಾರಿ ತಡೆಗೆ ನಕಾರ**

ನವದೆಹಲಿ, ಮೇ 24 (ಪಿಟಿಐ)– ರಾಜೀವ್ ಗಾಂಧಿ ಹತ್ಯೆ ಪ್ರಕರಣದ ಆರೋಪಿಗಳು ತಮಗೆ ವಿಧಿಸಿರುವ ಗಲ್ಲು ಶಿಕ್ಷೆ ಆಜ್ಞೆಗೆ ತಡೆ ನೀಡಬೇಕು ಎಂದು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಇಂದು ಪುರಸ್ಕರಿಸಲಿಲ್ಲ.

50 ವರ್ಷಗಳ ಹಿಂದೆ

ಶನಿವಾರ, 25-5-1974

● **ಎಸ್ಸೆಸ್ಸೆಲ್ಸಿ ಪರೀಕ್ಷೆ ಕಡಿಮೆ ಫಲಿತಾಂಶ ಬರುವ ಶಾಲೆಗಳಿಗೆ ವಿಧಿಸುವ ದಂಡ ರದ್ದಿನ ಪರಿಶೀಲನೆ**

ಬೆಂಗಳೂರು, ಮೇ 24– ಶೇಕಡ 20ಕ್ಕಿಂತ ಕಡಿಮೆ ಎಸ್ಸೆಸ್ಸೆಲ್ಸಿ ಪರೀಕ್ಷಾ ಫಲಿತಾಂಶ ಬರುವ ಖಾಸಗಿ ಶಾಲೆಗಳಿಗೆ ವಿಧಿಸಲಾಗುತ್ತಿರುವ ದಂಡವನ್ನು ರದ್ದುಗೊಳಿಸುವ ಸಾಧ್ಯತೆ ಬಗ್ಗೆ ಸರ್ಕಾರ ಪರಿಶೀಲಿಸುವುದು ಎಂದು ಶಾಲಾ ಶಿಕ್ಷಣ ರಾಜ್ಯ ಮಂತ್ರಿ ಈವಾವಾಜ್ ಅವರು ಇಂದು ವಿಧಾನ ಪರಿಷತ್ತಿನಲ್ಲಿ ತಿಳಿಸಿದರು.

ಈ ಸಂಬಂಧದಲ್ಲಿ ಮಳ್ಳೂರು ಆನಂದರಾಯರು ಎತ್ತಿದ ಚರ್ಚೆಗೆ ಉತ್ತರ ನೀಡಿದ ವಾಜ್ ಅವರು, ತೀರಾ ಕಳಪೆ ಫಲಿತಾಂಶ ಬರುವ ಶಾಲೆಗಳನ್ನು ಸುಧಾರಿಸಲು ಕ್ರಮಗಳನ್ನು ರೂಪಿಸಲಾಗುತ್ತಿದೆ ಎಂದರು.

ಪರೀಕ್ಷೆಗಳಲ್ಲಿ ಕಾಪಿ ಹೊಡೆಯುವ ಪದ್ಧತಿ ತಪ್ಪಿಸಲು ಪರೀಕ್ಷೆಗಾಗಿ ಒಂದು ಶಾಲೆಯ ವಿದ್ಯಾರ್ಥಿಗಳನ್ನು ಇನ್ನೊಂದು ಕೇಂದ್ರಕ್ಕೆ ಕಳುಹಿಸುವ, ಶಿಕ್ಷಕರನ್ನು ಪರೀಕ್ಷಕರಾಗಿ ಬೇರೆ ಶಾಲೆಗಳಿಗೆ ಕಳುಹಿಸುವ ಪ್ರಯೋಗಗಳು ನಡೆಯುತ್ತಿವೆ ಎಂದರು.

ಆನಂದರಾಯರು ತಮ್ಮ ಭಾಷಣದಲ್ಲಿ, ಪರೀಕ್ಷಾ ದಂಡಗಳ ಹೆದರಿಕೆಯಿಂದಾಗಿ ಖಾಸಗಿ ಶಾಲೆಗಳಲ್ಲಿ ಕಾಪಿ ಹೊಡೆದು ವಿದ್ಯಾರ್ಥಿಗಳನ್ನು ತೇರ್ಗಡೆಗೊಳಿಸುವ ಅಭ್ಯಾಸ ಬೆಳೆಯುತ್ತಿದೆ ಎಂದು ಆಪಾದಿಸಿದರು.

ಬಾಯಿಯಲ್ಲಿ ದೇವರಾಗಿ, ಕೃತಿಯಲ್ಲಿ ರಾಕ್ಷಸರಾಗುವ ಬದಲು ಮನುಷ್ಯರಾಗುವ ಬಗೆಗೆ ಯೋಚಿಸೋಣ

ಮನ ಹಾಸಿನಲ್ಲಿರಲಿ ಕರುಣೆ, ಮೈತ್ರಿ



ವಿಶ್ಲೇಷಣೆ

ಸಬಿತಾ ಬನ್ನಾಡಿ

ಸತತ ನಾಲ್ಕು ವರ್ಷಗಳ ಭೀಕರ ಯುದ್ಧದಿಂದ ಎರಡೂ ಕಡೆ ಲಕ್ಷಾಂತರ ಜನ ಸತ್ತಿರುತ್ತಾರೆ. ಕೊನೆಗೂ ಶಾಂತಿಸಂಧಾನದ ಪ್ರಯತ್ನಕ್ಕೆ ಫಲ ಸಿಕ್ಕಿ, ಯುದ್ಧ ನಿಲುಗಡೆಯ ಒಪ್ಪಂದ ಜಾರಿಗೆ ಬರುತ್ತಿರುವ ಸೂಚನೆ ಸಿಕ್ಕಿರುತ್ತದೆ. ಬಸವಳಿದು ಹೋದ ಬದುಕುಳಿದ ಸೈನಿಕರು ತಾವು ಮನೆಗೆ ಮರಳುತ್ತಿದ್ದೇವೆ ಎಂಬ ಉಕ್ಕುತ್ತಿರುವ ಖುಷಿಯನ್ನು ಹತ್ತಿಕ್ಕಿಕೊಂಡು, ತಮಗೆ ತುರ್ತು ಕರೆ ಕಳಿಸಿದ ಜನರಲ್‌ನ ಮಾತುಗಳನ್ನು ಕೇಳುತ್ತಿದ್ದಾರೆ. ಸೋತ ತಾವು ಹೀಗೆ ಒಪ್ಪಂದ ಮಾಡಿಕೊಳ್ಳುವುದು ಅವನಿಗೆ ಇಷ್ಟವಿಲ್ಲ. ಒಪ್ಪಂದ ಜಾರಿಗೆ ಬರಲು ಇನ್ನು ಬರೀ ಹದಿನೈದು ನಿಮಿಷಗಳು ಬಾಕಿ ಇವೆ. 'ನಾವು ಹನ್ನೊಂದು ಗಂಟೆಯ ಒಳಗೆ ತೀವ್ರವಾಗಿ ದಾಳಿ ಮಾಡಿ, ಶತ್ರುಗಳಿಗೆ ಪಾಠ ಕಲಿಸಿ ವಿಜಯಶಾಲಿಗಳಾಗಿ ಹಿಂದಿರುಗಬೇಕು. ತಕ್ಷಣ ದಾಳಿ ಮಾಡಲು ಸಜ್ಜಾಗಿ' ಎಂದು ಆತ ಆದೇಶಿಸುತ್ತಾನೆ!

ದೇಹ, ಮನಸ್ಸು ನಜ್ಜುಗುಜ್ಜಾಗಿರುವ ಸೈನಿಕರಿಗೆ ಇದು ಇಷ್ಟವಿಲ್ಲ. ಆದರೆ 'ಹೇಳಿದಷ್ಟು ಮಾಡು' ಎಂಬುದು ಬಿಟ್ಟು ಅವರಿಗೆ ಬೇರೆ ದಾರಿ ಇಲ್ಲ. ಆ ಹದಿನೈದು ನಿಮಿಷಗಳಲ್ಲಿ ಮರಳಿ ಯುದ್ಧಕ್ಕೆ ಹೋದ ಮುಕ್ಕಾಲು ಪಾಲು ಸೈನಿಕರು ಹೆಣವಾಗುತ್ತಾರೆ! ಇದು, ಮೊದಲ ಮಹಾಯುದ್ಧದ ಕತೆಯನ್ನುಳ್ಳ 'ಆಲ್ ಕ್ವಯಿಟ್ ಆನ್ ದಿ ವೆಸ್ಟರ್ನ್ ಫ್ರಂಟ್' ಎಂಬ ಸಿನಿಮಾದ ಒಂದು ದೃಶ್ಯ. ಇಂತಹ ಮೂರ್ಖ ಆದೇಶ ಮಾಡಿದ ಜರ್ಮನಿಯ ಜನರಲ್‌ನ ಮನಃಸ್ಥಿತಿ ಎಂಥದ್ದಿರಬಹುದು ಎಂದು ಆಶ್ಚರ್ಯ ಆಗುತ್ತದೆ. ಇನ್ನೊಂದೆಡೆ, ಅದೇ ಜರ್ಮನಿಯ ಶಾಂತಿ ಮಾತುಕತೆಯ ಮುಖ್ಯಸ್ಥನಿಗೆ ಫ್ರಾನ್ಸ್ 'ಎಪ್ಪತ್ತೆರಡು ಗಂಟೆಗಳೊಳಗೆ ನಮ್ಮ ಷರತ್ತುಗಳಿಗೆ ಒಳಪಟ್ಟು ನಿಮ್ಮ ನಿರ್ಧಾರ ಹೇಳಿ. ಅಲ್ಲಿಯವರೆಗೆ ಯುದ್ಧ ಮುಂದುವರಿಯುತ್ತದೆ' ಎಂದಾಗ ಆತ 'ದಯವಿಟ್ಟು ಅಷ್ಟುಕಾಲ ಯುದ್ಧವನ್ನು ಮುಂದೆ ತಳ್ಳಬೇಡಿ. ಇದು ಸಾವಿರಾರು ಸೈನಿಕರ ಜೀವದ ವಿಷಯ. ಪ್ರತಿ ನಿಮಿಷವೂ ಒಬ್ಬನ ಜೀವ ಉಳಿಸಬಹುದು' ಎಂದು ಕೋರಿಕೊಳ್ಳುತ್ತಾನೆ. ಇಬ್ಬರ ನಡುವೆ ಎಷ್ಟು ವ್ಯತ್ಯಾಸ!

ಒಬ್ಬನಿಗೆ, ತನ್ನ ಕೈಲಿರುವ ಅಧಿಕಾರದಿಂದ ಯಾರನ್ನಾದರೂ ಬಲಿ ಕೊಟ್ಟು ತಾನು ವಿಜಯಿ ಅನ್ನಿಸಿಕೊಳ್ಳುವ ಮತ್ತು ಆ ಮೂಲಕ ತನ್ನ ಅಧಿಕಾರವನ್ನು ಇನ್ನಷ್ಟು ಭದ್ರಪಡಿಸಿಕೊಳ್ಳುವ ಪಿಪಾಸುತನ. ಇನ್ನೊಬ್ಬನಿಗೆ, ತಾನೀಗ ಪಡೆದಿರುವ ರಾಜಿ ಸಂಧಾನದ ಅವಕಾಶವೆಂಬ ಅಧಿಕಾರವನ್ನು ಬಳಸಿ, ಎಷ್ಟು ಸಾಧ್ಯವೋ ಅಷ್ಟು ಜನರ ಪ್ರಾಣ ಉಳಿಸುವ ಜೀವಜಲವಾಗುವ ಕಾರುಣ್ಯದ ಕಣ್ಣು.

ಈ ಎರಡು ವಿರುದ್ಧ ಮನಃಸ್ಥಿತಿಗಳು ರೂಪುಗೊಳ್ಳುವುದು ಹೇಗೆ? ಇದೊಂದು ಕೊನೆಯಿಲ್ಲದ ಹುಡುಕಾಟದ ಪ್ರಶ್ನೆಯೇ ಆಗಬಹುದು. ಆದರೆ ಇದು ಬರೀ ಜನ್ಮಜಾತವಾದದ್ದಂತೂ ಅಲ್ಲ. ಯಾಕೆಂದರೆ, ಕ್ರಿಸ್ತ ಪೂರ್ವದ ಬುದ್ಧನಿಂದ ಹಿಡಿದು ಕ್ರಿಸ್ತ ಶಕದ ಏಸುವಿನ ತನಕವೂ ಕಾರುಣ್ಯವನ್ನು ಬಿತ್ತುವುದಕ್ಕೆ ಮತ್ತೆ ಮತ್ತೆ ಪ್ರಯತ್ನಗಳು ನಡೆಯುತ್ತಲೇ ಬಂದಿವೆ. ಇನ್ನೊಂದೆಡೆ, ಅಧಿಕಾರ, ಅಹಂಕಾರ, ಸ್ವಾರ್ಥದ ಬೆನ್ನು ಬಿದ್ದವರು ಯಾವ ಹೀನಾಯ ಮಟ್ಟಕ್ಕಾದರೂ ಇಳಿದು ಸುಳ್ಳು, ದ್ವೇಷ, ಕ್ರೌರ್ಯ, ಕೊಲೆಗಳ ಮೂಲಕ ತಮ್ಮ ಕಿರೀಟಕ್ಕೆ ರತ್ನಗಳನ್ನು ಪೋಣಿಸಿಕೊಳ್ಳುತ್ತಲೇ ಹೋಗುವುದನ್ನೂ ಮತ್ತೆ ಮತ್ತೆ ನೋಡುತ್ತಲೇ ಇದ್ದೇವೆ.

ಮೇಲೆ ಹೇಳಿರುವ ಸಿನಿಮಾದಲ್ಲಿ, 'ಪಿತೃಭೂಮಿಯ ಹಿರಿಮೆ' ಎಂಬ ರಾಷ್ಟ್ರೀಯತೆಯ ಮಾತಿನ ಪ್ರಭಾವಕ್ಕೆ ಒಳಗಾಗಿ, ಪೋಷಕರ ಮಾತನ್ನೂ ಮೀರಿ ಯುದ್ಧಕ್ಕೆ ಬಂದಿದ್ದ ಹದಿನೇಳರ ವಯಸ್ಸಿನ ಹುಡುಗರು, ತಮ್ಮ ಕಲ್ಪನೆಗಿಂತ ಭೀಕರವಾಗಿದ್ದ ಯುದ್ಧಭೂಮಿಯನ್ನು ನೋಡಿ ದಿಗ್ಭ್ರಾಂತರಾಗುತ್ತಾರೆ. ಕಣ್ಣೆದುರೇ ಪತಂಗಗಳಂತೆ ಸಾಯುತ್ತಾರೆ. ಹೇಗಾದರೂ ಜೀವ ಉಳಿಸಿಕೊಂಡಿದ್ದ ಒಬ್ಬನಿಗೆ ಜನರಲ್‌ನ ಈಗಿನ ಮಾತು ಪ್ರಭಾವಿಸುವುದಿಲ್ಲ. ಯಾಕೆಂದರೆ, ಈಗ ಯುದ್ಧ ಅವನ ಅನುಭವವಾಗಿದೆ. ಚುನಾವಣೆಯನ್ನೂ ಯುದ್ಧವೆಂಬಂತೆ ಬಿಂಬಿಸಿದ ಈ ಸಂದರ್ಭದಲ್ಲೂ ಮನಸ್ಸುಗಳನ್ನು ಆಕ್ರಮಿಸಲು ಹಲವು ಮಾತುಗಳು ಉಕ್ಕುತ್ತಿವೆ. ಚುನಾವಣಾ ಆಯೋಗ ಕೊನೆಯ ಜಾವದಲ್ಲಿ ಎಚ್ಚೆತ್ತು, 'ವಿಭಜನೆಯ ಮಾತಾಡಬೇಡಿ' ಎಂದಿದೆ!

ಆಧುನಿಕ ವಿದ್ಯೆ, ವಿಜ್ಞಾನ ಮೂಲದ ಚಿಂತನೆ, ಸಾಹಿತ್ಯ, ತತ್ವಜ್ಞಾನದ ಓದುವಿಕೆಯು ಮನುಷ್ಯರ ಮನಃಸ್ಥಿತಿಯನ್ನು ಸದಾ ವಿಕಾಸದ ಪಥದಲ್ಲಿ ಮುನ್ನಡೆಸುತ್ತದೆ ಎಂದು ನಂಬಲಾಗುತ್ತದೆ. ಆದರೆ, ವಿದ್ಯಾರ್ಥಿ ದೆಸೆಯಲ್ಲಿರುವ ಎಳೆಯ ಹುಡುಗರು ಅದೇಕೆ ಕೊಲೆಗಡುಕರಾಗುತ್ತಿದ್ದಾರೆ? ಇಂತಹ ಕರುಳು ಕತ್ತರಿಸುವ ಪ್ರಕರಣಗಳಿಗೂ ಆಳುವವರು ಅದು ಹೇಗೆ ಏನೂ ಆಗಿಲ್ಲವೆಂಬಂತೆ ನಿರ್ಲಿಪ್ತರಾಗಿ ಪ್ರತಿಕ್ರಿಯಿಸುತ್ತಾರೆ? ಅಪರಾಧಗಳ ಮೂಲವನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಅದು ಪುನರಾವರ್ತನೆ ಆಗದಂತೆ ನಾವೇನು ಮಾಡಬಹುದು ಎಂಬೆಡೆಗೆ, ಜವಾಬ್ದಾರಿ ಹೊತ್ತವರು ತಾಯಿ ಸಂಕಟದ ತೀವ್ರತೆಯಲ್ಲಿ ಕೆಲಸ ಮಾಡುತ್ತಿದ್ದಾರೆಯೇ?

ಜನರ ಕಷ್ಟಗಳಿಗೆ ರಾಜಕಾರಣಿಗಳು ಸ್ಪಂದಿಸಬೇಕು ಎಂಬುದಕ್ಕಿಂತ ಇಂದು ರಾಜಕಾರಣಿಗಳ ಸಂಕಷ್ಟಕ್ಕೆ ಜನರೇ ಸ್ಪಂದಿಸುವುದು ಹೆಚ್ಚಾಗಿದೆ. ಅವರು 'ಇಂದು ಶತ್ರುತ್ವ, ನಾಳೆ ಮಿತ್ರತ್ವ' ಎಂಬ ಆಟ ಆಡುತ್ತಿದ್ದರೆ, ಇವರು ಅವರಿಗಾಗಿ ತಮ್ಮ ಬಂಧು ಬಾಂಧವರು, ಗೆಳೆಯರೊಡನೆ ಕಾದಾಡುತ್ತಿರುತ್ತಾರೆ. ಇದೆಲ್ಲವನ್ನೂ ಮೀರಿ ಮನಸ್ಸೇ ಮಾರಾಟವಾಗಿರುವ ಸನ್ನಿವೇಶದಲ್ಲಿ 'ತಮ್ಮವನು' ಎಂಬ ನೆಪದಲ್ಲಿ ಅಮಾನುಷ, ಅಸಹ್ಯ ವ್ಯಭಿಚಾರಗಳನ್ನೂ ವ್ಯಭಿಚಾರಿಗಳನ್ನೂ ರಕ್ಷಿಸುವುದು ಹೇಗೆ ಎಂಬ ಲೆಕ್ಕಾಚಾರದಲ್ಲಿ ಮುಳುಗಿರುತ್ತಾರೆ. ಅದು ಹೇಗೆ ಇಂತಹ ದೊಡ್ಡ ಮಟ್ಟದ ಅನಾಚಾರಗಳನ್ನು ಒಪ್ಪುವವರಾಗುತ್ತಾರೆ? 'ತಮ್ಮವರಲ್ಲದವರು' ಮಾಡಿದಾಗ ಉಗ್ರವಾಗಿ ಖಂಡಿಸಿದವರಿಗೆ ಈಗ ಮಾತು ಹುಗಿದು ಹೋಗುವುದು ಹೇಗೆ? ಇದು ಮನುಷ್ಯನ ಮನಸ್ಸಿನ ಮಿತಿಯೇ ಅಥವಾ ಮನಸ್ಸು ಪಳಗಿಸಿದಾಗ ಆಗುವ ಸ್ಥಿತ್ಯಂತರವೇ?



ಮೆಡೋಸ್ ಟೇಲರ್ ಬರೆದಿರುವ 'ಠಕ್ಕನೊಬ್ಬನ ಆತ್ಮಚರಿತ್ರೆ' (ಅನು: ಎನ್.ಪಿ. ಶಂಕರನಾರಾಯಣ ರಾವ್; ಅಂಕಿತ ಪುಸ್ತಕ) ಮನುಷ್ಯನು ತಲುಪಬಲ್ಲ ಕೇಡಿನ ಆಳ ಮತ್ತು ಅದರ ನಿರರ್ಥಕತೆಯನ್ನು ಅತ್ಯಂತ ಸಮರ್ಥವಾಗಿ ದಾಟಿಸುವ ಕೃತಿ. ಭಾರತದಲ್ಲಿ ಹದಿಮೂರರಿಂದ ಹತ್ತೊಂಬತ್ತನೇ ಶತಮಾನದವರೆಗಿನ ಕಾಲದಲ್ಲಿ ಈ ಠಕ್ಕರ ಹಾವಳಿ ಇತ್ತು. ಕಾಡುದಾರಿಯಲ್ಲಿ ಪಯಣಿಸುವ ವ್ಯಾಪಾರಿಗಳನ್ನು ನಂಬಿಸಿ ಜೊತೆಗಾರರಂತೆ, ರಕ್ಷಕರಂತೆ ಅವರ ಜೊತೆಗೆ ಹೋಗುತ್ತಿದ್ದ ಈ ಠಕ್ಕರು, ಪುಟ್ಟ ಕರವಸ್ತ್ರದಿಂದ ಕತ್ತು ಬಿಗಿದು ಅವರನ್ನು ಕೊಂದು ಸಂಪತ್ತು ದೋಚುತ್ತಿದ್ದರು. ತಮ್ಮ ಊರುಗಳಲ್ಲಿ ಸಭ್ಯರೂ ಕೋವಿದರೂ ಎಂಬಂತೆ ಅಭಿನಯಿಸುತ್ತಿದ್ದ ಈ ಕಟುಕರು ಇಂಥ ದುಷ್ಕೃತ್ಯಗಳು ತಮ್ಮ ಹೆಂಡತಿ, ಮಕ್ಕಳುಗಳಿಗೇ ಗೊತ್ತಾಗದಂತೆ ಎರಡು ಮನಃಸ್ಥಿತಿಗಳಲ್ಲಿ ಬದುಕಬಲ್ಲವರಾಗಿದ್ದರು. ಅಷ್ಟೇ ಅಲ್ಲ, ಇವರು ದೋಚಿದ ಹಣದಿಂದ ಲಂಚ ಕೊಟ್ಟು ಸಣ್ಣಪುಟ್ಟ ಸಂಸ್ಥಾನಕ್ಕೆ ಮುಖ್ಯಸ್ಥರೂ ಆಗುತ್ತಿದ್ದರು! ಸಣ್ಣಪುಟ್ಟ ರಾಜರಾಗುತ್ತಿದ್ದುದೂ ಇತ್ತು! (ಹಾಗೆ ರಾಜರಾದ ಮೇಲೆ ಸೂರ್ಯವಂಶಕ್ಕೋ ಚಂದ್ರವಂಶಕ್ಕೋ ಸೇರಿದವರೆಂದೋ, ದೇವತಾಪುತ್ರರೆಂದೋ ಕತೆ ಕಟ್ಟಿದರಾಯಿತು!)

ಇವರು ಆ ಕ್ರೌರ್ಯವನ್ನು ಹಾಗೆ ರೂಢಿಸಿಕೊಳ್ಳುತ್ತಿದ್ದುದೂ ದೇವರ ಹೆಸರಿನಲ್ಲೇ ಎಂಬುದು ವಿಪರ್ಯಾಸ. ತನ್ನ ಕುಟುಂಬದವರನ್ನು ಇಂತಹವರಿಂದಲೇ ಕಳೆದುಕೊಂಡ ಬಾಲಕನೊಬ್ಬ ಮುಂದೆ ಇಂತಹವರ ದತ್ತು ಮಗನಾಗಿ ಬೆಳೆಯುತ್ತಾನೆ. ಇವೆಲ್ಲದರ ಬಗೆಗೆ ತಿರಸ್ಕಾರ ಇದ್ದ ಇವನೇ, ಹೀಗೆ ಮಾಡದೇಹೋದರೆ ತಾನು ಅಂಜುಕುಳಿ ಅನ್ನಿಸಿಕೊಳ್ಳುತ್ತೇನೆ ಎಂಬುದನ್ನು ಮೀರಲು ತಾನೂ ಕೊಲೆಗಾರನಾಗುತ್ತಾನೆ. ಮೊದಲ ಬಲಿಯನ್ನು ಯಶಸ್ವಿಯಾಗಿ ಪಡೆದ ಮೇಲೆ ಅದರ ರುಚಿ ಹತ್ತಿ, ಬಲಿ ಪಡೆಯಲು ಸದಾ ಕಾತರನಾಗಿರುತ್ತಾನೆ. ಅವನೇ ಹೇಳುವಂತೆ, 'ಠಕ್ಕ ವೃತ್ತಿ ನೀಡುವ ಭಯಂಕರ ಉಲ್ಲಾಸ, ಅಮಲು ಇತರರಿಗೆ ತಿಳಿಯದು'. ಇಷ್ಟಾಗಿ ಇವರೆಲ್ಲರೂ ಕೈದಿಗಳಾಗಿ ಎಲ್ಲವನ್ನೂ ಕಳೆದುಕೊಂಡರು. 'ಕೊಂದವರುಳಿದರೇ?' ಎಂಬಂತೆ ಸರ್ವನಾಶವಾಗಿ ಹೋದರು.

ಬುದ್ಧ ಹೇಳುವಂತೆ, '(ಒಂದು) ಯುದ್ಧವು ಮತ್ತೊಂದು ಯುದ್ಧಕ್ಕೆ ಬೀಜವನ್ನು ಬಿತ್ತುತ್ತದೆ. ಹತ್ಯೆಗೈದವನನ್ನು ಸಂಹಾರ ಮಾಡಲು ಮತ್ತೊಬ್ಬನು ಹುಟ್ಟಿಕೊಳ್ಳುತ್ತಾನೆ. ಆಕ್ರಮಣಕಾರನನ್ನು ಆಕ್ರಮಿಸಲು ಮತ್ತೊಬ್ಬನು ಬರುವುದು ಖಚಿತ. ದರೋಡೆಕೋರನನ್ನು ಲೂಟಿ ಮಾಡಲು ಮತ್ತೊಬ್ಬನು ಸದಾ ಸಿದ್ಧನಾಗಿರುತ್ತಾನೆ'. ಹೀಗಾಗಿ, ನಾವು ರೂಪಿಸಬೇಕಾದ ಮನಃಸ್ಥಿತಿಯು ಪ್ರಜ್ಞೆ, ಶೀಲ, ಕರುಣೆ, ಮೈತ್ರಿಯ ಆನಂದದ ತಳಹದಿಯಲ್ಲಿ ಇರಬೇಕಾಗಿದೆ. ನಮ್ಮ ಯುವಜನರು ಕೊಲೆಯಲ್ಲ, ಕಲೆಯ ಕೂಸುಗಳಾಗಬೇಕಿದೆ.

ಚುರುಮುರಿ



ಜೂಟ್ ಕವರ್!

● ತುರುವೇಕೆರೆ ಪ್ರಸಾದ್

'ಲೇಯ್, ಹಳೇ ಪ್ಲಾಸ್ಟಿಕ್ ಕವರ್‌ನಾಗೆ ನಿಮ್ಮ ಅಜ್ಜಿ ಇದ್‌ಬದ್ ಖಾತೆ, ಎಲೆಅಡಕೆ, ಕಡ್ಡಿಪುಡಿ ಎಲ್ಲಾ ತುಂಬ್ಕಂಡು ಬಂದು, ಅದರ ಮಧ್ಯದಿಂದ ಆಧಾರ್ ಕಾರ್ಡ್ ಹುಡ್ಕಿ ತೆಗೆದು ವೋಟ್ ಮಾಡಿದ್ನ ಯಾರಾದ್ರೂ ಫೋಟೊ ತೆಗ್‌ದು ಸೋಷಿಯಲ್ ಮೀಡಿಯಾದಾಗೆ ಹಾಕಿದ್ರೇನ್ಲಾ?' ಹರಟೆಕಟ್ಟೇಲಿ ಗುದ್ಲಿಂಗ ಮಾತಿನ ಗಂಟು ಬಿಚ್ಚಿದ.

'ಇಲ್ಲ ಕಣಲೇ. ಅದೇನ್ ಅಪಾಟಿ ಕಿಮ್ಮತ್ತು, ಗಮ್ಮತ್ತಿನ ವಿಷ್ಯ ಅಲ್ಲ ಬುಡು. ದೊಡ್‌ದೊಡ್ ಮನುಷ್ಯರು ಬೆರಳಿಗೆ ಮಸಿ ಆಕಿಸ್ಕಂಡಿದ್ದ ಫೋಟೊ ಹಾಕಿದ್ರಲ್ಲ' ಎಂದ ಮಾಲಿಂಗ.

'ಫಿಂಗರ್‌ಗೆ ಮಸಿ ಹಾಕುದ್ರೆ ದೊಡ್ ವಿಷ್ಯ. ದೊಡ್ಡೋರು ತಮ್ ಫಿಗರ್ರೇ ಮಸಿ ಮಾಡ್ಕಂಡ್ರೂ ಎಷ್ಟೋ ಜನದ ಗಮನಕ್ ಬರಾದೇ ಇಲ್ಲ'.

'ಲೇಯ್, ಪ್ಲಾಸ್ಟಿಕ್ ಕವರ್ ಬಿಟ್ಟು ಫಿಂಗರ್ರು, ಫಿಗರ್ರು ಅಂತ ದಾರಿ ಬುಡ್ತಿದೀಯಲ್ಲ, ಮೊದ್ಲು ವಿಷಯಕ್ಕೆ ಬಾ'.

'ಅದೇನಂದ್ರೆ, ನಮ್ ಮುಕೇಶ್ ಅಂಬಾನಿ ಸಾಹೇಬ್ರು ವೋಟು ಮಾಡಕ್ಕೆ ಆಧಾರ್ ಕಾರ್ಡ್‌ನ ನಮ್ಮ ಅಜ್ಜೀರ್ ತರ ಪ್ಲಾಸ್ಟಿಕ್ ಕವರ್ನಾಗೆ ಸುತ್ಕಂಡು ಬಂದಿದ್ರಂತೆ'.

'ಅಯ್ಯೋ ಔದಾ? ಅಂತಾ ದೊಡ್ ಮನುಷ್ಯರು ಚಿನ್ನದ ಕವರ್ ಬಿಟ್ಟು ಪ್ಲಾಸ್ಟಿಕ್ ಕವರ್‌ನಾಗೆ ಆಧಾರ್ ಕಾರ್ಡ್ ಇಟ್ಕಂಡ್ ಬಂದವ್ರೆ ಅಂದ್ರೆ ಎಷ್ಟು ಸಿಂಪಲ್ಲು, ಮಾದರಿ ಕಾರ್ಯ ಅಲ್ವೇನ್ಲಾ' ಶಹಭಾಶ್‌ಗಿರಿ ಕೊಟ್ಟ ಕಲ್ಲೇಶಿ.

'ಮಾದರಿ ಎಂಗ್ಲಾ? ಅಂಬಾನಿ ಮಾಡವ್ರೆ ಅಂತ ಎಲ್ಲಾ ಪ್ಲಾಸ್ಟಿಕ್ ಕವರ್ ಒಳಗೆ ಆಧಾರ್ ಕಾರ್ಡ್ ಮಡಿಕ್ಕಂಡು, ಕಿತ್ತೋದ್ಮೇಲೆ ಎಲ್ಲಂದ್ರಲ್ಲಿ ಎಸ್ಯಕ್ಕೆ ಶುರು ಮಾಡುದ್ರೆ ಪರಿಸರ ಮಾಲಿನ್ಯ ಆಗಕಿಲ್ವಾ?'

'ಅದೂ ನಿಜನೇ ಬಿಡು. ನಮ್ ಹೊನ್ನಮ್ಮಜ್ಜಿ ತರ ಈ ಆಧಾರು, ಪ್ಯಾನ್‌ಕಾರ್ಡು ಎಲ್ಲಾ ಮಡಿಕ್ಕಳಕೆ ಒಂದು ಸೆಣಬಿನ ಸಂಚಿ ಮಾಡ್ಕಂಬುಟ್ರೆ ಒಳ್ಳೇದು'.

'ಅದೂ ಶ್ಯಾನೆ ಎಡವಟ್ಟಾಯ್ತದೆ. ಜೂಟ್ (ಸುಳ್ಳಿನ) ಕವರ್ ಅಂತ ಗುಲ್ಲಾಗಿ, ಒಳಗಡೆ ನೋಟೈತೆ ಅಂತ ಅನುಮಾನ ಬಂದ್ರೆ, ಫಿಂಗರ್ ಮಸಿ ಫಿಗರ್‌ಗೇ ಆಯ್ತದಲ್ಲ' ಎಂದ ಪರ್ಮೇಶಿ.

ಎಲ್ಲಾ ಹೌದ್ಹೌದು ಅಂತ ತಲೆಯಾಡಿಸಿದರು.

ಸಂಗತ

ದ್ವೀಪಸಮೂಹದಲ್ಲೊಂದು 'ನಂದನ'

ಅತ್ಯಪರೂಪದ ಜೀವಸಂಕುಲವನ್ನು ಹೊಂದಿರುವ ದಕ್ಷಿಣ ಆಫ್ರಿಕಾದ 'ದ್ವೀಪಸಮೂಹ'ವನ್ನು ಪ್ರತ್ಯೇಕ ಜೀವಿ ಆವಾಸ ಎಂದು ಘೋಷಿಸಬೇಕೆಂಬ ಒತ್ತಾಯ ಕೇಳಿಬಂದಿದೆ

● ಶ್ರೀಗುರು

ನಾವು ಇದುವರೆಗೂ ಕಂಡಿರದ ಜೀವಿ ಪ್ರಭೇದ, ಅಸಂಖ್ಯ ವರ್ಷಗಳಿಂದಲೂ ನಮ್ಮಿಂದ ಕಣ್ಮರೆ ಆಗಿದ್ದುಕೊಂಡು ಇಲ್ಲಿ ಸುಭದ್ರ ಆವಾಸವನ್ನು ಕಲ್ಪಿಸಿಕೊಂಡಿದೆ. ಇಲ್ಲಿನ ಜೀವಿಗಳಿಗೆ ಮನುಷ್ಯನೆಂಬುವನೊಬ್ಬ ಇದ್ದಾನೆ ಎಂಬುದೇ ಗೊತ್ತಿಲ್ಲ. ಇಲ್ಲಿ ದಟ್ಟ ಕಾಡೇನೂ ಇಲ್ಲ. ಗ್ರ್ಯಾನೈಟ್ ಶಿಲೆಗಳ ಮೇಲೆ ನಿಂತಿರುವ ಪರ್ವತದ ಸಾಲುಗಳ ಸಾಧಾರಣ ನಿತ್ಯ ಹರಿದ್ವರ್ಣ ಕಾಡಿನಲ್ಲಿ ಹಲವಾರು ಅಪರೂಪದ ಜೀವಿ ಪ್ರಭೇದಗಳು ನೆಮ್ಮದಿಯಿಂದ ನೆಲೆ ಕಂಡುಕೊಂಡಿವೆ. ದಕ್ಷಿಣ ಆಫ್ರಿಕಾದ ಆಗ್ನೇಯ ಭಾಗದ ಮೊಜಾಂಬಿಕ್ ಮತ್ತು ಮಲಾವಿ ದೇಶಗಳ ಗಡಿಗೆ ಹೊಂದಿಕೊಂಡಿರುವ ಈ ಭಾಗವನ್ನು ವಿಜ್ಞಾನಿಗಳು ಇನ್‌ಲ್ಯಾಂಡ್ ಆರ್ಕಿಪೆಲಗೊ (ಒಳನಾಡಿನ ದ್ವೀಪಸಮೂಹ) ಎಂದು ಕರೆಯುತ್ತಾರೆ. ಅತಿ ಎತ್ತರದ ಜಾಗದಲ್ಲಿ ಇರುವುದರಿಂದ ಆಕಾಶದ್ವೀಪ ಎಂಬ ಹೆಸರೂ ಇದಕ್ಕಿದೆ.


ಪ್ರಾಣಿಗಳಷ್ಟೇ ಅಲ್ಲ ನಮಗೆ ಗೊತ್ತಿರದ ಅನೇಕ ಮರಗಳು, ಸಸ್ಯ ಸಂಪತ್ತು ಇಲ್ಲಿರುವುದರಿಂದ ಈ ಭಾಗವನ್ನು ಪ್ರತ್ಯೇಕ ಜೀವಿ ಆವಾಸ ಎಂದು ಘೋಷಿಸಬೇಕೆಂದು ವಿಜ್ಞಾನಿಗಳು ಒತ್ತಾಯಿಸುತ್ತಿದ್ದಾರೆ. ಭೂಮಿಯ ಯಾವ ಭಾಗದಲ್ಲೂ ಕಾಣಸಿದ ಜೀವಸಂಕುಲ ಇಲ್ಲಿದೆ ಎಂಬ ವಿಜ್ಞಾನಿಗಳ ಮಾತಿಗೆ ಪುಷ್ಟಿ ನೀಡುವಂತೆ, ಅಪರೂಪದ ಪಕ್ಷಿ, ಹಾವು, ಮುಂಗುಸಿ, ಚಿಟ್ಟೆ, ಜಿಂಕೆ ಜಾತಿಗಳಿಗೆ ಸೇರಿದ ಪ್ರಾಣಿಗಳು ಇಲ್ಲಿ ದೊಡ್ಡ ಸಂಖ್ಯೆಯಲ್ಲಿ ಕಾಣಿಸಿಕೊಂಡಿವೆ.

ಜೀವಿ ಪರಿಸರ ಸಂಶೋಧಕ ಜೂಲಿಯನ್ ಬೇಲಿಸ್ ಅವರು ಹೇಳುವಂತೆ, ಒಮ್ಮೆ ಅವರು ಈ ಕಾಡನ್ನು ಸುತ್ತುವಾಗ ಅಕಸ್ಮಾತ್ತಾಗಿ ಒಂದು ಹಾವಿನ ಮೇಲೆ ಕಾಲಿಟ್ಟರಂತೆ. ಹಾವಿನಿಂದ ಇವರಿಗೆ ಯಾವ ಹಾನಿಯೂ ಆಗಲಿಲ್ಲ, ಇವರಿಂದ ಹಾವಿಗೂ ತೊಂದರೆಯಾಗಲಿಲ್ಲ. ಆದರೆ ಅದು ಸಾಮಾನ್ಯ ಹಾವಲ್ಲ ಎಂದು ನೋಡಿದ ತಕ್ಷಣ ಗುರುತಿಸಿದ ಜೂಲಿಯನ್, ಅದನ್ನು ಹುಷಾರಾಗಿ ಒಂದು ಡಬ್ಬಿಯೊಳಗೆ ತುಂಬಿಕೊಂಡು ಬಂದು ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಒಳಪಡಿಸಿದರು. ಆಗ, 20 ವರ್ಷದ ತಮ್ಮ ಕಾಡಿನ ಸುತ್ತಾಟದಲ್ಲಿ ಆವರೆಗೂ ಅಂತಹ ಹಾವನ್ನು ತಾವು ಎಲ್ಲಿಯೂ ಕಂಡಿರಲಿಲ್ಲ ಎಂಬ ಅರಿವಾಯಿತು.

ಆ ಹಾವು ಮಾಬು ಎಂಬ ಪರ್ವತದಲ್ಲಿ ದೊರೆತಿದ್ದರಿಂದ ಅದಕ್ಕೆ 'ಮಾಬು ಬುಶ್ ವೈಪರ್' ಎಂದು ನಾಮಕರಣ ಮಾಡಿದ ಜೂಲಿಯನ್, ಒಂದೂವರೆ ಅಡಿ ಉದ್ದದ ಹಾವಿನ ಬಗ್ಗೆ ಭರಪೂರ ಮಾಹಿತಿ ಕಲೆಹಾಕಲು ಶುರು ಮಾಡಿದರು. ಹಾವಿನ ಡಿಎನ್‌ಎ ವರ್ಣತಂತುವನ್ನು ಪರೀಕ್ಷಿಸಿದ ಸಂಶೋಧಕರು, ಇಡೀ ಆಫ್ರಿಕಾದ ಕಾಡುಗಳಲ್ಲಿ ದೊರಕಿರುವ ಹಾವುಗಳ ವರ್ಣತಂತು ಸಂರಚನೆಗಿಂತ ಇದು ತುಂಬಾ ಭಿನ್ನವಾಗಿದೆ ಮತ್ತು 15 ದಶಲಕ್ಷ ವರ್ಷಗಳ ಹಿಂದೆ ಇದರ ಸಂತತಿ ಭೂಮಿಯಲ್ಲಿ ಸೃಷ್ಟಿ ಆಗಿರಬಹುದು ಎಂದು ಅಂದಾಜಿಸಿದ್ದಾರೆ.

ತಮ್ಮ ಸಂಶೋಧನಾ ಸಂಸ್ಥೆಯ 25 ಸಂಶೋಧಕರೊಂದಿಗೆ ಇಲ್ಲಿನ ಪರ್ವತಶ್ರೇಣಿಗಳ ಕಾಡಿನಲ್ಲಿ ನಿರಂತರವಾಗಿ ಹುಡುಕಾಡಿ, ಇದುವರೆಗೂ ಯಾವ ಪುಸ್ತಕದಲ್ಲೂ ದಾಖಲಾಗದ ಅಪರೂಪದ ಸಸ್ಯಪ್ರಭೇದಗಳನ್ನು ಅವರು ಪಟ್ಟಿ ಮಾಡಿದ್ದಾರೆ. ಅವುಗಳನ್ನು ಸಂರಕ್ಷಿಸಲೇಬೇಕು ಎಂದು ಒತ್ತಾಯಿಸಿದ್ದಾರೆ. ಅರ್ಧ ಡಜನ್‌ನಷ್ಟು ಪಿಗ್ಮಿ ಊಸರವಳ್ಳಿಗಳನ್ನು ಪತ್ತೆ ಮಾಡಿರುವ ತಂಡವು ಇಲ್ಲಿನ ಪರ್ವತಶ್ರೇಣಿಗಳನ್ನು ಸೌತ್ ಈಸ್ಟ್ ಆಫ್ರಿಕಾ ಮೌಂಟನ್ ಆರ್ಕಿಪೆಲಗೊ (ಎಸ್‌ಇಎಎಂಎ– 'ಸೀಮಾ') ಎಂಬ ಹೆಸರಿನಿಂದ ಕರೆದು, ಅದನ್ನು ಪ್ರತ್ಯೇಕ ಜೀವಿ ಪರಿಸರ ಎಂದು ಘೋಷಿಸಿ ಸಂರಕ್ಷಿಸಬೇಕು ಎಂದು ಸರ್ಕಾರಕ್ಕೆ ಹಲವು ಬಾರಿ ವಿನಂತಿಸಿಕೊಂಡಿದೆ.

ಇಲ್ಲಿನ 30 ಪರ್ವತಗಳ ಪೈಕಿ ಒಂದಾದ ಮೌಂಟ್ ನಲುಮೆಯಲ್ಲಿ ಭಾರಿ ಪ್ರಮಾಣದ ಮರಗಳನ್ನು ಕಡಿಯಲಾಗುತ್ತಿದ್ದು, ಅದನ್ನು ತಕ್ಷಣವೇ ನಿಲ್ಲಿಸಬೇಕು ಎಂಬುದು ಸಂರಕ್ಷಣಾ ತಂಡಗಳ ಒತ್ತಾಯವಾಗಿದೆ. ಅರಣ್ಯ ಕಡಿತ ಮತ್ತು ಬೆಂಕಿ ಪ್ರಕರಣಗಳು ಹೆಚ್ಚುತ್ತಿದ್ದು, ಅಪರೂಪದ ಜೀವಿ ಪ್ರಭೇದ ಒತ್ತಡಕ್ಕೆ ಸಿಲುಕುತ್ತಿದೆ. ಮಾನವ ಹಸ್ತಕ್ಷೇಪದಿಂದಾಗಿ ಈಗಾಗಲೇ ಈ ಭಾಗದಲ್ಲಿ ಶೇಕಡ 18ರಷ್ಟು ಅರಣ್ಯ ನಾಶವಾಗಿದೆ. ಕೆಲವು ಜಾಗಗಳಲ್ಲಿ ನಾಶದ ಪ್ರಮಾಣ ಶೇಕಡ 45ರಷ್ಟಿದೆ. ಥೈಲೋ ಪರ್ವತದ ಅರಣ್ಯದಲ್ಲಿ ಇದಕ್ಕೂ ಮುಂಚೆ 'ಥೈಲೋ ಅಲೆತೆ' ಎಂಬ ಹಾಡುಗಾರ ಪಕ್ಷಿ ಸಂಕುಲವು ದೊಡ್ಡ ಸಂಖ್ಯೆಯಲ್ಲಿತ್ತು. ಅರಣ್ಯ ನಾಶದಿಂದಾಗಿ ಈಗ ಅವುಗಳನ್ನು ಹುಡುಕಬೇಕಾದ ಪರಿಸ್ಥಿತಿ ಎದುರಾಗಿದೆ. ಹುತ್ತ ಕಟ್ಟುವ ಗೆದ್ದಲುಗಳನ್ನು ತಿಂದು ಬದುಕುವ ಈ ಹಕ್ಕಿಯು ಇದೇ ಜೀವಿ ಪರಿಸರದ ಬೇರೆ ಭಾಗಗಳಲ್ಲಿ ಇರುವುದು ಪತ್ತೆಯಾಗಿದ್ದು, ಅದನ್ನು ರಕ್ಷಿಸಲೇಬೇಕಾದ ಅನಿವಾರ್ಯ ಇದೆ.



ಮಲಾವಿ ಭಾಗದ ಮುಲಾಂಜೆ ಪರ್ವತ ಸಂರಕ್ಷಣಾ ಟ್ರಸ್ಟ್‌ನ ನಿರ್ದೇಶಕ ಕಾರ್ಲ್‌ಬ್ರಸೋ, 'ಮುಲಾಂಜೆ ಪರ್ವತದ ಸಂರಕ್ಷಣಾ ಕಾರ್ಯದಲ್ಲಿ ಸಮುದಾಯಗಳು ಭಾಗವಹಿಸಬೇಕು. ಆಗ ಅದಕ್ಕೆ ಬೇಕಾದ ತಯಾರಿ ಹಾಗೂ ಅದರಿಂದ ದೊರಕುವ ಸುಸ್ಥಿರ ಜೀವನೋಪಾಯದ ಮಾರ್ಗಗಳನ್ನು ನಾವು ಕಂಡುಕೊಳ್ಳಬಹುದು' ಎಂದಿದ್ದಾರೆ.

ದಕ್ಷಿಣ ಪೆಸಿಫಿಕ್ ಸಾಗರದ ಬಳಿಯ ನ್ಯೂಗಿನಿ ದ್ವೀಪ ವ್ಯಾಪ್ತಿಯ ಫೋಯಾ ಪರ್ವತದಲ್ಲಿನ ಕಾಡಿನಲ್ಲಿ ಕನ್ಸರ್ವೇಷನ್ ಇಂಟರ್‌ನ್ಯಾಷನಲ್ ತಂಡದ ಪರಿಸರ ವನ್ಯಜೀವಿ ಸಂಶೋಧಕರು 2006ರಲ್ಲಿ ಅಧ್ಯಯನ ಕೈಗೊಂಡಿದ್ದರು. ಮೂರು ಲಕ್ಷ ಹೆಕ್ಟೇರ್ ವಿಸ್ತೀರ್ಣದ ಆ ಕಾಡಿನಲ್ಲಿ ತಾವು ಹಿಂದೆಂದೂ ಕಂಡಿರದ 550 ಬಗೆಯ ಸಸ್ಯಗಳು, 150 ಬಗೆಯ ಕೀಟಗಳು, ಅಸಂಖ್ಯ ಚಿಟ್ಟೆಗಳು, 60ಕ್ಕೂ ಹೆಚ್ಚು ಬಗೆಯ ಕಪ್ಪೆಗಳು, ಸುಮಾರು ಒಂದು ಅಡಿಗಿಂತಲೂ ದೊಡ್ಡದಾಗಿರುವ ರೋಡೋಡೆಂಡ್ರಾನ್ ಹೂವು, 14 ಮಿ.ಮೀ.ಗಿಂತ ಚಿಕ್ಕದಾದ ಕಪ್ಪೆಯನ್ನು ಕಂಡಿದ್ದಾಗಿ ವರದಿ ಮಾಡಿದ್ದರು. ಈಗ ಅಂಥದ್ದೇ ನಂದನದ ತುಣುಕೊಂದು ಕಾಣಿಸಿಕೊಂಡಿದೆ. ರಕ್ಷಿಸುವ ಜವಾಬ್ದಾರಿ ನಮ್ಮೆಲ್ಲರದು.

ವಾಚಕರ ವಾಣಿ

ಶೇಷನ್ ನೆನಪಾಗುತ್ತಿದ್ದಾರೆ...

ವಿಭಜನಕಾರಿ ಮಾತುಗಳನ್ನು ಆಡದಿರುವಂತೆ ಚುನಾವಣಾ ಆಯೋಗವು ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳಿಗೆ ಕೊನೆಗೂ ತಾಕೀತು ಮಾಡಿರುವುದು ಸ್ವಾಗತಾರ್ಹ. ಆದರೆ ಈ ಕ್ರಮಕ್ಕೆ ಮುಂದಾಗಲು ಅದು ಇಷ್ಟೊಂದು ಸಮಯ ತೆಗೆದುಕೊಂಡಿದ್ದು ಮಾತ್ರ ಸಮಂಜಸವಲ್ಲ. ಲೋಕಸಭಾ ಚುನಾವಣೆಯ ಕೊನೆಯ ಘಟ್ಟದಲ್ಲಿ ಆಯೋಗ ನೀಡಿರುವ ಈ ಎಚ್ಚರಿಕೆಯ ಮಾತುಗಳು ರಾಜಕೀಯ ನಾಯಕರ ಮೇಲೆ ಎಷ್ಟರಮಟ್ಟಿಗೆ ಪರಿಣಾಮ ಬೀರುತ್ತವೆ ಎನ್ನುವುದು ಪ್ರಶ್ನಾರ್ಹ.

ಈ ಸಂದರ್ಭದಲ್ಲಿ ನಮ್ಮ ನೆನಪಿಗೆ ಬರುವುದು, ಮುಖ್ಯ ಚುನಾವಣಾ ಆಯುಕ್ತರಾಗಿದ್ದ ಟಿ.ಎನ್.ಶೇಷನ್ ಅವರ ದಿಟ್ಟ ಕಾರ್ಯನಿರ್ವಹಣಾ ಶೈಲಿ. ತಮ್ಮ ಖಡಕ್ ನಿಲುವಿನಿಂದ ಅವರು ಚುನಾವಣೆಗಳನ್ನು ನಿರ್ವಹಿಸಿದ ರೀತಿ ಅನುಕರಣೀಯ. ಚುನಾವಣಾ ಆಯೋಗಕ್ಕೆ ಇರುವ ಅಧಿಕಾರ ಹಾಗೂ ಅದರ ಇತಿಮಿತಿಯ ಅರಿವು ಜನಸಾಮಾನ್ಯರಿಗೆ ಆಗಿದ್ದೇ ಶೇಷನ್ ಅವರ ಅಧಿಕಾರಾವಧಿಯಲ್ಲಿ ಎಂದರೆ ಅತಿಶಯೋಕ್ತಿಯಲ್ಲ.

ಶಾಂತಕುಮಾರ್, ಸರ್ಜಾಪುರ

ದಿನದಿನವೂ 'ನೀರು ತುಂಬುವ' ಹಬ್ಬ!

ದೀಪಾವಳಿಯ ಸಂದರ್ಭದಲ್ಲಿ 'ನೀರು ತುಂಬುವ' ಹಬ್ಬವನ್ನು ಆಚರಿಸುವುದು ವಾಡಿಕೆ. ಆದರೆ, ಬಿಸಿಲೂರಿನ ನಾವು, ಏಪ್ರಿಲ್ ತಿಂಗಳಿನಿಂದ ನಿತ್ಯವೂ 'ನೀರು ತುಂಬುವ' ಹಬ್ಬ ಆಚರಿಸುತ್ತಿದ್ದೇವೆ! ಹೋದ ವರ್ಷ ಸರಿಯಾಗಿ ಮಳೆಯಾಗದೆ, ಕೊಳವೆ ಬಾವಿಗಳಲ್ಲಿನ ನೀರಿನ ಮಟ್ಟ ತೀವ್ರವಾಗಿ ಕುಸಿದಿದ್ದು ಇದಕ್ಕೆ ಕಾರಣ. ಟ್ಯಾಂಕರ್‌ನಿಂದ ನೀರು ತರಿಸಿ, ಅದನ್ನು ತೊಟ್ಟಿಯಲ್ಲಿ ಸಂಗ್ರಹಿಸಿ ಇಟ್ಟುಕೊಂಡು, ಪಂಪಿನ ಮುಖಾಂತರ ನಿತ್ಯವೂ ಅವಶ್ಯಕತೆಗೆ ಅನುಗುಣವಾಗಿ ನೀರನ್ನು ತುಂಬಿಸಿಕೊಳ್ಳುವ 'ಹಬ್ಬದ ಸಂಭ್ರಮ' ನಮ್ಮದಾಗಿದೆ. ನೀರಿನ ತೊಟ್ಟಿ ಕಟ್ಟಿಸಿಕೊಳ್ಳದೇ ಇರುವವರ ಸಂಕಷ್ಟವಂತೂ ಹೇಳತೀರದು. ದುಬಾರಿ ದರ ನೀಡಿ ಕೊಂಡುಕೊಂಡ ಟ್ಯಾಂಕರ್ ನೀರನ್ನು ಪಂಪ್ ಮೂಲಕ ಮನೆ ಮೇಲಿನ ಟ್ಯಾಂಕ್‌ಗೆ ನೇರವಾಗಿ ಏರಿಸಿಕೊಳ್ಳುವ ಅನಿವಾರ್ಯ ಪರಿಸ್ಥಿತಿ.

ನಮ್ಮ ಕಲಬುರಗಿಗೆ ವಾರದ ಏಳೂ ದಿನಗಳು 24 ಗಂಟೆ ನೀರು ಪೂರೈಕೆ ಮಾಡುವ ಉದ್ದೇಶಿತ ಯೋಜನೆಯು ಐದು ವರ್ಷಗಳಿಂದಲೂ ತೆವಳುತ್ತಾ ಸಾಗಿದೆ. ಅದು ಪೂರ್ಣಗೊಳ್ಳುವವರೆಗೂ ನಮ್ಮ ಕಿಸೆಗೆ ಕತ್ತರಿ ಹಾಗೂ ನಮಗೆ 'ನೀರು ತುಂಬುವ' ಹಬ್ಬ ಇದ್ದದ್ದೇ.

ವೆಂಕಟೇಶ್ ಮುದಗಲ್, ಕಲಬುರಗಿ

ಐಪಿಎಲ್: ಒಡಕಿಗೆ ಆಸ್ಪದ ಬೇಡ

ಬಹುತೇಕ ಯುವಕ, ಯುವತಿಯರು ಇತ್ತೀಚೆಗೆ ತಮ್ಮ ಭಾಷೆ, ರಾಜ್ಯ ಮತ್ತು ನೆಚ್ಚಿನ ಆಟಗಾರರನ್ನು ಆಧರಿಸಿ, ಐಪಿಎಲ್‌ನಲ್ಲಿ ತಮ್ಮ ತಂಡಗಳನ್ನು ವಿಭಾಗ ಮಾಡಿಕೊಂಡಿದ್ದಾರೆ. ಈ ಮೂಲಕ, ತಮಗೆ ಆಗದ ತಂಡವು ಪಂದ್ಯದಲ್ಲಿ ಸೋತರೆ ಅಥವಾ ಕಳಪೆ ಪ್ರದರ್ಶನ ತೋರಿದರೆ ಆ ತಂಡವನ್ನು, ಆಟಗಾರರನ್ನು ಹೀಯಾಳಿಸುವ ಪ್ರವೃತ್ತಿ ಬೆಳೆಸಿಕೊಳ್ಳುತ್ತಿದ್ದಾರೆ.

ಆದರೆ 'ನಾವು ಮೊದಲು ಭಾರತೀಯರು. ನಾವೆಲ್ಲರೂ ಒಂದು. ಅಂತರರಾಷ್ಟ್ರೀಯ ಆಟದಲ್ಲಿ ಈ ಎಲ್ಲಾ ಆಟಗಾರರು ತಮ್ಮ ತಮ್ಮ ಕೊಡುಗೆಗಳ ಮೂಲಕ ಭಾರತದ ಹಿರಿಮೆಯನ್ನು ಹೆಚ್ಚಿಸುತ್ತಾರೆ' ಎಂಬ ಸಂಗತಿಯನ್ನು ಅವರೆಲ್ಲ ಮರೆತಿದ್ದಾರೆ. ಐಪಿಎಲ್ ಇರುವುದು ಮನರಂಜನೆಗಾಗಿಯೇ ವಿನಾ ಜನರಲ್ಲಿ ಒಡಕು ಉಂಟು ಮಾಡುವುದಕ್ಕಲ್ಲ ಎಂಬುದನ್ನು ನಾವು ಗಮನದಲ್ಲಿ ಇಡಬೇಕಾಗಿದೆ.

ಬಸವಪ್ರಸಾದ ಶಂಕರ ಸಂಕಪಾಳ, ಬೆಳಗಾವಿ

ಕಲುಷಿತ ನೀರು: ಬೇಕು ಶಾಶ್ವತ ಪರಿಹಾರ

ಮೈಸೂರು ತಾಲ್ಲೂಕಿನ ಕೆ.ಸಾಲುಂಡಿ ಗ್ರಾಮದಲ್ಲಿ ಕಲುಷಿತ ನೀರು ಕುಡಿದು ಯುವಕನೊಬ್ಬ ಮೃತಪಟ್ಟು ಹಲವರು ಅಸ್ವಸ್ಥರಾಗಿರುವುದು ಆತಂಕದ ಸಂಗತಿ. ಬಿರುಬೇಸಿಗೆಯ ನಂತರ ಮಳೆ ಬೀಳಲು ಪ್ರಾರಂಭವಾಗುತ್ತಿದ್ದಂತೆಯೇ ರಾಜ್ಯದಲ್ಲಿ ಕಲುಷಿತ ನೀರಿನ ಪ್ರಕರಣಗಳು ಸಹ ಹೆಚ್ಚಾಗುತ್ತಿವೆ. ಬರಗಾಲ ಮತ್ತು ಮಳೆಗೂ ಕಲುಷಿತ ನೀರಿಗೂ ಪರಸ್ಪರ ಸಂಬಂಧ ಇರುತ್ತದೆ. ಬರಗಾಲದಲ್ಲಿ ಅಂತರ್ಜಲ ಮಟ್ಟ ಕುಸಿದಾಗ ಅಪಾಯಕಾರಿ ರಾಸಾಯನಿಕಗಳು ನೀರಿಗೆ ಸೇರಿ ಅದು ಕಲುಷಿತಗೊಳ್ಳುತ್ತದೆ. ಅದೇ ರೀತಿ, ಮಳೆಗಾಲ ಆರಂಭವಾಗುತ್ತಿದ್ದಂತೆ ಚರಂಡಿಗಳು ತುಂಬಿ ಅಲ್ಲಿನ ಕಲ್ಮಶವು ಕುಡಿಯುವ ನೀರಿಗೆ ಸೇರಿಕೊಳ್ಳುವ ಸಾಧ್ಯತೆ ಇರುತ್ತದೆ.

ಕಲುಷಿತ ನೀರು ಸೇವನೆ ಪ್ರಕರಣಗಳು ವರದಿಯಾದ ತತ್‌ಕ್ಷಣ ಆರಂಭಶೂರತ್ವ ತೋರುವ ಆಡಳಿತ ವರ್ಗ, ಮೃತರ ಕುಟುಂಬಕ್ಕೆ ಪರಿಹಾರ, ಅಸ್ವಸ್ಥರ ಚಿಕಿತ್ಸಾ ವೆಚ್ಚ ಭರಿಸುವುದು, ಒಂದಿಬ್ಬರು ಅಧಿಕಾರಿಗಳನ್ನು ಅಮಾನತುಗೊಳಿಸುವ ಅಲ್ಪಕಾಲಿಕ ಕ್ರಮಗಳನ್ನು ಕೈಗೊಳ್ಳುತ್ತದೆ. ಆದರೆ ನೀರು ಕಲುಷಿತಗೊಳ್ಳದಂತೆ ಮಾಡುವ ದೀರ್ಘಕಾಲಿಕ ಕ್ರಮಗಳನ್ನು ಹೆಚ್ಚು ಗಂಭೀರವಾಗಿ ಪರಿಗಣಿಸುವುದಿಲ್ಲ. ಇಂತಹ ಪ್ರಕರಣಗಳು ನಡೆದಾಗ ಅಲ್ಪಕಾಲಿಕ ಕ್ರಮಗಳು ಎಷ್ಟು ಮುಖ್ಯವೋ ಶಾಶ್ವತ ಪರಿಹಾರ ಕಂಡುಕೊಳ್ಳುವುದೂ ಅಷ್ಟೇ ಅವಶ್ಯವಾಗಿರುತ್ತದೆ. ಈ ದಿಸೆಯಲ್ಲಿ ಇಂತಹ ಪ್ರಕರಣಗಳು ಆಡಳಿತಾರೂಢರಿಗೆ ಎಚ್ಚರಿಕೆಯ ಗಂಟೆಯಾಗಬೇಕು.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ರಾಜಧರ್ಮದ ಅರ್ಥ ಅರಿಯಿರಿ

'ಪ್ರಧಾನಿ ಮಾತು ಮತ್ತು ರಾಜಧರ್ಮ' ಎಂಬ ಎಸ್.ಆರ್.ವಿಜಯಶಂಕರ ಅವರ ಲೇಖನ (ಪ್ರ.ವಾ., ಮೇ 21) ಕೋಮುವಾದದ ದಳ್ಳುರಿಯಿಂದ ತಲ್ಲಣಿಸಿರುವ, ಭವಿಷ್ಯದ ಬಗ್ಗೆ ಆತಂಕಗೊಂಡಿರುವ ಮನಸ್ಸುಗಳಿಗೆ ಚೈತನ್ಯ ತುಂಬುವಂತಿದೆ. ನಿರ್ಮಲವಾದ ಧಾರ್ಮಿಕತೆ, ಆಧ್ಯಾತ್ಮಿಕತೆಯಿಂದ ಸಮಾಜಕ್ಕೆ ಅಪಾಯವಿಲ್ಲ, ಆದರೆ ಕೋಮುವಾದದ ಬೆಳವಣಿಗೆಯು ಮನಸ್ಸುಗಳನ್ನು ಒಡೆಯುತ್ತದೆ, ಸಾಮಾಜಿಕ ಭದ್ರತೆಯನ್ನು ಕೆಡಿಸಿ ಅಶಾಂತಿ ಉಂಟುಮಾಡುತ್ತದೆ ಎಂಬ ಲೇಖಕರ ಅಭಿಪ್ರಾಯವು ಪ್ರಜ್ಞಾವಂತರನ್ನು ಚಿಂತನೆಗೆ ಹಚ್ಚುತ್ತದೆ. ಪ್ರಜೆಗಳ ನಡುವೆ ಭೇದಭಾವ ಸಲ್ಲದು ಎಂಬ ರಾಜಧರ್ಮದ ಅರ್ಥವನ್ನು ನಮ್ಮ ರಾಜಕೀಯ ನಾಯಕರು ಅಳವಡಿಸಿಕೊಳ್ಳಬೇಕಾದ ಅಗತ್ಯವನ್ನು ಮನಗಾಣಬೇಕು.

ಸಂಗಯ್ಯ ಅ. ಹಿರೇಮಠ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.



ಪ್ರತಿಭಾವಂತ ನಾಮನಿರ್ದೇಶಿತರು

‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ದ ಎರಡನೇ ಆವೃತ್ತಿಗೆ ದಿನಗಣನೆ ಶುರುವಾಗಿದ್ದು, ಒಟ್ಟು 19 ವಿಭಾಗಗಳಲ್ಲಿ ಈಗಾಗಲೇ 10 ವಿಭಾಗಗಳ ಪ್ರಶಸ್ತಿಗೆ ನಾಮನಿರ್ದೇಶನಗೊಂಡವರ ಹೆಸರುಗಳನ್ನು ಪ್ರಕಟಿಸಲಾಗಿದೆ. ಇದೀಗ ಮತ್ತೈದು ವಿಭಾಗಗಳ ಪ್ರಶಸ್ತಿಗೆ ನಾಮನಿರ್ದೇಶನಗೊಂಡವರನ್ನು ತಿಳಿಸುವ ಸಮಯ. 2023ರಲ್ಲಿ ಹಲವು ಸಿನಿಮಾಗಳು ತಮ್ಮ ಗಟ್ಟಿ ಕಥೆಗಳಿಂದ ಪ್ರೇಕ್ಷಕರನ್ನು ಸೆಳೆದವು, ಕೆಲ ಹಾಡುಗಳು ಮತ್ತೆ ಮತ್ತೆ ಗುನುಗುವಂತೆ ಮಾಡಿದವು. ಈ ವಿಭಾಗಗಳಲ್ಲಿ ನಾಮನಿರ್ದೇಶಿತರ ವಿವರ ಇಲ್ಲಿದೆ. ಇನ್ನಷ್ಟು ವಿಭಾಗಗಳಲ್ಲಿ ನಾಮನಿರ್ದೇಶನಗೊಂಡವರ ಹೆಸರುಗಳು ಸೋಮವಾರ (ಮೇ 27) ಪ್ರಕಟವಾಗಲಿದೆ.

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ಅತ್ಯುತ್ತಮ ಹಿನ್ನೆಲೆ ಗಾಯಕ



ರವೀಂದ್ರ ಸೊರಗಾವಿ
ಹಾಡು: ನೋಡಲಾಗದೇ ದೇವಾ
ಚಿತ್ರ: ವಿರಾಟಪುರ ವಿರಾಗಿ

ಕಪಿಲ್ ಕಪಿಲನ್
ಹಾಡು: ಸಪ್ತ ಸಾಗರದಾಚೆ ಎಲ್ಲೊ
ಚಿತ್ರ: ಸಪ್ತ ಸಾಗರದಾಚೆ ಎಲ್ಲೋ–Side-A

ಸಿದ್ಧಾರ್ಥ್ ಬೆಳ್ಮಣ್ಣು
ಹಾಡು: ಹಾಡುವೆ ನಾ ಹಾಡುವೆ
ಚಿತ್ರ: ಆರ್ಕೆಸ್ಟ್ರಾ ಮೈಸೂರು

ವಿಜಯ್ ಪ್ರಕಾಶ್
ಹಾಡು: ಪುಣ್ಯಾತ್ಮ
ಚಿತ್ರ: ಕಾಟೇರ

ವಾಸುಕಿ ವೈಭವ್
ಹಾಡು: ನಿನ್ನಂಥೋರು ಯಾರೂ ಇಲ್ವಲ್ಲೊ
ಚಿತ್ರ: ಡೇರ್‌ಡೆವಿಲ್ ಮುಸ್ತಾಫಾ

ಅತ್ಯುತ್ತಮ ಚಿತ್ರಕಥೆ



ಬಿ.ಎಸ್.ಲಿಂಗದೇವರು
ಚಿತ್ರ: ವಿರಾಟಪುರ ವಿರಾಗಿ

ಅನಂತ ಶಾಂದ್ರೇಯ, ರಾಘವೇಂದ್ರ ಮಾಯಕೊಂಡ
ಚಿತ್ರ: ಡೇರ್‌ಡೆವಿಲ್ ಮುಸ್ತಾಫಾ



ಜಡೇಶ ಕೆ.ಹಂಪಿ, ತರುಣ್ ಕಿಶೋರ್ ಸುಧೀರ್
ಚಿತ್ರ: ಕಾಟೇರ



ಮಂಸೋರೆ, ವೀರೇಂದ್ರ ಮಲ್ಲಣ್ಣ
ಚಿತ್ರ:19.20.21

ಉಮೇಶ್ ಕೆ.ಕೃಪ
ಚಿತ್ರ: ಟಗರು ಪಲ್ಯ

ಅತ್ಯುತ್ತಮ ಹಿನ್ನೆಲೆ ಗಾಯಕಿ



ಮಾಧುರಿ ಶೇಷಾದ್ರಿ
ಹಾಡು: ಮೆಲ್ಲಗೆ ಧ್ಯಾನಿಸು
ಚಿತ್ರ: ಸ್ವಾತಿ ಮುತ್ತಿನ ಮಳೆ ಹನಿಯೇ

ಮಾಧುರಿ ಶೇಷಾದ್ರಿ
ಹಾಡು: ಸೂರ್ಯಕಾಂತಿ
ಚಿತ್ರ: ಟಗರು ಪಲ್ಯ

ಮಂಗ್ಲಿ
ಹಾಡು: ಪಸಂದಾಗವ್ನೆ
ಚಿತ್ರ: ಕಾಟೇರ

ಶ್ರೀಲಕ್ಷ್ಮಿ ಬೆಳ್ಮಣ್ಣು
ಹಾಡು: ಕಡಲನು ಕಾಣ ಹೊರಟಿರೋ
ಚಿತ್ರ:ಸಪ್ತ ಸಾಗರದಾಚೆ ಎಲ್ಲೋ–Side-A

ಐಶ್ವರ್ಯ ರಂಗರಾಜನ್
ಹಾಡು: ನಮಾಮಿ ನಮಾಮಿ
ಚಿತ್ರ: ಕಬ್ಜ

ಅತ್ಯುತ್ತಮ ಗೀತ ಸಾಹಿತ್ಯ



ಶಿಶುನಾಳ ಶರೀಫ
ಹಾಡು: ಮಾಯಕ್ಕೆ ಮರುಳಾದೆ
ಚಿತ್ರ: ವಿರಾಟಪುರ ವಿರಾಗಿ


ಪೃಥ್ವಿ
ಹಾಡು: ಮೆಲ್ಲಗೆ ಧ್ಯಾನಿಸು
ಚಿತ್ರ: ಸ್ವಾತಿ ಮುತ್ತಿನ ಮಳೆ ಹನಿಯೇ

ಧನಂಜಯ ರಂಜನ್
ಹಾಡು: ನದಿಯೇ ಓ ನದಿಯೇ
ಚಿತ್ರ: ಸಪ್ತ ಸಾಗರದಾಚೆ ಎಲ್ಲೋ Side-A

‘ಡಾಲಿ’ ಧನಂಜಯ
ಹಾಡು: ಟೈಟಲ್ ಟ್ರ್ಯಾಕ್
ಚಿತ್ರ: ಟಗರು ಪಲ್ಯ

ದೊಡ್ಡರಂಗೇಗೌಡ
ಹಾಡು: ಮರೆಯ ಬೇಡವೋ ಮನುಜ
ಚಿತ್ರ: ಮಾವು–ಬೇವು

ಅತ್ಯುತ್ತಮ ನೃತ್ಯ ನಿರ್ದೇಶನ



ಭೂಷಣ್
ಹಾಡು: ಪಸಂದಾಗವ್ನೆ
ಚಿತ್ರ: ಕಾಟೇರ

ಗೀತಾ ಎಸ್.
ಹಾಡು: ಶಿವಾನಿ
ಚಿತ್ರ: ಕೌಸಲ್ಯಾ ಸುಪ್ರಜಾ ರಾಮ

ಕಂಬಿ ರಾಜು
ಹಾಡು: ಗೀತಾ ಗೀತಾ
ಚಿತ್ರ: ನಟ ಭಯಂಕರ

ಬಿ.ಧನಂಜಯ
ಹಾಡು: ಟ್ವಿಂಕಲ್ ಟ್ವಿಂಕಲ್
ಚಿತ್ರ: ಶಿವಾಜಿ ಸುರತ್ಕಲ್–2

ನಾಗಿ
ಹಾಡು: ಪಕ್ಕಾ ಲೋಕಲ್ ಸುಕ್ಕ ಹೀರೊ
ಚಿತ್ರ: ಸೌತ್ ಇಂಡಿಯನ್ ಹೀರೊ

ಊಹಿಸಬಹುದಾದ ‘ಜಡ್ಜ್‌ಮೆಂಟ್’

ನಾವು ನೋಡಿದ ಸಿನಿಮಾ

ಪ್ರೂರ್ತಿ ಸಿನಿಮಾ ನ್ಯಾಯಾಲಯದಲ್ಲೇ ನಡೆಯುವಂತಹ ಕಥೆಗಳು ಕನ್ನಡದಲ್ಲಿ ಬಂದಿದ್ದು ಬಹಳ ಕಡಿಮೆ. ಆ ಕೊರತೆ ನೀಗಿಸುವ ಯತ್ನ ‘ದಿ ಜಡ್ಜ್‌ಮೆಂಟ್’ ಚಿತ್ರದಲ್ಲಿದೆ. ರೈತಪರ ಹೋರಾಟಗಾರ್ತಿಯೊಬ್ಬರ ಕೊಲೆ ಆಗುತ್ತದೆ. ಸರ್ಕಾರಕ್ಕೆ ಮುಜುಗರ ಉಂಟುಮಾಡುವ ಈ ಪ್ರಕರಣದಲ್ಲಿ ಸಂಬಂಧವೇ ಇಲ್ಲದ ಬ್ಯಾಂಕ್ ಅಧಿಕಾರಿ(ದಿಗಂತ್) ಆರೋಪಿಯಾಗಿ ಜೈಲು ಸೇರುತ್ತಾರೆ. ಈ ಆರೋಪ ಸಾಬೀತಾಗುತ್ತದೆಯೋ, ಇಲ್ಲವೋ ಎಂಬುದು ಚಿತ್ರದ ಮೊದಲಾರ್ಧ.

ಪ್ರಕರಣದ ಪರವಾಗಿ ವಾದಿಸಲು ಸರ್ಕಾರಿ ವಕೀಲರಾಗಿ ರವಿಚಂದ್ರನ್ ನೇಮಕಗೊಳ್ಳುತ್ತಾರೆ. ಆರೋಪಿ ಪರ ವಕೀಲರಾಗಿ ಲಕ್ಷ್ಮಿ ಗೋಪಾಲಸ್ವಾಮಿ ಕಾಣಿಸಿಕೊಂಡಿದ್ದಾರೆ. ಇಡೀ ಪ್ರಕರಣವನ್ನು ಕಾನೂನು ದೃಷ್ಟಿಯಿಂದ ಬಹಳ ಅಧ್ಯಯನ ಮಾಡಿ ಚಿತ್ರಕಥೆ ಬರೆದಿದ್ದಾರೆ ನಿರ್ದೇಶಕ ಗುರುರಾಜ ಕುಲಕರ್ಣಿ. ರಾಜಕೀಯದ ಕೈಗೊಂಬೆಯಾಗಿರುವ ಹೋರಾಟಗಾರ್ತಿಯೊಬ್ಬರು ಅತ್ಯಾಚಾರವಾಗಿ

ದಿ ಜಡ್ಜ್‌ಮೆಂಟ್
ನಿರ್ದೇಶನ: ಗುರುರಾಜ್ ಕುಲಕರ್ಣಿ
ನಿರ್ಮಾಣ : ಜಿ9 ಕಮ್ಯೂನಿಕೇಷನ್ ಮೀಡಿಯಾ
ತಾರಾಗಣ: ರವಿಚಂದ್ರನ್, ದಿಗಂತ್, ಮೇಘನಾ ಗಾಂವ್ಕರ್ ಮತ್ತಿತರರು

ಕೊಲೆಯಾಗುವ ಕಥಾವಸ್ತು ಇದಾಗಿದೆ. ಆದರೆ ಇದನ್ನು ದೃಶ್ಯವಾಗಿಸುವಲ್ಲಿ ಸ್ವಲ್ಪ ಶ್ರಮ ಬೇಕಿತ್ತು.

ಸರ್ಕಾರಿ ಪರ ವಕೀಲನಾಗಿ ರವಿಚಂದ್ರನ್ ಇಷ್ಟವಾಗುತ್ತಾರೆ. ಪಾತ್ರವಾಗಿ ಅವರು ದೃಶ್ಯ ಸಿನಿಮಾವನ್ನು ನೆನಪಿಸುತ್ತಾರೆ. ಆರೋಪಿ ಪರ ವಕೀಲೆಯಾಗಿ ಲಕ್ಷ್ಮಿ ಗೋಪಾಲ ಸ್ವಾಮಿ ಸ್ವಲ್ಪ ಮೃದು ಎನಿಸುತ್ತಾರೆ. ಆ ಪಾತ್ರಕ್ಕೆ ವಕೀಲರ ಗತ್ತು, ಗಾಂಭೀರ್ಯ ಇನ್ನಷ್ಟು ಬೇಕಿತ್ತು. ದಿಗಂತ್ ಅಸಹಾಯಕತೆ ಕೂಡ ನಟನೆಯಲ್ಲಿ ಅಲ್ಲಲ್ಲಿ ಸಹಜ ಎನ್ನಿಸುವುದಿಲ್ಲ. ದಿಂಗತ್ ತಂದೆಯಾಗಿ ರಂಗಾಯಣ ರಘು ಇಷ್ಟವಾಗುತ್ತಾರೆ. ಮಂತ್ರಿಯಾಗಿ ಕೃಷ್ಣ ಹೆಬ್ಬಾಳೆ ಗಮನ ಸೆಳೆಯುತ್ತಾರೆ. ರವಿಚಂದ್ರನ್ ಪತ್ನಿಯಾಗಿ ಕಾಣಿಸಿಕೊಂಡಿರುವ ಮೇಘನಾ ಗಾಂವ್ಕರ್‌ಗೆ ಚಿತ್ರದಲ್ಲಿ ಹೆಚ್ಚು ಕೆಲಸವಿಲ್ಲ.

ಕೋರ್ಟ್ ರೂಂ ಡ್ರಾಮಾಗಳಲ್ಲಿ ವಾದ–ವಿವಾದವನ್ನು ಹೇಗೆ ಬೆಳೆಸಿಕೊಂಡು ಹೋಗುತ್ತೇವೆ ಎಂಬುದು ಬಹಳ ಮುಖ್ಯವಾಗುತ್ತದೆ. ಹಾಜರುಪಡಿಸುವ ಸಾಕ್ಷ್ಯಗಳು ಹೊಸತಾಗಿರಬೇಕು. ಇತ್ತೀಚೆಗೆ ತೆರೆಕಂಡ ಮಲಯಾಳದ ‘ನೆರು’ ಸಿನಿಮಾ ಇದಕ್ಕೊಂದು ಉತ್ತಮ ಉದಾಹರಣೆ. ಅಲ್ಲಿಯೂ ಕಥೆ ಗೊತ್ತಾಗುತ್ತದೆ. ಆದರೆ ನಿರೂಪಿಸಿದ ರೀತಿ ಹೊಸತಾಗಿತ್ತು. ಈ ಚಿತ್ರದಲ್ಲಿ ಆ ಕೊರತೆ ಎದ್ದು ಕಾಣುತ್ತದೆ. ಪ್ರಾರಂಭದಲ್ಲಿಯೇ ಚಿತ್ರದ ಕಥೆಯನ್ನು ಊಹಿಸಬಹುದು ಮತ್ತು ನಾವು ಅಂದುಕೊಂಡಂತೆಯೇ ಕಥೆ ಸಾಗುವುದರಿಂದ ಸಿನಿಮಾ ಕುತೂಹಲ ಉಳಿಸಿಕೊಳ್ಳುವುದಿಲ್ಲ. ನ್ಯಾಯಾಲಯದ ವಾತಾವರಣ, ವಾದ–ವಿವಾದದ ಸನ್ನಿವೇಶಗಳು ಇನ್ನಷ್ಟು ಗಟ್ಟಿಯಾಗಬಹುದಿತ್ತು. ಹಿನ್ನೆಲೆ ಸಂಗೀತ, ಛಾಯಾಚಿತ್ರಗ್ರಹಣ ಕೂಡ ಅಷ್ಟೇನು ಗಮನ ಸೆಳೆಯುವುದಿಲ್ಲ.

ವಿನಾಯಕ ಕೆ.ಎಸ್



ಪದಬಂಧ 5691


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಸುತ್ತಾಡುವ ಸ್ವಭಾವದವನು 4)
3.ಹೀಗೆ ವಾಸನೆ ನೋಡು (4)
5.ಶ್ರೇಷ್ಠವಾದುದು ಇಲ್ಲಿದೆ (2)
7.ಈತ ತಿರುಪೆ ಬೇಡುವವನು (3)
8.ಹಂತಕನೇರಿದ ಮೆಟ್ಟಿಲು (2)
9.ಸಾತ್ವಿಕನು ತೋರುತ್ತಿರುವ ತಿರುಳು (2)
10.ಸುರನ ಬಳಿಯಿರುವ ರಾಕ್ಷಸ (3)
12.ಕರ್ತಾರನ ಕೈ (2)
14.ಮೃತ್ಯುದೇವತೆಯ ಮಗ (4)
15.ಒಬ್ಬೊಬ್ಬರಿಗೆ ಸಂಬಂಧಪಟ್ಟದ್ದು (4)

ಮೇಲಿಂದ ಕೆಳಕ್ಕೆ

1.ಎಂಟು ಸಾಲಿನ ಪದ್ಯ (4)
2.ಕನ್ನಡಿಗನಿಗೆ ಸಿಕ್ಕ ರಿಬೇಟ್ (4)
3.ಪರಲೋಕಕ್ಕೆ ಸಂಬಂಧಿಸಿದ್ದು (4)
4.ಚನ್ನಾಗಿ ಕಾಪಾಡಿದುದು (4)
6.ತನ್ನದೇ ಆದ ವಿಶಿಷ್ಟ ಗುಣ (3)
8.ಕೊಲೆಗಾರ ಇಲ್ಲಿದ್ದಾನೆ (3)
9.ಗುಂಪು ಇಲ್ಲಿ ಕಾಣುತ್ತಿದೆ (4)
10.ಉಚಿತವಲ್ಲದ್ದು ಇದು (4)
11.ರಾತ್ರಿಯ ಒಡೆಯನಿವನು (4)
13. ಬೆಲೆಯುಳ್ಳ ಮಣಿಗಳನ್ನೊಳಗೊಡಿರುವ ಸಮುದ್ರ (4)



5690ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ಕಾಗೆಬಂಗಾರ
5.ಅಗಸ 6.ವಿಲೋಮ
9.ಅಂಕೆ 10.ಯತ್ನ
11.ದಶಕ 12.ಅಳು
13.ಕುರು 14.ನನಸು
15.ಬರಡು 16.ಮರಣಕಾಲ

ಮೇಲಿಂದ ಕೆಳಕ್ಕೆ:
1.ವಿಕಾಸ 2.ದಿಬಂ
4.ರವಿಕೆ 5.ಅಭಯದಾನ
7.ಮರಳುಗಾಡು 8.ಬಂದರು
9.ಅಂಕಣ 13.ಕುಸುಮ
15.ಬಲಗೈ 16.ಣಹ

ಸುಡೊಕು 6076

				2		3		5
3		6	5		8		1	
	4			7	3	2		6
	6						7	9
9		1		8				
						1		8
		2	3		7		5	
7	1					6		3
		3	4		2		9	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6075 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಮೇ 25, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣ ದ್ವಿತೀಯ ಗಂ. 18-59 ನಕ್ಷತ್ರ: ಜ್ಯೇಷ್ಠ ಗಂ. 10-36 ಯೋಗ: ಸಿದ್ಧ ಗಂ. 10-06 ಕರಣ :ತೈತಿಲ ಗಂ. 7-16, ವೃಷಭ ಮಾಸದ ನೇ 12 ದಿನ, ಮಳೆನಕ್ಷತ್ರ: ರೋಹಿಣಿ 1.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-07 ಸೂರ್ಯಾಸ್ತ : 06-48
ಮುಸ್ಲಿಂ ದಿನಾಂಕ : 16 ಜುಲ್ಖಾಯದ್
ಅದೃಷ್ಟ ಸಂಖ್ಯೆ : 11, 3

ಮೇಷ: ಕೃಪಣತೆಯನ್ನು ಹೆಚ್ಚು ಪ್ರದರ್ಶಿಸಿ ಮನೆಯ ಸಾಮಗ್ರಿಗಳನ್ನು ತಂದು ಹಾಕುವಲ್ಲಿ ಕಡಿಮೆ ಮಾಡಿ ಅಸಮಾಧಾನಕ್ಕೆ ಕಾರಣವಾಗಬೇಡಿ. ಬಾಲ್ಯದ ಕೆಲವು ಅಪಘಾತಗಳ ನೋವು ಮರುಕಳಿಸುವ ಸಾಧ್ಯತೆ ಇದೆ.

ವೃಷಭ: ಶೀಘ್ರ ಕಲಿಕಾ ಸಾಮರ್ಥ್ಯವು ಇತರರ ಹುಬ್ಬನ್ನು ಮೇಲೆ ಮಾಡುವಂತೆ ಮಾಡುತ್ತದೆ. ಬೇಳೆ ಕಾಳುಗಳನ್ನು ಹೆಚ್ಚಾಗಿ ಸೇವಿಸುವುದರ ಮೂಲಕ ಉಂಟಾಗಿರುವ ನಿಶ್ಶಕ್ತಿಯನ್ನು ನಿವಾರಿಸಿಕೊಳ್ಳಬಹುದು.

ಮಿಥುನ: ಉಳಿತಾಯದ ಹೆಸರಿನಲ್ಲಿ ದೊಡ್ಡ ದೊಡ್ಡ ಮೇಳಗಳಲ್ಲಿ ಖರೀದಿ ಮಾಡಲು ಹೋಗಿ ಮೋಸ ಹೋಗದಿರಿ. ಸರಿ ತಪ್ಪು ಹೇಳುವ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಡಿ. ತೈಲ ವ್ಯಾಪಾರಗಳಿಂದ ಲಾಭ.

ಕರ್ಕಾಟಕ: ಕಂಕಣ ಭಾಗ್ಯ ನಿಮ್ಮನ್ನರಸಿ ಬಂದಾಗ ನಿರಾಕರಿಸುವಂಥ ಮೂರ್ಖತನದ ಕೆಲಸಗಳನ್ನು ಮಾಡಬೇಡಿ. ಪರಿಶುದ್ಧತೆ ಅರಸಿ ಮಾಡಿದ ಸಂಶೋಧನೆ ಪ್ರಸಿದ್ಧಿ ಪಡೆಯುತ್ತದೆ.

ಸಿಂಹ: ಭವಿಷ್ಯವನ್ನು ಗ್ರಹಿಸುವ ವಿಶೇಷ ಗುಣವನ್ನು ಮಿತ್ರರೆದುರು ಪ್ರದರ್ಶಿಸಿದಾಗ ಅವರು ಅವಕ್ಕಾಗುವ ಸಂಭವವಿದೆ. ಸಹೋದರನ ಕೆಲವು ಅಹಿತಕರ ನಡವಳಿಕೆಗಳು ಅಪಮಾನ ಆದಂತೆ ಆಗಬಹುದು.

ಕನ್ಯಾ: ಪ್ರಾಚೀನ ಕಾಲದಿಂದ ಪೂರ್ವಿಕರು ನಡೆಸಿಕೊಂಡು ಬರುತ್ತಿರುವ ಸಂಪ್ರದಾಯಗಳನ್ನು ಕೈಬಿಡುವ ಯೋಚನೆ ಮಾಡಬೇಡಿ. ಸಂಗೀತ ಹಾಗೂ ಭರತನಾಟ್ಯದಲ್ಲಿ ಆಸಕ್ತಿ ಹೆಚ್ಚಾಗಬಹುದು.

ತುಲಾ: ಸ್ಟಾರ್ಟ್ ಅಪ್‌ಗಳನ್ನು ಪ್ರಾರಂಭ ಮಾಡಬೇಕು ಎಂದು ಯೋಜನೆ ಹೊಂದಿರುವವರು ಸಮಾನ ಮನಸ್ಕರೊಂದಿಗೆ ಸಮಾಲೋಚನೆ ನಡೆಸಿ. ಪ್ರಶ್ನೆಗಳಿಗೆ ಹಾರಿಕೆ ಉತ್ತರ ನೀಡಿ ಚಾಣಾಕ್ಷತೆ ಮೆರೆಯುವಿರಿ.

ವೃಶ್ಚಿಕ: ಹಠಮಾರಿತನದಿಂದ ಮಕ್ಕಳ ಪ್ರತಿ ಹೆಜ್ಜೆಗೂ ವಿವಿಧ ಕಾರಣಗಳನ್ನು ನೀಡಿ ಅವರನ್ನು ಅಸಮಧಾನಪಡಿಸಲು ಹೋಗಬೇಡಿ. ನಿಮ್ಮ ಇಷ್ಟದ ದೇವಾಲಯ ಅಥವಾ ಮನೆದೇವರ ಸ್ಥಾನಗಳಿಗೆ ಭೇಟಿ ಕೊಡುವ ಯೋಗವಿದೆ.

ಧನು: ಕಾರ್ಯವನ್ನು ಶುರು ಮಾಡಿದ ನಂತರ ಪದೇ ಪದೇ ನಿಲ್ಲಿಸುವಂತಹ ಸನ್ನಿವೇಶಗಳು ಎದುರಾಗುತ್ತವೆ. ಉಪನ್ಯಾಸಕಲೆಯನ್ನು ಹೊಂದಿದವರಿಗೆ ಉತ್ತಮ ವೇದಿಕೆ ಪ್ರಾಪ್ತಿಯಾಗುವುದು.

ಮಕರ: ವೈವಾಹಿಕ ಜೀವನದ ಆರಂಭದಲ್ಲಿರುವವರು ಧೈರ್ಯದಿಂದ ಎಲ್ಲವನ್ನು ಎದುರಿಸುವ ಮನಸ್ಥಿತಿಯನ್ನು ಬೆಳೆಸಿಕೊಳ್ಳಿ. ನಿಲುವಿನಲ್ಲಿ ಆದಷ್ಟು ಸ್ಥಿರವಾಗಿರುವಂಥ ಯೋಚನೆ ಮಾಡಿ. ಶುಭ ಸುದ್ದಿ ಕೇಳುವಿರಿ.

ಕುಂಭ: ಬಂಗಾರದ ಬೆಲೆಯ ಹಾವು –ಏಣಿ ಆಟವು ಒಂದು ರೀತಿಯ ಪರಿಣಾಮವನ್ನು ಉಂಟುಮಾಡುವ ಸಾಧ್ಯತೆಗಳಿವೆ. ಮನಸ್ಸು ಕೆಟ್ಟ ಆಲೋಚನೆ ಹಾಗೂ ವಂಚನೆ ಮಾಡದಂತೆ ತಡೆಯೊಡ್ಡಿ.

ಮೀನ: ಸಂಗಾತಿಯೊಂದಿಗಿನ ಮುನಿಸು ತಾಳ್ಮೆಯಿಂದ ಕಾದರೆ ಸರಿಹೋಗುತ್ತದೆ. ಉತ್ತಮ ಮಾತಿನ ಕಲೆಯು ನಿಮ್ಮ ಬೆಂಬಲಕ್ಕೆ ಸದಾ ಇದ್ದೇ ಇರುತ್ತದೆ.



ಚುಟುಕು

'ಮೋದಿ ಸರ್ಕಾರದಿಂದ ಭೂಮಿ, ನೀರು, ಅರಣ್ಯ ಲೂಟಿ'

ದೇವಗಢ (ಜಾರ್ಖಂಡ್) (ಪಿಟಿಐ): ಬ್ರಿಟಿಷರಂತೆ ನರೇಂದ್ರ ಮೋದಿ ಅವರ ಸರ್ಕಾರವು ಕಳೆದ 10 ವರ್ಷದಿಂದ ದೇಶದ ನೀರು, ಭೂಮಿ ಮತ್ತು ಅರಣ್ಯವನ್ನು ಲೂಟಿ ಮಾಡುತ್ತಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಶುಕ್ರವಾರ ಆರೋಪಿಸಿದರು.



ಜಾರ್ಖಂಡ್‌ನ ದೇವಗಢದಲ್ಲಿ ಚುನಾವಣಾ ರ್‍ಯಾಲಿ ನಡೆಸಿದ ಅವರು, 'ಪ್ರಧಾನಿ ಮೋದಿ ದೇಶದ ಸಂಪತ್ತನ್ನು ಅವರ ಕೋಟ್ಯಧಿಪತಿ ಸ್ನೇಹಿತರಿಗೆ ಹಸ್ತಾಂತರಿಸಿದರು. ನಾವು ಬ್ರಿಟಿಷರನ್ನು ಎದುರಿಸಿದವರು, ಬಿಜೆಪಿ ಬಗ್ಗೆ ನಮಗೆ ಭಯವಿಲ್ಲ' ಎಂದು ಹೇಳಿದರು.

'ಕಾಂಗ್ರೆಸ್ ಹಿಂದೂ ಮುಸ್ಲಿಮರನ್ನು ಒಗ್ಗೂಡಿಸುತ್ತಿದ್ದು, ಮೋದಿ ಅವರು ವಿಭಜಿಸುತ್ತಿದ್ದಾರೆ' ಎಂದು ಆರೋಪಿಸಿದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಆದಿವಾಸಿಗಳಿಗೆ ಪ್ರತ್ಯೇಕ ಧಾರ್ಮಿಕ ಕಟ್ಟಳೆ ಜಾರಿಗೊಳಿಸುವುದಾಗಿ ತಿಳಿಸಿದ ಅವರು, ಆದಿವಾಸಿ ನಾಯಕ ಹೇಮಂತ್ ಸೊರೇನ್ ಅವರನ್ನು ಜೈಲಿಗೆ ಕಳಿಸಿದ ಮೋದಿ ಅವರ ಅನ್ಯಾಯದ ವಿರುದ್ಧ ರಾಜ್ಯದ ಜನ ಸೇಡು ತೀರಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕಾಶ್ಮೀರಿ ಪಂಡಿತರ ಮತದಾನಕ್ಕೆ 34 ಮತಗಟ್ಟೆ ಸ್ಥಾಪನೆ

ಜಮ್ಮು (ಪಿಟಿಐ): ದೇಶದ ವಿವಿಧೆಡೆ ವಲಸೆ ಹೋಗಿರುವ 26 ಸಾವಿರಕ್ಕೂ ಹೆಚ್ಚಿನ ಕಾಶ್ಮೀರಿ ಪಂಡಿತರು ಮತದಾನ ಮಾಡಲು ಅನುಕೂಲವಾಗುವಂತೆ ದೆಹಲಿ, ಜಮ್ಮು ಮತ್ತು ಉಧಮ್‌ಪುರಗಳಲ್ಲಿ ಒಟ್ಟು 34 ಮತಗಟ್ಟೆಗಳನ್ನು ಆಯೋಗವು ಸ್ಥಾಪಿಸಿದೆ. ಶನಿವಾರ ನಡೆಯಲಿರುವ ಆರನೇ ಹಂತದ ಮತದಾನದ ವೇಳೆ ಈ ಜನರು ಜಮ್ಮು ಮತ್ತು ಕಾಶ್ಮೀರದ ಅನಂತನಾಗ್ ಲೋಕಸಭಾ ಕ್ಷೇತ್ರಕ್ಕೆ ಮತದಾನ ಮಾಡಲಿದ್ದಾರೆ.



ಈ ಎಲ್ಲರೂ ಮತಪತ್ರದ ಮೂಲಕ ಮತದಾನ ಮಾಡಲಿದ್ದಾರೆ. ಜಮ್ಮುವಿನಲ್ಲಿ 21 ಮತಗಟ್ಟೆ ಹಾಗೂ 8 ಸಹಾಯಕ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಉಧಮ್‌ಪುರದಲ್ಲಿ ಒಂದು ಹಾಗೂ ದೆಹಲಿಯಲ್ಲಿ ನಾಲ್ಕು ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಎಲ್ಲ ಕಾಶ್ಮೀರಿ ಪಂಡಿತರು ಮತಗಟ್ಟೆಗೆ ಬಂದು ಮತದಾನ ಮಾಡಬೇಕು ಎಂದು ಆಯೋಗ ಕೋರಿಕೊಂಡಿದೆ. ಹೆಚ್ಚು ನಿರಾಶ್ರಿತರು ಇರುವ ಪ್ರದೇಶಗಳನ್ನು ಗಮನದಲ್ಲಿ ಇಟ್ಟುಕೊಂಡು ವಾಹನ ವ್ಯವಸ್ಥೆಯನ್ನೂ ಆಯೋಗ ಮಾಡಿದೆ.

'ಮಾಲಿವಾಲ್ ಪ್ರಕರಣದಿಂದ ಸೋಲು'

ನವದೆಹಲಿ (ಪಿಟಿಐ): ರಾಜ್ಯಸಭಾ ಸದಸ್ಯೆ ಸ್ವಾತಿ ಮಾಲಿವಾಲ್ ಮೇಲೆ ನಡೆದ ಹಲ್ಲೆ ಪ್ರಕರಣದಿಂದಾಗಿ ಜನರು ಕೋಪಗೊಂಡಿದ್ದು, ದೆಹಲಿಯ ಲೋಕಸಭಾ ಕ್ಷೇತ್ರಗಳಲ್ಲಿ ಎಎಪಿ ಅಭ್ಯರ್ಥಿಗಳು ಸೋಲಲಿದ್ದಾರೆ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಗೌರವ್ ಭಾಟಿಯಾ ಶುಕ್ರವಾರ ಹೇಳಿದರು.

ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಆರೋಪಿ ಬಿಭವ್ ಕುಮಾರ್ ಅವರನ್ನು ರಕ್ಷಿಸಲು ಯತ್ನಿಸುತ್ತಿದ್ದಾರೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

'ಕೇಜ್ರಿವಾಲ್ ಅವರ ಸಮ್ಮುಖದಲ್ಲೇ ಬಿಭವ್ ಕುಮಾರ್ ಹಾಗೂ ಇತರರು ಹಲ್ಲೆ ನಡೆಸಿದ್ದಾರೆ ಎಂದು ಮಾಲಿವಾಲ್ ಅವರು ಆರೋಪಿಸಿದ್ದಾರೆ. ಆದರೆ ಈ ಕುರಿತು ಕೇಜ್ರಿವಾಲ್ ಅವರು ಮೌನ ಮುರಿದಿಲ್ಲ. ಅವರು ಎಂತಹ ಕೀಳುಮಟ್ಟದ ಹಾಗೂ ನಾಚಿಕೆ ಇಲ್ಲದ ಮನುಷ್ಯ ಎಂಬುದು ಇದರಿಂದ ಗೊತ್ತಾಗುತ್ತದೆ' ಎಂದರು.

'ಸತ್ಯವನ್ನು ಮರೆಮಾಚಲು ಮುಖ್ಯಮಂತ್ರಿಗಳ ಮನೆಯ ಸಿ.ಸಿ. ಕ್ಯಾಮರಾ ದೃಶ್ಯಾವಳಿಯನ್ನು ತಿರುಚಲಾಗಿದೆ' ಎಂದು ಗೌರವ್ ಆರೋಪಿಸಿದರು.

ಮಾಲಿವಾಲ್ ಅವರು ನೀಡಿದ್ದ ದೂರಿನ ಆಧಾರದಲ್ಲಿ ಕೇಜ್ರಿವಾಲ್ ಅವರ ಆಪ್ತ ಸಹಾಯಕ ಬಿಭವ್ ಕುಮಾರ್ ಅವರನ್ನು ಪೊಲೀಸರು ಈಚೆಗೆ ಬಂಧಿಸಿದ್ದರು.

'ಪ್ರಮಾಣಪತ್ರದಲ್ಲಿ ಸುಳ್ಳು ಮಾಹಿತಿ'

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಘಟಾಲ್ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಹಿರಣ್ಮಯ್ ಚಟ್ಟೋಪಾಧ್ಯಾಯ ಅವರು ತಮ್ಮ ಪ್ರಮಾಣ ಪತ್ರದಲ್ಲಿ ಶೈಕ್ಷಣಿಕ ಅರ್ಹತೆಗೆ ಸಂಬಂಧಿಸಿದಂತೆ ತಪ್ಪು ಮಾಹಿತಿ ನೀಡಿದ್ದಾರೆ ಎಂದು ಆರೋಪಿಸಿರುವ ಎಎಪಿ, ಅವರ ಉಮೇದುವಾರಿಕೆಯನ್ನು ರದ್ದುಪಡಿಸಬೇಕೆಂದು ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿದೆ.

ನಟ, ರಾಜಕಾರಣಿ ಚಟ್ಟೋಪಾಧ್ಯಾಯ ಅವರು ತಾವು ಖರಗ್‌ಪುರದ ಐಐಟಿಯಲ್ಲಿ ಸಂಶೋಧನಾ ವಿದ್ಯಾರ್ಥಿ ಎಂದು ತಪ್ಪು ಮಾಹಿತಿ ನೀಡಿದ್ದಾರೆ ಎಂದು ಆರೋಪಿಸಲಾಗಿದೆ.

'ಚಟ್ಟೋಪಾಧ್ಯಾಯ ಅವರು ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ನೀಡಿರುವಂತೆ ಅವರು ಸಂಶೋಧನಾ ವಿದ್ಯಾರ್ಥಿಯಾಗಲಿ, ಬೋಧಕರಾಗಲಿ, ಸಂಶೋಧನಾ ಸಹಾಯಕರಾಗಲಿ, ವಿಜ್ಞಾನಿಯಾಗಲಿ ಅಲ್ಲ ಎನ್ನುವುದು ಆರ್‌ಟಿಐ ಅರ್ಜಿಯಿಂದ ಬಹಿರಂಗಗೊಂಡಿದೆ' ಎಂದು ಎಎಪಿ ಬರೆದಿರುವ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಎಎಪಿಯ ಆರೋಪವನ್ನು ನಿರಾಕರಿಸಿರುವ ಚಟ್ಟೋಪಾಧ್ಯಾಯ, 'ಇದು ಆಡಳಿತಾರೂಢ ಟಿಎಂಸಿಯ ಕುತಂತ್ರ' ಎಂದು ಹೇಳಿದ್ದಾರೆ. ತನಗೆ ಅಪಖ್ಯಾತಿ ತರಲು ಯತ್ನಿಸಿದವರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುವುದಾಗಿ ತಿಳಿಸಿದ್ದಾರೆ.

ಎಎಪಿಯ ದೂರನ್ನು ಪರಿಶೀಲಿಸಲಾಗುತ್ತಿದ್ದು, ಅಗತ್ಯ ಕ್ರಮ ಜರುಗಿಸಲಾಗುವುದು ಎಂದು ಪಶ್ಚಿಮ ಬಂಗಾಳದ ಮುಖ್ಯ ಚುನಾವಣಾಧಿಕಾರಿ ತಿಳಿಸಿದ್ದಾರೆ.

'ಐದು ವರ್ಷವೂ ಒಬ್ಬರೇ ಪ್ರಧಾನಿ'

ಚಂಡೀಗಢ (ಪಿಟಿಐ): 'ಲೋಕಸಭಾ ಚುನಾವಣೆಯಲ್ಲಿ 'ಇಂಡಿಯಾ' ಮೈತ್ರಿಕೂಟಕ್ಕೆ ಸ್ಪಷ್ಟ ಬಹುಮತ ಬರುತ್ತದೆ. ಮೈತ್ರಿಕೂಟದ ನಾಯಕರು ಸೇರಿ ಪ್ರಧಾನಿಯನ್ನು ಆಯ್ಕೆ ಮಾಡುತ್ತಾರೆ. ಆಯ್ಕೆಯಾದವರು ಐದು ವರ್ಷಗಳವರೆಗೂ ಅದೇ ಸ್ಥಾನದಲ್ಲಿ ಇರಲಿದ್ದಾರೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಶುಕ್ರವಾರ ಹೇಳಿದರು.




'ಭಾರತ ಪ್ರಕಾಶಿಸುತ್ತಿದೆ' ಎಂಬ ಪ್ರಚಾರದ ನಡುವೆಯೂ 2004ರಲ್ಲಿ ಯುಪಿಎ ಸರ್ಕಾರ ರಚಿಸಿತ್ತು. ಫಲಿತಾಂಶ ಬಂದ ಮೂರು ದಿನಗಳಲ್ಲಿ ಡಾ.ಮನಮೋಹನ್ ಸಿಂಗ್ ಅವರನ್ನು ಪ್ರಧಾನಿಯನ್ನಾಗಿ ಘೋಷಿಸಲಾಗಿತ್ತು. ಈ ಬಾರಿ ಮೂರು ದಿನವೂ ಬೇಕಾಗುವುದಿಲ್ಲ' ಎಂದರು.

ಎಂಥಾ ಮಾತು!



ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪಿ ಪ್ರಜ್ವಲ್ ರೇವಣ್ಣ ಪರವಾಗಿ ಚುನಾವಣಾ ಪ್ರಚಾರ ಮಾಡಿರುವುದಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಮಹಿಳೆಯರಿಗೆ ಸ್ಪಷ್ಟನೆ ನೀಡಬೇಕು. ಪ್ರಜ್ವಲ್ ವಿರುದ್ಧದ ಆರೋಪಗಳ ಬಗ್ಗೆ ತಿಳಿದಿದ್ದರೂ, ರಾಜಕೀಯ ಲಾಭಕ್ಕಾಗಿ ಬಿಜೆಪಿಯು ಅದನ್ನು ಗಣನೆಗೆ ತೆಗೆದುಕೊಂಡಿಲ್ಲ. ಪಾಕ್ ಆಕ್ರಮಿತ ಕಾಶ್ಮೀರವನ್ನು ಮರಳಿ ವಶಕ್ಕೆ ಪಡೆಯುತ್ತೇವೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಹೇಳುತ್ತಿದ್ದಾರೆ. ಕಳೆದ 10 ವರ್ಷಗಳಲ್ಲಿ ಅವರು ಏನು ಮಾಡುತ್ತಿದ್ದರು? ನಮ್ಮ ಹಲವು ಗಡಿ ಠಾಣೆಗಳನ್ನು ಚೀನಾ ವಶಪಡಿಸಿಕೊಂಡಿದೆ. ಆದರೆ, ಕೇಂದ್ರ ಸರ್ಕಾರ ಕೈಕಟ್ಟಿ ಕುಳಿತಿದೆ

ಶಶಿ ತರೂರ್, ಕಾಂಗ್ರೆಸ್ ಮುಖಂಡ



ಕಾಂಗ್ರೆಸ್ ಪಕ್ಷವು ಜಾರ್ಖಂಡ್ ಅನ್ನು 'ಭ್ರಷ್ಟಾಚಾರದ ಎಟಿಎಂ' ಆಗಿ ನೋಡುತ್ತಿದೆ. ಕಾಂಗ್ರೆಸ್ ಮತ್ತು ಹೇಮಂತ್ ಸೊರೇನ್ ಅವರ ಜೆಎಂಎಂ ಆ ರಾಜ್ಯದಲ್ಲಿ ಭ್ರಷ್ಟಾಚಾರ ಮಾಡಲು ಪೈಪೋಟಿಗಿಳಿದಿವೆ. ಹೇಮಂತ್ ಸೊರೇನ್ ಸೇರಿದಂತೆ ಜೆಎಂಎಂನ ಭ್ರಷ್ಟ ಮುಖಂಡರು ಕಾಂಗ್ರೆಸ್‌ನ ತೊಡೆಯಲ್ಲಿ ಕೂತಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ದೇಶವನ್ನು ನಕ್ಸಲರಿಂದ ರಕ್ಷಿಸಿದ್ದಾರೆ ಮತ್ತು ಬುಡಕಟ್ಟು ಜನರಿಗೆ ನ್ಯಾಯ ಒದಗಿಸಿದ್ದಾರೆ

ಅಮಿತ್ ಶಾ, ಕೇಂದ್ರ ಗೃಹ ಸಚಿವ


ಆರನೇ ಹಂತ: ಕಣದಲ್ಲಿರುವ ಪ್ರಮುಖರು

ಲೋಕಸಭಾ ಚುನಾವಣೆಯ ಆರನೇ ಹಂತದ ಚುನಾವಣೆ ಶನಿವಾರ ನಡೆಯಲಿದ್ದು, ಕಣದಲ್ಲಿ ವಿವಿಧ ರಾಜ್ಯಗಳ 889 ಅಭ್ಯರ್ಥಿಗಳಿದ್ದಾರೆ. ಕಾಂಗ್ರೆಸ್, ಬಿಜೆಪಿ, ಪಿಡಿಪಿಯ ಹಲವು ಘಟಾನುಘಟಿ ನಾಯಕರ ಭವಿಷ್ಯ ಇಂದು ನಿರ್ಧಾರವಾಗಲಿದೆ. ಕಣದಲ್ಲಿರುವ ಪ್ರಮುಖ ಅಭ್ಯರ್ಥಿಗಳ ಪುಟ್ಟ ಪರಿಚಯ ಇಲ್ಲಿದೆ.

ಮೆಹಬೂಬಾ ಮುಫ್ತಿ (ಪಿಡಿಪಿ)

ಕ್ಷೇತ್ರ: ಅನಂತನಾಗ್–ರಜೌರಿ, ಜಮ್ಮು ಮತ್ತು ಕಾಶ್ಮೀರ


ಕೇಂದ್ರಾಡಳಿತ ಪ್ರದೇಶವಾದ ಜಮ್ಮು ಮತ್ತು ಕಾಶ್ಮೀರದ ಅನಂತ್‌ನಾಗ್–ರಜೌರಿ ಲೋಕಸಭಾ ಕ್ಷೇತ್ರದಿಂದ ಪಿಡಿಪಿ ಅಭ್ಯರ್ಥಿಯಾಗಿ ಪಕ್ಷದ ಅಧ್ಯಕ್ಷೆ ಮೆಹಬೂಬಾ ಮುಫ್ತಿ ಅವರೇ ಸ್ಪರ್ಧಿಸುತ್ತಿದ್ದಾರೆ. ಪುನರ್ ವಿಂಗಡಣೆಯಾದ ಬಳಿಕ ಹೊಸದಾಗಿ ರಚನೆಯಾದ ಈ ಕ್ಷೇತ್ರದಿಂದ ಮೆಹಬೂಬಾ ಅವರಿಗೆ ಪ್ರತಿಸ್ಪರ್ಧಿಯಾಗಿ ನ್ಯಾಷನಲ್ ಕಾನ್ಫರೆನ್ಸ್, ಗುಜ್ಜರ್ ಮುಖಂಡ ಮಿಯಾನ್ ಅಲ್ತಾಫ್ ಅಹಮ್ಮದ್ ಅವರನ್ನು ಅಖಾಡಕ್ಕಿಳಿಸಿದೆ. ಪಿಡಿಪಿ ಕೂಡ ಆರಂಭದಲ್ಲಿ 'ಇಂಡಿಯಾ' ಒಕ್ಕೂಟದ ಜೊತೆಗೆ ಗುರುತಿಸಿಕೊಂಡಿತ್ತು. ಆದರೆ ನ್ಯಾಷನಲ್ ಕಾನ್ಫರೆನ್ಸ್ ಜಮ್ಮು ಮತ್ತು ಕಾಶ್ಮೀರದ ಎಲ್ಲಾ ಕ್ಷೇತ್ರಗಳಲ್ಲೂ ಸ್ಪರ್ಧಿಸುವುದಾಗಿ ಘೋಷಿಸಿದ ಬಳಿಕ, ತಮ್ಮ ಪಕ್ಷವು ಏಕಾಂಗಿಯಾಗಿ ಸ್ಪರ್ಧಿಸುವುದಾಗಿ ಮುಫ್ತಿ ಘೋಷಿಸಿದ್ದರು.ಜಮ್ಮು ಮತ್ತು ಕಾಶ್ಮೀರದ ಮೊದಲ ಮಹಿಳಾ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ಮುಫ್ತಿ ಅವರು, ಬಿಜೆಪಿ ಜೊತೆಗೆ ಮೈತ್ರಿ ಮಾಡಿಕೊಂಡು ಸರ್ಕಾರ ರಚಿಸಿದ್ದರು. 2018ರಲ್ಲಿ ಬಿಜೆಪಿಯು ಬೆಂಬಲ ಹಿಂಪಡೆದಾಗ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.




ಮನೋಹರ್ ಲಾಲ್ ಖಟ್ಟರ್ (ಬಿಜೆಪಿ)

ಕ್ಷೇತ್ರ: ಕರ್ನಾಲ್, ಹರಿಯಾಣ

ಹರಿಯಾಣದ ಪ್ರತಿಷ್ಠಿತ ಕ್ಷೇತ್ರಗಳಲ್ಲೊಂದಾದ ಕರ್ನಾಲ್ ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಮಾಜಿ ಮುಖ್ಯಮಂತ್ರಿ ಮನೋಹರ ಲಾಲ್ ಖಟ್ಟರ್ ಸ್ಪರ್ಧೆಗಿಳಿದಿದ್ದಾರೆ. ಇವರಿಗೆ ಪ್ರತಿಸ್ಪರ್ಧಿಯಾಗಿ ದಿವ್ಯಾಂಶು ಬುದ್ಧಿರಾಜ ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿದೆ. 2019ರ ಲೋಕಸಭಾ ಚುನಾವಣೆಯಲ್ಲಿ ಈ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಸಂಜಯ್ ಭಾಟಿಯಾ ಅವರು 6,56,142 ಮತಗಳ ಅಂತರದಿಂದ ಕಾಂಗ್ರೆಸ್‌ನ ಕುಲ್‌ದೀಪ್ ಶರ್ಮಾ ಅವರನ್ನು ಸೋಲಿಸಿದ್ದರು. ಖಟ್ಟರ್ ಅವರು 2014 ರಿಂದಲೂ ಕರ್ನಾಲ್ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. ಹರಿಯಾಣದ ಆಡಳಿತಾರೂಢ ಬಿಜೆಪಿ ಮತ್ತು ಜನನಾಯಕ್ ಜನತಾ ಪಾರ್ಟಿ (ಜೆಜೆಪಿ) ನಡುವಿನ ಮೈತ್ರಿಯಲ್ಲಿ ಬಿರುಕು ಮೂಡುವ ಊಹಾಪೋಗಳ ನಡುವೆ ಮಾರ್ಚ್ 12 ರಂದು ಖಟ್ಟರ್ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.





ಕನ್ಹಯ್ಯ ಕುಮಾರ್ (ಕಾಂಗ್ರೆಸ್), ಕ್ಷೇತ್ರ: ಈಶಾನ್ಯ ದೆಹಲಿ

ಈಶಾನ್ಯ ದೆಹಲಿ ಲೋಕಸಭಾ ಕ್ಷೇತ್ರದಿಂದ ಯುವ ಮುಖಂಡ ಕನ್ಹಯ್ಯ ಕುಮಾರ್ ಅವರನ್ನು ಕಾಂಗ್ರೆಸ್ ಅಖಾಡಕ್ಕಿಳಿಸಿದೆ. ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿ ಆಯ್ಕೆಯಾಗುವ ಮೂಲಕ ಮುನ್ನೆಲೆಗೆ ಬಂದಿದ್ದರು.


2019ರ ಲೋಕಸಭಾ ಚುನಾವಣೆಯಲ್ಲಿ ಬಿಹಾರದ ಬೆಗುಸರಾಯ್ ಕ್ಷೇತ್ರದಿಂದ ಸಿಪಿಐನಿಂದ ಸ್ಪರ್ಧಿಸಿ ಪರಾಭಗೊಂಡಿದ್ದರು. 2021ರಲ್ಲಿ ಅವರು ಕಾಂಗ್ರೆಸ್‌ಗೆ ಸೇರ್ಪಡೆಗೊಂಡಿದ್ದರು. ಕನ್ಹಯ್ಯ ಅವರಿಗೆ ಪ್ರತಿಸ್ಪರ್ಧಿಯಾಗಿ ಬಿಜೆಪಿಯ ಮನೋಜ್ ತಿವಾರಿ ಸ್ಪರ್ಧಿಸುತ್ತಿದ್ದಾರೆ. 2019ರ ಚುನಾವಣೆಯಲ್ಲಿ ಮನೋಜ್ ಅವರು 3,66,102 ಮತಗಳ ಅಂತರದಿಂದ ಕಾಂಗ್ರೆಸ್‌ನ ಶೀಲಾ ದೀಕ್ಷಿತ್ ಅವರನ್ನು ಸೋಲಿಸಿದ್ದರು.



ಮೇನಕಾ ಗಾಂಧಿ (ಬಿಜೆಪಿ)

ಕ್ಷೇತ್ರ: ಸುಲ್ತಾನ್‌ಪುರ, ಉತ್ತರ ಪ್ರದೇಶ

ಉತ್ತರ ಪ್ರದೇಶದ ಪ್ರತಿಷ್ಠಿತ ಲೋಕಸಭಾ ಕ್ಷೇತ್ರಗಳಲ್ಲೊಂದಾದ ಸುಲ್ತಾನ್‌ಪುರ ಲೋಕಸಭಾ ಕ್ಷೇತ್ರದಿಂದ ಬಿಜೆಪಿಯು ಈ ಬಾರಿಯೂ ಮೇನಕಾ ಗಾಂಧಿ ಅವರನ್ನೇ ಕಣಕ್ಕಿಳಿಸಿದೆ. 2019ರ ಚುನಾವಣೆಯಲ್ಲಿ ಮೇನಕಾ ಗಾಂಧಿ ಅವರು 14,526 ಮತಗಳ ಅಂತರದಿಂದ ಬಿಎಸ್‌ಪಿಯ ಚಂದ್ರಭದ್ರ ಸಿಂಗ್ ಅವರನ್ನು ಪರಾಭವಗೊಳಿಸಿದ್ದರು. ಸಮಾಜವಾದಿ ಪಕ್ಷವು (ಎಸ್‌ಪಿ) ಈ ಕ್ಷೇತ್ರದಿಂದ ಭೂವಾಲ್ ನಿಶಾದ್ ಅವರನ್ನು ಸ್ಪರ್ಧೆಗಿಳಿಸಿದೆ. ಬಿಎಸ್‌ಪಿಯು ಉದಯ್ ರಾಜ್ ವರ್ಮಾ ಅವರನ್ನು ಅಖಾಡಕ್ಕಿಳಿಸಿದೆ. ಕಳೆದ ಚುನಾವಣೆಯಲ್ಲಿ ಎಸ್‌ಪಿ ಮತ್ತು ಬಿಎಸ್‌ಪಿ ಮೈತ್ರಿ ಮಾಡಿಕೊಂಡು ಲೋಕಸಭಾ ಚುನಾವಣೆಯನ್ನು ಎದುರಿಸಿದ್ದವು. ರಾಜಕಾರಣಿ ಹಾಗೂ ಪ್ರಾಣಿ ಹಕ್ಕುಗಳ ಹೋರಾಟಗಾರ್ತಿಯಾಗಿರುವ ಮೇನಕಾ ಅವರು ಕೇಂದ್ರ ಸಚಿವೆಯಾಗಿಯೂ ಕಾರ್ಯನಿರ್ವಹಿಸಿದ್ದರು.



ಧರ್ಮೇಂದ್ರ ಪ್ರಧಾನ್ (ಬಿಜೆಪಿ) ಕ್ಷೇತ್ರ: ಸಂಬಲ್‌ಪುರ, ಒಡಿಶಾ

ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಒಡಿಶಾದ ಸಂಬಲ್‌ಪುರ ಕ್ಷೇತ್ರದಿಂದ ಕಣಕ್ಕಿಳಿದಿದ್ದಾರೆ. ಈ ಹಿಂದೆ ಅವರು ರಾಜ್ಯಸಭಾ ಸದಸ್ಯರಾಗಿ ಸಂಸತ್ ಪ್ರವೇಶಿಸಿದ್ದರು. 2019ರ ಚುನಾವಣೆಯಲ್ಲಿ ಈ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ನಿತೇಶ್ ಗಂಗಾ ದೇವ್ ಅವರು 9,162 ಮತಗಳ ಅಂತರದಿಂದ ಬಿಜು ಜನತಾ ದಳ (ಬಿಜೆಡಿ) ಅಭ್ಯರ್ಥಿ ನಳಿನಿ ಕಾಂತ ಪ್ರಧಾನ್ ಅವರನ್ನು ಪರಾಭವಗೊಳಿಸಿದ್ದರು. ಈ ಬಾರಿ ಬಿಜೆಡಿಯು ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಘಟನಾ) ಪ್ರಣವ್ ಪ್ರಕಾಶ್ ದಾಸ್ ಅವರನ್ನು ಪ್ರಧಾನ್ ವಿರುದ್ಧ ಅಖಾಡಕ್ಕಿಳಿಸಿದೆ. ಕಾಂಗ್ರೆಸ್ ಕೂಡ ನಾಗೇಂದ್ರ ಕುಮಾರ್ ಪ್ರಧಾನ್ ಅವರನ್ನು ಅಭ್ಯರ್ಥಿಯಾಗಿಸಿದೆ.





ದೀಪೇಂದರ್ ಹೂಡಾ (ಕಾಂಗ್ರೆಸ್) ಕ್ಷೇತ್ರ: ರೋಹ್ಟಕ್, ಹರಿಯಾಣ

ಹರಿಯಾಣದ ರೋಹ್ಟಕ್ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ರಾಜ್ಯಸಭಾ ಸದಸ್ಯ ದೀಪೇಂದರ್ ಹೂಡಾ ಕಣಕ್ಕಿಳಿದಿದ್ದಾರೆ. 2019ರ ಚುನಾವಣೆಯಲ್ಲಿ ಈ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಅರವಿಂದ ಕುಮಾರ್ ಶರ್ಮಾ ಅವರು, 7,503 ಮತಗಳ ಅಂತರದಿಂದ ದೀಪೇಂದರ್ ಅವರನ್ನು ಪರಾಭವಗೊಳಿಸಿದ್ದರು. ಈ ಬಾರಿಯೂ ಬಿಜೆಪಿಯಿಂದ ಅರವಿಂದ ಕುಮಾರ್ ಅವರೇ ಅಖಾಡಕ್ಕಿಳಿದಿದ್ದಾರೆ. 2009 ಮತ್ತು 2014ರಲ್ಲಿ ಈ ಕ್ಷೇತ್ರದಿಂದ ದೀಪೇಂದರ್ ಅವರು ಸಂಸದರಾಗಿ ಆಯ್ಕೆಯಾಗಿದ್ದರು. ದೀಪೇಂದರ್ ಹೂಡಾ ಅವರು ಸ್ಥಳೀಯವಾಗಿಯೂ ಪ್ರಭಾವಿ ಮುಖಂಡರಾಗಿದ್ದಾರೆ. ದೀಪೇಂದರ್ ಅವರ ತಂದೆ ಭೂಪಿಂದರ್ ಹೂಡಾ ಅವರು ಹರಿಯಾಣದ ಮಾಜಿ ಮುಖ್ಯಮಂತ್ರಿಯಾಗಿದ್ದಾರೆ.

ಹಿಮಾಚಲ ಪ್ರದೇಶ, ಪಂಜಾಬ್‌ನಲ್ಲಿ ಪ್ರಧಾನಿ ಮೋದಿ ಚುನಾವಣಾ ಪ್ರಚಾರ

'ಸಿಖ್ ವಿರೋಧಿಗಳನ್ನು ರಕ್ಷಿಸಿದ ಕಾಂಗ್ರೆಸ್'

ಗುರುದಾಸಪುರ/ಜಲಂಧರ್/ಶಿಮ್ಲಾ (ಪಿಟಿಐ): 1984ರ ಸಿಖ್ ವಿರೋಧಿ ಗಲಭೆಗಳಿಗೆ ಸಂಬಂಧಿಸಿದಂತೆ ಕಾಂಗ್ರೆಸ್ ಪಕ್ಷದ ವಿರುದ್ಧ ಶುಕ್ರವಾರ ವಾಗ್ದಾಳಿ ನಡೆಸಿದ ಪ್ರಧಾನಿ ನರೇಂದ್ರ ಮೋದಿ ಅವರು, ಅದು (ಕಾಂಗ್ರೆಸ್) ಗಲಭೆಕೋರರನ್ನು ರಕ್ಷಿಸಿತು ಎಂದು ಆರೋಪಿಸಿದರು. ತಪ್ಪಿತಸ್ಥರಿಗೆ ಶಿಕ್ಷೆಯಾಗುವಂತೆ ಮಾಡುವುದಾಗಿ ಅವರು ಭರವಸೆ ನೀಡಿದರು.

ಪಂಜಾಬ್‌ನ ಗುರುದಾಸಪುರದಲ್ಲಿ ಚುನಾವಣಾ ಪ್ರಚಾರ ನಡೆಸಿದ ಅವರು, 'ಮೋದಿ ಸಿಖ್ ವಿರೋಧಿ ಗಲಭೆಗಳ ಕಡತಗಳನ್ನು ಹೊರ ತೆಗೆದರು. ತಪ್ಪಿತಸ್ಥರಿಗೆ ಶಿಕ್ಷೆಯ ಖಾತರಿ ನೀಡಿದ್ದು ಕೂಡ ಮೋದಿಯೇ' ಎಂದು ಹೇಳಿದರು.

ನಂತರ ಜಲಂಧರ್‌ನಲ್ಲಿ ಚುನಾವಣಾ ಪ್ರಚಾರ ನಡೆಸಿದ ಅವರು, 'ವಿರೋಧಿ ಕೂಟದ ಬಲೂನ್ ಒಡೆದಿದ್ದು, ಯಾರೂ ಅದಕ್ಕೆ ಮತ ನೀಡಲು ಸಿದ್ಧರಿಲ್ಲ' ಎಂದು ಪ್ರತಿಪಾದಿಸಿದರು.

'ನೀವು ಜಲಂಧರ್‌ನ ಚೌಕದಲ್ಲಿ ನಿಂತು ಈ ಬಾರಿ ಯಾರು ಸರ್ಕಾರ ರಚನೆ ಮಾಡುತ್ತಾರೆ ಎಂದು 100 ಜನರನ್ನು ಕೇಳಿದರೆ, 90 ಜನ ಮೋದಿ ಸರ್ಕಾರ ಮತ್ತೆ ಬರುತ್ತದೆ ಎಂದು ಹೇಳುತ್ತಾರೆ' ಎಂದರು.

'ಕಳೆದ 10 ವರ್ಷದಲ್ಲಿ ದೇಶ ಹೊಸ ಕಾಲಮಾನವನ್ನು ಕಂಡಿದೆ. ಕಾಂಗ್ರೆಸ್ ಅವಧಿಯಲ್ಲಿ ಜನ ಸಂಕಷ್ಟ ಎದುರಿಸಿದ್ದು, ಅವನ್ನು ನಾನು ಬಗೆಹರಿಸಿದ್ದೇನೆ' ಎಂದು ಪ್ರತಿಪಾದಿಸಿದರು.

'ಕಾಂಗ್ರೆಸ್ ಎಲ್ಲಿದೆಯೋ ಅಲ್ಲಿ ಸಮಸ್ಯೆಗಳು ಉಳಿದಿರುತ್ತವೆ ಎಂದು ದೇಶವು ಅರ್ಥಮಾಡಿಕೊಂಡಿದೆ. ಬಿಜೆಪಿ ಎಲ್ಲಿದೆಯೋ ಅಲ್ಲಿ ಪರಿಹಾರಗಳು ಇರುತ್ತವೆ. ಹೀಗಾಗಿಯೇ ಇಡೀ ದೇಶ ಇಂದು ಒಂದೇ ಧ್ವನಿಯಲ್ಲಿ ಕೂಗುತ್ತಿದೆ.. ಜೂನ್ 4ರಂದು..' ಎಂದು ಮೋದಿ ಹೇಳಿದಾಗ ನೆರೆದಿದ್ದ ಜನ 'ಚಾರ್ ಸೌ ಪಾರ್' ಎಂದು ಕೂಗಿದರು.

'ಕರ್ತಾರ್‌ಪುರ ಸಾಹಿಬ್ ನಮ್ಮ ಗಡಿಗೆ ಅತಿ ಸಮೀಪದಲ್ಲಿದೆ. ಆದರೆ, ಕಾಂಗ್ರೆಸ್ ಅದನ್ನು ಪಾಕಿಸ್ತಾನಕ್ಕೆ ನೀಡಿತು' ಎಂದು ಆರೋಪಿಸಿದರು.



ಪಂಜಾಬ್‌ನ ಗುರುದಾಸಪುರದಲ್ಲಿ ಚುನಾವಣಾ ರ್‍ಯಾಲಿ ನಡೆಸಿದ ಪ್ರಧಾನಿ ನರೇಂದ್ರ ಮೋದಿ ಅವರು, ಖಡ್ಗವನ್ನು ಕಣ್ಣಿಗೊತ್ತಿಕೊಂಡು ನಮಸ್ಕರಿಸಿದರು–ಪಿಟಿಐ ಚಿತ್ರ

> **ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಅವರು ಸ್ವತಂತ್ರವಾಗಿ ಯಾವುದೇ ನಿರ್ಧಾರ ತೆಗೆದುಕೊಳ್ಳುವುದಿಲ್ಲ. ಅವರು ಆದೇಶಗಳನ್ನು ಪಡೆಯಲು ತಿಹಾರ್ ಜೈಲಿಗೆ ಹೋಗುತ್ತಾರೆ**
>
> **ನರೇಂದ್ರ ಮೋದಿ,** ಪ್ರಧಾನಿ

'ಪಂಜಾಬ್‌ಗುರುಗಳನೆಲ.ಆದರೆ, ಕಾಂಗ್ರೆಸ್ ಇದನ್ನು ಭೂಮಿಯ ತುಂಡು ಎನ್ನುವುದಕ್ಕಿಂತ ಹೆಚ್ಚಾಗಿ ಎಂದೂ ಪರಿಭಾವಿಸಲಿಲ್ಲ. ಅತ್ಯಂತ ಹಳೆಯ ಪಕ್ಷವು ಒಂದು ಕುಟುಂಬಕ್ಕೆ ಅಧಿಕಾರ ನೀಡಲು 1947ರಲ್ಲಿ ರಾಜ್ಯವನ್ನು ವಿಭಾಗಿಸಿತು' ಎಂದು ಹೇಳಿದರು.

ಅದಕ್ಕೂ ಮುನ್ನ ಹಿಮಾಚಲ ಪ್ರದೇಶದಲ್ಲಿ ರ್‍ಯಾಲಿ ನಡೆಸಿದ ಅವರು, 'ರಾಜ್ಯದ ಯುವಜನತೆಗಾಗಿ ಒಂದು ಲಕ್ಷ ಉದ್ಯೋಗ ಸೃಷ್ಟಿ ಮಾಡುವ ಭರವಸೆಯನ್ನು ಕಾಂಗ್ರೆಸ್ ಈಡೇರಿಸಲಿಲ್ಲ. ಪಕ್ಷವು ರಾಜ್ಯ ಸಿಬ್ಬಂದಿ ನೇಮಕಾತಿ ಆಯೋಗಕ್ಕೆ ಬೀಗ ಹಾಕಿತು' ಎಂದು ಆರೋಪಿಸಿದರು.

'ವಿಜಯ ಸಂಕಲ್ಪ ಯಾತ್ರೆ' ಉದ್ದೇಶಿಸಿ ಮಾತನಾಡಿದ ಅವರು, 'ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳಲ್ಲಿ ಕೋಮುವಾದ, ಜಾತಿವಾದ ಮತ್ತು ಕುಟುಂಬ ರಾಜಕಾರಣ ಸಾಮಾನ್ಯವಾಗಿವೆ' ಎಂದು ಅಭಿಪ್ರಾಯಪಟ್ಟರು.

'ಗಡಿಗಳಲ್ಲಿ ವಾಸ ಮಾಡುವ ರಾಜ್ಯದ ಜನರಿಗೆ ಬಲಿಷ್ಠ ಸರ್ಕಾರದ ಬೆಲೆ ಗೊತ್ತು' ಎಂದು ಹೇಳಿದ ಅವರು, 'ಬಿಜೆಪಿಯ ಮೂರನೇ ಅವಧಿಗೆ ನಿಮ್ಮ ಆಶೀರ್ವಾದ ಪಡೆಯಲು ನಾನು ಇಲ್ಲಿಗೆ ಬಂದಿದ್ದೇನೆ. ನನಗಾಗಿ ಅಥವಾ ನನ್ನ ಕುಟುಂಬಕ್ಕಾಗಿ ಅಲ್ಲ, ಅಭಿವೃದ್ಧಿ ಹೊಂದಿದ ದೇಶಕ್ಕಾಗಿ' ಎಂದು ಪ್ರತಿಪಾದಿಸಿದರು.

'ಹಿಂದುಳಿದ ವರ್ಗಗಳ ಮೀಸಲಾತಿಯನ್ನು ಕಸಿದುಕೊಳ್ಳುವ ಕಾಂಗ್ರೆಸ್, ಅದನ್ನು ಮುಸ್ಲಿಮರಿಗೆ ನೀಡುತ್ತಿದೆ' ಎಂದರು.

'ಎಂಎಸ್‌ಪಿ ಕುರಿತ ನಿಲುವು ಬದಲಿಸಿದ್ದೇಕೆ?'

ನವದೆಹಲಿ (ಪಿಟಿಐ): 'ಬಿಜೆಪಿಯು ಪಂಜಾಬ್‌ನ ಪ್ರತಿಭಟನಾನಿರತ ರೈತರಿಗೆ ಅಪಖ್ಯಾತಿ ತರುತ್ತಿದ್ದು, ಭಾರತದ ಬಗೆಗಿನ ಅವರ ನಿಷ್ಠೆಯನ್ನು ಪ್ರಶ್ನಿಸುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರು ರೈತರ ಕ್ಷಮೆ ಕೇಳಬೇಕು' ಎಂದು ಕಾಂಗ್ರೆಸ್ ಶುಕ್ರವಾರ ಆಗ್ರಹಿಸಿದೆ.

ಪ್ರಧಾನಿ ಮೋದಿ ಅವರು ಪಂಜಾಬ್‌ನಲ್ಲಿ ಚುನಾವಣಾ ಪ್ರಚಾರ ನಡೆಸಿದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಹಲವು ಪ್ರಶ್ನೆಗಳನ್ನು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಪಂಜಾಬ್‌ನ ಕೃಷಿಗೆ ಪೂರೈಸಲಾಗುತ್ತಿರುವ ವಿದ್ಯುತ್‌ಗೆ ಬೆದರಿಕೆ ಉಂಟಾಗಿರುವುದು ಏಕೆ? ಪ್ರಮುಖ ಆಷಾಢಭೂತಿ ಕನಿಷ್ಠ ಬೆಂಬಲ ಬೆಲೆಯ (ಎಂಎಸ್‌ಪಿ) ಬಗೆಗಿನ ತನ್ನ ಮೊದಲಿನ ನಿಲುವನ್ನು ಬದಲಿಸಿಕೊಂಡದ್ದು ಏಕೆ? ನಿರ್ಗಮಿಸುತ್ತಿರುವ ಪ್ರಧಾನಿಯು ರೈತರಿಗೆ ಅಪಖ್ಯಾತಿ ಉಂಟುಮಾಡುತ್ತಾ, ಅವರ ನಿಷ್ಠೆಯನ್ನು ನಿರಂತರವಾಗಿ ಪ್ರಶ್ನಿಸುತ್ತಿರುವುದು ಏಕೆ?' ಜೈರಾಮ್ ರಮೇಶ್ ತಮ್ಮ ಪೋಸ್ಟ್‌ನಲ್ಲಿ ಉಲ್ಲೇಖಿಸಿದ್ದಾರೆ.

ಏಪ್ರಿಲ್ 2014ರಲ್ಲಿ ಗುಜರಾತ್ ಮುಖ್ಯಮಂತ್ರಿ ಆಗಿದ್ದ ಮೋದಿ ಅವರು, ರೈತರಿಗೆ ಎಂಎಸ್‌ಪಿ ನೀಡುವ ವಿಚಾರದಲ್ಲಿ ಸ್ವಾಮಿನಾಥನ್ ಸೂತ್ರವನ್ನು ಬೆಂಬಲಿಸಿದ್ದರು. ಅವರು ಪ್ರಧಾನಿ ಕುರ್ಚಿ ಮೇಲೆ ಕೂತ ನಂತರ ಕಳೆದ 10 ವರ್ಷದಿಂದ ಎಂಎಸ್‌ಪಿ ಬಗೆಗಿನ ಅವರ ನಿಲುವುದ ಬದಲಾಗಿದೆ. ಅವರು ಮೂರು ಕೃಷಿ ಕಾಯ್ದೆಗಳ ಮೂಲಕ ಎಂಎಸ್‌ಪಿ ವ್ಯವಸ್ಥೆಯನ್ನೇ ಬುಡಮೇಲು ಮಾಡಲು ಪ್ರಯತ್ನಿಸಿದರು' ಎಂದು ಆರೋಪಿಸಿದ್ದಾರೆ.

ದೇವರು ಅಂಥ ಕೆಲಸ ಮಾಡುವುದಿಲ್ಲ: ಮಮತಾ

ಕೋಲ್ಕತ್ತ (ಪಿಟಿಐ): ತನ್ನನ್ನು ದೇವರೇ ಕಳಿಸಿದ್ದಾನೆ ಎನ್ನುವ ಪ್ರಧಾನಿ ನರೇಂದ್ರ ಮೋದಿ ಅವರ ಹೇಳಿಕೆಯ ಬಗ್ಗೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಶುಕ್ರವಾರ ಕಿಡಿ ಕಾರಿದ್ದಾರೆ.



ದಕ್ಷಿಣ 24 ಪರಗಣ ಜಿಲ್ಲೆಯ ಮಥುರಾಪುರದಲ್ಲಿ ಚುನಾವಣಾ ಪ್ರಚಾರ ಮಾಡಿದ ಅವರು, 'ಚುನಾವಣೆಯಲ್ಲಿ ಸೋಲುವ ಭಯದಿಂದ ಬಿಜೆಪಿ ನಾಯಕರು ಅಸಂಬದ್ಧ ಹೇಳಿಕೆಗಳನ್ನು ನೀಡುತ್ತಿದ್ದಾರೆ' ಎಂದು ಮೋದಿ ಅವರ ಹೆಸರು ಪ್ರಸ್ತಾಪಿಸದೇ ಟೀಕಿಸಿದರು.

'ನನ್ನನ್ನು ದೇವರು ಕಳಿಸಿದ್ದಾನೆ, ನನಗೆ ಜೈವಿಕ ತಂದೆ ತಾಯಿ ಇಲ್ಲ ಎಂದು ಅವರು ಪ್ರತಿಪಾದಿಸುತ್ತಾರೆ. ದೇವರು ಯಾರನ್ನಾದರೂ ಗಲಭೆ ಸೃಷ್ಟಿಸಲು, ಜಾಹೀರಾತುಗಳ ಮೂಲಕ ಸುಳ್ಳು ಪ್ರಚಾರ ಮಾಡಲು, ಎನ್‌ಆರ್‌ಸಿ ಹೆಸರಲ್ಲಿ ಜನರನ್ನು ಜೈಲಿಗೆ ಹಾಕಲು ಕಳಿಸುವನೇ? ದೇವರು ಅಂಥ ಕೆಲಸಗಳನ್ನು ಮಾಡುವುದಿಲ್ಲ' ಎಂದು ಹೇಳಿದರು.

'ಬಿಜೆಪಿ ಸುಳ್ಳು ಹೇಳುತ್ತಿದೆ'

ಭುವನೇಶ್ವರ (ಪಿಟಿಐ): 'ಪಟ್ನಾಯಕ್ ಅವರಿಗೆ ವಯಸ್ಸಾಗಿದೆ, ಆರೋಗ್ಯವೂ ಸರಿಯಿಲ್ಲ. ಆದ್ದರಿಂದ, ಅವರಿಗೆ ವಿಶ್ರಾಂತಿ ನೀಡಬೇಕು' ಎಂದಿದ್ದ ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರಿಗೆ ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಶುಕ್ರವಾರ ತಿರುಗೇಟು ನೀಡಿದರು.



'ಜನರ ಕುರಿತು ಸುಳ್ಳು ಹೇಳುವುದಕ್ಕೂ ಒಂದು ಮಿತಿ ಇದೆ. ನನ್ನ ಆರೋಗ್ಯವು ಚೆನ್ನಾಗಿಯೇ ಇದೆ. ಲೋಕಸಭೆ ಹಾಗೂ ವಿಧಾನಸಭೆಗಳಿಗಾಗಿ ನಾನು ಹಲವು ತಿಂಗಳುಗಳಿಂದ ಪ್ರಚಾರ ನಡೆಸುತ್ತಿದ್ದೇನೆ' ಎಂದರು.

'ಸೇನಾ ಪಡೆಯನ್ನು ಟೀಕಿಸಿಲ್ಲ'

ನವದೆಹಲಿ (ಪಿಟಿಐ): ಸಶಸ್ತ್ರ ಪಡೆಗಳ ವಿಚಾರವಾಗಿ ರಾಜಕೀಯ ಮಾಡಬೇಡಿ ಎಂದು ಚುನಾವಣಾ ಆಯೋಗವು ಸೂಚಿಸಿರುವುದಕ್ಕೆ ಶುಕ್ರವಾರ ಪ್ರತಿಕ್ರಿಯಿಸಿರುವ ಕಾಂಗ್ರೆಸ್‌ನ ಮಾಜಿ ಸೈನಿಕರ ವಿಭಾಗದ ಮುಖ್ಯಸ್ಥ ಕರ್ನಲ್ (ನಿವೃತ್ತ) ರೋಹಿತ್ ಚೌಧರಿ, 'ನಾವು ಸಶಸ್ತ್ರ ಪಡೆಗಳನ್ನು ಟೀಕಿಸಿಲ್ಲ. ಸರ್ಕಾರದ ನೀತಿಗಳನ್ನಷ್ಟೇ ಪ್ರಶ್ನಿಸಿದ್ದೇವೆ' ಎಂದು ಹೇಳಿದರು.

ಚುನಾವಣಾ ಆಯೋಗವು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಹಾಯ ಮಾಡುತ್ತಿದೆ ಎಂದೂ ಅವರು ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

'ದೇಶವನ್ನು ಸಂರಕ್ಷಿಸಲು ಸಶಸ್ತ್ರ ಪಡೆಗಳು ಉತ್ತಮವಾಗಿ ಕೆಲಸ ಮಾಡುತ್ತಿವೆ. 'ಅಗ್ನಿಪಥ' ಯೋಜನೆಯ ಕುರಿತು ಹೇಳಿಕೆ ನೀಡುವಾಗ ಪಕ್ಷವು ನೀತಿ ಸಂಹಿತೆಯನ್ನು ಉಲ್ಲಂಘಿಸಿಲ್ಲ' ಎಂದರು.

'ಅಗ್ನಿಪಥ' ಯೋಜನೆಯನ್ನು ಜಾರಿಗೊಳಿಸುವ ಮೂಲಕ ಮೋದಿ ಸರ್ಕಾರವು ಸೇನೆಯನ್ನು ದುರ್ಬಲಗೊಳಿಸಿದೆ. ದೇಶ, ಸೇನಾಪಡೆ ಮತ್ತು ಸೈನಿಕರ ಹಿತದೃಷ್ಟಿಯನ್ನು ಗಣನೆಗೆ ತೆಗೆದುಕೊಳ್ಳದೆ ಜಾರಿಗೊಳಿಸಿರುವ ಈ ಯೋಜನೆಗೆ ನಾವು ಸವಾಲು ಹಾಕುತ್ತೇವೆ ಎಂದರು. 'ಅಗ್ನಿಪಥ' ಯೋಜನೆಯು ಸೇನೆಯಲ್ಲಿ ತಾರತಮ್ಯ ಉಂಟು ಮಾಡುತ್ತಿದೆ ಮತ್ತು ದೇಶದ ಭದ್ರತೆಯನ್ನು ದುರ್ಬಲಗೊಳಿಸುತ್ತಿದೆ' ಎಂದು ಆರೋಪಿಸಿದರು.

'ಇವಿಎಂ ದತ್ತಾಂಶ 2–3 ವರ್ಷ ಸಂರಕ್ಷಿಸಿ'

ನವದೆಹಲಿ (ಪಿಟಿಐ): 'ಮತದಾನದ ಬಳಿಕ ಇವಿಎಂನಲ್ಲಿ ಸಂಗ್ರಹವಾದ ದತ್ತಾಂಶವನ್ನು ಕನಿಷ್ಠ ಎರಡು–ಮೂರು ವರ್ಷಗಳವರೆಗೆ ಸುರಕ್ಷಿತವಾಗಿ ಇರಿಸಿಕೊಳ್ಳಬೇಕು. ಜೊತೆಗೆ, ಈ ಬಾರಿಯ ಲೋಕಸಭಾ ಚುನಾವಣೆಯ ಫಲಿತಾಂಶ ಪ್ರಕಟವಾಗುವ ಮೊದಲೇ ಈ ಬಾರಿ ಸಂಗ್ರಹವಾದ ದತ್ತಾಂಶವನ್ನು ಸಾರ್ವಜನಿಕಗೊಳಿಸಬೇಕು ಎಂದು ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಿ' ಎಂದು ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್ ಅವರು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಸುಪ್ರೀಂ ಕೋರ್ಟ್ ಅನ್ನು ಒತ್ತಾಯಿಸಿದ್ದಾರೆ.

'ಫಾರಂ 17ಸಿ ಅನ್ನು ಸಾರ್ವಜನಿಕಗೊಳಿಸಿ ಎಂದು ಆಗ್ರಹಿಸಿದರೆ, ಆಯೋಗವು ಅದನ್ನು ನಿರಾಕರಿಸಿದೆ. ಆ ಮೂಲಕ ಎಷ್ಟು ಮತದಾನವಾಗಿದೆ ಎಂಬ ಮಾಹಿತಿಯನ್ನು ಜನರಿಗೆ ನೀಡಲು ಅದು ಒಪ್ಪಿಲ್ಲ. ಮತ ಎಣಿಕೆ ಮುಗಿದು, ಫಲಿತಾಂಶ ಬಂದ ಮೇಲೆ ಏನೂ ಮಾಡುವುದಕ್ಕೆ ಬರುವುದಿಲ್ಲ. ಸರ್ಕಾರ ರಚನೆಯಾಗುತ್ತದೆ. ಹಾಗಾಗಿ, ಯಾವ ಅಭ್ಯರ್ಥಿಯೂ 'ಅಕ್ರಮ'ವಾಗಿ ಆಯ್ಕೆ ಆಗಬಾರದು' ಎಂದರು. 'ಚುನಾವಣಾ ಆಯೋಗಕ್ಕೆ ಫಾರಂ 17ಸಿ ಅನ್ನು ಬಿಡುಗಡೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದಾದರೆ, ರಾಜ್ಯ ಚುನಾವಣಾ ಅಧಿಕಾರಿಯು ಆ ಕೆಲಸ ಮಾಡಬಹುದು' ಎಂದು ಹೇಳಿದರು.

'ಪರಿಷ್ಕೃತ ಮತದಾನ ಪ್ರಮಾಣದ ಮಾಹಿತಿಯನ್ನು ಆಯೋಗ ಬಿಡುಗಡೆ ಮಾಡಿದಾಗ, ಮತದಾನ ಪ್ರಮಾಣವು ಎಷ್ಟು ಏರಿಕೆಯಾಗಿದೆ, ಯಾವ ರೀತಿಯಲ್ಲಿ ಏರಿಕೆಯಾಗಿದೆ ಎಂಬೆಲ್ಲಾ ಮಾಹಿತಿಯನ್ನು ನಾವು ತಿಳಿದುಕೊಳ್ಳಬೇಕು. ಜನರಿಗೆ ಮಾಹಿತಿ ನೀಡಲು ಆಯೋಗವು ಹಿಂಜರಿಕೆ ತೋರಬಾರದು. ಇಂಥ ಮಾಹಿತಿಯನ್ನು ಚುನಾವಣಾ ಆಯೋಗವು 30 ದಿನಗಳವರೆಗೆ ಮಾತ್ರ ಸುರಕ್ಷಿತವಾಗಿರಿಸುತ್ತದೆ' ಎಂದರು.

'ಮತದಾನ ಪ್ರಮಾಣ ತಿಳಿಯಬೇಕು'



'ಎಲ್ಲ ಯಂತ್ರಗಳಿಗೆ ಇರುವಂತೆ ಇವಿಎಂಗೂ ಕಾರ್ಯನಿರ್ವಹಣಾ ವ್ಯವಸ್ಥೆ ಇದೆ. ಎಷ್ಟು ಹೊತ್ತಿಗೆ ಮತದಾನ ಮುಗಿಯಿತು, ಎಷ್ಟು ಮತಗಳು 'ಅಮಾನ್ಯ'ಗೊಂಡಿವೆ ಮತ್ತು ಎಷ್ಟು ಹೊತ್ತಿಗೆ ಮತ ಹಾಕಲಾಗಿದೆ ಎಂಬೆಲ್ಲಾ ಮಾಹಿತಿಯನ್ನು ಈ ವ್ಯವಸ್ಥೆ ನೀಡುತ್ತದೆ. ಆದ್ದರಿಂದ, ಈ ಸಾಕ್ಷ್ಯವನ್ನು ಸುರಕ್ಷಿತವಾಗಿ ಇರಿಸಲೇಬೇಕು' ಎಂದು ಸಂಸದ ಕಪಿಲ್ ಸಿಬಲ್ ಒತ್ತಾಯಿಸಿದರು.

ಸಿಡಿದೆದ್ದ ಸ್ತ್ರೀ ಸಮುದಾಯ: ಬಿಜೆಪಿ, ಕಾಂಗ್ರೆಸ್ ವಿರುದ್ಧ ವ್ಯಾಪಕವಾಗಿ ಕೇಳಿಬರುತ್ತಿರುವ ಆರೋಪ

ಪೆನ್‌ಡ್ರೈವ್ ಹಂಚಿದವರ ಬಂಧಿಸಿಲ್ಲ ಏಕೆ?

• ಸಂಧ್ಯಾ ಹೆಗಡೆ



ಹಾಸನ: ರಾಜಕೀಯ ಹಗೆತನ, ಕುಟುಂಬಗಳ ನಡುವಿನ ವಿರಸ, ಸ್ವಾರ್ಥ ಸಾಧನೆಗಾಗಿ ಹೆಣ್ಣೇ ಹನನವೆಂಬುದು ಬೀದಿಗಿಳಿದ ಪುರುಷ ವಿಕೃತಿಯ ವಿರುದ್ಧ ಜಿಲ್ಲೆಯ ಸ್ತ್ರೀ ಸಮುದಾಯ ಸಿಡಿದೆದ್ದಿದೆ.

ಜಿಲ್ಲೆಯಲ್ಲಿ ತಲ್ಲಣ ಸೃಷ್ಟಿಸಿದ ಲೈಂಗಿಕ ದೌರ್ಜನ್ಯ ಮತ್ತು ಪೆನ್‌ಡ್ರೈವ್ ಹಂಚಿಕೆ ಪ್ರಕರಣದಲ್ಲಿ ವಿಕೃತಿ ಮೆರೆದ ಅಪರಾಧಿ ಮತ್ತು ವಿಡಿಯೊ, ಚಿತ್ರಗಳನ್ನು ಹಂಚಿರುವ ಅಪರಾಧಿಗಳು, ಇಬ್ಬರಿಗೂ ಸಮಾನ ಶಿಕ್ಷೆಯಾಗಬೇಕು ಎಂಬುದು ಮಹಿಳಾಪರ ಸಂಘಟನೆಗಳು, ಹೋರಾಟಗಾರರ ಒತ್ತಾಯವಾಗಿದೆ.

ಅಶ್ಲೀಲ ವಿಡಿಯೊಗಳ ತುಣುಕು ಹರಿಬಿಟ್ಟು 'ವ್ಯಾಪಾರ' ಕುದುರಿಸಿದವರು, ಮಧ್ಯವರ್ತಿಗಳು, ಮನುಷ್ಯತ್ವ ಮರೆತು ನಗ್ನಚಿತ್ರಗಳನ್ನು ಮೊಬೈಲ್ ಫೋನ್ ಮೂಲಕ ಹಂಚಿದವರು, ಇವುಗಳ ಸೂತ್ರಧಾರರನ್ನು ಯಾಕೆ ಬಂಧಿಸುತ್ತಿಲ್ಲ ಎಂಬುದು ಅವರ ಬಹಿರಂಗ ಪ್ರಶ್ನೆಯಾಗಿದೆ.

'ಮೂರು ಹಂತಗಳಲ್ಲಿ ಹರಿಯಬಿಟ್ಟಿರುವ ಅಶ್ಲೀಲ ವಿಡಿಯೊ, ಚಿತ್ರಗಳನ್ನು ಪಳಗಿದ ಕೈಗಳು ಎಡಿಟ್ ಮಾಡಿವೆ. ಹಾಸನದ ಮಹಿಳೆಯರನ್ನು ಅವರಲ್ಲೂ ಒಂದು ಪಕ್ಷಕ್ಕೆ ಸೇರಿದ ಮಹಿಳೆಯರನ್ನೇ ಬಲಿಪಶುಗಳನ್ನಾಗಿ ಮಾಡಲಾಗಿದೆ. ಜಿಲ್ಲೆಯಲ್ಲಿ ಪ್ರಬಲವಾಗಿರುವ ಜೆಡಿಎಸ್ ಅನ್ನು ಮಣಿಸಲು ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ಹೆಣ್ಣನ್ನು ಕೆಟ್ಟರೀತಿ ಬಳಸಿಕೊಂಡಿವೆ. ಎಲ್ಲಾ ಕಾಲದಲ್ಲೂ ಶೋಷಣೆಗೆ ಒಳಗಾಗುವವಳು ಹೆಣ್ಣು. ಇಲ್ಲೂ ಶೋಷಣೆ, ಬ್ಲ್ಯಾಕ್‌ಮೇಲ್ ಬಲೆಗೆ ಸಿಲುಕಿದವಳು ಹೆಣ್ಣು' ಎಂದು ಬೇಸರಿಸಿದರು ಸರ್ಕಾರಿ ಇಲಾಖೆಯಲ್ಲಿ ಕೆಲಸ ಮಾಡುವ ಮಹಿಳಾ ಅಧಿಕಾರಿಯೊಬ್ಬರು.

'ಲೈಂಗಿಕ ದೌರ್ಜನ್ಯ ಎಸಗಿದ ವ್ಯಕ್ತಿ ಕ್ಷಮೆಗೆ ಅರ್ಹನಲ್ಲ. ಅದೇ ರೀತಿ ಈ ದೌರ್ಜನ್ಯ ಪ್ರಕರಣದ ಚಿತ್ರ, ವಿಡಿಯೊಗಳನ್ನು ಪೆನ್‌ಡ್ರೈವ್ ಮೂಲಕ ಹರಿಬಿಟ್ಟು ಸಮಾಜದಲ್ಲಿ ಹೆಣ್ಣು ತಲೆತ್ತಿ ತಿರುಗಾಡದಂತೆ ಮಾಡಿರುವ ಹಂಚಿಕೆದಾರರು, ಅದರ ಹಿಂದಿರುವ ಕಾಣದ ಕೈಗಳು ಅಷ್ಟೇ ಘೋರ ಅಪರಾಧ ಮಾಡಿವೆ. ನಿಜವಾದ ಆರೋಪಿ, ಸಂಚಿನಲ್ಲಿ ಇದ್ದಿದ್ದರೆ, ಪೊಲೀಸ್ ಇಲಾಖೆಗೆ ಮಾಹಿತಿ ನೀಡಿ ಗೋಪ್ಯತೆ ಕಾಪಾಡಬಹುದಿತ್ತು? ಪೆನ್‌ಡ್ರೈವ್ ಹಂಚಿಕೆಯ ಮೂಲಕ ಹೆಣ್ಣಿನ ಮಾನ ಹರಾಜಿಗಿಟ್ಟು, ಕುಟುಂಬ ಛಿದ್ರಗೊಳಿಸಿರುವ ಕಾರ್ತಿಕ್, ನವೀನ್ ಹಾಗೂ ಇವರಿಗೆ ಬಲವಾಗಿರುವ ರಾಜಕೀಯ ಶಕ್ತಿಗಳನ್ನು ಬಯಲಿಗೆಳೆದು, ಶಿಕ್ಷೆ ವಿಧಿಸಿದರೆ ಮಾತ್ರ ಮಹಿಳೆಯರಿಗೆ ನ್ಯಾಯ ಸಿಕ್ಕಂತಾಗುತ್ತದೆ' ಎನ್ನುತ್ತಾರೆ ಅನನ್ಯ ಟ್ರಸ್ಟ್‌ನ ಸ್ಥಾಪಕ ಕೆ.ಟಿ. ಜಯಶ್ರೀ.

'ಪೆನ್‌ಡ್ರೈವ್ ಹರಿಬಿಟ್ಟು ಹೆಣ್ಣು ಮಕ್ಕಳಿಗೆ ಬ್ಲ್ಯಾಕ್‌ಮೇಲ್ ಮಾಡಲಾಗುತ್ತಿದೆ. ಮಾನಕ್ಕೆ ಅಂಜಿ ಅವರು ಮೌನಕ್ಕೆ ಜಾರಿದ್ದಾರೆ. ಅಶ್ಲೀಲ ವಿಡಿಯೊ ಹಂಚಿದವರನ್ನು ಮೊದಲು ಅಪರಾಧಿಯನ್ನಾಗಿ ಪರಿಗಣಿಸಬೇಕು. ಒಪ್ಪಿತ ಲೈಂಗಿಕ ಕ್ರಿಯೆ ಅಥವಾ ಒತ್ತಡದ ಲೈಂಗಿಕ ಕ್ರಿಯೆ ಯಾವುದೇ ಇರಲಿ, ಅದರ ಚಿತ್ರಗಳನ್ನು ಹರಿಬಿಟ್ಟು ಹೆಣ್ಣಿನ ಖಾಸಗಿತನಕ್ಕೆ ಧಕ್ಕೆ ತಂದವರು ಪೆನ್‌ಡ್ರೈವ್ ಹಂಚಿದವರು. ಅಪರಾಧ ಪ್ರಕರಣಗಳಲ್ಲಿ ಪುರುಷಾಪರಾಧಿಗಳ ಮುಖವನ್ನು ಮಸುಕು ಮಾಡಲಾಗುತ್ತದೆ. ಆದರೆ, ಇಲ್ಲಿ ಹೆಣ್ಣಿನ ನಗ್ನ ಚಿತ್ರಗಳನ್ನು ಹಂಚಿದ ವಿಕೃತ ರಾಜಕೀಯ ವ್ಯಕ್ತಿಗಳ ಮೇಲೆ ಪ್ರಕರಣ ದಾಖಲಿಸಬೇಕು' ಎಂದು ಆಗ್ರಹಿಸಿದರು ಸ್ನೇಹ ಸಂಪದ ಮಹಿಳಾ ಸಮಿತಿಯ ಮಮತಾ ಶಿವು.

ಪುರುಷರ 'ಲಕ್ಷ್ಮಣ ರೇಖೆ'

'ಲೈಂಗಿಕ ದೌರ್ಜನ್ಯದ ಸಂತ್ರಸ್ತೆಯರು ಮನೆಯಲ್ಲಿ ಬಂದಿಯಾಗಿದ್ದಾರೆ. ಅವರ ಒಡನಾಟದ ಹೆಣ್ಣುಮಕ್ಕಳು ಕೂಡ ಮುಕ್ತವಾಗಿ ಓಡಾಡುವ ಪರಿಸ್ಥಿತಿ ಉಳಿದಿಲ್ಲ. 'ಏನಮ್ಮ ನಿನ್ನದೂ ವಿಡಿಯೊ ಇದೆಯಾ' ಎಂದು ಪ್ರಶ್ನಿಸುವ ವಿಕೃತ ಮನಸ್ಸುಗಳು ಅವರ ಆತ್ಮವಿಶ್ವಾಸವನ್ನೇ ಕುಗ್ಗಿಸುತ್ತಿವೆ. ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಮಹಿಳೆಯರಿಗೆ ಕುಟುಂಬದ ಪುರುಷರೇ ಲಕ್ಷ್ಮಣ ರೇಖೆ ಹಾಕುತ್ತಿದ್ದಾರೆ. ಹೆಣ್ಣನ್ನು ಹತ್ತಿಕ್ಕಲು ಈ ಪ್ರಕರಣ ನೆಪವಾಗುತ್ತಿದೆ' ಎಂದು ಬೇಸರಿಸಿದರು ಸ್ನೇಹ ಸಂಪದ ಮಹಿಳಾ ಸಮಿತಿಯ ಮಮತಾ ಶಿವು.

ದೂರವಾಣಿ ಕದ್ದಾಲಿಕೆ ಸಾಕ್ಷ್ಯ ಒದಗಿಸಲಿ: ಪರಮೇಶ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರ ಕುಟುಂಬದವರ ದೂರವಾಣಿಗಳನ್ನು ಕದ್ದಾಲಿಸಲಾಗುತ್ತಿದೆ ಎಂಬ ಆರೋಪದ ಕುರಿತು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಸಾಕ್ಷ್ಯ ಒದಗಿಸಿದರೆ ತನಿಖೆಗೆ ಸಿದ್ಧ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ಜೇಬಿನಿಂದ ಉಪಕರಣ ತರಿಸಿದವರು ಯಾರು? ಯಾರ ದೂರವಾಣಿಗಳನ್ನು ಕದ್ದಾಲಿಕೆ ಮಾಡಿದ್ದಾರೆ? ಎಂಬುದು ಕುಮಾರಸ್ವಾಮಿ ಅವರಿಗೆ ಗೊತ್ತಿರಬಹುದು. ಹಾಗಿದ್ದರೆ, ಆಧಾರಗಳನ್ನು ಕೊಡದೆ ಕ್ರಮ ಕೈಗೊಳ್ಳುವುದು ಅಸಾಧ್ಯ' ಎಂದರು. ದೇವೇಗೌಡರ ಪತ್ರದ ಕುರಿತು ಕೇಳಿದಾಗ, 'ದೇವೇಗೌಡರ ಪತ್ರಕ್ಕೆ ಬೆಲೆ ನೀಡಬೇಕು. ಪ್ರಜ್ವಲ್ ರೇವಣ್ಣ ಈಗಲಾದರೂ ಮರಳಿ ಬಂದು ತನಿಖೆಗೆ ಸಹಕಾರ ನೀಡಲಿ' ಎಂದು ಹೇಳಿದರು.

'ಪತ್ರದ ಬಗ್ಗೆ ಪ್ರತಿಕ್ರಿಯಿಸಲ್ಲ'

ಬೆಂಗಳೂರು: ಪೊಲೀಸರ ಎದುರು ಹಾಜರಾಗುವಂತೆ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರು ತಮ್ಮ ಮೊಮ್ಮಗ ಪ್ರಜ್ವಲ್ ರೇವಣ್ಣಗೆ ಪತ್ರ ಬರೆದಿರುವುದು ಕೌಟುಂಬಿಕ ವಿಚಾರ. ಆ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ಕ್ಷಮಿಸಿ, ದೇವೇಗೌಡರ ಪತ್ರದ ಕುರಿತು ಪ್ರತಿಕ್ರಿಯಿಸಲು ನಾನು ಇಚ್ಛಿಸುವುದಿಲ್ಲ' ಎಂದರು. ಬಿಜೆಪಿ ಶಾಸಕರಾದ ಶಿವರಾಮ್ ಹೆಬ್ಬಾರ್ ಮತ್ತು ಎಸ್.ಟಿ. ಸೋಮಶೇಖರ್ ಭೇಟಿ ಕುರಿತು ಕೇಳಿದಾಗ, 'ಅವರು ನಮ್ಮ ಸ್ನೇಹಿತರು. ಆಗಾಗ ಭೇಟಿಯಾಗುತ್ತಾರೆ' ಎಂದರು.

ಡಿ.ಕೆ ಶಿವಕುಮಾರ್ ವಿಚಾರಣೆ ನಡೆಸಬೇಕೆಂಬ ಕುಮಾರಸ್ವಾಮಿ ಹೇಳಿಕೆಗೆ ನಕ್ಕ ಸಿ.ಎಂ

ವಿಡಿಯೊ ಬಿಡುಗಡೆ ಮುಖ್ಯವಲ್ಲ: ಸಿ.ಎಂ

ಪ್ರಜಾವಾಣಿ ವಾರ್ತೆ

ಮೈಸೂರು: 'ವಿಡಿಯೊ ಮಾಡಿದರು, ಬಿಡುಗಡೆ ಮಾಡಿದರು ಎಂಬುದು ಮುಖ್ಯವಲ್ಲ. ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಅತ್ಯಾಚಾರ ಎಸಗಿರುವುದೇ ಮಹತ್ವವಾದುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದರು.



'ಪ್ರಜ್ವಲ್ ಪೆನ್‌ಡ್ರೈವ್ ಪ್ರಕರಣದಲ್ಲಿ, ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ವಿಚಾರಣೆಗೆ ಒಳಪಡಿಸಬೇಕು' ಎಂಬ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿಕೆಗೆ ಅವರು ಇಲ್ಲಿ ಶುಕ್ರವಾರ ಪ್ರತಿಕ್ರಿಯಿಸಿದರು. 'ಅವರ ಅಣ್ಣನ ಮಗ ಅತ್ಯಾಚಾರ, ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ಅದೇ ದೊಡ್ಡ ಅಪರಾಧ. ಅಂಥ ಗಂಭೀರ ವಿಚಾರದಿಂದ ಬೇರೆಡೆ ಗಮನ ಸೆಳೆಯಲು ಕುಮಾರಸ್ವಾಮಿ ಏನೇನೋ ಹೇಳುತ್ತಿದ್ದಾರೆ. ಶಿವಕುಮಾರ್ ಮತ್ತಿತರರ ಬಗ್ಗೆ ಮಾತನಾಡುತ್ತಿದ್ದಾರೆ' ಎಂದು ತಿರುಗೇಟು ನೀಡಿದರು.

> ಚುನಾಯಿತ ಸರ್ಕಾರದ ಮುಖ್ಯಮಂತ್ರಿ ಪ್ರಧಾನಿಗೆ ಪತ್ರ ಬರೆದಾಗ ಸ್ವಾಭಾವಿಕವಾಗಿ ಉತ್ತರ ಕೊಡುತ್ತಾರೆ ಎಂಬ ನಂಬಿಕೆ ಇದೆ
>
> **ಸಿದ್ದರಾಮಯ್ಯ**, ಮುಖ್ಯಮಂತ್ರಿ

'ಕುಮಾರಸ್ವಾಮಿ ಈ ನೆಲದ ಕಾನೂನಿಗೆ ಗೌರವ ಕೊಡಬೇಕು. ಪ್ರಜ್ವಲ್ ಆರೋಪಿಯಷ್ಟೇ ಅಪರಾಧಿಯಲ್ಲ ಎಂದಿದ್ದಾರೆ. ನಾನೂ ಹಾಗೇ ಹೇಳುತ್ತೇನೆ. ಈ ವಿಷಯವೆಲ್ಲವೂ ನ್ಯಾಯಾಲಯದಲ್ಲಿ ಸಾಬೀತಾಗಬೇಕಾಗುತ್ತದೆ' ಎಂದರು.

ಪ್ರಧಾನಿಯಿಂದ ಪ್ರತಿಕ್ರಿಯೆ ಇಲ್ಲ: 'ಪ್ರಜ್ವಲ್ ವಿರುದ್ಧ ಎಷ್ಟು ದೂರು ಸಲ್ಲಿಕೆಯಾಗಿವೆ' ಎಂಬ ಪ್ರಶ್ನೆಗೆ, 'ನಿಮಗೆ ಗೊತ್ತಿಲ್ಲವೇ?' ಎಂದು ಕೇಳಿದರು. 'ಎಸ್‌ಐಟಿ ಕೊಟ್ಟ ಮಾಹಿತಿಯಷ್ಟೇ ಸರ್ಕಾರದ ಬಳಿ ಇದೆ' ಎಂದರು.

'ಪ್ರಕರಣಕ್ಕೆ ಸಂಬಂಧಿಸಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಎರಡು ಬಾರಿ ಪತ್ರ ಬರೆದಿದ್ದು, ಪ್ರತಿಕ್ರಿಯೆ ಬಂದಿಲ್ಲ. ಅವರಿಂದ ಬೇಗ ಸ್ಪಂದನೆ ದೊರೆಯುತ್ತದೆ ಎಂಬ ನಿಮ್ಮ ಭಾವನೆ ತಪ್ಪು. ಅನೇಕ ಪತ್ರಗಳಿಗೆ ಅವರು ಉತ್ತರವನ್ನೇ ಕೊಟ್ಟಿಲ್ಲ. ಪ್ರಜ್ವಲ್ ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದುಪಡಿಸುವಂತೆ ಪತ್ರ ಬರೆದಿದ್ದೇನೆ. ಉತ್ತರ ಬಂದಿಲ್ಲ. ಏಕೆ ಉತ್ತರ ಕೊಡುತ್ತಿಲ್ಲ ಎಂದು ಪ್ರಧಾನಿ, ಬಿಜೆಪಿಯವರು ಅಥವಾ ಕೇಂದ್ರ ಸಚಿವ ಪ್ರಲ್ಹಾದ ಜೋಶಿಯನ್ನು ಕೇಳಿ' ಎಂದರು.

'ಎಸ್‌ಐಟಿ ಮೇಲೆ ಬಹಳ ವಿಶ್ವಾಸವಿದೆ. ಅವರು ನಮ್ಮ ಪೊಲೀಸರೇ. ವಿಶೇಷವಾಗಿ ತನಿಖೆ ನಡೆಸಲಿ, ಹೆಚ್ಚು ಗಮನ ಕೊಡಲೆಂದು ಆ ತಂಡವನ್ನು ರಚಿಸಿದ್ದೇವೆ' ಎಂದರು.

'ನನ್ನ ಮಗ ಎಂದು ಹೇಳಿದ್ರಲ್ಲಾ ಎಚ್‌ಡಿಕೆ'

'ಪ್ರಜ್ವಲ್ ಮನೆಯವರಿಗೆ ಹೇಳದೇ ಹೋಗಿದ್ದಾನೆಯೇ? ಲೋಕಸಭೆ ಚುನಾವಣೆಯಲ್ಲಿ ಪ್ರಚಾರಕ್ಕೆ ಹೋಗಿದ್ದಾಗ ಪ್ರಜ್ವಲ್‌ನನ್ನು ಪಕ್ಕದಲ್ಲಿ ನಿಲ್ಲಿಸಿಕೊಂಡು ಇವನು ರೇವಣ್ಣನ ಮಗನಲ್ಲ, ನನ್ನ ಮಗ ಎಂದು ತಿಳಿದುಕೊಳ್ಳಿ ಎಂದು ಕುಮಾರಸ್ವಾಮಿ ಹೇಳಿರಲಿಲ್ಲವೇ? ಅದು ಸಂಪರ್ಕವಲ್ಲವೇ? ಸಂಪರ್ಕದಲ್ಲಿ ಇರಲಿಲ್ಲ ಎಂದು ಈಗ ಹೇಳಿದರೆ ಹೇಗೆ?' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವ್ಯಂಗ್ಯವಾಗಿ ಕೇಳಿದರು.

ದೇವರಾಜೇಗೌಡ ನ್ಯಾಯಾಂಗ ಬಂಧನ ವಿಸ್ತರಣೆ

ಹಾಸನ: ಅತ್ಯಾಚಾರ, ಜಾತಿನಿಂದನೆ ಪ್ರಕರಣದಲ್ಲಿ ಬಂಧಿತರಾಗಿರುವ ಬಿಜೆಪಿ ಮುಖಂಡ, ವಕೀಲ ಜಿ. ದೇವರಾಜೇಗೌಡರ ನ್ಯಾಯಾಂಗ ಬಂಧನದ ಅವಧಿಯನ್ನು ಜೂನ್ 7 ರವರೆಗೆ ವಿಸ್ತರಿಸಲಾಗಿದೆ.

ಮೇ 11ರಂದು ಅವರನ್ನು ಬಂಧಿಸಿದ್ದ ಹೊಳೆನರಸೀಪುರ ಪೊಲೀಸರು, ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ನ್ಯಾಯಾಲಯ ಮೇ 24 ರವರೆಗೆ ನ್ಯಾಯಾಂಗ ಬಂಧನ ವಿಧಿಸಿತ್ತು. ಶುಕ್ರವಾರ ಮತ್ತೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಬಂಧನದ ಅವಧಿ ವಿಸ್ತರಿಸಲಾಗಿದೆ. ಹಾಸನದ ನ್ಯಾಯಾಲಯದಲ್ಲಿ ದೇವರಾಜೇಗೌಡ ಜಾಮೀನು ಅರ್ಜಿ ಸಲ್ಲಿಸಿದ್ದು, ಮೇ 28ಕ್ಕೆ ವಿಚಾರಣೆ ನಡೆಯಲಿದೆ.



ಉರುಸ್ ಸಂಭ್ರಮ...

ಕಲಬುರಗಿಯಲ್ಲಿ ಶುಕ್ರವಾರ ಸಂತ ಹಜರತ್ ಖಾಜಾ ಬಂದಾನವಾಜ್ ಉರುಸ್ ಅಂಗವಾಗಿ ಮಹಾನಗರ ಪಾಲಿಕೆ ಉದ್ಯಾನದಿಂದ ದರ್ಗಾವರೆಗೆ ನಡೆದ ಸಂದಲ್ (ಗಂಧ) ಮೆರವಣಿಗೆಯಲ್ಲಿ ಅಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು

–ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಅತ್ಯಧಿಕ ತಾಪಮಾನ

ನವದೆಹಲಿ (ಪಿಟಿಐ): ವಾಯವ್ಯ ಭಾರತ ಮತ್ತು ಮಧ್ಯ ಪ್ರದೇಶದ ಕೆಲವೆಡೆ ಬಿಸಿಗಾಳಿ ಬೀಸಿದ್ದು, ರಾಜಸ್ಥಾನದ ಫಲೋಡಿಯಲ್ಲಿ ಶುಕ್ರವಾರ 49 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ.

'ಪ್ರಜ್ವಲ್ ಪರಾರಿ ಹಿಂದೆ ಬಿಜೆಪಿ ಕೈವಾಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಾಸನ ಸಂಸದ ಪ್ರಜ್ವಲ್ ರೇವಣ್ಣ ವಿದೇಶಕ್ಕೆ ಪರಾರಿಯಾಗಿರುವುದರ ಹಿಂದೆ ಬಿಜೆಪಿಯ ಸಂಚು ಇದೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಆರೋಪಿಸಿದರು.

'ಪ್ರಜ್ವಲ್ ವಿದೇಶಕ್ಕೆ ಹೋಗುವವರೆಗೂ ರಾಜ್ಯ ಸರ್ಕಾರ ಕತ್ತೆ ಕಾಯುತ್ತಿತ್ತೆ' ಎಂಬ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿಕೆ ಕುರಿತು ಸುದ್ದಿಗಾರರಿಗೆ ಶುಕ್ರವಾರ ಪ್ರತಿಕ್ರಿಯಿಸಿದ ಅವರು, 'ಬಿಜೆಪಿಯವರಿಗೆ ಎಲ್ಲ ಗೊತ್ತಿದ್ದೂ ಲೋಕಸಭಾ ಚುನಾವಣೆಯಲ್ಲಿ ಏಕೆ ಟಿಕೆಟ್ ಕೊಡಿಸಿದ್ದರು? ಬಿಜೆಪಿ ಮುಖಂಡ ದೇವರಾಜೇಗೌಡ ಎಲ್ಲ ಮಾಹಿತಿಯನ್ನೂ ಅವರ ಪಕ್ಷದವರಿಗೆ ಒದಗಿಸಿದ್ದರು. ಎಫ್‌ಐಆರ್ ದಾಖಲಾಗುವ ಮೊದಲು ವಿದೇಶಕ್ಕೆ ಕಳಿಸುವ ಸಂಚು ಮಾಡಿದ್ದೇ ಬಿಜೆಪಿಯವರು' ಎಂದರು.



ಪ್ರಿಯಾಂಕ್ ಖರ್ಗೆ

'ಜೋಶಿಯವರು ಕೇಂದ್ರದ ಸಂಸದೀಯ ವ್ಯವಹಾರಗಳ ಸಚಿವ. ಸಂಸದನೊಬ್ಬ ಇಂತಹ ಕೃತ್ಯ ಎಸಗಿದ್ದನ್ನು ಖಂಡಿಸಿದ್ದಾರಾ? ಪ್ರಜ್ವಲ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಒಮ್ಮೆಯಾದರೂ ಪತ್ರ ಬರೆದಿದ್ದಾರಾ? ಆರೋಪಿಯ ಪಾಸ್‌ಪೋರ್ಟ್ ರದ್ದು ಮಾಡುವಂತೆ ಮುಖ್ಯಮಂತ್ರಿಯವರು ಎರಡು ಬಾರಿ ಪತ್ರ ಬರೆದರೂ ಏಕೆ ಕ್ರಮ ಕೈಗೊಂಡಿಲ್ಲ' ಎಂದು ಕೇಳಿದರು.

ಜೆಡಿಎಸ್ ಪಕ್ಷದವರು ತಮ್ಮ ಸಂಸದನ ಹೀನ ಕೃತ್ಯದ ಬಗ್ಗೆ ಚರ್ಚಿಸುತ್ತಿಲ್ಲ. ನಟ, ನಿರ್ದೇಶಕ, ನಿರ್ಮಾಪಕ ಎಂದು ಏನೇನೋ ಹೇಳುತ್ತಿದ್ದಾರೆ. ಹೀನ ಕೃತ್ಯಕ್ಕಿಂತಲೂ ವಿಡಿಯೊ ಹಂಚಿಕೆಯಾಗಿದ್ದೇ ಅವರಿಗೆ ದೊಡ್ಡ ವಿಷಯವಾಗಿದೆ ಎಂದು ಟೀಕಿಸಿದರು.

ಬಂಧನ ಭೀತಿಯಲ್ಲಿರುವ ನವೀನ್, ಕಾರ್ತಿಕ್ ಜಾಮೀನು ಅರ್ಜಿ

ಪ್ರಾಸಿಕ್ಯೂಷನ್‌ಗೆ ಹೈಕೋರ್ಟ್ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರದ್ದು ಎನ್ನಲಾದ ಅಶ್ಲೀಲ ಫೋಟೊ ಹಾಗೂ ವಿಡಿಯೊಗಳನ್ನು ಬಹಿರಂಗಗೊಳಿಸಿದ ಪೆನ್ ಡ್ರೈವ್ ಪ್ರಕರಣದಲ್ಲಿ ಬಂಧನ ಭೀತಿ ಎದುರಿಸುತ್ತಿರುವ ನಾಲ್ವರು ಆರೋಪಿಗಳ ನಿರೀಕ್ಷಣಾ ಜಾಮೀನು ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಪ್ರಾಸಿಕ್ಯೂಷನ್‌ಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಆರೋಪಿಗಳಾದ ನವೀನ್ ಗೌಡ ಅಲಿಯಾಸ್ ಎನ್. ಆರ್. ನವೀನ್ ಕುಮಾರ್, ಎನ್. ಕಾರ್ತಿಕ್, ಬಿ.ಸಿ. ಚೇತನ್ ಕುಮಾರ್ ಹಾಗೂ ಎಚ್.ವಿ. ಪುಟ್ಟರಾಜು ಸಲ್ಲಿಸಿರುವ ಅರ್ಜಿಗಳನ್ನು ರಜಾಕಾಲದ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಸ್.ರಾಚಯ್ಯ ವಿಚಾರಣೆ ನಡೆಸಿದರು.

ಪ್ರತಿವಾದಿ ರಾಜ್ಯ ಪ್ರಾಸಿಕ್ಯೂಷನ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ, ಆಕ್ಷೇಪಣೆ ಸಲ್ಲಿಸುವಂತೆ ನಿರ್ದೇಶಿಸಿ ವಿಚಾರಣೆ ಮುಂದೂಡಿದರು.

ಪ್ರಕರಣವೇನು?: ಹಾಸನ ಲೋಕಸಭಾ ಕ್ಷೇತ್ರದ ಜೆಡಿಎಸ್ ಹಾಗೂ ಬಿಜೆಪಿ ಚುನಾವಣಾ ಏಜೆಂಟ್ ಆಗಿದ್ದ ಎಂ.ಜಿ. ಪೂರ್ಣಚಂದ್ರ ತೇಜಸ್ವಿ, 2024ರ ಏಪ್ರಿಲ್ 23ರಂದು ಹಾಸನ ಸೆನ್ ಪೊಲೀಸ್ ಠಾಣೆಗೆ ಪೆನ್ ಡ್ರೈವ್ ಹಂಚಿಕೆ ಆರೋಪದಡಿ ದೂರು ನೀಡಿದ್ದರು.

'ಹಾಸನ ಕ್ಷೇತ್ರದ ಲೋಕಸಭಾ ಚುನಾವಣೆ ಏಪ್ರಿಲ್ 26ರಂದು ನಿಗದಿಯಾಗಿತ್ತು. ಆರೋಪಿಗಳಾದ ನವೀನ್ ಗೌಡ ಹಾಗೂ ಇತರರು ಏಪ್ರಿಲ್ 21ರಂದು ಸಂಜೆ 6.30ರ ನಂತರ ಹಾಸನ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಚುನಾವಣೆಗೆ ಸ್ಪರ್ಧಿಸಿರುವ ಜೆಡಿಎಸ್ ಮತ್ತು ಬಿಜೆಪಿ ಮೈತ್ರಿಕೂಟದ ಅಭ್ಯರ್ಥಿ ಪ್ರಜ್ವಲ್ ರೇವಣ್ಣ ಅವರ ನಕಲಿ ಅಶ್ಲೀಲ ಭಾವಚಿತ್ರ ಮತ್ತು ವಿಡಿಯೊಗಳನ್ನು ಒಳಗೊಂಡ ಸಿ.ಡಿ ಮತ್ತು ಪೆನ್ ಡ್ರೈವ್‌ಗಳನ್ನು ಸಿದ್ಧಪಡಿಸಿಕೊಂಡು ಕ್ಷೇತ್ರ ವ್ಯಾಪ್ತಿಯ ಮನೆ ಮನೆಗಳಿಗೆ ತೆರಳಿ ಮತದಾರರಿಗೆ ಹಂಚಿದ್ದಾರೆ. ವಾಟ್ಸ್‌ಆ್ಯಪ್ ಹಾಗೂ ಮೊಬೈಲ್‌ಗಳಲ್ಲಿ ತೋರಿಸಿ ಜನರಿಗೆ ದಿಕ್ಕು ತಪ್ಪಿಸಿ ಪ್ರಜ್ವಲ್ ರೇವಣ್ಣ ಅವರಿಗೆ ಮತ ಹಾಕದಂತೆ ಪ್ರಚೋದಿಸುತ್ತಿದ್ದಾರೆ. ಈ ಮೂಲಕ ಚುನಾವಣೆಯಲ್ಲಿ ನ್ಯಾಯಯುತ ಮತದಾನ ನಡೆಯುವುದನ್ನು ತಪ್ಪಿಸುವ ದುಷ್ಕೃತ್ಯ ಎಸಗಿದ್ದಾರೆ' ಎಂದು ದೂರಿನಲ್ಲಿ ಆರೋಪಿಸಿದ್ದರು.

ಈ ದೂರಿನ ಮೇರೆಗೆ ಪೊಲೀಸರು, ಭಾರತೀಯ ದಂಡ ಸಂಹಿತೆ-1860ರ (ಐಪಿಸಿ) ಕಲಂ 171 (ಜಿ) ಮತ್ತು ಮಾಹಿತಿ ತಂತ್ರಜ್ಞಾನ ಕಾಯ್ದೆ-2000ದ ಕಲಂ 67 (ಎ) ಅಡಿಯಲ್ಲಿ ಎಫ್‌ಐಆರ್ ದಾಖಲಿಸಿದ್ದರು. ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರಲು ಸುಳ್ಳು ಹೇಳಿಕೆ ಪ್ರಕಟಿಸಿದ, ವಿದ್ಯುನ್ಮಾನ ರೂಪದಲ್ಲಿ ಅಶ್ಲೀಲ ಫೋಟೊ ಹಾಗೂ ವಿಡಿಯೊ ಪ್ರಕಟಿಸಿದ ಮತ್ತು ರವಾನಿಸಿದ ಆರೋಪಗಳನ್ನು ಹೊರಿಸಲಾಗಿತ್ತು.

ಬಂಧನ ಭೀತಿ ಎದುರಾದ ಕಾರಣ ಆರೋಪಿಗಳು ತಲೆ ಮರೆಸಿಕೊಂಡಿದ್ದರು. ಅಂತೆಯೇ, ನಿರೀಕ್ಷಣಾ ಜಾಮೀನು ಕೋರಿ ಹಾಸನದ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಸೆಷನ್ಸ್ ನ್ಯಾಯಾಲಯ ಈ ಅರ್ಜಿಗಳನ್ನು ಮೇ 8ರಂದು ವಜಾಗೊಳಿಸಿ ಆದೇಶಿಸಿತ್ತು.

ಸಿದ್ದರಾಮಯ್ಯ ಸ್ವಯಂ ಘೋಷಿತ ಸಂವಿಧಾನ ತಜ್ಞ: ಕುಮಾರಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಸದ ಪ್ರಜ್ವಲ್ ರೇವಣ್ಣನನ್ನು ವಿದೇಶಕ್ಕೆ ಕಳುಹಿಸಿದ್ದೇ ಅವರ ತಾತ ದೇವೇಗೌಡರು. ಈಗ ಪತ್ರ ಬರೆದು ಏನು ಮಾಡುತ್ತಾರೆ' ಎಂದು ಹೇಳಿಕೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಜೆಡಿಎಸ್ ರಾಜ್ಯ ಘಟಕದ ಎಚ್.ಡಿ. ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು 'ಎಕ್ಸ್' ಮೂಲಕ ಪ್ರತಿಕ್ರಿಯಿಸಿರುವ ಅವರು, 'ಅತ್ಯಾಚಾರದ ವಿಡಿಯೊ ಹರಿದಾಡಿತು ಎನ್ನುವುದಕ್ಕಿಂತ, ಅತ್ಯಾಚಾರ ಘೋರ ಅಪರಾಧ' ಎನ್ನುವ ಸ್ವಯಂ ಘೋಷಿತ ಸಂವಿಧಾನ ತಜ್ಞ ಸಿದ್ದರಾಮಯ್ಯ ತಮ್ಮ ಪಕ್ಕದಲ್ಲೇ ಕುಳಿತುಕೊಳ್ಳುವ ಪೆನ್‌ಡ್ರೈವ್ ಹಂಚಿಕೆ ಸೂತ್ರಧಾರಿ ಉಪ ಮುಖ್ಯಮಂತ್ರಿಯನ್ನು ಏಕೆ ಪ್ರಶ್ನಿಸಿಲ್ಲ? ಅಮಾನುಷಕ್ಕೆ ತುತ್ತಾದ ಮಹಿಳೆಯರ ವಿಡಿಯೊಗಳನ್ನು ಹಂಚಿಕೆ ಮಾಡಿ ವಿಕೃತಾನಂದ ಅನುಭವಿಸುವುದನ್ನೂ ಸಮರ್ಥಿಕೊಳ್ಳುವಿರಾ? ದೇವೇಗೌಡರ ಬಗ್ಗೆ ಲಘುವಾಗಿ ಮಾತನಾಡುವ ಅವರಿಗೆ ಆತ್ಮಸಾಕ್ಷಿ ಇದೆಯಾ ಎಂದು ಪ್ರಶ್ನಿಸಿದ್ದಾರೆ.

'ನನ್ನ ಮಾತಿಗೆ ಗೌರವ ಕೊಟ್ಟು ವಾಪಸ್ ಬಂದು ಎಸ್‌ಐಟಿ ಮುಂದೆ ವಿಚಾರಣೆಗೆ ಹಾಜರಾಗದಿದ್ದರೆ ಕುಟುಂಬದಿಂದ ಹೊರ ಹಾಕುತ್ತೇನೆ ಎಂದು ದೇವೇಗೌಡರು ಎಚ್ಚರಿಕೆ ನೀಡಿದ್ದಾರೆ. ಅವರ ಮಾತೇ ನಮ್ಮ ಕುಟುಂಬದ ಮಾತು. ದೇವೇಗೌಡರಿಗೆ ಹೇಳಿಯೇ ವಿದೇಶಕ್ಕೆ ಹೋಗಿದ್ದಾನೆ ಎಂದು ಖಚಿತವಾಗಿ ಹೇಳುತ್ತೀರಿ ಎಂದರೆ ನಮ್ಮ ಮನೆಗೆ ಕಳ್ಳಗಿವಿ ಇಟ್ಟಿದ್ದೀರಿ ಎಂಬ ಆರೋಪ ಸತ್ಯವಾಯಿತಲ್ಲ' ಎಂದು ಆರೋಪಿಸಿದ್ದಾರೆ. 'ಪ್ರಜ್ವಲ್ ಅವರನ್ನು ಸಮರ್ಥಿಸಿಕೊಂಡಿಲ್ಲ, ಎಲ್ಲರೂ ಕಾನೂನಿಗೆ ತಲೆ ಬಾಗಲೇಬೇಕು' ಎಂದು ಹೇಳಿದರು.

ಜಿಪಂ, ತಾಪಂ ಚುನಾವಣೆಗೆ ಸಿದ್ಧ: ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಮೈಸೂರು: 'ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಮತ್ತು ಬಿಬಿಎಂಪಿ ಸೇರಿದಂತೆ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಲೋಕಸಭೆ ಚುನಾವಣೆ ಫಲಿತಾಂಶ ಪ್ರಕಟವಾದ ಬಳಿಕ ಆದಷ್ಟು ಬೇಗ ನಡೆಸುತ್ತೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಚುನಾವಣೆಗೆ ನಾವು ತಯಾರಿದ್ದು, ಎಲ್ಲ ಕ್ರಮಗಳನ್ನೂ ಕೈಗೊಳ್ಳಲಾಗಿದೆ. ಅಡ್ವೊಕೇಟ್ ಜನರಲ್ ಜೊತೆ ಚರ್ಚಿಸಿ ಮುಂದುವರಿಯುತ್ತೇವೆ. ಕ್ಷೇತ್ರ ಪುನರ್ ವಿಂಗಡಣೆಯೂ ಆಗುತ್ತದೆ. ನಂತರ ಮೀಸಲಾತಿ ಪ್ರಕಟಿಸುತ್ತೇವೆ' ಎಂದರು.

'ವಿಧಾನಪರಿಷತ್‌ಗೆ ಆಯ್ಕೆ ಮಾಡುವುದಾಗಿ ಹೈಕಮಾಂಡ್‌ನವರೇ ನನ್ನ ಮಗ ಡಾ.ಯತೀಂದ್ರ ಅವರಿಗೆ ಹೇಳಿದ್ದರು. ವಿಧಾನಸಭೆ ಚುನಾವಣೆ ಯಲ್ಲಿ ನಾನು ಕೋಲಾರ ದಿಂದ ಸ್ಪರ್ಧಿಸಲು ನಿರ್ಧರಿಸಿದ್ದೆ. ಆದರೆ, ವರುಣದಿಂದ ಸ್ಪರ್ಧಿಸುವಂತೆ ಹೈಕಮಾಂಡ್ ಸೂಚಿಸಿತ್ತು. ಆಗ ಯತೀಂದ್ರ ಆ ಕ್ಷೇತ್ರವನ್ನು ಬಿಟ್ಟುಕೊಟ್ಟಿದ್ದರು. ಈಗ ಹೈಕಮಾಂಡ್‌ನವರು ಏನು ಮಾಡುತ್ತಾರೆಯೋ ಗೊತ್ತಿಲ್ಲ' ಎಂದು ಪ್ರತಿಕ್ರಿಯಿಸಿದರು.

'ಕಾವೇರಿ ನದಿ ಮಲಿನವಾಗುತ್ತಿದೆ ಎಂದು ಮಂಡ್ಯದ ಜಿಲ್ಲಾಧಿಕಾರಿ ಪತ್ರ ಬರೆದಿರುವ ಬಗ್ಗೆ ತಿಳಿದಿಲ್ಲ. ಕೆಲವು ಕಡೆ ಕೈಗಾರಿಕೆಗಳಿಂದ ಬಿಡುವ ನೀರಿನಿಂದ ನದಿಗಳು ಮಲಿನವಾಗಿರುವ ಸಾಧ್ಯತೆ ಇರುತ್ತದೆ. ಪರಿಶೀಲಿಸಲಾಗುವುದು' ಎಂದರು.

ಸಿನಿಮಾ ನಿರ್ಮಾಪಕ ಸೌಂದರ್ಯ ಜಗದೀಶ್ ಪ್ರಕರಣಕ್ಕೆ ತಿರುವು: ಪಾಲುದಾರರ ಮೇಲೆ ಆರೋಪ

₹60 ಕೋಟಿ ವಂಚನೆ, ಆತ್ಮಹತ್ಯೆಗೆ ಪ್ರಚೋದನೆ: ಪತ್ನಿ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿನಿಮಾ ನಿರ್ಮಾಪಕ ಹಾಗೂ ಉದ್ಯಮಿ ಸೌಂದರ್ಯ ಜಗದೀಶ್ ಆತ್ಮಹತ್ಯೆ ಪ್ರಕರಣ ಹೊಸ ತಿರುವು ಪಡೆದುಕೊಂಡಿದ್ದು, '₹60ಕೋಟಿ ವಂಚನೆಯಿಂದ ಪತಿ ನೊಂದಿ ದ್ದರು' ಎಂದು ಆರೋಪಿಸಿ ಅವರ ಪತ್ನಿಶಶಿರೇಖಾ ದೂರು ನೀಡಿದ್ದಾರೆ. ಮಹಾಲಕ್ಷ್ಮಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿರುವ ಮನೆಯಲ್ಲಿ ಏಪ್ರಿಲ್ 14ರಂದು ಸೌಂದರ್ಯ ಜಗದೀಶ್ ಅವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು. ಯುಡಿಆರ್ (ಅಸಹಜ ಸಾವು) ಪ್ರಕರಣ ದಾಖಲಾಗಿತ್ತು. ಪತ್ನಿ ಪ್ರತ್ಯೇಕ ದೂರು ನೀಡಿರುವುದರಿಂದ ಆತ್ಮಹತ್ಯೆ ಪ್ರಚೋದನೆ ಆಯಾಮದಲ್ಲಿ ಪೊಲೀ ಸರು ತನಿಖೆ ಮುಂದುವರಿಸಿದ್ದಾರೆ.



ಸೌಂದರ್ಯ ಜಗದೀಶ್

'ಸೌಂದರ್ಯ ಜಗದೀಶ್ ಅವರ ಆತ್ಮಹತ್ಯೆಗೆ ಕಾರಣವೇನು ಎಂಬುದು ಇದುವರೆಗೂ ನಿಖರವಾಗಿ ಗೊತ್ತಾಗಿಲ್ಲ. ಇದರ ನಡುವೆಯೇ ಸೌಂದರ್ಯ ಜಗದೀಶ್ ಅವರ ಕೊಠಡಿಯಲ್ಲಿದ್ದ ಬಟ್ಟೆಯಲ್ಲಿ ಮೇ 18ರಂದು ಮರಣಪತ್ರವೊಂದು ಸಿಕ್ಕಿದೆ. ಅದೇ ಮರಣಪತ್ರ ಆಧರಿಸಿ ಪತ್ನಿ ದೂರು ನೀಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸೌಂದರ್ಯ ಜಗದೀಶ್ ಅವರು 'ಸೌಂದರ್ಯ ಕನ್‌ಸ್ಟ್ರಕ್ಷನ್' ಕಂಪನಿ ನಡೆಸುತ್ತಿದ್ದರು. ವಿ.ಎಸ್. ಸುರೇಶ್, ಎಸ್.ಪಿ. ಹೊಂಬಣ್ಣ ಹಾಗೂ ಸುಧೀಂದ್ರ ಅವರು ಕಂಪನಿಯ ಪಾಲುದಾರರಾಗಿದ್ದರು. ತಮ್ಮ ಕೆಲ ಆಸ್ತಿಯನ್ನು ಬ್ಯಾಂಕ್‌ನಲ್ಲಿ ಅಡವಿಟ್ಟಿದ್ದ ಸೌಂದರ್ಯ ಜಗದೀಶ್, ₹60 ಕೋಟಿ ಸಾಲ ಪಡೆದು ಕಂಪನಿಯಲ್ಲಿ ಹೂಡಿಕೆ ಮಾಡಿದ್ದರು. ಕಂಪನಿ ನಷ್ಟದಲ್ಲಿರುವುದಾಗಿ ಹೇಳಿದ್ದ ಸಹ ಪಾಲುದಾರರು, ₹60 ಕೋಟಿ ವಂಚಿಸಿದ್ದರು. ಜೊತೆಗೆ, ಸೌಂದರ್ಯ ಜಗದೀಶ್ ಅವರಿಂದ ಹಲವು ದಾಖಲೆಗಳಿಗೆ ಸಹಿ ಪಡೆದುಕೊಂಡಿದ್ದರು. ಇದನ್ನು ಪ್ರಶ್ನಿಸಿದ್ದಕ್ಕೆ ಸಹ ಪಾಲುದಾರರು, ಜೀವ ಬೆದರಿಕೆಯೊಡ್ಡಿದ್ದರು.

ಇವರ ಕಿರುಕುಳದಿಂದಲೇ ಸೌಂದರ್ಯ ಜಗದೀಶ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂಬುದಾಗಿ ಪತ್ನಿ ದೂರಿನಲ್ಲಿ ತಿಳಿಸಿದ್ದಾರೆ' ಎಂದು ಮೂಲಗಳು ವಿವರಿಸಿವೆ. 'ಕಂಪನಿಯ ಸಹ ಪಾಲುದಾರರ ವಿರುದ್ಧ ದೂರು ಸ್ವೀಕರಿಸಲಾಗಿದೆ. ಪುರಾವೆ ಪರಿಶೀಲಿಸಿದ ನಂತರ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಆರೋಪ ಸಾಬೀತಾಗಿ ಶಿಕ್ಷೆ ಪ್ರಕಟ ಆಗುವ ತನಕ ಸ್ಥಾನಕ್ಕೆ ಕುತ್ತು ಇಲ್ಲ: ಆರೋಪ ಸಾಬೀತಾದರೆ ಮಾತ್ರ ಅನರ್ಹತೆ

ಪ್ರಜ್ವಲ್ ಗೆದ್ದರೆ ಸಂಸದ ಸ್ಥಾನ ಅಬಾಧಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರ ಮೇಲೆ ಅತ್ಯಾಚಾರ, ಲೈಂಗಿಕ ದೌರ್ಜನ್ಯ, ಅಪಹರಣ ಆರೋಪದಡಿ ಹಲವು ಕ್ರಿಮಿನಲ್ ಪ್ರಕರಣಗಳನ್ನು ಎದುರಿಸುತ್ತಿರುವ ಹಾಸನದ ಹಾಲಿ ಸಂಸದ ಪ್ರಜ್ವಲ್ ರೇವಣ್ಣ ಈ ಚುನಾವಣೆಯಲ್ಲಿ ಗೆದ್ದರೆ ಸಂಸದ ಸ್ಥಾನ ಅಬಾಧಿತವಾಗಿ ಮುಂದುವರಿಯಲಿದೆ.

ಹಾಸನ ಲೋಕಸಭಾ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಪ್ರಜ್ವಲ್ ರೇವಣ್ಣ ಸ್ಪರ್ಧಿಸಿದ್ದರು. ಏಪ್ರಿಲ್ 26ರಂದು ಮತದಾನ ನಡೆದಿತ್ತು. ಜೂನ್ 4ರಂದು ಮತ ಎಣಿಕೆ ನಡೆದು, ಫಲಿತಾಂಶ ಹೊರಬೀಳಲಿದೆ. ಈ ಮಧ್ಯೆಯೇ ಅತ್ಯಾಚಾರ ಆರೋಪಕ್ಕೆ ಸಂಬಂಧಿಸಿದ ವಿಡಿಯೊ ತುಣುಕುಗಳು ಬಹಿರಂಗಗೊಳ್ಳುತ್ತಿದ್ದಂತೆಯೇ ವಿದೇಶಕ್ಕೆ ಪರಾರಿಯಾಗಿರುವ ಪ್ರಜ್ವಲ್, ಅಲ್ಲಿಯೇ ತಲೆಮರೆಸಿಕೊಂಡಿದ್ದಾರೆ.

ಆರೋಪಿಯು ದೇಶಕ್ಕೆ ಬಂದಿಳಿಯುತ್ತಿದ್ದಂತೆಯೇ ಬಂಧಿಸಲು ವಿಶೇಷ ತನಿಖಾ ತಂಡ (ಎಸ್‌ಐಟಿ) ಸಜ್ಜಾಗಿ ಕುಳಿತಿದೆ. ಪ್ರಜ್ವಲ್ ಬಂಧನವಾದರೆ ಚುನಾವಣಾ ಫಲಿತಾಂಶದ ನಂತರ ನಡೆಯಬಹುದಾದ ಬೆಳವಣಿಗೆಗಳ ಕುರಿತು ಜನರಲ್ಲಿ ತೀವ್ರ ಕುತೂಹಲವಿದೆ. ಗೆದ್ದರೆ ಸಂಸದ ಸ್ಥಾನ ಉಳಿಯುವುದೆ? ಬಂಧನದಲ್ಲಿದ್ದು ಪ್ರಮಾಣವಚನ ಸ್ವೀಕರಿಸಲು ಅವಕಾಶವಿದೆಯೆ ಎಂಬ ಪ್ರಶ್ನೆಗಳ ಸುತ್ತ ಜೋರಾಗಿ ಚರ್ಚೆ ನಡೆಯುತ್ತಿದೆ.

ಕಾನೂನು ತಜ್ಞರ ಪ್ರಕಾರ, ಪ್ರಜ್ವಲ್ ರೇವಣ್ಣ ಮತ್ತೆ ಸಂಸದನಾಗಿ ಆಯ್ಕೆಯಾದರೆ ಪ್ರಮಾಣವಚನ ಸ್ವೀಕರಿಸುವುದು ಮತ್ತು ಸಂಸದ ಹುದ್ದೆಯಲ್ಲಿ ಮುಂದುವರಿಯುವುದಕ್ಕೆ ಕಾನೂನಿನ ಯಾವ ಅಡತಡೆಯೂ ಇಲ್ಲ. ಆರೋಪ ಹೊತ್ತವರನ್ನು ಚುನಾಯಿತ ಪ್ರತಿನಿಧಿಯ ಸ್ಥಾನದಿಂದ ಅನರ್ಹಗೊಳಿಸುವ ಕಾನೂನು ದೇಶದಲ್ಲಿ ಇಲ್ಲದಿರುವುದರಿಂದ ಅಬಾಧಿತವಾಗಿ ಸಂಸದ ಸ್ಥಾನದಲ್ಲಿ ಮುಂದುವರಿಯಬಹುದು.

ಏಜೆಂಟ್ ಪ್ರಮಾಣಪತ್ರ ಪಡೆಯಬಹುದು

ಪ್ರಜ್ವಲ್ ರೇವಣ್ಣ ಸಂಸದನಾಗಿ ಪುನರಾಯ್ಕೆಯಾದರೆ ಚುನಾವಣಾಧಿಕಾರಿಗಳಿಂದ ಪ್ರಮಾಣಪತ್ರ ಪಡೆಯುವವರು ಯಾರು ಎಂಬ ಚರ್ಚೆಯೂ ನಡೆಯುತ್ತಿದೆ.

ಕೇಂದ್ರ ಚುನಾವಣಾ ಆಯೋಗವು ಪ್ರಕಟಿಸಿರುವ ಚುನಾವಣಾಧಿಕಾರಿಗಳ ಕೈಪಿಡಿಯಲ್ಲಿ ಈ ಬಗ್ಗೆ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ: 'ಅಭ್ಯರ್ಥಿಯು ಚುನಾವಣಾ ಫಲಿತಾಂಶ ಘೋಷಣೆ ಸಮಯದಲ್ಲಿ ಹಾಜರಿರದಿದ್ದರೆ ಮತ್ತು ಶೀಘ್ರದಲ್ಲಿ ಮತ ಎಣಿಕೆ ಕೇಂದ್ರವನ್ನು ತಲುಪಲು ಸಾಧ್ಯವಾಗದಿದ್ದರೆ ಅಭ್ಯರ್ಥಿಯ ಅಧಿಕೃತ ಏಜೆಂಟ್ ಪ್ರಮಾಣಪತ್ರ ಪಡೆಯಬಹುದು. ಆ ವ್ಯಕ್ತಿಯು ಚುನಾವಣಾಧಿಕಾರಿಗೆ ಗೊತ್ತಿರುವವರಾಗಿರಬೇಕು. ಅಭ್ಯರ್ಥಿಯಿಂದ ನಿಯೋಜಿತರಾದ ಏಜೆಂಟರೇ ಫಲಿತಾಂಶ ಘೋಷಣೆ ಪತ್ರಕ್ಕೆ ಸಹಿ ಮಾಡಬಹುದು'.

ಪ್ರಜಾಪ್ರಾತಿನಿಧ್ಯ ಕಾಯ್ದೆ-1951ರ ಅಡಿಯಲ್ಲಿ ಸಂಸತ್ ಮತ್ತು ವಿಧಾನಮಂಡಲದ ಚುನಾವಣೆಗಳು ನಡೆಯುತ್ತವೆ. ಈ ಕಾಯ್ದೆಯ ಸೆಕ್ಷನ್ 8ರ ಪ್ರಕಾರ, ಸಂಸದ ಅಥವಾ ಶಾಸಕರಾಗಿ ಆಯ್ಕೆಯಾದವರು ಕೆಲವು ನಿರ್ದಿಷ್ಟ ಅಪರಾಧಗಳು ಸಾಬೀತಾಗಿ ಎರಡು ವರ್ಷಕ್ಕಿಂತ ಹೆಚ್ಚಿನ ಜೈಲು ಶಿಕ್ಷೆಗೆ ಗುರಿಯಾದರೆ ಮಾತ್ರ ಅವರನ್ನು ಅನರ್ಹಗೊಳಿಸಬಹುದು.

ವಿಚಾರಣಾಧೀನ ಅಥವಾ ಸಜಾ ಬಂದಿಯಾಗಿ ಜೈಲಿನಲ್ಲಿರುವವರು ಮತದಾನಕ್ಕೆ ಅರ್ಹರಲ್ಲ ಎಂಬುದು ಪ್ರಜಾಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 62 (5) ರಲ್ಲಿದೆ. ಆದರೆ, ಅಂತಹ ವ್ಯಕ್ತಿಗಳು ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕೆ ಯಾವ ನಿರ್ಬಂಧವೂ ಇಲ್ಲ. ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ, 'ಎರಡು ವರ್ಷಕ್ಕಿಂತ ಹೆಚ್ಚಿನ ಜೈಲು ಶಿಕ್ಷೆಗೆ ಗುರಿಯಾಗುವ ಚುನಾಯಿತ ಪ್ರತಿನಿಧಿಗಳನ್ನು ಮಾತ್ರವೇ ಅನರ್ಹಗೊಳಿಸಲು ನಮ್ಮ ಕಾನೂನಿನಲ್ಲಿ ಅವಕಾಶವಿದೆ. ಪ್ರಜ್ವಲ್ ರೇವಣ್ಣ ಮರು ಆಯ್ಕೆಯಾದರೆ ಅದೇ ಹುದ್ದೆಯಲ್ಲಿ ಮುಂದುವರಿಯಬಹುದು' ಎಂದರು.

'ಹಲವು ರಾಜಕಾರಣಿಗಳು ಜೈಲಿನಲ್ಲಿದ್ದುಕೊಂಡೇ ಚುನಾವಣೆಗೆ ಸ್ಪರ್ಧಿಸಿ ಗೆದ್ದ ಉದಾಹರಣೆಗಳಿವೆ. ಭ್ರಷ್ಟಾಚಾರ ಆರೋಪದಡಿ ಬಂಧಿತರಾಗಿದ್ದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಜಾಮೀನು ಪಡೆದು ಈ ಲೋಕಸಭಾ ಚುನಾವಣೆಯಲ್ಲಿ ಪ್ರಚಾರ ನಡೆಸುತ್ತಿದ್ದಾರೆ. ಅದೇ ಸಾಲಿಗೆ ಪ್ರಜ್ವಲ್ ರೇವಣ್ಣ ಪ್ರಕರಣವೂ ಸೇರಬಹುದು' ಎಂದು ಹೇಳಿದರು. ಪ್ರಜ್ವಲ್ ಪುನರಾಯ್ಕೆ ಆಗಿ, ದೇಶಕ್ಕೆ ಬಂದಿಳಿದ ತಕ್ಷಣ ಬಂಧನವಾದರೆ ಪ್ರಮಾಣವಚನ ಸ್ವೀಕಾರಕ್ಕೂ ಅಡ್ಡಿಗಳಿರುವುದಿಲ್ಲ. ಪ್ರಕರಣದ ವಿಚಾರಣಾ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಅನುಮತಿ ಪಡೆಯಬೇಕಾಗುತ್ತದೆ. ನ್ಯಾಯಾಲಯ ದಿಂದ ಆದೇಶ ಪಡೆದು ಸಂಸತ್ತಿಗೆ ಹೋಗಿ ಪ್ರಮಾಣವಚನ ಸ್ವೀಕರಿಸಬಹುದು. ಅಪರಾಧಿ ಎಂದು ಸಾಬೀತಾಗಿ, ಶಿಕ್ಷೆಯ ಪ್ರಮಾಣ ಪ್ರಕಟವಾಗುವವರೆಗೂ ಸಂಸದ ಸ್ಥಾನಕ್ಕೆ ಯಾವ ತೊಂದರೆಯೂ ಇರದು ಎಂಬುದು ಕಾನೂನು ತಜ್ಞರ ಅಭಿಪ್ರಾಯ.

ಮಾರ್ಚ್‌ನಲ್ಲಿ ನಡೆದ ರಾಜ್ಯಸಭಾ ಚುನಾವಣೆಯಲ್ಲಿ ಜೈಲಿನಿಂದಲೇ ಸ್ಪರ್ಧಿಸಿ ಆಯ್ಕೆಯಾಗಿದ್ದ ಎಎಪಿಯ ಸಂಜಯ್ ಸಿಂಗ್ ಅವರು, ನ್ಯಾಯಾಲಯದ ಅನುಮತಿ ಪಡೆದು ರಾಜ್ಯಸಭೆಗೆ ಹಾಜರಾಗಿ ಪ್ರಮಾಣ ಸ್ವೀಕರಿಸಿದ್ದರು. 'ಪ್ರಜ್ವಲ್ ರೇವಣ್ಣ ಸಂಸದನಾಗಿ ಆಯ್ಕೆಯಾದರೆ ಹುದ್ದೆಯಲ್ಲಿ ಮುಂದುವರಿಯಲು ಕಾನೂನಿನಲ್ಲಿ ಅವಕಾಶವಿದೆ. ಆರೋಪಿಯಾದರೂ ಸಂಸದ ಸ್ಥಾನಕ್ಕೆ ಕುತ್ತೂ ಇಲ್ಲ' ಎಂದು ರಾಜ್ಯದ ಹಿರಿಯ ವಕೀಲರೊಬ್ಬರು ಪ್ರತಿಕ್ರಿಯಿಸಿದರು.

ಪಿಎಸ್‌ಐ ಲೋಕಾಯುಕ್ತ ಬಲೆಗೆ

ಪ್ರಜಾವಾಣಿ ವಾರ್ತೆ



ಮಂಜುನಾಥ ಟಿ.ಡಿ.



ರಮೇಶ

ದೇವದುರ್ಗ (ರಾಯಚೂರು ಜಿಲ್ಲೆ): ತಾಲ್ಲೂಕಿನ ಗಬ್ಬೂರು ಪೊಲೀಸ್ ಠಾಣೆಯ ಪಿಎಸ್‌ಐ ಮಂಜುನಾಥ ಟಿ.ಡಿ ಹಾಗೂ ಪೊಲೀಸ್ ಕಾನ್‌ಸ್ಟೆಬಲ್ ರಮೇಶ ₹50 ಸಾವಿರ ಲಂಚ ಪಡೆಯುವ ವೇಳೆ ಶುಕ್ರವಾರ ರಾಯಚೂರು ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ಶಶಿಧರ್ ನೇತೃತ್ವದ ತಂಡದ ಬಲೆಗೆ ಬಿದ್ದಿದ್ದಾರೆ.

ಗಬ್ಬೂರು ಗ್ರಾಮದ ಫಾರೂಕ್ ಎಂಬ ಯುವಕನಿಂದ ₹50 ಸಾವಿರ ಪಡೆಯುತ್ತಿದ್ದಾಗ ಲೋಕಾಯುಕ್ತ ತಂಡ ದಾಳಿ ನಡೆಸಿ ಬಂಧಿಸಿದೆ. ಮೇ 10ರಂದು ಗಬ್ಬೂರು ಗ್ರಾಮದ ಖಾಸಗಿ ಬ್ಯಾಂಕ್ ಉದ್ಯೋಗಿ ಫಾರೂಕ್‌ನನ್ನು ಕ್ರಿಕೆಟ್ ಬೆಟ್ಟಿಂಗ್ ಆರೋಪದ ಮೇಲೆ ವಶಕ್ಕೆ ಪಡೆದಿದ್ದರು. ಆದರೆ, ಪ್ರಕರಣ ದಾಖಲಿಸದೆ ಇರಲು ₹3 ಲಕ್ಷ ಹಣಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಫಾರೂಕ್ ತಿಳಿಸಿದ್ದ.

ಫಾರೂಕ್ ವಿರುದ್ಧ ಕ್ರಿಕೆಟ್ ಬೆಟ್ಟಿಂಗ್ ಕೇಸ್ ದಾಖಲಿಸಿಕೊಳ್ಳದೆ ಇರಲು ಪಿಎಸ್‌ಐ ಮಂಜುನಾಥ ಕಾನ್‌ಸ್ಟೆಬಲ್ ರಮೇಶ ಮೂಲಕ ಪ್ರಾರಂಭದಲ್ಲಿ ₹10 ಲಕ್ಷಕ್ಕೆ ಬೇಡಿಕೆ ಇಟ್ಟು, ನಂತರ ₹3 ಲಕ್ಷಕ್ಕೆ ವ್ಯವಹಾರ ಕುದುರಿಸಿದ್ದರು. ಬಳಿಕ ಫಾರೂಕ್ ಲೋಕಾಯುಕ್ತರಿಗೆ ದೂರು ನೀಡಿದ್ದರು. ₹50 ಸಾವಿರ ಹಣ ನೀಡುವಾಗ ಕಾನ್‌ಸ್ಟೆಬಲ್ ರಮೇಶ ಸಿಕ್ಕಿಬಿದ್ದಿದ್ದಾನೆ. ಲೋಕಾಯುಕ್ತ ತಂಡದಲ್ಲಿ ಡಿವೈಎಸ್ಪಿ ರಘು ಜಿ, ಇನ್‌ಸ್ಪೆಕ್ಟರ್‌ಗಳಾದ ಅಮರೇಶ ಹುಬ್ಬಳ್ಳಿ, ಕಾಳಪ್ಪ ಬಡಿಗೇರ ಹಾಗೂ ಸಿಬ್ಬಂದಿ ಇದ್ದರು.

ಕರ್ನಾಟಕ ಬ್ಯಾಂಕ್ ಲಾಭ ಶೇ 23ರಷ್ಟು ಕುಸಿತ

ನವದೆಹಲಿ (ಪಿಟಿಐ): ಕರ್ನಾಟಕ ಬ್ಯಾಂಕ್ 2023–24ನೇ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹274 ಕೋಟಿ ನಿವ್ವಳ ಲಾಭ ಗಳಿಸಿದೆ.

2022–23ನೇ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹354 ಕೋಟಿ ಲಾಭ ಗಳಿಸಿತ್ತು. ಈ ಲಾಭಕ್ಕೆ ಹೋಲಿಸಿದರೆ ಶೇ 23ರಷ್ಟು ಇಳಿಕೆಯಾಗಿದೆ. ಸಿಬ್ಬಂದಿಯ ವೇತನ ಹೆಚ್ಚಳದಿಂದಾಗಿ ಲಾಭದ ಪ್ರಮಾಣದಲ್ಲಿ ಕಡಿಮೆಯಾಗಿದೆ ಎಂದು ಬ್ಯಾಂಕ್, ಷೇರುಪೇಟೆಗೆ ತಿಳಿಸಿದೆ.

ಒಟ್ಟು ವರಮಾನವು ₹2,365 ಕೋಟಿಯಿಂದ ₹2,620 ಕೋಟಿಗೆ ಹೆಚ್ಚಳವಾಗಿದೆ. ನಿವ್ವಳ ಬಡ್ಡಿ ವರಮಾನವು ₹860 ಕೋಟಿಯಿಂದ ₹834 ಕೋಟಿಗೆ ಇಳಿದಿದೆ.

Karnataka Bank Ltd.

ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಎನ್‌ಪಿಎ) ಶೇ 3.74ರಿಂದ ಶೇ 3.53ಕ್ಕೆ ತಗ್ಗಿದೆ. ನಿವ್ವಳ ಎನ್‌ಪಿಎ ಶೇ 1.70ರಿಂದ ಶೇ 1.58ಕ್ಕೆ ಇಳಿದಿದೆ. ಬಂಡವಾಳ ಪರ್ಯಾಪ್ತತಾ ಅನುಪಾತದಲ್ಲಿ (ಸಿಆರ್‌ಎಆರ್) ಸುಧಾರಣೆಯಾಗಿದ್ದು, ಶೇ 17.45ರಿಂದ ಶೇ 18ಕ್ಕೆ ಏರಿಕೆಯಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹255-457

ದ್ವಿತಳಿ (ಬಿ.ವಿ) ₹266-672

ಎನ್.ಆರ್.ಪುರ ರಬ್ಬರ್


ಆರ್‌ಎಸ್‌ಎಸ್-4 ₹181.50

ಆರ್‌ಎಸ್‌ಎಸ್-5 ₹175

ಗುಡ್ ಲಾಟ್ ₹165

(ಪ್ರತಿ ಕೆ.ಜಿಗೆ)

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,967
ಇಂದಿನ ಅಂತ್ಯ	22,957
▼	10
ದಿನದ ಕನಿಷ್ಠ	22,908

ವಿನಿಮಯ ದರ

$ ಡಾಲರ್	83.10
£ ಪೌಂಡ್	105.63
€ ಯುರೊ	90.00
¥ ಯೆನ್ (100ಕ್ಕೆ)	53

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100ಕ್ಕೆ ₹625

12 ಕ್ಕೆ ₹82

ಮೈಸೂರು

100ಕ್ಕೆ ₹625

ಮುಂಬೈ ಧಾರಣೆ

ಶೇಂಗಾ

24-5-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1510 (1510)
ಒಂದು ವಾರದ ಡೆಲಿವರಿ	1505 (1505)
ಸೋಯಾ ಕಚ್ಚಾ	912 (910)
ಪಾಮ್ ವಾರದ ಡೆಲಿವರಿ	894 (898)
ಸೂರ್ಯಕಾಂತಿ ಎಣ್ಣೆ ಕಚ್ಚಾ	885 (885)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

₹71,800 (72,600)

ಬೆಳ್ಳಿ ಕೆ.ಜಿ ₹89,700 (90,100)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹15400
ಎಸಿ	₹8680
ಆರ್‌ಪಿ	₹15600
ಆರ್‌ಸಿ	₹9360

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹7800-8680
ದಾವಣಗೆರೆ	₹6600-6600
ಕೆ.ಆರ್. ಪೇಟೆ	₹8000-9450

ವಿಯೆಟ್ನಾಂ, ಬ್ರೆಜಿಲ್, ಮೆಕ್ಸಿಕೊದಲ್ಲಿ ಉತ್ಪಾದನೆ ಕುಸಿತ

ಕಾಫಿ ಧಾರಣೆ ಚೇತರಿಕೆ

● ರವಿ ಕೆಳಂಗಡಿ



ಕಳಸ (ಚಿಕ್ಕಮಗಳೂರು ಜಿಲ್ಲೆ): ಈ ತಿಂಗಳ ಆರಂಭದಲ್ಲಿ ಪ್ರತಿ ಕೆ.ಜಿ.ಗೆ ₹400ರಿಂದ ₹335ಕ್ಕೆ ಕುಸಿದಿದ್ದ ರೊಬಸ್ಟಾ ಕಾಫಿ ಧಾರಣೆಯು ಕಳೆದ ವಾರದಿಂದ ಮತ್ತೆ ಚೇತರಿಕೆಯ ಹಾದಿ ಹಿಡಿದಿದೆ. ಸದ್ಯ ಮಾರುಕಟ್ಟೆಯಲ್ಲಿ ಕೆ.ಜಿ.ಗೆ ₹360 ಬೆಲೆ ಇದೆ.

ಎರಡು ವಾರದಿಂದ ಲಂಡನ್ ಮತ್ತು ನ್ಯೂಯಾರ್ಕ್ ಕಾಫಿ ಮಾರುಕಟ್ಟೆಯಲ್ಲಿ ಸತತವಾಗಿ ಕಾಫಿ ಧಾರಣೆ ಏರುತ್ತಿದೆ. ಇದರಿಂದಾಗಿ ಸ್ಥಳೀಯ ಮಾರುಕಟ್ಟೆಯಲ್ಲಿ ಮತ್ತೆ ಸಂಚಲನ ಉಂಟಾಗಿದೆ.

ಕಳೆದ ತಿಂಗಳು 50 ಕೆ.ಜಿಯ ಚೀಲಕ್ಕೆ ₹11 ಸಾವಿರದವರೆಗೆ ಏರಿದ್ದ ರೊಬಸ್ಟಾ ಚೆರ್ರಿ ಧಾರಣೆಯು ಬಳಿಕ ₹8 ಸಾವಿರಕ್ಕೆ ಕುಸಿದಿತ್ತು. ಈ ವೇಳೆ ಕಾಫಿ ಮಾರಾಟ ಮಾಡದೆ ದಾಸ್ತಾನು ಇಟ್ಟುಕೊಂಡಿದ್ದ ಬೆಳೆಗಾರರು ಬೇಸರಗೊಂಡಿದ್ದರು. ಧಾರಣೆ ಏರಿಕೆಯಿಂದಾಗಿ ಚೀಲವೊಂದಕ್ಕೆ ₹9,500ರವರೆಗೂ ಬೆಲೆ ಸಿಗುತ್ತಿದೆ.

ಲಂಡನ್ ಮಾರುಕಟ್ಟೆಯಲ್ಲಿ ಒಂದು ಟನ್ ರೊಬಸ್ಟಾ ಕಾಫಿ ಧಾರಣೆ ದಾಖಲೆಯ 4,175 ಡಾಲರ್‌ಗೆ ಏರಿಕೆಯಾಗಿತ್ತು. ಆ ಬಳಿಕ 3,400 ಡಾಲರ್‌ಗೆ ಇಳಿದಿತ್ತು. ಶುಕ್ರವಾರದ ಮಾರುಕಟ್ಟೆಯಲ್ಲಿ 3,880 ಡಾಲರ್ ಆಸುಪಾಸಿನಲ್ಲಿ ವ್ಯವಹಾರ ನಡೆದಿದೆ. ಕಾಫಿ ಬೆಲೆ ಏರುಗತಿಯಲ್ಲಿ ಇರುವುದರಿಂದ ಬೆಳೆಗಾರರಲ್ಲಿ ಮತ್ತೆ ಸಂತಸ ಮೂಡಿದೆ.

ವಿಯೆಟ್ನಾಂನಲ್ಲಿ ರೊಬಸ್ಟಾ ಕಾಫಿ ಉತ್ಪಾದನೆ ಕುಸಿದಿದೆ. ಬ್ರೆಜಿಲ್‌ನಲ್ಲೂ ಅರೇಬಿಕಾ ಕಾಫಿ ಉತ್ಪಾದನೆ ಮೇಲೆ ಪ್ರತಿಕೂಲ ಹವಾಮಾನ ಪರಿಣಾಮ ಬೀರಿದೆ. ಮೆಕ್ಸಿಕೊದಲ್ಲಿ ತಾಪಮಾನ 40-45 ಡಿಗ್ರಿ ತಲುಪಿದ್ದು, ಹೂಗಳು ಕರಟಿ ಹೋಗುತ್ತಿವೆ. ಇದರಿಂದ ಮುಂದಿನ ಹಂಗಾಮಿನಲ್ಲೂ ಕಾಫಿ ಉತ್ಪಾದನೆ ಮೇಲೆ ನಕಾರಾತ್ಮಕ ಪ್ರಭಾವ ಬೀರುವ ಸಂಭವ ಇದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

‘ಜಾಗತಿಕವಾಗಿ ಕಾಫಿ ಬೆಳೆಯುವ ಪ್ರದೇಶದಲ್ಲಿ ಆಗುತ್ತಿರುವ ಹವಾಮಾನ ವೈಪರೀತ್ಯ ಗಮನಿಸಿದರೆ ಮುಂದಿನ ಒಂದೆರಡು ವರ್ಷ ಭಾರತದ ಕಾಫಿಗೆ ಗರಿಷ್ಠ ಧಾರಣೆ ಮುಂದುವರಿಯಬಹುದು’ ಎಂದು ಬೆಳೆಗಾರ ವಿಶಾಲ್ ತಿಳಿಸಿದರು.

ಕಾಫಿ ರಫ್ತು ಶೇ 12ರಷ್ಟು ಏರಿಕೆ

ನವದೆಹಲಿ (ಪಿಟಿಐ): 2023-24ನೇ ಆರ್ಥಿಕ ವರ್ಷದಲ್ಲಿ ₹10,636 ಕೋಟಿ ಮೌಲ್ಯದ ಕಾಫಿ ರಫ್ತು ಮಾಡಲಾಗಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 12.22ರಷ್ಟು ಏರಿಕೆಯಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ತಿಳಿಸಿದೆ.

2022–23ನೇ ಆರ್ಥಿಕ ವರ್ಷದಲ್ಲಿ ಭಾರತದಿಂದ ₹9,473 ಕೋಟಿ ಮೌಲ್ಯದ ಕಾಫಿ ರಫ್ತು ಮಾಡಲಾಗಿತ್ತು. ರೊಬಸ್ಟಾ ಕಾಫಿಗೆ ಹೆಚ್ಚಿದ ಬೇಡಿಕೆಯಿಂದಾಗಿ ರಫ್ತು ಪ್ರಮಾಣದಲ್ಲಿ ಏರಿಕೆಯಾಗಿದೆ ಎಂದು ಹೇಳಿದೆ.

2023–24ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ 1.25 ಲಕ್ಷ ಟನ್‌ನಷ್ಟು ಕಾಫಿ ರಫ್ತು ಮಾಡಲಾಗಿದೆ. ಇದರ ಹಿಂದಿನ ಆರ್ಥಿಕ ವರ್ಷದಲ್ಲಿ 1.10 ಲಕ್ಷ ಟನ್‌ನಷ್ಟು ರಫ್ತು ಮಾಡಲಾಗಿತ್ತು. ಈ ಅವಧಿಯಲ್ಲಿ ಒಟ್ಟಾರೆ ರಫ್ತಿನಲ್ಲಿ ಶೇ 13.35ರಷ್ಟು ಏರಿಕೆಯಾಗಿದೆ.

ಅಡಿಕೆ ಧಾರಣೆ

ಬಂಟ್ವಾಳ	
ಕೋಕ	18000-28500
ಹೊಸತು	28500-38000
ಹಳತು	38000-46500
ಕಾರ್ಕಳ	
ಹೊಸತು	25000-38000
ಹಳತು	30000-47500
ಕುಮಟ	
ಚಿಪ್ಪು	25699-30099
ಕೋಕ	13509-27599
ಫ್ಯಾಕ್ಟರಿ	11169-20639
ಹಳೆಚಾಲಿ	37099-39099
ಹೊಸಚಾಲಿ	32999-36509
ಶಿವಮೊಗ್ಗ	
ಬೆಟ್ಟೆ	47069-54799
ಗೊರಬಲು	19150-34377
ರಾಶಿ	34366-52899
ಸರಕು	43000-74696
ಶಿರಸಿ	
ಬೆಟ್ಟೆ	38280-44199
ಬಿಳಿಗೋಟು	23299-32679
ಚಾಲಿ	34018-38841
ಕೆಂಪುಗೋಟು	25699-30000
ರಾಶಿ	45018-49508
ಯಲ್ಲಾಪುರ	
ಅಪಿ	54169-54469
ಬಿಳಿಗೋಟು	22899-32650
ಕೋಕ	11212-28109
ಹಳೆಚಾಲಿ	38840-39040
ಹೊಸಚಾಲಿ	32990-38230
ಕೆಂಪುಗೋಟು	23899-33499
ರಾಶಿ	43199-53319
ತಟ್ಟಿಬೆಟ್ಟೆ	33619-42492

262 ಲಕ್ಷ ಟನ್ ಗೋಧಿ ಸಂಗ್ರಹ



ನವದೆಹಲಿ (ಪಿಟಿಐ): 2024–25ನೇ ಮಾರುಕಟ್ಟೆ ವರ್ಷದಲ್ಲಿ ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆಯಡಿ ಜನ ಕಲ್ಯಾಣ ಕಾರ್ಯಕ್ರಮಗಳಿಗೆ ಒಟ್ಟು 262.48 ಲಕ್ಷ ಟನ್ ಗೋಧಿ ಸಂಗ್ರಹಿಸಲಾಗಿದೆ. ಈ ಸಂಗ್ರಹಣೆ ಪ್ರಮಾಣವು ಕಳೆದ ವರ್ಷಕ್ಕಿಂತಲೂ ಹೆಚ್ಚಿದೆ ಎಂದು ಕೇಂದ್ರ ಸರ್ಕಾರ ಶುಕ್ರವಾರ ತಿಳಿಸಿದೆ.

ರಾಬಿ ಅವಧಿಯಲ್ಲಿನ ಗೋಧಿ ಸಂಗ್ರಹಣೆ ಕಾರ್ಯ ಪೂರ್ಣಗೊಂಡಿದೆ. 21.31 ಲಕ್ಷ ರೈತರಿಂದ ಗೋಧಿ ಖರೀದಿಸಲಾಗಿದ್ದು, ಇದಕ್ಕಾಗಿ ಕನಿಷ್ಠ ಬೆಂಬಲ ಬೆಲೆಯಡಿ ₹59,715 ಕೋಟಿ ವಿನಿಯೋಗಿಸಲಾಗಿದೆ ಎಂದು ವಿವರಿಸಿದೆ.

ಪ್ರಮುಖವಾಗಿ ಪಂಜಾಬ್‌ನಲ್ಲಿ 124.26 ಲಕ್ಷ ಟನ್ ಖರೀದಿಸಲಾಗಿದೆ. ಉಳಿದಂತೆ ಹರಿಯಾಣ 71.49 ಲಕ್ಷ ಟನ್, ಮಧ್ಯಪ್ರದೇಶ 47.78 ಲಕ್ಷ ಟನ್, ರಾಜಸ್ಥಾನ 9.66 ಲಕ್ಷ ಟನ್ ಹಾಗೂ ಉತ್ತರಪ್ರದೇಶದಲ್ಲಿ 9.07 ಲಕ್ಷ ಟನ್ ಖರೀದಿಸಲಾಗಿದೆ.

ಸಾಮಾನ್ಯವಾಗಿ ಏಪ್ರಿಲ್‌ನಿಂದ ಮಾರ್ಚ್‌ವರೆಗೆ ಕೇಂದ್ರದ ಖರೀದಿ ಏಜೆನ್ಸಿಗಳಿಂದ ಗೋಧಿ ಸಂಗ್ರಹಣೆ ನಡೆಯುವುದು ವಾಡಿಕೆ. ಆದರೆ, ಈ ಬಾರಿ ಬೆಳೆ ಕಟಾವು ಹಂತದಲ್ಲಿಯೇ ಕೇಂದ್ರದಿಂದ ಸಂಗ್ರಹಣೆ ಆರಂಭಿಸಲಾಗಿತ್ತು. ಬಹುತೇಕ ರಾಜ್ಯಗಳಲ್ಲಿ ಮಾರ್ಚ್‌ನ ಆರಂಭದಲ್ಲಿಯೇ ಖರೀದಿ ಪ್ರಕ್ರಿಯೆ ಶುರುವಾಗಿತ್ತು. ಸರ್ಕಾರವು ಮಾರುಕಟ್ಟೆ ವರ್ಷದಲ್ಲಿ 300 ಲಕ್ಷದಿಂದ 320 ಲಕ್ಷ ಟನ್ ಗೋಧಿ ಸಂಗ್ರಹಣೆ ಮಾಡುವ ಗುರಿ ಹೊಂದಿದೆ.

ಭತ್ತ ಖರೀದಿ: 489.15 ಲಕ್ಷ ಟನ್‌ನಷ್ಟು ಅಕ್ಕಿ ಕಾಪು ದಾಸ್ತಾನಿನ ಗುರಿ ಹೊಂದಲಾಗಿದೆ. ಇದಕ್ಕೆ ಅನುಗುಣವಾಗಿ 728.42 ಲಕ್ಷ ಟನ್‌ನಷ್ಟು ಭತ್ತ ಖರೀದಿಸುವ ಪ್ರಕ್ರಿಯೆ ನಡೆಯುತ್ತಿದೆ. ಇದಕ್ಕಾಗಿ ಕನಿಷ್ಠ ಬೆಂಬಲ ಬೆಲೆಯಡಿ ₹1.60 ಲಕ್ಷ ಕೋಟಿ ನಿಗದಿಪಡಿಸಲಾಗಿದೆ ಎಂದು ಕೇಂದ್ರ ತಿಳಿಸಿದೆ. ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆ ಸೇರಿ ಇತರೆ ಯೋಜನೆಯಡಿ ವಿತರಣೆ ಹಾಗೂ ಮುಕ್ತ ಮಾರುಕಟ್ಟೆಯಲ್ಲಿ ಬೆಲೆ ಏರಿಕೆ ನಿಯಂತ್ರಿಸಲು ಸರ್ಕಾರವು ಗೋಧಿ ಮತ್ತು ಅಕ್ಕಿಯನ್ನು ಕಾಪು ದಾಸ್ತಾನು ಮಾಡುತ್ತದೆ. ಸದ್ಯ ಈ ಆಹಾರ ಪದಾರ್ಥಗಳ ದಾಸ್ತಾನು ಪ್ರಮಾಣ 600 ಲಕ್ಷ ಟನ್‌ಗೂ ಹೆಚ್ಚಿದೆ ಎಂದು ಹೇಳಿದೆ.

ಗರಿಷ್ಠ ಮಟ್ಟ ತಲುಪಿ ಕುಸಿದ ನಿಫ್ಟಿ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಶುಕ್ರವಾರ ನಡೆದ ಆರಂಭಿಕ ವಹಿವಾಟಿನಲ್ಲಿ ಪ್ರಥಮ ಬಾರಿಗೆ 23 ಸಾವಿರ ಅಂಶದ ಗಡಿ ದಾಟಿ ದಾಖಲೆ ಬರೆದಿದ್ದ ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ, ದಿನದ ವಹಿವಾಟಿನ ಅಂತ್ಯದಲ್ಲಿ ಇಳಿಕೆ ಕಂಡಿತು.

ಬೆಳಿಗ್ಗಿನ ವಹಿವಾಟಿನಲ್ಲಿ ಎಫ್‌ಎಂಸಿಜಿ, ಐ.ಟಿ ಮತ್ತು ಹೆಲ್ತ್‌ಕೇರ್ ವಲಯದ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಏರಿಕೆ ಕಂಡಿದ್ದ ಷೇರು ಸೂಚ್ಯಂಕಗಳು, ನಂತರ ಇಳಿಕೆಯ ಹಾದಿ ಹಿಡಿದವು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 7 ಅಂಶ ಇಳಿಕೆ ಕಂಡು 75,410ಕ್ಕೆ ಸ್ಥಿರಗೊಂಡಿತು. ವಹಿವಾಟಿನ ವೇಳೆ 75,636 ಅಂಶಕ್ಕೆ ಏರಿಕೆಯಾಗಿತ್ತು.

ನಿಫ್ಟಿ 10 ಅಂಶ ಕಡಿಮೆಯಾಗಿ 22,957ಕ್ಕೆ ಅಂತ್ಯಗೊಂಡಿತು. ದಿನದ ವಹಿವಾಟಿನಲ್ಲಿ 58 ಅಂಶ ಹೆಚ್ಚಳವಾಗಿ 23,026ಕ್ಕೆ ಮುಟ್ಟಿತ್ತು. ಟೆಕ್ ಮಹೀಂದ್ರ, ಏಷ್ಯನ್ ಪೇಂಟ್ಸ್, ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್, ಮಹೀಂದ್ರ ಆ್ಯಂಡ್ ಮಹೀಂದ್ರ, ಟೈಟನ್, ಜೆಎಸ್‌ಡಬ್ಲ್ಯು ಸ್ಟೀಲ್, ಐಟಿಸಿ ಷೇರಿನ ಮೌಲ್ಯ ಇಳಿಕೆ ಕಂಡಿದೆ.

ಚಿನ್ನ, ಬೆಳ್ಳಿ ದರ ಮತ್ತೆ ಕುಸಿತ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸತತ ಮೂರನೇ ದಿನವಾದ ಶುಕ್ರವಾರವೂ ಚಿನ್ನ ಮತ್ತು ಬೆಳ್ಳಿ ಧಾರಣೆ ಇಳಿಕೆ ಕಂಡಿದೆ.

10 ಗ್ರಾಂ ಚಿನ್ನದ ದರ ₹900 ಕಡಿಮೆಯಾಗಿ ₹72,650 ಆಗಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹500 ಇಳಿದು ₹92,100ಕ್ಕೆ ಕುಸಿದಿದೆ.

‘ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿದರ ಕಡಿತಕ್ಕೆ ಇನ್ನೂ ನಿರ್ಧರಿಸಿಲ್ಲ. ಮತ್ತೊಂದೆಡೆ ಡಾಲರ್ ಸೂಚ್ಯಂಕ ಏರಿಕೆಯಾಗಿದೆ. ಹೂಡಿಕೆದಾರರು ಲಾಭ ಗಳಿಕೆಯತ್ತ ಚಿತ್ತ ನೆಟ್ಟಿದ್ದು, ಹಳದಿ ಲೋಹದ ಮಾರಾಟಕ್ಕೆ ಮುಂದಾಗಿದ್ದಾರೆ. ಹಾಗಾಗಿ, ಚಿನ್ನದ ಬೆಲೆಯಲ್ಲಿ ಇಳಿಕೆಯಾಗಿದೆ’ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಡಿಡಿ ಕಿಸಾನ್ ವಾಹಿನಿ ಎ.ಐ ನಿರೂಪಕರ ಸದ್ದು

ನವದೆಹಲಿ (ಪಿಟಿಐ): ಅನ್ನದಾತರಿಗೆ ಮೀಸಲಾದ ದೂರದರ್ಶನದ ಕಿಸಾನ್ ವಾಹಿನಿಯಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಸಿ ಇಬ್ಬರು ಎ.ಐ ಸುದ್ದಿ ನಿರೂಪಕರ ಪರಿಚಯಕ್ಕೆ ಕೇಂದ್ರ ಕೃಷಿ ಸಚಿವಾಲಯ ಮುಂದಾಗಿದೆ.

ಎ.ಐ ಕ್ರಿಶ್ ಹಾಗೂ ಎ.ಐ ಭೂಮಿ ಹೆಸರಿನ ಈ ಕೃತಕ ಸುದ್ದಿ ವಾಚಕರು ಭಾರತ ಹಾಗೂ ವಿದೇಶಿ ಸೇರಿದಂತೆ 50 ಭಾಷೆಗಳಲ್ಲಿ ಸುದ್ದಿ ಓದಬಲ್ಲ ಸಾಮರ್ಥ್ಯ ಹೊಂದಿದ್ದಾರೆ. ಇದೇ 26ರಿಂದ ಕೃಷಿಗೆ ಸಂಬಂಧಿಸಿದ ಸುದ್ದಿಗಳನ್ನು ವಾಚಿಸಲಿದ್ದಾರೆ ಎಂದು ಸಚಿವಾಲಯವು ತಿಳಿಸಿದೆ.

ರೈತರಿಗೆ ಮೀಸಲಾದ ದೇಶದ ಮೊದಲ ಸರ್ಕಾರಿ ವಾಹಿನಿ ಇದಾಗಿದೆ. ಗ್ರಾಮೀಣ ಭಾಗದ ಕೃಷಿಕರಿಗೆ ಕೃಷಿ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡುವ ಉದ್ದೇಶದಿಂದ 2015ರಲ್ಲಿ ಈ ವಾಹಿನಿಯನ್ನು ಆರಂಭಿಸಲಾಗಿತ್ತು. ಒಂಬತ್ತನೇ ವಾರ್ಷಿಕೋತ್ಸವದ ಸಂಭ್ರಮದಲ್ಲಿರುವ ವಾಹಿನಿಗೆ ಹೊಸ ಸ್ವರೂಪ ನೀಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ರೈತಾಪಿ ವರ್ಗಕ್ಕೆ ಮತ್ತಷ್ಟು ಉಪಯುಕ್ತವಾದ ಮಾಹಿತಿ ನೀಡುವ ಉದ್ದೇಶದಿಂದ ಪ್ರಸಾರ ವಿಭಾಗದಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಅನುಷ್ಠಾನಕ್ಕೆ ಮುಂದಾಗಿದೆ ಎಂದು ಸಚಿವಾಲಯ ತಿಳಿಸಿದೆ. ವಿರಾಮ ಇಲ್ಲದೆಯೇ ಈ ಸುದ್ದಿ ನಿರೂಪಕರು ದಿನದ 24 ಗಂಟೆ ಕಾಲ ಸುದ್ದಿ ಓದುವ ಸಾಮರ್ಥ್ಯ ಹೊಂದಿದ್ದಾರೆ. ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಆಯಾ ಪ್ರಾದೇಶಿಕ ಭಾಷೆಗಳಲ್ಲಿ ಕೃಷಿಗೆ ಸಂಬಂಧಿಸಿದ ಮಾಹಿತಿ ನೀಡಲಿದ್ದಾರೆ.

ಸೆನ್ಸೆಕ್ಸ್ ಗುಚ್ಛಕ್ಕೆ ಅದಾನಿ ಪೋರ್ಟ್ಸ್

ನವದೆಹಲಿ (ಪಿಟಿಐ): ಅದಾನಿ ಪೋರ್ಟ್ಸ್ ಕಂಪನಿಯು ಮಾರುಕಟ್ಟೆ ಮೌಲ್ಯದಲ್ಲಿ ವಿಪ್ರೊ ಕಂಪನಿಯನ್ನು ಹಿಂದಿಕ್ಕಿದ್ದು, ಜೂನ್ 24ರಿಂದ 30 ಕಂಪನಿಗಳ ಗುಚ್ಛವಾದ ಬಿಎಸ್‌ಇ ಸೆನ್ಸೆಕ್ಸ್ ಸೂಚ್ಯಂಕಕ್ಕೆ ಅಧಿಕೃತವಾಗಿ ಸೇರ್ಪಡೆಯಾಗಲಿದೆ ಎಂದು ಮುಂಬೈ ಷೇರುಪೇಟೆಯು ಶುಕ್ರವಾರ ತಿಳಿಸಿದೆ.

ಉದ್ಯಮಿ ಗೌತಮ್ ಅದಾನಿ ಒಡೆತನದ ಹತ್ತು ಕಂಪನಿಗಳ ಪೈಕಿ ಸೆನ್ಸೆಕ್ಸ್ ಗುಚ್ಛಕ್ಕೆ ಸೇರಿದ ಮೊದಲ ಕಂಪನಿ ಇದಾಗಿದೆ. ಅದಾನಿ ಪೋರ್ಟ್ಸ್ ಮತ್ತು ವಿಪ್ರೊ, ಎನ್‌ಎಸ್‌ಇ ನಿಫ್ಟಿ ಸೂಚ್ಯಂಕದಲ್ಲಿವೆ. ಅದಾನಿ ಎಂಟರ್‌ಪ್ರೈಸಸ್ ಕಂಪನಿ ಕೂಡ ಈ ಸೂಚ್ಯಂಕದಲ್ಲಿದೆ. ಟಾಟಾ ಸಮೂಹದ ಟ್ರೆಂಟ್ ಕಂಪನಿಯು ಎಸ್ ಆ್ಯಂಡ್ ಪಿ ಬಿಎಸ್‌ಇ ಸೆನ್ಸೆಕ್ಸ್‌ನ 50ರ ಗುಚ್ಛಕ್ಕೆ ಸೇರ್ಪಡೆಯಾಗಲಿದೆ.

ದ್ವೀಪ ರಾಷ್ಟ್ರದ ಸುತ್ತ ಸೇನಾ ಪಡೆಯ ತಾಲೀಮು


ತೈವಾನ್ ಮೇಲೆ ಯುದ್ಧ: ಚೀನಾ ಎಚ್ಚರಿಕೆ

ಬೀಜಿಂಗ್ (ಎಎಫ್‌ಪಿ): ತೈವಾನ್ ದ್ವೀಪದ ಸುತ್ತಲೂ ಸೇನಾ ತಾಲೀಮು ನಡೆಸುತ್ತಿರುವ ಚೀನಾ, ಸ್ವಯಂ ಆಡಳಿತವಿರುವ ಈ ದ್ವೀಪ ರಾಷ್ಟ್ರದ ಮೇಲೆ ಯುದ್ಧ ನಡೆಸುವುದಾಗಿ ಶುಕ್ರವಾರ ಎಚ್ಚರಿಕೆ ನೀಡಿದೆ.

ತೈವಾನ್ ಅನ್ನು ಸಂಪೂರ್ಣವಾಗಿ ತನ್ನ ತೆಕ್ಕೆಗೆ ಸೇರಿಸಿಕೊಂಡು ಪುನರ್ ಏಕೀಕರಣಗೊಳಿಸುವ ಕಾರ್ಯವನ್ನು ಸಾಧಿಸುವವರೆಗೂ ಪ್ರತಿರೋಧದ ಕ್ರಮಗಳನ್ನು ತೀವ್ರಗೊಳಿಸುವುದಾಗಿ ಚೀನಿ ಪಡೆಗಳು ಎಚ್ಚರಿಕೆ ನೀಡಿವೆ.

ಲಾಯ್ ಚಿಂಗ್-ಟೆ ಅವರು ತೈವಾನ್ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಮೂರು ದಿನಗಳ ನಂತರ ಚೀನಾ ಸೇನೆ ಯುದ್ಧ ತಾಲೀಮು ಪ್ರಾರಂಭಿಸಿತು. ತೈವಾನ್ ಅಧ್ಯಕ್ಷರ ಭಾಷಣವನ್ನು ‘ಇದು ಸ್ವಾತಂತ್ರ್ಯದ ತಪ್ಪೊಪ್ಪಿಗೆ’ ಎಂದು ಚೀನಾ ಖಂಡಿಸಿತು.

ಚೀನಾ ಸೇನೆ ಎರಡು ದಿನಗಳ ಯುದ್ಧ ತಾಲೀಮನ್ನು ಗುರುವಾರ ಬೆಳಿಗ್ಗೆಯೇ ಪ್ರಾರಂಭಿಸಿತ್ತು. ಚೀನಾದ ಯುದ್ಧ ನೌಕೆಗಳು ಮತ್ತು ಸೇನಾ ವಿಮಾನಗಳು ಪ್ರಜಾಪ್ರಭುತ್ವ ರಾಷ್ಟ್ರ ತೈವಾನ್ ಅನ್ನು ಸುತ್ತುವರಿದಿವೆ. ದ್ವೀಪರಾಷ್ಟ್ರದ ‘ಸ್ವತಂತ್ರ ಪಡೆಗಳ’ ರಕ್ತ ಹರಿಸುವ ಪ್ರತಿಜ್ಞೆಯನ್ನು ಮಾಡಿದೆ.



ಚೀನಾ ಯುದ್ಧ ನಡೆಸುವ ಎಚ್ಚರಿಕೆ ನೀಡಿದ ಬೆನ್ನಲ್ಲೇ ಶುಕ್ರವಾರ ತೈವಾನ್ ಸೇನೆ ತನ್ನ ನೆಲದ ರಕ್ಷಣೆಗೆ ಯುದ್ಧ ಟ್ಯಾಂಕ್‌ಗಳನ್ನು ರಸ್ತೆಗೆ ಇಳಿಸಿತು – ಎಎಫ್‌ಪಿ ಚಿತ್ರ

ಎರಡನೇ ದಿನದ ತಾಲೀಮಿನ ವೇಳೆ ಶುಕ್ರವಾರ ಚೀನಿ ಯುದ್ಧನೌಕೆಗಳು ಮತ್ತು ಯುದ್ಧ ವಿಮಾನಗಳು ತೈವಾನ್ ಅನ್ನು ಸಂಪೂರ್ಣ ಸುತ್ತುವರಿದವು. ಇದು ದ್ವೀಪವನ್ನು ವಶಪಡಿಸಿಕೊಳ್ಳುವ ನಮ್ಮ ಸಾಮರ್ಥ್ಯದ ಪರೀಕ್ಷೆ ಎಂದು ಚೀನಾ ಹೇಳಿದೆ.

‘ಮದ್ದುಗುಂಡು, ಶಸ್ತ್ರಾಸ್ತ್ರಗಳನ್ನು ತುಂಬಿದ ಯುದ್ಧ ವಿಮಾನಗಳು ನಮ್ಮ ಗುರಿಗಳ ಕಡೆಗೆ ಹಾರಿದವು. ಪ್ರಮುಖ ಗುರಿಗಳ ಮೇಲೆ ಯುದ್ಧನೌಕೆಗಳೊಂದಿಗೆ ಸಂಯೋಜಿತ ದಾಳಿ ನಡೆಸಲು ಬಾಂಬರ್ ವಿಮಾನ ಹೊರಟವು’ ಎಂದು ದೇಶದ ಸರ್ಕಾರಿ ವಾಹಿನಿ ‘ಸಿಸಿಟಿವಿ’ ವರದಿ ಮಾಡಿದೆ.

ಚೀನಿ ಸೇನೆಯು ತೈವಾನ್‌ನ ಪ್ರಮುಖ ದ್ವೀಪದಿಂದ 24 ನಾಟಿಕಲ್ ಮೈಲುಗಳಷ್ಟು ದೂರದಲ್ಲಿದೆ. ನಾಲ್ಕು ಚೀನಿ ಹಡಗುಗಳು ತೈವಾನ್‌ನ ಎರಡು ದ್ವೀಪಗಳ ‘ನಿರ್ಬಂಧಿತ ಜಲ’ ಪ್ರದೇಶವನ್ನು ಶುಕ್ರವಾರ ಪ್ರವೇಶಿಸಿವೆ. ಈ ಹಡಗುಗಳಿಗೆ ಹತ್ತಿರದಿಂದ ಇತರ ಎರಡು ಹಡಗುಗಳು ಬೆಂಬಲ ಒದಗಿಸಿವೆ ಎಂದು ತೈವಾನ್ ರಕ್ಷಣಾ ಸಚಿವಾಲಯ ಹೇಳಿದೆ.

ಒಂದೇ ಚೀನಾ ತತ್ವಕ್ಕೆ ತೈವಾನ್ ಸವಾಲು

‘ಲಾಯ್ ಅವರು ‘ಒಂದೇ ಚೀನಾ’ ತತ್ವಕ್ಕೆ ಗಂಭೀರ ಸವಾಲೊಡ್ಡಿದ್ದಾರೆ. ತೈವಾನ್‌ನಲ್ಲಿರುವ ನಮ್ಮ ದೇಶವಾಸಿಗಳನ್ನು ಯುದ್ಧದಂತಹ ಅಪಾಯ ಮತ್ತು ಅಪಾಯಕಾರಿ ಪರಿಸ್ಥಿತಿಗೆ ತಳ್ಳುತ್ತಿದ್ದಾರೆ’ ಎಂದು ಚೀನಾ ರಕ್ಷಣಾ ಸಚಿವಾಲಯದ ವಕ್ತಾರ ವು ಕಿಯಾನ್ ಶುಕ್ರವಾರ ಹೇಳಿದರು.

‘ಪ್ರತಿ ಬಾರಿಯು ‘ತೈವಾನ್ ಸ್ವಾತಂತ್ರ್ಯ’ ನಮಗೆ ಪ್ರಚೋದನೆ ನೀಡುತ್ತದೆ. ಮಾತೃಭೂಮಿಯ ಸಂಪೂರ್ಣ ಪುನರ್ ಏಕೀಕರಣವನ್ನು ನಾವು ಸಾಧಿಸುವವರೆಗೆ ನಮ್ಮ ಪ್ರತಿತಂತ್ರಗಳು ಒಂದು ಹೆಜ್ಜೆ ಮುಂದಿರುತ್ತವೆ’ ಎಂದು ಅವರು ಹೇಳಿದರು.

ಹೆಲಿಕಾಪ್ಟರ್ ತುರ್ತು ಭೂಸ್ಪರ್ಶ: ಯಾತ್ರಿಕರು ಸುರಕ್ಷಿತ

ಡೆಹ್ರಾಡೂನ್ (ಪಿಟಿಐ): ಯಾತ್ರಿಗಳನ್ನು ಕೇದಾರನಾಥಕ್ಕೆ ಹೊತ್ತೊಯ್ಯುತ್ತಿದ್ದ ಹೆಲಿಕಾಪ್ಟರ್‌ನಲ್ಲಿ ತಾಂತ್ರಿಕ ದೋಷದಿಂದಾಗಿ ತುರ್ತು ಭೂಸ್ಪರ್ಶ ಮಾಡಿದೆ.


ಹೆಲಿಕಾಪ್ಟರ್‌ನಲ್ಲಿ ಪೈಲಟ್ ಸೇರಿ ಏಳು ಮಂದಿ ಇದ್ದರು. ಅದರಲ್ಲಿ ಆರು ಮಂದಿ ಯಾತ್ರಿಗಳು. ಎಲ್ಲರೂ ಸುರಕ್ಷಿತರಾಗಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಹೆಲಿಕಾಪ್ಟರ್ ಸಿರ್ಸಿ ಹೆಲಿಪ್ಯಾಡ್‌ನಿಂದ ಕೇದಾರನಾಥಕ್ಕೆ ಶುಕ್ರವಾರ ಬೆಳಿಗ್ಗೆ ಟೇಕಾಫ್ ಆಗಿತ್ತು. ಮಾರ್ಗ ಮಧ್ಯೆ ತಾಂತ್ರಿಕ ದೋಷ ಕಂಡು ಬಂದಿತು. ಪೈಲಟ್ ತೆಗೆದುಕೊಂಡ ತ್ವರಿತ ನಿರ್ಧಾರದಿಂದ ದೊಡ್ಡ ಅನಾಹುತ ತಪ್ಪಿದೆ. ಹೆಲಿಪ್ಯಾಡ್‌ನಿಂದ ಕೆಲ ಮೀಟರ್ ದೂರದಲ್ಲಿ ಇಳಿದಿದೆ ಎಂದು ರುದ್ರಪ್ರಯಾಗದ ಜಿಲ್ಲಾಧಿಕಾರಿ ಸೌರಭ್ ಗಹರ್ವಾರ್ ತಿಳಿಸಿದರು.

ಅದಾನಿ ಕಲ್ಲಿದ್ದಲು ಆಮದು ಪ್ರಕರಣದ ಶೀಘ್ರ ಇತ್ಯರ್ಥಕ್ಕೆ ಕೋರಿಕೆ

ಸಿಜೆಐಗೆ 21 ಸಂಘಟನೆಗಳ ಪತ್ರ

ನವದೆಹಲಿ (ಪಿಟಿಐ): ಇಂಡೊನೇಷ್ಯಾದಿಂದ ಆಮದು ಮಾಡಿಕೊಂಡ ಕಲ್ಲಿದ್ದಲಿಗೆ ಹೆಚ್ಚಿನ ದರ ನಿಗದಿ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಅದಾನಿ ಸಮೂಹದ ಕೆಲವು ಕಂಪನಿಗಳ ವಿರುದ್ಧ ತನಿಖೆ ನಡೆಸುತ್ತಿರುವ ರೆವಿನ್ಯು ಗುಪ್ತಚರ ನಿರ್ದೇಶನಾಲಯವು ದಾಖಲಿಸಿರುವ ಪ್ರಕರಣವನ್ನು ತ್ವರಿತವಾಗಿ ಇತ್ಯರ್ಥಪಡಿಸಬೇಕು ಎಂದು ಕೋರಿ ಅಂತರ ರಾಷ್ಟ್ರೀಯ ಮಟ್ಟದ 21 ಸಂಘಟನೆಗಳು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ಅವರಿಗೆ ಪತ್ರ ಬರೆದಿವೆ.



ಆಸ್ಟ್ರೇಲಿಯನ್ ಸೆಂಟರ್ ಫಾರ್ ಇಂಟರ್‌ನ್ಯಾಷನಲ್ ಜಸ್ಟಿಸ್, ಬ್ಯಾಂಕ್‌ಟ್ರ್ಯಾಕ್, ಬಾಬ್ ಬ್ರೌನ್ ಫೌಂಡೇಷನ್, ಕಲ್ಚರ್ ಅನ್‌ಸ್ಟ್ರೇನ್ಡ್, ಎಕೊ ಸೇರಿದಂತೆ ಒಟ್ಟು 21 ಸಂಘಟನೆಗಳು ಈ ಪತ್ರ ರವಾನಿಸಿವೆ.

ಜಾರ್ಜ್ ಸೊರೋಸ್ ಬೆಂಬಲಿತ 'ಆರ್ಗನೈಸ್ಡ್ ಕ್ರೈಮ್ ಆ್ಯಂಡ್ ಕರಪ್ಷನ್ ರಿಪೋರ್ಟಿಂಗ್ ಪ್ರಾಜೆಕ್ಟ್' (ಒಸಿಸಿಆರ್‌ಪಿ) ದಾಖಲೆಗಳನ್ನು ಉಲ್ಲೇಖಿಸಿ ಲಂಡನ್ನಿನ ಫೈನಾನ್ಶಿಯಲ್ ಟೈಮ್ಸ್ ಪತ್ರಿಕೆಯು ವರದಿಯೊಂದನ್ನು ಪ್ರಕಟಿಸಿದೆ. ಅದಾನಿ ಸಮೂಹವು 2013ರಲ್ಲಿ ಕಳಪೆ ದರ್ಜೆಯ ಕಲ್ಲಿದ್ದಲನ್ನು ಹೆಚ್ಚಿನ ಮೌಲ್ಯದ ಕಲ್ಲಿದ್ದಲು ಎಂದು ಮಾರಾಟ ಮಾಡಿ 'ವಂಚಿಸಿದೆ' ಎಂದು ವರದಿಯು ಸೂಚ್ಯವಾಗಿ ಹೇಳಿದೆ.

ಪಳೆಯುಳಿಕೆ ಇಂಧನದ ಬಳಕೆಯನ್ನು ಮುಂದುವರಿಸುವುದರ ವಿರುದ್ಧ ತಾವು ಇರುವುದಾಗಿ ಹೇಳಿರುವ 21 ಸಂಘಟನೆಗಳು, ಫೈನಾನ್ಶಿಯಲ್ ಟೈಮ್ಸ್‌ನ ವರದಿಯು ಅದಾನಿ ಸಮೂಹವು 'ಕಳಪೆ ದರ್ಜೆಯ ಕಲ್ಲಿದ್ದಲನ್ನು ದುಬಾರಿ ಬೆಲೆಯ ಪರಿಸರಕ್ಕೆ ಹೆಚ್ಚು ಹಾನಿ ಮಾಡದ ಇಂಧನ' ಎಂಬಂತೆ ಮಾರಾಟ ಮಾಡಿರುವುದಕ್ಕೆ ಹೊಸದಾಗಿರುವ ಹಾಗೂ ವಿಸ್ತೃತವಾದ ಪುರಾವೆಯನ್ನು ಒದಗಿಸಿದೆ ಎಂದು ಹೇಳಿವೆ. ಅದಾನಿ ಸಮೂಹವು ತಮಿಳುನಾಡು ವಿದ್ಯುತ್ ಉತ್ಪಾದನೆ ಮತ್ತು ವಿತರಣಾ ನಿಗಮದ ಜೊತೆಗಿನ ವಹಿವಾಟಿನಲ್ಲಿ ಹೀಗೆ ಮಾಡಿದೆ ಎಂಬ ಆರೋಪ ಇದೆ.

ಅದಾನಿ ಸಮೂಹವು ಎಲ್ಲ ಆರೋಪಗಳನ್ನು ನಿರಾಕರಿಸಿದೆ. ಆದರೆ ವಿರೋಧ ಪಕ್ಷಗಳ ನಾಯಕರು ಈ ವರದಿಯನ್ನು ಉಲ್ಲೇಖಿಸಿ, ಆರೋಪಗಳ ಬಗ್ಗೆ ಸಂಸತ್ತಿನ ಜಂಟಿ ಸಮಿತಿಯಿಂದ (ಜೆಪಿಸಿ) ತನಿಖೆ ನಡೆಸಬೇಕು ಎಂದು ಒತ್ತಾಯಿಸಿವೆ.

2011ರಿಂದ 2015ರ ನಡುವೆ ಇಂಡೊನೇಷ್ಯಾದಿಂದ ಆಮದು ಮಾಡಿಕೊಂಡ ಕಲ್ಲಿದ್ದಲಿಗೆ ಅತಿಯಾಗಿ ಬೆಲೆ ನಿಗದಿ ಮಾಡಲಾಗಿದೆ ಎಂಬ ವಿಚಾರವಾಗಿ ರೆವಿನ್ಯು ಗುಪ್ತಚರ ನಿರ್ದೇಶನಾಲಯವು 2016ರ ಮಾರ್ಚ್‌ನಲ್ಲಿ ತನಿಖೆ ಆರಂಭಿಸಿದೆ.

ನಟಿ ಹತ್ಯೆ: ಅಪರಾಧಿಗೆ ಮರಣದಂಡನೆ

ಕನ್ನಡದ 'ಮೇಕಪ್' ಚಿತ್ರದಲ್ಲೂ ನಟಿಸಿದ್ದ ಲೈಲಾ ಖಾನ್

ಪ್ರಜಾವಾಣಿ ವಾರ್ತೆ

ಮುಂಬೈ: ಬಾಲಿವುಡ್ ನಟಿ, ರೂಪದರ್ಶಿ ಲೈಲಾ ಖಾನ್ ಹಾಗೂ ಅವರ ಕುಟುಂಬದ ಆರು ಜನರ ಹತ್ಯೆ ಕೃತ್ಯದ ಸಂಬಂಧ, ಕೃತ್ಯ ನಡೆದ 13 ವರ್ಷಗಳ ಬಳಿಕ ನಟಿಯ ಮಲತಂದೆ ಪರ್ವೇಜ್ ತಕ್‌ಗೆ ಮರಣದಂಡನೆ ಶಿಕ್ಷೆಯನ್ನು ವಿಧಿಸಿ ಶುಕ್ರವಾರ ಸ್ಥಳೀಯ ನ್ಯಾಯಾಲಯವು ಆದೇಶ ನೀಡಿತು.

ಲೈಲಾ ಖಾನ್ ಹಾಗೂ ಇತರ ಐವರನ್ನು ಬರ್ಬರವಾಗಿ ಹತ್ಯೆಗೈದು, ನಾಸಿಕ್ ಜಿಲ್ಲೆಯ ಐಗತ್‌ಪುರಿಯ ತೋಟದ ಮನೆಯ ಆವರಣದಲ್ಲಿ ಹೂಳಲಾಗಿತ್ತು. ಈ ಕೃತ್ಯ ಆಗ ಮುಂಬೈನಲ್ಲಿ ಸಂಚಲನ ಮೂಡಿಸಿದ್ದು, ಚರ್ಚೆಗೆ ಗ್ರಾಸವಾಗಿತ್ತು. ಆಸ್ತಿ ವಿವಾದವು ಈ ಹತ್ಯೆಗಳಿಗೆ ಮೂಲ ಕಾರಣವಾಗಿತ್ತು.

30 ವರ್ಷ ವಯಸ್ಸಿನ ಲೈಲಾಖಾನ್, ಆಕೆಯ ತಾಯಿ ಸಲೀನಾ ಪಟೇಲ್ (51), ಅಕ್ಕ ಅಜ್ಮೀನಾ ಖಾನ್ (32), ಅವಳಿ ಸೋದರರಾದ ಇಮ್ರಾನ್ ಖಾನ್, ಝಾರಾ ಖಾನ್ (25), ಮತ್ತು ದಾಯಾದಿ ರೇಷ್ಮಾ ಖಾನ್ (22) ಅವರನ್ನು ಬರ್ಬರವಾಗಿ ಹತ್ಯೆ ಮಾಡಲಾಗಿತ್ತು.

ಈಗ ಮರಣದಂಡನೆಗೆ ಗುರಿಯಾಗಿರುವ ಪರ್ವೇಜ್ ತಕ್‌ನಿಗೆ ಲಷ್ಕರ್ ಎ ತಯಬಾ ಸಂಘಟನೆ ಜೊತೆಗೆ ನಂಟಿದೆ. ಈತ ಸಲೀನಾ ಪಟೇಲ್ ಅವರ 3ನೇ ಪತಿ. ನಾದಿರ್ ಪಟೇಲ್, ಆಸಿಫ್ ಶೇಖ್ ಮೊದಲ ಇಬ್ಬರು ಪತಿಯರು.

ಲೈಲಾ ಖಾನ್ ಸೇರಿ ಆರು ಜನರು 2011ರ ಫೆಬ್ರುವರಿ 7ರಿಂದ ನಾಪತ್ತೆಯಾಗಿದ್ದರು. ದಾಖಲೆಗಳನ್ನು ತಿದ್ದಿದ ಪ್ರಕರಣವೊಂದಕ್ಕೆ ಸಂಬಂಧಿಸಿ ಪರ್ವೇಜ್ ತಕ್‌ನನ್ನು ಜಮ್ಮು ಮತ್ತು ಕಾಶ್ಮೀರ ಪೊಲೀಸರು 2012ರ ಜುಲೈ 8ರಲ್ಲಿ ಬಂಧಿಸಿದ್ದರು. ಅದರ ತನಿಖೆ ವೇಳೆ ಮಹಾರಾಷ್ಟ್ರದಲ್ಲಿ ಕೊಲೆ ಕೃತ್ಯ ನಡೆಸಿದ್ದನ್ನು ಈತ ಒಪ್ಪಿಕೊಂಡಿದ್ದ. ಈತನ ನೀಡಿದ ಮಾಹಿತಿ ಆಧರಿಸಿ 2012ರ ಜುಲೈ 18ರಂದು ಫಾರ್ಮ್‌ಹೌಸ್‌ನಿಂದ ಶವಗಳನ್ನು ಪತ್ತೆಮಾಡಲಾಗಿತ್ತು.

ನಾದಿರ್ ಪಾಟೀಲ್ ಅವರು ಲೈಲಾಖಾನ್ ಅವರ ತಂದೆ. ಈ ಪ್ರಕರಣದಲ್ಲಿ ಪೊಲೀಸರಿಗೆ ದೂರು ನೀಡಿದ್ದು, ಆಸಿಫ್ ಶೇಖ್ ಮತ್ತು ಪರ್ವೇಜ್ ತಕ್ ವಿರುದ್ಧ ಶಂಕೆ ವ್ಯಕ್ತಪಡಿಸಿದ್ದರು.

ಲೈಲಾ ಖಾನ್ 2008ರಲ್ಲಿ ರಾಜೇಶ್ ಖನ್ನಾ ಅವರೊಂದಿಗೆ 'ವಫಾ: ಎ ಡೆಡ್ಲಿ ಲವ್ ಸ್ಟೋರಿ' ಚಿತ್ರದಲ್ಲಿ ನಟಿಸಿದ್ದರು. 2002ರಲ್ಲಿ ಇವರು ಕನ್ನಡದ 'ಮೇಕಪ್' ಚಿತ್ರದಲ್ಲೂ ನಟಿಸಿದ್ದರು.



ನೀರಿನ ಅಭಾವ ಬೇಸಿಗೆಯ ತಾಪ ಹಾಗೂ ನೀರಿನ ಹಾಹಾಕಾರದಿಂದ ರಾಜಸ್ಥಾನದ ಝಾಲನ ಡೂಂಗ್ರಿ ಎಂಬಲ್ಲಿ ಶುಕ್ರವಾರ ಜನರು ಕುಡಿಯುವ ನೀರಿಗಾಗಿ ನೀರಿನ ಟ್ಯಾಂಕ್‌ಗೆ ಮುಗಿ ಬಿದ್ದಿದ್ದರು –ಪಿಟಿಐ ಚಿತ್ರ

ಬಾಂಗ್ಲಾ ಸಂಸದ ಹತ್ಯೆ: ಆರೋಪಿ ಸೆರೆ

ಸಂಸದರ ದೇಹ ತುಂಡರಿಸಲು ಇತರ ನಾಲ್ವರಿಗೆ ಬಂಧಿತ ಆರೋಪಿ ಸಹಾಯ

ಕೋಲ್ಕತ್ತ (ಪಿಟಿಐ): ಬಾಂಗ್ಲಾದೇಶದ ಅವಾಮಿ ಲೀಗ್ ಪಕ್ಷದ ಸಂಸದ ಅನ್ವರುಲ್ ಅಜೀಂ ಅನಾರ್ ಹತ್ಯೆಗೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳದ ಸಿಐಡಿ ಪೊಲೀಸರು ಉತ್ತರ 24 ಪರಗಣ ಜಿಲ್ಲೆಯ ಬೊಂಗಾವ್ ಪ್ರದೇಶದಲ್ಲಿ ಮಾಂಸ ವ್ಯಾಪಾರಿಯೊಬ್ಬನನ್ನು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಕೊಲೆಯಾದ ವ್ಯಕ್ತಿಯ ದೇಹವನ್ನು ಹಲವು ಭಾಗಗಳಾಗಿ ತುಂಡರಿಸಲು ಹಾಗೂ ಅದನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿ ವಿವಿಧ ಸ್ಥಳಗಳಲ್ಲಿ ಎಸೆಯಲು, ಇತರ ನಾಲ್ವರು ಆರೋಪಿಗಳಿಗೆ ನೆರವು ನೀಡಿದ್ದಾಗಿ ಈ ಆರೋಪಿ ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾನೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಆರೋಪಿಯು ಬಾಂಗ್ಲಾದೇಶದ ಪ್ರಜೆಯಾಗಿದ್ದು, ವೃತ್ತಿಯಲ್ಲಿ ಮಾಂಸ ವ್ಯಾಪಾರಿ. ಆತ ಅಕ್ರಮವಾಗಿ ಭಾರತಕ್ಕೆ ಬಂದು, ತನ್ನ ನೈಜ ಗುರುತನ್ನು ಮರೆ ಮಾಚಿ ಮುಂಬೈನಲ್ಲಿ ವಾಸ್ತವ್ಯ ಹೂಡಿದ್ದ. ಅನ್ವರುಲ್ ಅವರನ್ನು ಕೊಲ್ಲುವ ಯೋಜನೆಯ ಭಾಗವಾಗಿ ಎರಡು ತಿಂಗಳ ಹಿಂದೆ ಈತನನ್ನು ಕೋಲ್ಕತ್ತಕ್ಕೆ ಕರೆಸಿಕೊಳ್ಳಲಾಗಿತ್ತು ಎಂದು ಅವರು ವಿವರಿಸಿದ್ದಾರೆ.

ಸಿಐಡಿ ಅಧಿಕಾರಿಗಳ ತಂಡವು ಆರೋಪಿಯನ್ನು ಭಂಗಾರ್ ಪ್ರದೇಶಕ್ಕೆ ಕರೆದೊಯ್ದು, ಸಂಸದ ಅನ್ವರುಲ್ ಅವರ ದೇಹದ ಭಾಗಗಳಿಗಾಗಿ ಶುಕ್ರವಾರ ಶೋಧ ನಡೆಸಿತು. ಬಳಿಕ ಆರೋಪಿಯನ್ನು ಬರಾಸತ್‌ನ ನ್ಯಾಯಾಲಯದಲ್ಲಿ ಹಾಜರು ಪಡಿಸಲಾಯಿತು. ನ್ಯಾಯಾಲಯವು ಆರೋಪಿಯನ್ನು 12 ದಿನಗಳವರೆಗೆ ಸಿಐಡಿ ವಶಕ್ಕೆ ಒಪ್ಪಿಸಿತು.



ಬಂಧಿತನನ್ನು ಶುಕ್ರವಾರ ಬರಾಸತ್ ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಯಿತು –ಪಿಟಿಐ ಚಿತ್ರ

ಸಂಸದರ ಆಪ್ತ ಸ್ನೇಹಿತ, ಅಮೆರಿಕದ ಪ್ರಜೆ ಅಖ್ತರುಝ್ಝಮಾನ್ ಅವರು ಈ ಕೊಲೆಯಲ್ಲಿ ಭಾಗಿಯಾದವರಿಗೆ ಸುಮಾರು ₹ 5 ಕೋಟಿ ನೀಡಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಂಸದರ ಸ್ನೇಹಿತ ಕೋಲ್ಕತ್ತದಲ್ಲಿ ಫ್ಲಾಟ್ ಹೊಂದಿದ್ದು, ಸದ್ಯ ಅಮೆರಿಕದಲ್ಲಿ ನೆಲೆಸಿದ್ದಾರೆ ಎಂದು ಹೇಳಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಂಗ್ಲಾದೇಶದ ಪೊಲೀಸರು ಬಂಧಿಸಿರುವ ಮೂವರು ಆರೋಪಿಗಳ ವಿಚಾರಣೆ ಸಲುವಾಗಿ ಪಶ್ಚಿಮ ಬಂಗಾಳದ ಸಿಐಡಿ ತಂಡ ಗುರುವಾರ ಬಾಂಗ್ಲಾದೇಶಕ್ಕೆ ಭೇಟಿ ನೀಡಿದೆ.

ಲಭ್ಯ ಪುರಾವೆಗಳ ಪ್ರಕಾರ, ಸಂಸದರನ್ನು ಕತ್ತು ಹಿಸುಕಿ ಕೊಂದು, ಬಳಿಕ ಅವರ ದೇಹವನ್ನು ಹಲವು ತುಂಡುಗಳಾಗಿ ಕತ್ತರಿಸಲಾಗಿದೆ ಎಂದು ಪೊಲೀಸರು ವಿವರಿಸಿದ್ದಾರೆ. ಮೇ 13ರಂದು ಕೋಲ್ಕತ್ತದಿಂದ ನಾಪತ್ತೆಯಾಗಿದ್ದ ಅನ್ವರುಲ್ ಅವರು ಹತ್ಯೆಯಾಗಿರುವ ಬಗ್ಗೆ ಪೊಲೀಸರು ಬುಧವಾರ ಖಚಿತಪಡಿಸಿದ್ದರು.

ಹನಿ ಟ್ರ್ಯಾಪ್ ಶಂಕೆ

ಕೋಲ್ಕತ್ತ (ಪಿಟಿಐ): ಸಂಸದರು ತನಗೆ ಪರಿಚಿತವಿದ್ದ ಮಹಿಳೆಯೊಬ್ಬರಿಂದ 'ಹನಿ ಟ್ರ್ಯಾಪ್'ಗೆ ಒಳಗಾಗಿರುವ ಶಂಕೆ ಇದೆ. ಬಳಿಕ ಅವರನ್ನು ಹಂತಕರು ಕೊಂದಿರುವ ಸಾಧ್ಯತೆ ಇದೆ ಎಂದು ಪೊಲೀಸರು ಸಂಶಯ ವ್ಯಕ್ತಪಡಿಸಿದ್ದಾರೆ.

ಸಂಸದರು ಒಬ್ಬ ವ್ಯಕ್ತಿ ಮತ್ತು ಮಹಿಳೆಯೊಂದಿಗೆ ಫ್ಲಾಟ್ ಒಳಗೆ ಹೋದ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಸಿಐಡಿ ಪೊಲೀಸರು ಅದನ್ನು ಪರಿಶೀಲಿಸುತ್ತಿದ್ದಾರೆ.

ಸಂಸದರ ಜತೆಗೆ ಇಬ್ಬರು ಫ್ಲಾಟ್ ಪ್ರವೇಶಿಸಿರುವುದು, ಆ ನಂತರ ಅವರಿಬ್ಬರಷ್ಟೇ ಫ್ಲಾಟ್‌ನಿಂದ ಹೊರ ಬಂದಿರುವುದು ಮತ್ತು ಮರು ದಿನ ಪುನಃ ಅವರು ಫ್ಲಾಟ್ ಒಳಗೆ ಹೋದ ದೃಶ್ಯ ದಾಖಲಾಗಿದೆ. ಆದರೆ ಫ್ಲಾಟ್ ಒಳ ಪ್ರವೇಶಿಸಿದ ಸಂಸದರು ಹೊರಗೆ ಬಂದಿಲ್ಲ' ಎಂದು ಅಧಿಕಾರಿ ಮಾಹಿತಿ ನೀಡಿದ್ದಾರೆ.

ಈ ಇಬ್ಬರೂ ದೊಡ್ಡ ಟ್ರಾಲಿ ಸೂಟ್‌ಕೇಸ್‌ನೊಂದಿಗೆ ಫ್ಲಾಟ್‌ನಿಂದ ಹೊರಬಂದಿರುವ ದೃಶ್ಯವೂ ಸೆರೆಯಾಗಿದೆ ಎಂದು ಅವರು ತಿಳಿಸಿದ್ದಾರೆ.

ಸಂಸದರ ಮೊಬೈಲ್‌ನಿಂದ ಸಂದೇಶ ರವಾನೆ: ಸಂಸದರ ಮೊಬೈಲ್ ಫೋನ್‌ನಿಂದ ಅವರ ಕುಟುಂಬದ ಸದಸ್ಯರು ಮತ್ತು ಸ್ನೇಹಿತರಿಗೆ ಸಂದೇಶ ರವಾನೆಯಾಗಿದೆ. 'ನಾನು ದೆಹಲಿಗೆ ಪ್ರಯಾಣಿಸುತ್ತಿರುವ ಕಾರಣ ಯಾರೂ ನನ್ನನ್ನು ಸಂಪರ್ಕಿಸಬೇಡಿ' ಎಂದು ಅದರಲ್ಲಿ ಹೇಳಲಾಗಿದೆ. ಅವರ ಹತ್ಯೆಯಾದ ಬಳಿಕ ಈ ಸಂದೇಶವನ್ನು ಕಳುಹಿರುವ ಸಾಧ್ಯತೆ ಇದ್ದು, ಗೊಂದಲ ಮೂಡಿಸಲು ಯತ್ನಿಸಿದಂತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ತಮಿಳುನಾಡು ಮಾಜಿ ಡಿಜಿಪಿ ಬಂಧನ

ಚೆನ್ನೈ (ಪಿಟಿಐ): ಪ್ರತ್ಯೇಕವಾಗಿ ವಾಸಿಸುತ್ತಿರುವ ತಮ್ಮ ಪತ್ನಿ ಹಾಗೂ ಹಿರಿಯ ಐಎಎಸ್ ಅಧಿಕಾರಿ ಬೀಲಾ ವೆಂಕಟೇಶನ್ ಅವರ ಮನೆಗೆ ಅತಿಕ್ರಮವಾಗಿ ಪ್ರವೇಶಿಸಿ ಬೆದರಿಕೆವೊಡ್ಡಿದ ಪ್ರಕರಣದಲ್ಲಿ ತಮಿಳುನಾಡಿನ ಮಾಜಿ ವಿಶೇಷ ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ರಾಜೇಶ್ ದಾಸ್ ಅವರನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ರಾಜೇಶ್ ದಾಸ್ ಅವರನ್ನು ಶುಕ್ರವಾರ ಬೆಳಿಗ್ಗೆ ಕೆಳಂಬಾಕ್ಕಂನಲ್ಲಿರುವ ಅವರ ನಿವಾಸದಿಂದ ಬಂಧಿಸಲಾಯಿತು. ಅವರ ವಿರುದ್ಧ ಅತಿಕ್ರಮಣ ಮತ್ತು ಕ್ರಿಮಿನಲ್ ಬೆದರಿಕೆ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ದಾಸ್ ಮತ್ತು ಅವರ ಸಹಚರರು ಮೇ 18ರಂದು ಥೈಯೂರ್‌ನಲ್ಲಿರುವ ನನ್ನ ಮನೆಗೆ ನುಗ್ಗಿ, ಭದ್ರತಾ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿ ಬೆದರಿಕೆ ಒಡ್ಡಿದ್ದಾರೆ' ಎಂದು ಆರೋಪಿಸಿ ರಾಜ್ಯ ಇಂಧನ ಇಲಾಖೆಯ ಕಾರ್ಯದರ್ಶಿಯಾಗಿರುವ ಬೀಲಾ ವೆಂಕಟೇಶನ್ ಅವರು ಸೋಮವಾರ ದೂರು ನೀಡಿದ್ದರು.

ದಾಸ್ ಮತ್ತು ಬೀಲಾ ಪ್ರತ್ಯೇಕವಾಗಿ ವಾಸಿಸುತ್ತಿದ್ದು, ದಾಸ್ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದರು. ದಾಸ್ ವಾಸವಿರುವ ಮನೆಗೆ ವಿದ್ಯುತ್ ಸೌಲಭ್ಯ ಕಡಿತಗೊಳಿಸಿರುವುದು ಗಲಾಟೆಗೆ ಕಾರಣವಾಗಿದೆ.

ಪೋರ್ಶೆ ಕಾರು ಅಪಘಾತ: ಅಪರಾಧ ವಿಭಾಗಕ್ಕೆ ತನಿಖೆ ಹೊಣೆ

ಇಬ್ಬರು ಪೊಲೀಸರ ಅಮಾನತು

ಪುಣೆ (ಪಿಟಿಐ): 'ಪೋರ್ಶೆ ಕಾರು ಅಪಘಾತ ಪ್ರಕರಣದಲ್ಲಿ 17 ವರ್ಷದ ಬಾಲಕ ಕಾರು ಚಾಲನೆ ಮಾಡುತ್ತಿರಲಿಲ್ಲವೆಂದು ಬಿಂಬಿಸಲು ಪ್ರಯತ್ನಿಸಿರುವುದು ಕಂಡುಬಂದಿದೆ. ಈ ಕುರಿತು ಇಬ್ಬರು ಪೊಲೀಸರನ್ನು ಅಮಾನತುಗೊಳಿಸಲಾಗಿದೆ' ಎಂದು ಪುಣೆ ಪೊಲೀಸ್ ಆಯುಕ್ತ ಅಮಿತೇಶ್ ಕುಮಾರ್ ಶುಕ್ರವಾರ ಹೇಳಿದ್ದಾರೆ.

'ಪ್ರಕರಣ ದಾಖಲಿಸಿಕೊಳ್ಳುವಾಗ ಕೆಲವು ಪೊಲೀಸರು ಲೋಪ ಎಸಗಿರುವುದು ತನಿಖೆಯಿಂದ ತಿಳಿದು ಬಂದಿದೆ. ಪ್ರಕರಣದ ತನಿಖೆಯನ್ನು ಯರವಾಡ ಠಾಣೆಯಿಂದ ಅಪರಾಧ ವಿಭಾಗಕ್ಕೆ ವರ್ಗಾಯಿಸಲಾಗಿದೆ' ಎಂದರು.

'ಇತ್ತೀಚೆಗೆ ಪುಣೆಯ ಕಲ್ಯಾಣಿನಗರ ಪ್ರದೇಶದಲ್ಲಿ ಪೋರ್ಶೆ ಕಾರು ಬೈಕಿಗೆ ಡಿಕ್ಕಿ ಹೊಡೆದು, ಮಧ್ಯಪ್ರದೇಶ ಮೂಲದ ಇಬ್ಬರು ಟೆಕಿಗಳು ಮೃತಪಟ್ಟಾಗ ಕಾರನ್ನು ಚಾಲನೆ ಮಾಡುತ್ತಿದ್ದುದು ಬಾಲಕನ ಕುಟುಂಬದ ವಯಸ್ಕ ಚಾಲಕನೇ ಹೊರತು ಬಾಲಕನಲ್ಲ ಎಂದು ಬಿಂಬಿಸಲು ಪ್ರಯತ್ನಿಸಲಾಗಿದೆ. ಇಂತಹ ಪ್ರಯತ್ನಗಳನ್ನು ಮಾಡಿದವರ ವಿರುದ್ಧ ಐಪಿಸಿಯ ಸೆಕ್ಷನ್ 201 (ಸಾಕ್ಷ್ಯ ನಾಶ) ಅಡಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ' ಎಂದು ಅವರು ಹೇಳಿದರು.

'ಅಪಘಾತ ನಡೆದಾಗ ಬಾಲಕ ಕಾರು ಚಾಲನೆ ಮಾಡುತ್ತಿದ್ದ ಎಂಬುದು ಸ್ಪಷ್ಟವಾಗಿ ಗೊತ್ತಾಗಿದೆ. ನಾವು ಈಗಾಗಲೇ ಎಲ್ಲ ಪುರಾವೆಗಳನ್ನು ಸಂಗ್ರಹಿಸಿದ್ದೇವೆ. ಬಾಲಕ ಮನೆಯಿಂದ ಹೊರಬರುವಾಗ ಆತ ಕಾರಿನೊಂದಿಗೆ ಮನೆಯಿಂದ ಹೊರಬಂದಿರುವುದು ಭದ್ರತಾ ರಿಜಿಸ್ಟರ್‌ನಲ್ಲಿ ದಾಖಲಾಗಿದೆ' ಎಂದು ಅವರು ಹೇಳಿದರು.

'ಕಾರನ್ನು ಬಾಲಕ ಚಾಲನೆ ಮಾಡುತ್ತಿದ್ದ ಎನ್ನುವುದು ತಾಂತ್ರಿಕ ಸಾಕ್ಷ್ಯಗಳು ಮತ್ತು ಸಿ.ಸಿ.ಟಿ.ವಿ. ಕ್ಯಾಮೆರಾಗಳ ದೃಶ್ಯಗಳಿಂದ ದೃಢಪಟ್ಟಿದೆ. ಅಪಘಾತ ನಡೆದಾಗ ಬಾಲಕ ಡ್ರೈವಿಂಗ್ ಸೀಟಿನಲ್ಲಿದ್ದದ್ದನ್ನು ಪ್ರತ್ಯಕ್ಷದರ್ಶಿಗಳು ಸಹ ದೃಢಪಡಿಸಿದ್ದಾರೆ' ಎಂದು ತಿಳಿಸಿದರು.

ಬಾಲಕನ ರಕ್ತದ ಮಾದರಿಗಳ ಬಗ್ಗೆ ಕೇಳಿದಾಗ, ಅಪರಾಧ ಪ್ರಕರಣ ದಾಖಲಿಸಿದ ನಂತರ ಬಾಲಕನನ್ನು ಭಾನುವಾರ ಬೆಳಿಗ್ಗೆ 9 ಗಂಟೆಯ ಸುಮಾರಿಗೆ ಸಸೂನ್ ಆಸ್ಪತ್ರೆಗೆ ಕಳುಹಿಸಲಾಗಿದೆ. ರಾತ್ರಿ 11ಗಂಟೆಗೆ ರಕ್ತದ ಮಾದರಿಗಳನ್ನು ಸಂಗ್ರಹಿಸಿರುವುದು ವಿಳಂಬವಾಗಿದೆ. ಆದರೆ, ರಕ್ತದ ವರದಿಯು ನಮ್ಮ ಪ್ರಕರಣದ ಆಧಾರ ಸ್ತಂಭವಲ್ಲ ಎಂದು ಅವರು ಸ್ಪಷ್ಟಪಡಿಸಿದರು.

> ಪೊಲೀಸರ ಪರವಾಗಿ ಪರಿಣಾಮಕಾರಿಯಾಗಿ ವಾದ ಮಂಡಿಸಲು ವಿಶೇಷ ವಕೀಲರನ್ನು ನೇಮಿಸಲಾಗುವುದು
>
> **ಅಮಿತೇಶ್ ಕುಮಾರ್**, ಪುಣೆ ಪೊಲೀಸ್ ಆಯುಕ್ತ

ಐಪಿಸಿ ಸೆಕ್ಷನ್ 304 (ಉದ್ದೇಶ ಪೂರ್ವಕವಲ್ಲದ ನರಹತ್ಯೆ) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಅವರು ಹೇಳಿದರು.

ಬಾಲಕನಿಗೆ ಪುಣೆ ಬಲಾಪರಾಧ ನ್ಯಾಯಮಂಡಳಿಯು (ಜೆಜೆಬಿ) ನೀಡಿದ್ದ ತ್ವರಿತ ಜಾಮೀನನ್ನು ಪ್ರಶ್ನಿಸಿ ಪೊಲೀಸರು ಪುನರ್ ಪರಿಶೀಲನೆ ಅರ್ಜಿ ಸಲ್ಲಿಸಿದ ನಂತರ ಬಾಲಕನನ್ನು ಜೆಜೆಬಿಯು ಜೂನ್ 5ರವರೆಗೆ ಬಾಲ ವೀಕ್ಷಣಾ ಕೇಂದ್ರಕ್ಕೆ ಕಳುಹಿಸಿದೆ. ಈ ಪ್ರಕರಣದಲ್ಲಿ ಬಾಲಕನ ತಂದೆ ಉದ್ಯಮಿ ವಿಶಾಲ್ ಅಗರ್‌ವಾಲ್, ಮದ್ಯ ಪೂರೈಸಿದ ಹೋಟೆಲ್‌ನ ಮಾಲೀಕ ಮತ್ತು ವ್ಯವಸ್ಥಾಪಕ, ಇನ್ನೊಂದು ಕ್ಲಬ್‌ನ ವ್ಯವಸ್ಥಾಪಕ ಹಾಗೂ ಇಬ್ಬರು ಸಿಬ್ಬಂದಿಯನ್ನು ಬಂಧಿಸಲಾಗಿತ್ತು. ಅವರನ್ನು ನ್ಯಾಯಾಂಗ ವಶಕ್ಕೆ ಒಪ್ಪಿಸಿ ಶುಕ್ರವಾರ ಕೋರ್ಟ್ ಆದೇಶಿಸಿದೆ.

ಕೇಸರಿ ದಿರಿಸಿನ ತಿರುವಳ್ಳುವರ್ ಚಿತ್ರ ಬಳಸಿದ ರಾಜಭವನ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನ ಕವಿ, ಸಂತ ತಿರುವಳ್ಳುವರ್ ಅವರು ಕೇಸರಿ ದಿರಿಸು ಹಾಗೂ ವಿಭೂತಿ ಧರಿಸಿರುವಂತಹ ಭಾವಚಿತ್ರವನ್ನು ಬಳಸುವ ಮೂಲಕ ರಾಜ್ಯಪಾಲ ಆರ್.ಎನ್.ರವಿ ಅವರು ಈಗ ವಿವಾದಕ್ಕೆ ನಾಂದಿ ಹಾಡಿದ್ದಾರೆ.

ರಾಜ್ಯದಲ್ಲಿ ಸಾಮಾನ್ಯವಾಗಿ ಜ.16ರಂದು 'ತಿರುವಳ್ಳುವರ್ ದಿನ' ಆಚರಿಸಿದರೆ, ರಾಜಭವನದಲ್ಲಿ ಇದೇ ಮೊದಲ ಬಾರಿಗೆ 'ವೈಕಾಸಿ ಅನುಶಂ' ನಿಮಿತ್ತ ಶುಕ್ರವಾರ ಅವರ ಜನ್ಮದಿನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಈ ಸಂಬಂಧ ಸಿದ್ಧಪಡಿಸಿದ ಆಹ್ವಾನ ಪತ್ರಿಕೆಯಲ್ಲಿ ತಿರುವಳ್ಳುವರ್ ಅವರು ಕೇಸರಿ ದಿರಿಸು, ವಿಭೂತಿ ಧರಿಸಿರುವ ಚಿತ್ರ ಬಳಸಲಾಗಿತ್ತು. ತಮಿಳುನಾಡು ಸರ್ಕಾರ, ಕವಿಯು ಶ್ವೇತವರ್ಣದ ವಸ್ತ್ರ ಧರಿಸಿರುವಂತಹ ಚಿತ್ರ ಬಳಸಲಿದೆ.

ರಾಜಭವನ ಮತ್ತು ಬಿಜೆಪಿಯ ಮೂಲಗಳ ಪ್ರಕಾರ, ದ್ರಾವಿಡ ಪಕ್ಷಗಳು ತಿರುವಳ್ಳುವರ್ ಜನ್ಮದಿನವನ್ನು ತಮಿಳು ಮಾಸಿಕ 'ವೈಕಾಸಿ' (ಮೇ ಮಧ್ಯದಿಂದ ಜೂನ್ ಮಧ್ಯ) ಬದಲಿಗೆ ತಾಯ್ ಮಾಸಿಕಕ್ಕೆ ಬದಲಿಸಿತ್ತು.

2019ರಲ್ಲಿ ಬಿಜೆಪಿಯು ಕವಿ ಕೇಸರಿ ದಿರಿಸು ಧರಿಸಿದ್ದ ಚಿತ್ರವನ್ನು ಬಳಸಿತ್ತು. ಆಗ ಸಮಾಜದ ವಿವಿಧ ಸ್ತರದಿಂದ ತೀವ್ರ ಟೀಕೆ, ಆಕ್ಷೇಪಗಳು ಕೇಳಿಬಂದಿದ್ದವು.

ಲಿಂಗ ಪತ್ತೆಗೆ ಪತ್ನಿ ಹೊಟ್ಟೆಗೆ ಇರಿದಿದ್ದ ಪತಿ

ನವದೆಹಲಿ: ತನ್ನ ಗರ್ಭಿಣಿ ಪತ್ನಿಯ ಗರ್ಭದಲ್ಲಿರುವುದು ಗಂಡು ಅಥವಾ ಹೆಣ್ಣು ಮಗುವೊ ಎಂಬುದನ್ನು ತಿಳಿಯಲು ಕುಡುಗೋಲಿನಿಂದ ಪತ್ನಿಯ ಹೊಟ್ಟೆಯನ್ನು ಇರಿದಿದ್ದ ವ್ಯಕ್ತಿಗೆ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ.

ಉತ್ತರ ಪ್ರದೇಶದ ಬದೌನಿನ ಸಿವಿಲ್ ಲೈನ್ಸ್‌ನ ನಿವಾಸಿ ಪನ್ನಾ ಲಾಲ್ ಎಂಬಾತ 2020ರ ಸೆಪ್ಟೆಂಬರ್‌ನಲ್ಲಿ ತನ್ನ ಪತ್ನಿ ಅನಿತಾ ಅವರ ಮೇಲೆ ಹಲ್ಲೆ ನಡೆಸಿದ್ದ.

ಮದುವೆಯಾಗಿ 22 ವರ್ಷಗಳಾಗಿರುವ ದಂಪತಿಗೆ ಐವರು ಹೆಣ್ಣು ಮಕ್ಕಳಿದ್ದಾರೆ. ಆದರೆ ಪನ್ನಾ ಲಾಲ್‌ಗೆ ಪುತ್ರ ವ್ಯಾಮೋಹ. ಇದಕ್ಕಾಗಿ ಪದೇ ಪದೇ ಹೆಂಡತಿಯೊಂದಿಗೆ ಜಗಳವಾಡುತ್ತಿದ್ದ. ಈ ವಿಷಯ ಅನಿತಾ ಅವರ ಕುಟುಂಬಕ್ಕೂ ತಿಳಿದಿತ್ತು. ಅವರೂ ಪನ್ನಾ ಅವರ ಮನವೊಲಿಸಲು ಯತ್ನಿಸಿದ್ದರು. ಆದರೆ ತಾನು ವಿಚ್ಛೇದನ ನೀಡಿ, ಮತ್ತೊಬ್ಬ ಮಹಿಳೆಯನ್ನು ವಿವಾಹವಾಗುವುದಾಗಿ ಪನ್ನಾ ಬೆದರಿಕೆ ಹಾಕಿದ್ದ.

ಘಟನೆ ನಡೆದ ದಿನ ದಂಪತಿ ಗರ್ಭದಲ್ಲಿರುವ ಮಗುವಿನ ಲಿಂಗದ ಬಗ್ಗೆ ಪುನಃ ಜಗಳವಾಡಿದ್ದರು. ಆಗ ಅನಿತಾ ಅವರು ಎಂಟು ತಿಂಗಳ ಗರ್ಭಿಣಿಯಾಗಿದ್ದರು. ಮಾತಿಗೆ ಮಾತು ಜೋರಾದಾಗ ಕುಪಿತಗೊಂಡ ಪನ್ನಾ, ಪತ್ನಿಯ ಹೊಟ್ಟೆಯನ್ನು ಕತ್ತರಿಸಿ ಯಾವ ಮಗು ಇದೆ ಎಂಬುದನ್ನು ಪರೀಕ್ಷಿಸುವುದಾಗಿ ಬೆದರಿಕೆ ಹಾಕಿದ್ದ. ಅಷ್ಟೇ ಅಲ್ಲದೆ ಕುಡುಗೋಲಿನಿಂದ ಪತ್ನಿಯ ಹೊಟ್ಟೆಯನ್ನೂ ಇರಿದ. ಇದರಿಂದ, ಅನಿತಾ ಅವರ ಕರುಳು ಹೊರಗೆ ನೇತಾಡಲಾರಂಭಿಸಿತು.

ನೋವು ತಾಳಲಾರದೆ ಅನಿತಾ ಅವರು ಕಿರುಚುತ್ತಾ ಮನೆಯಿಂದ ಹೊರಗೆ ಓಡಿ ಹೋದರು. ಸಮೀಪದಲ್ಲಿಯೇ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಅವರ ಸಹೋದರ ರಕ್ಷಣೆಗೆ ಧಾವಿಸಿ ಬಂದರು. ಅವರನ್ನು ಕಂಡ ಕೂಡಲೇ ಪನ್ನಾ ಸ್ಥಳದಿಂದ ಪರಾರಿಯಾದ. ಬಳಿಕ ಅನಿತಾ ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಈ ದಾಳಿಯಿಂದ ಅವರು ಬದುಕುಳಿದರೂ, ಅವರ ಗರ್ಭದಲ್ಲಿದ್ದ ಗಂಡು ಮಗು ಉಳಿಯಲಿಲ್ಲ. ಈ ವಿಷಯವನ್ನು ಅನಿತಾ ಅವರೇ ನ್ಯಾಯಾಲಯಕ್ಕೆ ತಿಳಿಸಿದರು. ಈ ಕುರಿತು ಎನ್‌ಡಿಟಿವಿ ವರದಿ ಮಾಡಿದೆ.

27 ಆಟಗಾರರ ಫುಟ್‌ಬಾಲ್ ತಂಡ ಪ್ರಕಟ

ಫಿಫಾ ವಿಶ್ವಕಪ್ ಕ್ವಾಲಿಫೈಯರ್: ಗಾಯಾಳು ಗೊಗೊಯ್, ಹಮ್ಮದ್ ಹೊರಕ್ಕೆ

ಭುವನೇಶ್ವರ (ಪಿಟಿಐ): ಜೂನ್ 6ರಂದು ಕೋಲ್ಕತ್ತದಲ್ಲಿ ನಡೆಯುವ ಕುವೈತ್ ವಿರುದ್ಧದ ಫಿಫಾ ವಿಶ್ವಕಪ್ ಕ್ವಾಲಿಫೈಯರ್ ಪಂದ್ಯಕ್ಕಾಗಿ ಭಾರತ 27 ಆಟಗಾರರ ತಂಡ ಪ್ರಕಟಿಸಿದೆ. ಫಾರ್ವರ್ಡ್ ಆಟಗಾರ ಪಾರ್ಥಿಬ್ ಗೊಗೊಯಿ ಮತ್ತು ಡಿಫೆಂಡರ್ ಮುಹಮ್ಮದ್ ಹಮ್ಮದ್ ಗಾಯದ ಕಾರಣ ಹೊರಗುಳಿದಿದ್ದಾರೆ. ಸುದೀರ್ಘ ಅವಧಿಗೆ ತಂಡದ ನಾಯಕನಾಗಿರುವ ಸುನಿಲ್ ಚೆಟ್ರಿ ಅವರಿಗೆ ಇದು ವೃತ್ತಿಜೀವನದ ಕೊನೆಯ ಪಂದ್ಯವಾಗಿದೆ.

ಭುವನೇಶ್ವರದಲ್ಲಿ ತರಬೇತಿ ಶಿಬಿರದಲ್ಲಿದ್ದ ಒಟ್ಟು 32 ಆಟಗಾರರ ಪೈಕಿ ಫುರ್ಬಾ ಲಚೆನ್ಪಾ, ಪಾರ್ಥಿಬ್, ಇಮ್ರಾನ್ ಖಾನ್, ಹಮ್ಮದ್ ಮತ್ತು ಜಿತಿನ್ ಎಂಎಸ್ ಅವರನ್ನು ಪರಿಗಣಿಸಿಲ್ಲ. ಉಳಿದವರು ಮೇ 29ರ ವರೆಗೆ ತರಬೇತಿ ಮುಂದುವರಿಸಲಿದ್ದು, ಅವರು ಕೋಲ್ಕತ್ತಕ್ಕೆ ಪ್ರಯಾಣಿಸಲಿದ್ದಾರೆ.



ಸುನಿಲ್ ಚೆಟ್ರಿ

'ತಂಡದ ಆಟಗಾರರು ಕಠಿಣ ಪರಿಶ್ರಮಿಗಳು. ವಿಶೇಷವಾಗಿ ಜಿತಿನ್ ಮತ್ತು ಪಾರ್ಥಿವ್ ಅವರ ಸ್ಥಾನಕ್ಕೆ ಸ್ಪರ್ಧೆ ನಿಜವಾಗಿಯೂ ಪ್ರಬಲವಾಗಿದೆ' ಎಂದು ಮುಖ್ಯ ಕೋಚ್ ಇಗೊರ್ ಸ್ಟಿಮ್ಯಾಚ್ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಪಾರ್ಥಿವ್ ಮತ್ತು ಹಮ್ಮದ್ ಕೆಲವು ದಿನಗಳ ಹಿಂದೆ ಗಾಯಗಳಿಂದ ಬಳಲುತ್ತಿದ್ದರು ಮತ್ತು 7 ರಿಂದ14 ದಿನಗಳ ವಿಶ್ರಾಂತಿಯ ಅಗತ್ಯವಿದೆ ಎಂದರು.

ಕುವೈತ್ ವಿರುದ್ಧದ ಪಂದ್ಯದ ನಂತರ, ಭಾರತ ಜೂನ್ 11 ರಂದು ಕತಾರ್ ವಿರುದ್ಧ ಎ ಗುಂಪಿನ ಕೊನೆಯ ಎರಡು ಪಂದ್ಯಗಳನ್ನು ಆಡಲಿದೆ. ನಾಲ್ಕು ಪಂದ್ಯಗಳಿಂದ ನಾಲ್ಕು ಅಂಕಗಳನ್ನು ಗಳಿಸಿರುವ ಭಾರತ ಸದ್ಯ ಗುಂಪಿನಲ್ಲಿ ಎರಡನೇ ಸ್ಥಾನದಲ್ಲಿದೆ.

ಗುಂಪಿನಲ್ಲಿ ಅಗ್ರ ಎರಡು ಸ್ಥಾನ ಪಡೆಯುವ ತಂಡಗಳು ಫಿಫಾ ವಿಶ್ವಕಪ್ ಅರ್ಹತಾ ಸುತ್ತಿನ ಮೂರನೇ ಸುತ್ತಿಗೆ ಅರ್ಹತೆ ಪಡೆಯಲಿವೆ ಮತ್ತು 2027ರ ಎಎಫ್‌ಸಿ ಏಷ್ಯನ್ ಕಪ್‌ಗೆ ತಮ್ಮ ಸ್ಥಾನವನ್ನು ಕಾಯ್ದಿರಿಸಿಕೊಳ್ಳಲಿವೆ.

ತಂಡ: ಗೋಲ್ ಕೀಪರ್ಸ್: ಗುರ್‌ಪ್ರೀತ್ ಸಿಂಗ್ ಸಂಧು, ಅಮರಿಂದರ್ ಸಿಂಗ್, ವಿಶಾಲ್ ಕೈತ್, ಡಿಫೆಂಡರ್ಸ್: ಅಮ್ಮಿ ರಣವಾಡೆ, ಅನ್ವರ್ ಅಲಿ, ಜಯ್ ಗುಪ್ತಾ, ಲಾಲ್‌ಚುಂಗ್ನುಂಗಾ, ಮೆಹತಾಬ್ ಸಿಂಗ್, ನರೇಂದರ್, ನಿಖಿಲ್ ಪೂಜಾರಿ, ರಾಹುಲ್ ಭೆಕೆ, ಸುಭಾಶಿಶ್ ಬೋಸ್. ಮಿಡ್ ಫೀಲ್ಡರ್ಸ್: ಅನಿರುದ್ಧ್ ಥಾಪಾ, ಬ್ರೆಂಡನ್ ಫರ್ನಾಂಡಿಸ್, ಎಡ್ಮಂಡ್ ಲಾಲ್ರಿಂಡಿಕಾ, ಜೀಕ್ಸನ್ ಸಿಂಗ್, ಲಾಲಿಯನ್ಜುವಾಲಾ ಚಾಂಗ್ಟೆ, ಲಿಸ್ಟನ್ ಕೊಲ್ಯೊ, ಮಹೇಶ್ ಸಿಂಗ್ ನೌರೆಮ್, ನಂದಕುಮಾರ್ ಶೇಖರ್, ಸಹಲ್ ಅಬ್ದುಲ್ ಸಮದ್, ಸುರೇಶ್ ಸಿಂಗ್ ವಾಂಗ್ಜಾಮ್. ಫಾರ್ವರ್ಡ್ಸ್: ಡೇವಿಡ್ ಲಾಲ್ಲನ್ಸಂಗಾ, ಮನ್ವೀರ್ ಸಿಂಗ್, ರಹೀಮ್ ಅಲಿ, ಸುನಿಲ್ ಚೆಟ್ರಿ, ವಿಕ್ರಮ್ ಪ್ರತಾಪ್ ಸಿಂಗ್.

ಸೆಮಿಫೈನಲ್‌ಗೆ ಸಿಂಧು; ಅಶ್ಮಿತಾ ನಿರ್ಗಮನ

ಕ್ವಾಲಾಲಂಪುರ (ಪಿಟಿಐ): ಭಾರತದ ಪಿ.ವಿ.ಸಿಂಧು ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಶಸ್ತಿ ಗೆಲ್ಲುವ ನಿಟ್ಟಿನಲ್ಲಿ ಇನ್ನೊಂದು ಹೆಜ್ಜೆ ಮುಂದಿಟ್ಟರು. ಸಿಂಧು ಹೋರಾಟದ ಪಂದ್ಯದಲ್ಲಿ ಅಗ್ರ ಶ್ರೇಯಾಂಕದ ಹಾನ್ ಯು ಅವರನ್ನು ಸೋಲಿಸಿ ಸೆಮಿಫೈನಲ್ ತಲುಪಿದರು.

ವಿಶ್ವ ಕ್ರಮಾಂಕದಲ್ಲಿ 15ನೇ ಸ್ಥಾನದಲ್ಲಿರುವ ಸಿಂಧು, ಶುಕ್ರವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 21–13, 14–21, 21–12 ರಿಂದ ಆರನೇ ಕ್ರಮಾಂಕದ ಆಟಗಾರ್ತಿ ಹಾನ್ ಅವರನ್ನು ಸೋಲಿಸಿದರು. ಆ ಮೂಲಕ ಕಳೆದ ತಿಂಗಳು ನಿಂಗ್ಬೊದಲ್ಲಿ ನಡೆದ ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಚೀನಾ ಆಟಗಾರ್ತಿ ಎದುರು ಅನುಭವಿಸಿದ ಸೋಲಿಗೆ ಪ್ರತೀಕಾರ ತೀರಿಸಿಕೊಂಡರು.

ಸಿಂಧು ತಮ್ಮ ಮುಂದಿನ ಪಂದ್ಯದಲ್ಲಿ ಥಾಯ್ಲೆಂಡ್‌ನ ಬುಸಾನನ್ ಒಂಗ್ಬಾಮ್‌ರುಂಗ್ಫಾನ್ ಅವರನ್ನು ಎದುರಿಸಲಿದ್ದಾರೆ. ಥಾಯ್ಲೆಂಡ್ ಆಟಗಾರ್ತಿ ಇನ್ನೊಂದು ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಇಂಡೊನೇಷ್ಯಾದ ವರ್ಧನಿ ಕುಸುಮಪುತ್ರಿ ಅವರನ್ನು 21–12, 21–23, 21–16 ರಿಂದ ಸೋಲಿಸಿದರು.

ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ ಭಾರತದ ಅಶ್ಮಿತಾ ಚಾಲಿಹಾ 10–21, 15–21 ರಲ್ಲಿ ಆರನೇ ಶ್ರೇಯಾಂಕದ ಆಟಗಾರ್ತಿ, ಚೀನಾದ ಝಾಂಗ್ ಯಿ ಮನ್ ಅವರಿಗೆ ಮಣಿದರು. ಆ ಮೂಲಕ ಅಶ್ಮಿತಾ ಅಮೋಘ ಯಶಸ್ಸಿನ ಓಟ ಕೊನೆಗೊಂಡಿತು.



ಭಾರತದ ಪಿ.ವಿ. ಸಿಂಧು ಪಿಟಿಐ ಚಿತ್ರ

ಟಿ20 ವಿಶ್ವಕಪ್‌ಗೆ ಪಾಕ್ ತಂಡ

ಕರಾಚಿ (ಎಎಫ್‌ಪಿ): ವೆಸ್ಟ್ ಇಂಡೀಸ್ ಮತ್ತು ಅಮೆರಿಕದಲ್ಲಿ ಜೂನ್ 1ರಂದು ಆರಂಭವಾಗುವ ಟಿ20 ವಿಶ್ವಕಪ್‌ನಲ್ಲಿ ಭಾಗವಹಿಸುವ 15 ಸದಸ್ಯರ ಪಾಕಿಸ್ತಾನ ತಂಡವನ್ನು ಪ್ರಕಟಿಸಲಾಗಿದೆ. ಆ ಮೂಲಕ ಭಾಗವಹಿಸುವ 20 ತಂಡಗಳಲ್ಲಿ ಕೊನೆಯದಾಗಿ ಪ್ರಕಟವಾದ ತಂಡ ಎನಿಸಿತು.

ಪಾಕಿಸ್ತಾನವು, ಜೂನ್ 6ರಂದು ಡಲ್ಲಾಸ್‌ನಲ್ಲಿ ತನ್ನ ಮೊದಲ ಪಂದ್ಯವನ್ನು ಅಮೆರಿಕ ವಿರುದ್ಧ ಆಡಲಿದೆ.


ತಂಡ: ಬಾಬರ್ ಆಜಂ (ನಾಯಕ), ಮೊಹಮ್ಮದ್ ರಿಜ್ವಾನ್, ಸಯಿಮ್ ಅಯೂಬ್, ಫಕರ್ ಜಮಾನ್, ಉಸ್ಮಾನ್ ಖಾನ್, ಆಜಂ ಖಾನ್, ಇಫ್ತಿಕಾರ್ ಅಹ್ಮದ್, ಇಮದ್ ವಾಸಿಂ, ಶದಾಬ್ ಖಾನ್, ಮೊಹಮ್ಮದ್ ಆಮಿರ್, ಶಾಹೀನ್ ಶಾ ಅಫ್ರಿದಿ, ನಸೀಮ್ ಶಾ, ಅಬ್ಬಾಸ್ ಅಫ್ರೀದಿ, ಹ್ಯಾರಿಸ್ ರವೂಫ್, ಅಬ್ರಾರ್ ಅಹ್ಮದ್

ಫ್ರೆಂಚ್ ಓಪನ್: ನಗಾಲ್‌ಗೆ ಪ್ರಬಲ ಎದುರಾಳಿ

ಪ್ಯಾರಿಸ್ (ಪಿಟಿಐ): ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರಿಗೆ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಮೊದಲ ಸುತ್ತಿನಲ್ಲಿ ಪ್ರಬಲ ಸವಾಲು ಎದುರಾಗಿದೆ. ಅವರು ಆರಂಭದ ಪಂದ್ಯವನ್ನು ವಿಶ್ವ ಕ್ರಮಾಂಕದಲ್ಲಿ 18ನೇ ಸ್ಥಾನದಲ್ಲಿರುವ ರಷ್ಯಾದ ಆಟಗಾರ ಕರೆನ್ ಕಚನೋವ್ ಎದುರು ಭಾನುವಾರ ಆಡಬೇಕಾಗಿದೆ.

ವಿಶ್ವ ಕ್ರಮಾಂಕದಲ್ಲಿ 94ನೇ ಸ್ಥಾನದಲ್ಲಿರುವ ನಗಾಲ್, ಎಟಿಪಿ ಪ್ರವಾಸದಲ್ಲಿ ಸ್ಥಿರ ಪ್ರದರ್ಶನದ ಕಾರಣ ಗ್ರ್ಯಾಂಡ್‌ಸ್ಲಾಮ್ ಟೂರ್ನಿಗೆ ನೇರ ಪ್ರವೇಶ ಪಡೆದಿದ್ದಾರೆ. 2019ರಲ್ಲಿ ಪ್ರಜ್ನೇಶ್ ಗುಣೇಶ್ವರನ್ ನಂತರ ಫ್ರೆಂಚ್ ಓಪನ್ ಪ್ರಧಾನ 'ಡ್ರಾ'ಕ್ಕೆ ನೇರ ಪ್ರವೇಶ ಪಡೆದ ಭಾರತದ ಮೊದಲ ಪುರುಷ ಆಟಗಾರ ಎನಿಸಿದ್ದಾರೆ ನಗಾಲ್.

ಕ್ಲೇಅಂಕಣದಲ್ಲಿ 26 ವರ್ಷ ವಯಸ್ಸಿನ ಈ ಆಟಗಾರನ ಪ್ರದರ್ಶನ ಅತ್ಯುತ್ತಮ ಮಟ್ಟದಲ್ಲಿಲ್ಲ. ಮಾಂಟೆಕಾರ್ಲೊ ಮಾಸ್ಟರ್ಸ್ ಟೂರ್ನಿಯಲ್ಲಿ ಮೂರನೇ ಸುತ್ತಿನಲ್ಲಿ ಅವರು ಹೋಲ್ಗರ್ ರೂನ್ ಅವರಿಗೆ ಸೋತಿದ್ದರು. ಮ್ಯಾಡ್ರಿಡ್ ಮತ್ತು ರೋಮ್ ಮಾಸ್ಟರ್ಸ್‌ನಲ್ಲಿ ಆಡಿರಲಿಲ್ಲ.



ಸುಮಿತ್ ನಗಾಲ್ ಎಎಫ್‌ಪಿ ಚಿತ್ರ

ಕಚನೋವ್, ಫ್ರೆಂಚ್ ಓಪನ್ ಟೂರ್ನಿಯಲ್ಲಿ ಕಳೆದ ವರ್ಷ ಎಂಟರ ಘಟ್ಟ ತಲುಪಿದ್ದರು. ಫೆಬ್ರುವರಿಯಲ್ಲಿ ನಡೆದ ಕತಾರ್ ಓಪನ್ ಟೂರ್ನಿಯಲ್ಲಿ ವಿಜೇತರಾಗಿದ್ದರು. ಈ ವರ್ಷ ಅವರ ಜಯ–ಅಪಜಯದ ದಾಖಲೆ 21–7 ಆಗಿದೆ.

ಪ್ರೊ ಲೀಗ್ ಹಾಕಿ: ಬೆಲ್ಜಿಯಮ್‌ಗೆ ಮಣಿದ ಭಾರತ

ಆ್ಯಂಟ್‌ವರ್ಪ್ (ಬೆಲ್ಜಿಯಮ್), (ಪಿಟಿಐ): ರಕ್ಷಣಾ ವಿಭಾಗದಲ್ಲಿ ಆದ ಲೋಪಗಳಿಂದ ಭಾರತ ತಂಡ, ಎಫ್‌ಐಎಚ್ ಪ್ರೊ ಲೀಗ್ ಹಾಕಿ ಪಂದ್ಯದಲ್ಲಿ ಗುರುವಾರ ಆತಿಥೇಯ ಹಾಗೂ ವಿಶ್ವದ ಮೂರನೇ ಕ್ರಮಾಂಕದ ಬೆಲ್ಜಿಯಮ್ ತಂಡದ ಎದುರು 1–4 ಗೋಲುಗಳಿಂದ ಸೋಲು ಅನುಭವಿಸಿತು.

ಹರ್ಮನ್‌ಪ್ರೀತ್ ಬಳಗ ಬುಧವಾರ ನಡೆದ ಪ್ರವಾಸದ ಮೊದಲ ಪಂದ್ಯದಲ್ಲಿ ಶೂಟೌಟ್ ಬಳಿಕ 5–4 ಗೋಲುಗಳಿಂದ ಅರ್ಜೆಂಟೀನಾ ತಂಡವನ್ನು ಸೋಲಿಸಿತ್ತು. ಭಾರತ ತನ್ನ ಮುಂದಿನ ಪಂದ್ಯವನ್ನು ಮೇ 25ರಂದು ಮತ್ತೆ ಬೆಲ್ಜಿಯಂ ವಿರುದ್ಧ ಆಡಲಿದೆ.

ಗುರುವಾರ ನಡೆದ ಪಂದ್ಯದಲ್ಲಿ ಮೊದಲ ಕ್ವಾರ್ಟರ್ ಗೋಲುರಹಿತವಾಗಿತ್ತು. 22ನೇ ನಿಮಿಷ ಬೆಲ್ಜಿಯಂ ತಂಡವು ನಾಯಕ ಫೆಲಿಕ್ಸ್ ಡೆನಯರ್ ಗಳಿಸಿದ ಫೀಲ್ಡ್ ಗೋಲಿನ ಮೂಲಕ ಮುನ್ನಡೆ ಸಾಧಿಸಿತು. ಫ್ಲೊರೆಂಟ್ ವಾನ್ ಅಬೆನ್ ಅವರ ಮೊದಲ ಯತ್ನವನ್ನು ಗೋಲ್‌ಕೀಪರ್ ಪಿ.ಆರ್.ಶ್ರೀಜೇಶ್ ತಡೆದರೂ ಮರಳಿ ಬಂದ ಚೆಂಡನ್ನು ಫೆಲಿಕ್ಸ್ ಗೋಲಿನೊಳಗೆ ತಳ್ಳಿದರು.



ಭಾರತ– ಬೆಲ್ಜಿಯಮ್ ನಡುವಣ ಪಂದ್ಯದ ದೃಶ್ಯ. ಹಾಕಿ ಇಂಡಿಯಾ ಎಕ್ಸ್ ಚಿತ್ರ

ವಿರಾಮದ ನಾಲ್ಕು ನಿಮಿಷಗಳ ಬಳಿಕ ಅಲೆಕ್ಸಾಂಡರ್ ಹೆಂಡ್ರಿಕ್ಸ್ ಪೆನಾಲ್ಟಿ ಕಾರ್ನರ್ ಅವಕಾಶವನ್ನು ಗೋಲಾಗಿ ಪರಿವರ್ತಿಸಿ ಆತಿಥೇಯ ತಂಡದ ಮುನ್ನಡೆಯನ್ನು ಹೆಚ್ಚಿಸಿದರು.

ವೇಗದ ಪಾಸಿಂಗ್ ಮತ್ತು ಕೌಶಲದ ಆಟದಿಂದ ಬೆಲ್ಜಿಯಮ್, ಭಾರತ ತಂಡದ ರಕ್ಷಣಾ ವಿಭಾಗವನ್ನು ಗಲಿಬಿಲಿಗೊಳಿಸಿತು. ಸೆಡ್ರಿಕ್ ಚಾರ್ಲಿಯರ್ ಅಮೋಘ ರೀತಿ ಫೀಲ್ಡ್ ಗೋಲು ಗಳಿಸಿ ತಂಡದ ಮುನ್ನಡೆಯನ್ನು 3–0ಗೆ ವಿಸ್ತರಿಸಿದರು.

ಯುವ ಆಟಗಾರ ಅಭಿಷೇಕ್ ಭಾರತ ಪರ ಒಂದು ಗೋಲು ಗಳಿಸಿ ಹಿನ್ನಡೆಯನ್ನು ಕಡಿಮೆ ಮಾಡಿದರು. ಆದರೆ ಒಟ್ಟಾರೆಯಾಗಿ ಆತಿಥೇಯರ ಪ್ರಾಬಲ್ಯಕ್ಕೆ ಅಡ್ಡಿಯಾಗಲಿಲ್ಲ. ಅಂತಿಮ ನಿಮಿಷದಲ್ಲಿ ಹೆಂಡ್ರಿಕ್ಸ್ 'ಪೆನಾಲ್ಟಿ ಸ್ಟ್ರೋಕ್' ಅವಕಾಶವನ್ನು ಗೋಲಾಗಿ ಪರಿವರ್ತಿಸಿದರು.

ಆರಂಭದಿಂದಲೇ ಭಾರತದ ರಕ್ಷಣಾ ವಿಭಾಗ ಎದುರಾಳಿ ಫಾರ್ವರ್ಡ್‌ಗಳಿಗೆ ವ್ಯೂಹ ರಚಿಸಲು ಭಾರತ ವಿಫಲವಾಯಿತು. ಹಲವು ಬಾರಿ ಬೆಲ್ಜಿಯಂ ಆಟಗಾರರು ರಕ್ಷಣಾ ಗೋಡೆ ಭೇದಿಸಿದರು. ಅನುಭವಿ ಗೋಲ್‌ಕೀಪರ್ ಪಿ.ಆರ್.ಶ್ರೀಜೇಶ್ ಕೆಲವು ತಡೆಗಳನ್ನು ಮಾಡಲಷ್ಟೇ ಶಕ್ತರಾದರು.

ಭಾರತಕ್ಕೂ ಅವಕಾಶಗಳು ದೊರಕಿದ್ದವು. 18ನೇ ನಿಮಿಷ ಹರ್ಮನ್‌ಪ್ರೀತ್ ಅವರು ಗೋಲಿನತ್ತ ಮಾಡಿದ ಫ್ಲಿಕ್ ಯತ್ನವನ್ನು ಬೆಲ್ಜಿಯಂ ಗೋಲ್ ಕೀಪರ್ ಲೊಯಿಕ್ ವಾನ್ ಡೊರೆನ್ ತಡೆದರು. ಎರಡು ನಿಮಿಷಗಳ ನಂತರ ಬೆನ್ನುಬೆನ್ನಿಗೆ ಪೆನಾಲ್ಟಿ ಕಾರ್ನರ್ ಅವಕಾಶಗಳು ಬಂದರೂ ಹರ್ಮನ್‌ಪ್ರೀತ್ ಅವುಗಳನ್ನು ಪರಿವರ್ತಿಸಲು ಸಾಧ್ಯವಾಗಲಿಲ್ಲ.

ವನಿತೆಯರ ತಂಡಕ್ಕೂ ನಿರಾಸೆ

ಆ್ಯಂಟ್‌ವರ್ಪ್ (ಪಿಟಿಐ): ಭಾರತ ವನಿತೆಯರ ತಂಡ, ಎಫ್‌ಐಎಚ್ ಪ್ರೊ ಲೀಗ್ ಹಾಕಿ ಯುರೋಪ್ ಲೆಗ್‌ನ ಸತತ ಎರಡನೇ ಪಂದ್ಯದಲ್ಲೂ ಸೋಲು ಅನುಭವಿಸಿತು. ಗುರುವಾರ ನಡೆದ ಪಂದ್ಯದಲ್ಲಿ ಭಾರತ 0–2 ಗೋಲುಗಳಿಂದ ಆತಿಥೇಯ ಬೆಲ್ಜಿಯಮ್‌ಗೆ ಮಣಿಯಿತು.

ಭಾರತ ತಂಡ ಪ್ರವಾಸದ ಮೊದಲ ಪಂದ್ಯದಲ್ಲಿ 0–5 ಗೋಲುಗಳಿಂದ ಅರ್ಜೆಂಟೀನಾ ತಂಡಕ್ಕೆ ಮಣಿದಿತ್ತು. ಕೋಚ್ ಆಗಿ ಹರೇಂದ್ರ ಸಿಂಗ್ ಅವರಿಗೂ ಇದು ಮೊದಲ ಪ್ರವಾಸ. ಮೊದಲ ಗೋಲನ್ನು 34ನೇಖು ನಿಮಿಷ ಅಲೆಕ್ಸಿಯಾ ಟಿ ಸೆರ್‌ಸ್ಟಿವನ್ಸ್ ಗಳಿಸಿದರೆ, ಎರಡು ನಿಮಿಷಗಳ ತರುವಾಯ ಡೆವೆಟ್ ಲೂಯಿಸ್ ಅವರು ತಂಡದ ಮುನ್ನಡೆಯನ್ನು ಉಬ್ಬಿಸಿದರು.

ಹೊಸ ನಾಯಕಿ ಸಲಿಮಾ ಟೆಟೆ ಮುನ್ನಡೆಸುತ್ತಿರುವ ಈ ತಂಡಕ್ಕೆ ಹರೇಂದ್ರ ಸಿಂಗ್ ತರಬೇತುದಾರ ಆಗಿದ್ದಾರೆ. ಭಾರತ ಮಹಿಳಾ ತಂಡ ತನ್ನ ಮುಂದಿನ ಪಂದ್ಯವನ್ನು ಶನಿವಾರ ಮತ್ತೆ ಬೆಲ್ಜಿಯಮ್ ವಿರುದ್ಧ ಆಡಲಿದೆ.

ಭಾರತ ಜೂನಿಯರ್ ತಂಡಕ್ಕೆ ಸೋಲು

ಬ್ರೆಡಾ (ನೆದರ್ಲೆಂಡ್ಸ್), (ಪಿಟಿಐ): ಭಾರತ ಜೂನಿಯರ್ ಪುರುಷರ ಹಾಕಿ ತಂಡ, ಯುರೋಪ್ ಪ್ರವಾಸದ ಮೂರನೇ ಪಂದ್ಯದಲ್ಲಿ ನಿಧಾನಗತಿಯ ಆರಂಭದ ನಂತರ ಹೋರಾಟ ನಡೆಸಿದರೂ, ಸ್ಥಳೀಯ ಡಚ್ ಕ್ಲಬ್ ಬ್ರೆಡೇಸ್ ಹಾಕಿ ವೆರೆನಿಜಿಂಗ್ ಪುಷ್ ಎದುರು 4–5 ಗೋಲುಗಳ ಸೋಲು ಕಂಡಿತು.

ಗುರುವಾರ ನಡೆದ ಈ ಪಂದ್ಯದಲ್ಲಿ ಭಾರತ ಜೂನಿಯರ್ಸ್ ಪರ ನಾಯಕ ರೋಹಿತ್ (18ನೇ ನಿಮಿಷ), ಸೌರಬ್ ಆನಂದ್ ಕುಶ್ವಾಹ (24ನೇ), ಅಂಕಿತ್ ಪಾಲ್ (32ನೇ) ಮತ್ತು ಅರ್ಷದೀಪ್ ಸಿಂಗ್ (58ನೇ) ಗೋಲು ಗಳಿಸಿದರು.

ಇದು ಭಾರತ ತಂಡಕ್ಕೆ ಪ್ರವಾಸದ ಮೂರನೇ ಪಂದ್ಯವಾಗಿತ್ತು. ಮೊದಲ ಪಂದ್ಯವನ್ನು ಶೂಟೌಟ್ ಮೂಲಕ ಗೆದ್ದುಕೊಂಡಿದ್ದ ಭಾರತ, ಎರಡನೇ ಪಂದ್ಯದಲ್ಲಿ ಬೆಲ್ಜಿಯಂ ಜೂನಿಯರ್ ತಂಡಕ್ಕೆ 2–3 ಗೋಲುಗಳಿಂದ ಸೋತಿತ್ತು.



ಶಾಬಾಜ್ ಅಹ್ಮದ್, ಅಭಿಷೇಕ್ ಸ್ಪಿನ್ ಮೋಡಿ • ರಾಜಸ್ಥಾನ ರಾಯಲ್ಸ್ ತಂಡದ ಕನಸು ಭಗ್ನ

ಫೈನಲ್‌ಗೆ ಸನ್‌ರೈಸರ್ಸ್ ಹೈದರಾಬಾದ್ ಲಗ್ಗೆ

ಚೆನ್ನೈ (ಪಿಟಿಐ): ಇಂಪ್ಯಾಕ್ಟ್ ಪ್ಲೇಯರ್ ಆಗಿ ಬಂದ ಶಾಬಾಜ್ ಅಹ್ಮದ್ (23ಕ್ಕೆ3) ಮತ್ತು ಅಭಿಷೇಕ್ ಶರ್ಮಾ (24ಕ್ಕೆ2) ಅವರ ಎಡಗೈ ಸ್ಪಿನ್ ದಾಳಿಯ ನೆರವಿನಿಂದ ಸನ್‌ರೈಸರ್ಸ್ ತಂಡ ಶುಕ್ರವಾರ ನಡೆದ ಐಪಿಎಲ್ ಎರಡನೇ ಕ್ವಾಲಿಫೈಯರ್ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ತಂಡವನ್ನು 36 ರನ್‌ಗಳಿಂದ ಸೋಲಿಸಿ ಫೈನಲ್‌ಗೆ ಲಗ್ಗೆ ಇಟ್ಟಿತು.

ಸನ್‌ರೈಸರ್ಸ್ ತಂಡ ಭಾನುವಾರ ನಡೆಯುವ ಫೈನಲ್ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಎದುರಿಸಲಿದೆ. ಲೀಗ್‌ನಲ್ಲಿ ಮೊದಲ ಎರಡು ಸ್ಥಾನ ಗಳಿಸಿದ ಇವರೆಡು ತಂಡಗಳು ಮತ್ತೆ ಮುಖಾಮುಖಿಯಾಗಲಿವೆ.

ಚೆಪಾಕ್ ಕ್ರೀಡಾಂಗಣದಲ್ಲಿ ಮೊದಲು ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಸನ್ ರೈಸರ್ಸ್ ತಂಡ ಹೆನ್ರಿಚ್ ಕ್ಲಾಸೆನ್ (50; 34ಎ), ರಾಹುಲ್ ತ್ರಿಪಾಠಿ (37; 15ಎ) ಅವರ ಉಪಯುಕ್ತ ಕೊಡುಗೆಯಿಂದ 9 ವಿಕೆಟ್‌ಗೆ 175 ರನ್ ಕಲೆ ಹಾಕಿತು. ಈ ಗುರಿ ಬೆನ್ನತ್ತಿದ ರಾಜಸ್ಥಾನ ರಾಯಲ್ಸ್ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 139 ರನ್‌ಗಳಿಸಲಷ್ಟೇ ಶಕ್ತವಾಯಿತು.

ಶಾಬಾಜ್ ಮತ್ತು ಅಭಿಷೇಕ್ ಇದುವರೆಗಿನ ಪಂದ್ಯಗಳಲ್ಲಿ ಅಂತಹ ಮೋಡಿಯೇನು ಮಾಡಿರಲಿಲ್ಲ. ಆದರೆ ಈ ನಿರ್ಣಾಯಕ ಪಂದ್ಯದಲ್ಲಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಇಬ್ಬನಿ ಬಿದ್ದು ಬ್ಯಾಟಿಂಗ್ ಮಾಡುವ ತಂಡಕ್ಕೆ ನೆರವಾಗಬಹುದೆಂಬ ನಾಯಕ ಸಂಜು ಸ್ಯಾಮ್ಸನ್ ನಿರೀಕ್ಷೆ ಹುಸಿಯಾಯಿತು. ಅಭಿಷೇಕ್ ಬ್ಯಾಟಿಂಗ್‌ನಲ್ಲಿ ವಿಫಲರಾದರೂ ಬೌಲಿಂಗ್‌ನಲ್ಲಿ ಕೈಚಳಕ ತೋರಿದರು.

ಆರಂಭದಲ್ಲಿ ಜೈಸ್ವಾಲ್ (42;21ಎ) ಮತ್ತು ಧ್ರುವ ಜುರೇಲ್ (ಅಜೇಯ 56, 35ಎ) ಒಂದಿಷ್ಟು ಹೋರಾಟ ತೋರಿದರು. ಒಂದು ಹಂತದಲ್ಲಿ ಎರಡು ವಿಕೆಟ್‌ಗೆ 65 ರನ್ ಗಳಿಸಿ ಉತ್ತಮ ಸ್ಥಿತಿಯಲ್ಲಿದ್ದ ರಾಯಲ್ಸ್ ನಂತರ ನಿಯಮಿತವಾಗಿ ವಿಕೆಟ್ ಕಳೆದಕೊಳ್ಳುತ್ತ ಹೋಯಿತು. ಮಧ್ಯಮ ಹಂತದಲ್ಲಿ ಶಾಬಾಜ್ ಮತ್ತು ಅಭಿಷೇಕ್ ಶರ್ಮ ಅವರು ರಾಯಲ್ಸ್ ತಂಡಕ್ಕೆ ಹೊಡೆತ ನೀಡಿದರು. ಅದರಂತೆ ಎರಡನೇ ಬಾರಿ ರಾಜಸ್ಥಾನ ರಾಯಲ್ಸ್ ಪ್ರಶಸ್ತಿ ಗೆಲ್ಲುವ ಕನಸು ಕಮರಿತು.

ಇದಕ್ಕೂ ಮೊದಲು ಬ್ಯಾಟಿಂಗ್ ಮಾಡಿದ ಸನ್‌ರೈಸರ್ಸ್ ತಂಡದ ಬ್ಯಾಟರ್‌ಗಳು, ಎಡಗೈವೇಗಿ ಟ್ರೆಂಟ್‌ಬೌಲ್ಟ್ (45ಕ್ಕೆ3) ಮತ್ತು ಕೊನೆಯ ಓವರ್‌ಗಳಲ್ಲಿ ಮಿಂಚಿದ ಆವೇಶ್ ಖಾನ್ (27ಕ್ಕೆ3) ಅವರ ಬೌಲಿಂಗ್ ಮುಂದೆ ಹೆಚ್ಚು ಅಬ್ಬರಿಸಲು ಸಾಧ್ಯವಾಗಿರಲಿಲ್ಲ. ಟ್ರೆಂಟ್ ಹಾಕಿದ ಮೊದಲ ಓವರ್‌ನಲ್ಲಿಯೇ ಒಂದು ಸಿಕ್ಸರ್ ಮತ್ತು ಬೌಂಡರಿ ಬಾರಿಸಿದ ಅಭಿಷೇಕ್ ಶರ್ಮಾ ದೊಡ್ಡ ಇನಿಂಗ್ಸ್ ಆಡುವ ಭರವಸೆ ಮೂಡಿಸಿದರು. ಆದರೆ ಅದೇ ಓವರ್‌ನಲ್ಲಿಯೇ ಅವರ ವಿಕೆಟ್ ಪಡೆದ ಟ್ರೆಂಟ್ 'ಮುಯ್ಯಿ' ತೀರಿಸಿಕೊಂಡರು.

ಕ್ರೀಸ್‌ಗೆ ಬಂದ ರಾಹುಲ್ ಅವರು ಇನ್ನೊಂದು ಬದಿಯಲ್ಲಿದ್ದ ಟ್ರಾವಿಸ್ ಅವರಿಗಿಂತ ವೇಗವಾಗಿ ರನ್ ಕಲೆಹಾಕಿದರು. ಎರಡು ಸಿಕ್ಸರ್ ಮತ್ತು ಐದು ಬೌಂಡರಿ ಬಾರಿಸಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ 42 ರನ್ ಸೇರಿಸಿದರು. ಇದರಿಂದಾಗಿ ಪವರ್‌ಪ್ಲೇನಲ್ಲಿ ರನ್‌ಗಳು ಹರಿದುಬಂದವು. ಆದರೆ ಐದನೇ ಓವರ್‌ನಲ್ಲಿ ಮತ್ತೆ ಮಿಂಚಿದ ಟ್ರೆಂಟ್ ರಾಹುಲ್ ಹಾಗೂ ಏಡನ್ ಮರ್ಕರಂ ಅವರಿಬ್ಬರ ವಿಕೆಟ್ ಕಬಳಿಸಿದರು. ಇದು ಸನ್‌ರೈಸರ್ಸ್ ಹಿನ್ನಡೆಗೆ ಕಾರಣವಾಯಿತು.


ಮೊತ್ತ ಹೆಚ್ಚಿಸುವ ಹೊಣೆ ಹೊತ್ತು ಆಡಿದ ಹೆಡ್ ಅವರ ವಿಕೆಟ್ ಗಳಿಸುವಲ್ಲಿ ಸಂದೀಪ್ ಶರ್ಮಾ ಯಶಸ್ವಿಯಾದರು. ಹೆಡ್ ಔಟಾದಾಗ ತಂಡದ ಮೊತ್ತ ಇನ್ನೂ ಮೂರಂಕಿ ಮುಟ್ಟಿರಲಿಲ್ಲ.

ಈ ಹಂತದಲ್ಲಿ ಹೆನ್ರಿಚ್ ಮತ್ತು ನಿತೀಶ್ ರೆಡ್ಡಿ ಎಚ್ಚರಿಕೆಯ ಆಟವಾಡಿದರು. ಹೊಡಿ ಬಡಿ ಆಟಕ್ಕೆ ಹೆಸರಾದ ಕ್ಲಾಸೆನ್ ಅವರು 147ರ ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟಿಂಗ್ ಮಾಡಿದರು. ಅವರ ಇನಿಂಗ್ಸ್‌ನಲ್ಲಿ ನಾಲ್ಕು ಸಿಕ್ಸರ್‌ಗಳಿದ್ದವು. ಆದರೆ ಒಂದೂ ಬೌಂಡರಿ ಇರಲಿಲ್ಲ. ರೆಡ್ಡಿ ಕೂಡ ದೊಡ್ಡ ಹೊಡೆತಗಳಿಗೆ ಕೈಹಾಕಲಿಲ್ಲ.

14ನೇ ಓವರ್‌ನಲ್ಲಿ ಆವೇಶ್ ಖಾನ್ ತಮ್ಮ ಕೈಚಳಕ ಮೆರೆದರು. ಸತತ ಎರಡು ಎಸೆತಗಳಲ್ಲಿ ನಿತೀಶ್ ರೆಡ್ಡಿ ಹಾಗೂ ಅಬ್ದುಲ್ ಸಮದ್ ವಿಕೆಟ್ ಕಿತ್ತರು.

ಇನಿಂಗ್ಸ್‌ನ ಕೊನೆಯ ಎರಡು ಓವರ್‌ಗಳಲ್ಲಿ ಬಿಗಿ ದಾಳಿ ನಡೆಸಿದ ಸಂದೀಪ್ ಮತ್ತು ಆವೇಶ್ ಕೇವಲ 12 ರನ್ ಕೊಟ್ಟರು. ಮೂರು ವಿಕೆಟ್‌ಗಳು ಪತನವಾದವು.

3 ಕ್ಯಾಚ್: ಸ್ಪಿನ್ನರ್ ಯಜುವೇಂದ್ರ ಚಾಹಲ್ ಮೂರು ಕ್ಯಾಚ್ ಪಡೆದು ಮಿಂಚಿದರು. ಆದರೆ ಬೌಲಿಂಗ್‌ನಲ್ಲಿ ಒಂದೂ ವಿಕೆಟ್ ಗಳಿಸಲಿಲ್ಲ. ರಾಹುಲ್ ತ್ರಿಪಾಠಿ, ಮರ್ಕರಂ ಹಾಗೂ ರೆಡ್ಡಿ ಅವರ ಕ್ಯಾಚ್‌ಗಳನ್ನು ಹಿಡಿತಕ್ಕೆ ಪಡೆದ ಚಾಹಲ್ ಗಮನ ಸೆಳೆದರು.


ವಿಕೆಟ್ ಪಡೆದ ಸಂಭ್ರಮದಲ್ಲಿ ಶಾಬಾಜ್ ಅಹ್ಮದ್ —ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಸನ್‌ರೈಸರ್ಸ್ ಹೈದರಾಬಾದ್: 9ಕ್ಕೆ175 (20 ಓವರುಗಳಲ್ಲಿ)

ಹೆಡ್ ಸಿ ಅಶ್ವಿನ್ ಬಿ ಸಂದೀಪ್ 34 (28ಎ, 4x3, 6x1)
ಅಭಿಷೇಕ್ ಸಿ ಕ್ಯಾಡ್ಮೋರ್ ಬಿ ಬೌಲ್ಟ್ 12 (5ಎ, 4x1, 6x1)
ತ್ರಿಪಾಠಿ ಸಿ ಚಾಹಲ್ ಬಿ ಬೌಲ್ಟ್ 37 (15ಎ, 4x5, 6x2)
ಮರ್ಕರಂ ಸಿ ಚಾಹಲ್ ಬಿ ಬೌಲ್ಟ್ 1 (2ಎ)
ಕ್ಲಾಸೆನ್ ಬಿ ಸಂದೀಪ್ 50 (34ಎ, 6x4)
ನಿತೀಶ್ ಸಿ ಚಾಹಲ್ ಬಿ ಆವೇಶ್ 5 (10ಎ)
ಸಮದ್ ಬಿ ಆವೇಶ್ 0 (1ಎ)
ಶಾಬಾಜ್ ಸಿ ಜುರೆಲ್ ಬಿ ಆವೇಶ್ 18 (18ಎ, 6x1)
ಕಮಿನ್ಸ್ ಔಟಾಗದೇ 5 (5ಎ, 4x1)
ಉನದ್ಕತ್ ರನೌಟ್ (ಸ್ಯಾಮ್ಸನ್/ಆವೇಶ್) 5 (2ಎ, 4x1)
ಇತರೆ: 8 (ಲೆಗ್‌ಬೈ 1, ವೈಡ್ 7)
ವಿಕೆಟ್ ಪತನ: 1–13 (ಅಭಿಷೇಕ್ ಶರ್ಮಾ, 0.6), 2–55 (ರಾಹುಲ್ ತ್ರಿಪಾಠಿ, 4.3), 3–57 (ಏಡನ್ ಮರ್ಕರಂ, 4.6), 4–99 (ಟ್ರಾವಿಸ್ ಹೆಡ್, 9.6), 5–120 (ನಿತೀಶ್ ಕುಮಾರ್ ರೆಡ್ಡಿ, 13.5), 6–120 (ಅಬ್ದುಲ್ ಸಮದ್, 13.6), 7–163 (ಹೆನ್ರಿಚ್ ಕ್ಲಾಸೆನ್, 18.1), 8– 170 (ಶಾಬಾಜ್ ಅಹ್ಮದ್, 19.3), 9–175 (ಜಯದೇವ್ ಉನದ್ಕತ್, 19.6).
ಬೌಲಿಂಗ್: ಟ್ರೆಂಟ್ ಬೌಲ್ಟ್ 4–0–45–3; ರವಿಚಂದ್ರನ್ ಅಶ್ವಿನ್ 4–0–43–0; ಸಂದೀಪ್ ಶರ್ಮಾ 4–0–25–2; ಆವೇಶ್ ಖಾನ್ 4–0–27–3; ಯಜುವೇಂದ್ರ ಚಾಹಲ್ 4–0–34–0.

ರಾಜಸ್ಥಾನ ರಾಯಲ್ಸ್ 7ಕ್ಕೆ139 (20 ಓವರ್‌ಗಳಲ್ಲಿ)

ಜೈಸ್ವಾಲ್ ಸಿ ಅಬ್ದುಲ್ ಬಿ ಶಾಬಾಜ್ 42 (21ಎ, 4X4, 6X3)
ಕ್ಯಾಡ್ಮೋರ್ ಸಿ ತ್ರಿಪಾಠಿ ಬಿ ಕಮಿನ್ಸ್ 10 (16ಎ, 4X1)
ಸ್ಯಾಮ್ಸನ್ ಸಿ ಮರ್ಕರಂ ಬಿ ಅಭಿಷೇಕ್ 10 (11ಎ, 4X1)
ಪರಾಗ್ ಸಿ ಅಭಿಷೇಕ್ ಬಿ ಶಾಬಾಜ್ 6 (10ಎ)
ಧ್ರುವ್ ಜುರೇಲ್ ಔಟಾಗದೇ 56 (35ಎ, 4X7, 6X2)
ಅಶ್ವಿನ್ ಸಿ ಕ್ಲಾಸೆನ್ ಬಿ ಶಾಬಾಜ್ 0 (3ಎ)
ಶಿಮ್ರಾನ್ ಬಿ ಅಭಿಷೇಕ್ 4 (10ಎ)
ರೋವ್ಮನ್ ಪೊವೆಲ್ ಸಿ ಅಭಿಷೇಕ್ ಬಿ ನಟರಾಜನ್ 6 (12 ಎ)
ಟ್ರೆಂಟ್ ಬೋಲ್ಟ್ ಔಟಾಗದೇ 0 (3ಎ)
ಇತರೆ: **5 (ಲೆಗ್ ಬೈ1, ನೋಬಾಲ್1, ವೈಡ್3)**
ವಿಕೆಟ್ ಪತನ: 1-24 (ಟಾಮ್ ಕೊಹ್ಲರ್-ಕ್ಯಾಡ್ಮೋರ್, 3.6), 2-65 (ಯಶಸ್ವಿ ಜೈಸ್ವಾಲ್, 7.5), 3-67 (ಸಂಜು ಸ್ಯಾಮ್ಸನ್, 8.3), 4-79 (ರಿಯಾನ್ ಪರಾಗ್, 11.1), 5-79 (ರವಿಚಂದ್ರನ್ ಅಶ್ವಿನ್, 11.4), 6-92 (ಶಿಮ್ರಾನ್ ಹೆಟ್ಮೆಯರ್, 1.4), 7–124 (ರೋವ್ಮನ್ ಪೊವೆಲ್ 17.4)
ಬೌಲಿಂಗ್: ಭುವನೇಶ್ವರ ಕುಮಾರ್ 3–0–33–0, ಪ್ಯಾಟ್ ಕಮಿನ್ಸ್ 4–0–30–1, ಟಿ ನಟರಾಜನ್ 3–0–13–1, ಜಯದೇವ್ ಉನದ್ಕತ್ 1–0–5–0, ಶಾಬಾಜ್ ಅಹ್ಮದ್ 4–0–23–3, ಅಭಿಷೇಕ್ ಶರ್ಮಾ 4–0–24–2, ಏಡನ್ ಮರ್ಕರಂ 1–0–10–0
ಪಂದ್ಯ ಶ್ರೇಷ್ಠ: ಶಾಬಾಜ್ ಅಹ್ಮದ್

ಪುಟಿದೆದ್ದ ಪಾಕ್ ತಂಡ

ಟಿ20 ವಿಶ್ವಕಪ್ ಮೆಲುಕು

ದಕ್ಷಿಣ ಆಫ್ರಿಕಾದಲ್ಲಿ ನಡೆದ 2007ರ ಮೊದಲ ಟಿ20 ವಿಶ್ವಕಪ್ ಟೂರ್ನಿ ಚುಟುಕು ಕ್ರಿಕೆಟ್‌ಗೆ ಭದ್ರ ಬುನಾದಿ ಒದಗಿಸಿತು. ಮರು ವರ್ಷ ಭಾರತದಲ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಆರಂಭವಾಗಿ ಈ ಮಾದರಿಗೆ ಇನ್ನಷ್ಟು ಉತ್ತೇಜನ ದೊರಕಿತು. 2009ರಲ್ಲಿ ನಡೆದ ಎರಡನೇ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಆತಿಥ್ಯವನ್ನು ಕ್ರಿಕೆಟ್ ಜನಕ ಇಂಗ್ಲೆಂಡ್ ವಹಿಸಿತು.

ಮೊದಲ ಆವೃತ್ತಿಯ ಫೈನಲ್ ತಲುಪಿದ್ದ ಪಾಕಿಸ್ತಾನ ತಂಡ ನಂತರದ ಅವಧಿಯಲ್ಲಿ ವಿವಿಧ ಸಮಸ್ಯೆಗಳನ್ನು ಎದುರಿಸಿತ್ತು. ಈ ವಿಶ್ವಕಪ್‌ಗೆ ಮೂರು ತಿಂಗಳು ಮೊದಲು ಲಾಹೋರ್‌ನಲ್ಲಿ ಶ್ರೀಲಂಕಾ ಕ್ರಿಕೆಟಿಗರಿದ್ದ ಬಸ್ ಮೇಲೆ ಭಯೋತ್ಪಾದನಾ ದಾಳಿ ನಡೆದಿತ್ತು. ಆರು ಮಂದಿ ಸಣ್ಣಪುಟ್ಟ ಗಾಯಗೊಂಡಿದ್ದರು. ವಿಶ್ವಕಪ್‌ನ ಮೊದಲ ಪಂದ್ಯದಲ್ಲಿ ಇಂಗ್ಲೆಂಡ್ ಎದುರು ಅನುಭವಿಸಿದ 48 ರನ್‌ಗಳ ಮುಖಭಂಗದಿಂದ ಯೂನಿಸ್ ಖಾನ್ ಪಡೆಯ ಮೇಲೆ ಯಾರಿಗೂ ಭರವಸೆಯಿರಲಿಲ್ಲ.

ಆದರೆ ತಂಡ ನಿರ್ಣಾಯಕ ಹಂತದಲ್ಲಿ ಹಳಿಗೆ ಮರಳಿತು. ಪ್ರಶಸ್ತಿ ಗೆದ್ದು ಅಚ್ಚರಿ ಮೂಡಿಸಿತು. ಅನುಭವಿ ಆಲ್‌ರೌಂಡರ್ ಶಾಹೀದ್ ಅಫ್ರಿದಿ, ಸೆಮಿಫೈನಲ್ ಮತ್ತು ಫೈನಲ್‌ನಲ್ಲಿ ಪಂದ್ಯಗಳಲ್ಲಿ ಅರ್ಧಶತಕಗಳನ್ನು ಹೊಡೆದರು. ವಿಕೆಟ್‌ಗಳನ್ನೂ ಪಡೆದರು. ತಂಡ 17 ವರ್ಷಗಳ ಬಳಿಕ ಐಸಿಸಿ ಟ್ರೋಫಿ ಗೆದ್ದುಕೊಂಡಿತ್ತು!

- ಎರಡನೇ ವಿಶ್ವಕಪ್: **2009**
- ಆತಿಥ್ಯ: ಇಂಗ್ಲೆಂಡ್
- ವಿಜೇತ ತಂಡ: ಪಾಕಿಸ್ತಾನ
- ರನ್ನರ್ ಅಪ್: ಶ್ರೀಲಂಕಾ
- ಸ್ಪರ್ಧಿಸಿದ ತಂಡಗಳು: **12**
- ಪಂದ್ಯಗಳು: **27**
- ಸರಣಿ ಶ್ರೇಷ್ಠ: ತಿಲಕರತ್ನೆ ದಿಲ್ಶನ್ (ಶ್ರೀಲಂಕಾ)
- ಶ್ರೇಷ್ಠ ಬ್ಯಾಟರ್: ತಿಲಕರತ್ನೆ ದಿಲ್ಶನ್ (317 ರನ್)
- ಶ್ರೇಷ್ಠ ಬೌಲರ್: ಉಮರ್ ಗುಲ್ (ಪಾಕಿಸ್ತಾನ, 13 ವಿಕೆಟ್), ಸತತ ಎರಡನೇ ಸಲ.


ಶಾಹೀದ್ ಅಫ್ರಿದಿ

ಪ್ರಮುಖ ಅಂಶಗಳು

- ಮೊದಲ ಆವೃತ್ತಿಯ ಚಾಂಪಿಯನ್ ಭಾರತ ನಿರೀಕ್ಷೆಯಂತೆ ಮೂರು ತಂಡಗಳ 'ಎ' ಗುಂಪಿನಿಂದ ಸೂಪರ್ ಎಂಟು ಹಂತಕ್ಕೆ ತಲುಪಿತು. ಆದರೆ ಅಚ್ಚರಿಯೆಂಬಂತೆ ಎಂ.ಎಸ್.ಧೋನಿ ಬಳಗ ಈ ಹಂತದಲ್ಲಿ ಆಡಿದ ಎಲ್ಲ ಪಂದ್ಯಗಳಲ್ಲಿ ಸೋಲನುಭವಿಸಿತು.
- ಸೂಪರ್ 12ರ ಹಂತದಲ್ಲಿ ಎರಡು ಪಂದ್ಯ ಸೋತು ಹೊರಬಿದ್ದ ಆಸ್ಟ್ರೇಲಿಯಾ
- ಲಾರ್ಡ್ಸ್‌ನಲ್ಲಿ ನಡೆದ ಟೂರ್ನಿಯ ಉದ್ಘಾಟನಾ ಪಂದ್ಯದಲ್ಲಿ 'ಕ್ರಿಕೆಟ್ ಕೂಸು' ನೆದರ್ಲೆಂಡ್ಸ್, ಆತಿಥೇಯ ಇಂಗ್ಲೆಂಡ್ ತಂಡದ ಮೇಲೆ ಕೊನೆಯ ಎಸೆತದಲ್ಲಿ ನಾಲ್ಕು ವಿಕೆಟ್‌ಗಳ ಜಯ ಪಡೆದಿದ್ದು ಟೂರ್ನಿಗೆ ಅಚ್ಚರಿಯ ಆರಂಭ ನೀಡಿತು.
- ಫೈನಲ್‌ನಲ್ಲಿ ಮೊದಲು ಆಡಿದ ಶ್ರೀಲಂಕಾ 6 ವಿಕೆಟ್‌ಗೆ 138 ರನ್ ಗಳಿಸಿತು. ಬೌಲಿಂಗ್‌ನಲ್ಲಿ 4 ಓವರುಗಳಲ್ಲಿ 20 ರನ್ನಿತ್ತು 1 ವಿಕೆಟ್ ಪಡೆದಿದ್ದ ಶಾಹಿದ್ ಅಫ್ರಿದಿ ಅಜೇಯ 54 ರನ್ ಗಳಿಸಿ ಫೈನಲ್‌ನಲ್ಲಿ ಪಾಕಿಸ್ತಾನ ಎಂಟು ವಿಕೆಟ್‌ಗಳ ಜಯ ಪಡೆಯಲು ನೆರವಾದರು.

ಟಿ20 ವಿಶ್ವಕಪ್ ರಾಯಭಾರಿ ಶಾಹೀದ್ ಅಫ್ರಿದಿ

ದುಬೈ (ಪಿಟಿಐ): ವೆಸ್ಟ್‌ಇಂಡೀಸ್ ಮತ್ತು ಅಮೆರಿಕ ಸಹಭಾಗಿತ್ವದಲ್ಲಿ ಜೂನ್ 2ರಿಂದ 29ರವರೆಗೆ ನಡೆಯಲಿರುವ ಟಿ20 ವಿಶ್ವಕಪ್‌ನ ರಾಯಭಾರಿಯಾಗಿ ಪಾಕಿಸ್ತಾನ ಮಾಜಿ ಆಲ್‌ರೌಂಡರ್ ಶಾಹೀದ್ ಅಫ್ರಿದಿ ಅವರನ್ನು ಶುಕ್ರವಾರ ನೇಮಕ ಮಾಡಲಾಗಿದೆ. 2009ರಲ್ಲಿ ಪಾಕಿಸ್ತಾನ ಟಿ20 ವಿಶ್ವಕಪ್ ಗೆಲ್ಲುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು.

'ಕೋಚ್: ಆಸ್ಟ್ರೇಲಿಯಾ ಕ್ರಿಕೆಟಿಗರ ಸಂಪರ್ಕಿಸಿಲ್ಲ'

ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ನೇಮಕಕ್ಕೆ ಆಸ್ಟ್ರೇಲಿಯಾದ ಮಾಜಿ ಆಟಗಾರರನ್ನು ಸಂಪರ್ಕಿಸಿಲ್ಲ. ಈ ಕುರಿತು ಕೇಳಿಬರುತ್ತಿರುವ ಮಾತುಗಳು ಸತ್ಯಕ್ಕೆ ದೂರವಾಗಿವೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಪ್ರಧಾನ ಕಾರ್ಯದರ್ಶಿ ಜಯ್ ಶಾ ಹೇಳಿದ್ದಾರೆ.

ಮುಂಬರುವ ಟಿ20 ವಿಶ್ವಕಪ್ ಟೂರ್ನಿಯ ನಂತರ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರ ಕಾರ್ಯಾವಧಿಯು ಮುಕ್ತಾಯವಾಗಲಿದೆ. ಹೊಸ ಕೋಚ್ ನೇಮಕ ಮಾಡಲು ಬಿಸಿಸಿಐ ಈಚೆಗೆ ಅರ್ಜಿಯನ್ನೂ ಆಹ್ವಾನಿಸಿದೆ.

ಆದರೆ ತಂಡಕ್ಕೆ ವಿದೇಶಿ ಕೋಚ್ ನೇಮಕ ಮಾಡುವ ಒಲವು ಹೆಚ್ಚಿದ್ದು ಆಸ್ಟ್ರೇಲಿಯಾದ ಕೆಲ ಆಟಗಾರರನ್ನು ಬಿಸಿಸಿಐ ಸಂಪರ್ಕಿಸಿದೆ ಎಂಬ ಮಾತುಗಳೂ ಕೇಳಿಬಂದಿದ್ದವು.

ಇದನ್ನು ತಳ್ಳಿ ಹಾಕಿರುವ ಜಯ್ ಶಾ, 'ನಾನು ಅಥವಾ ಬಿಸಿಸಿಐನಿಂದ ಯಾರೂ ಆಸ್ಟ್ರೇಲಿಯಾ ಕ್ರಿಕೆಟಿಗರೊಂದಿಗೆ ಕೋಚ್ ಹುದ್ದೆಗೆ ಆಹ್ವಾನಿಸಿಲ್ಲ. ಕೆಲವು ಮಾಧ್ಯಮಗಳಲ್ಲಿ ಬರುತ್ತಿರುವ ಈ ರೀತಿಯ ಸುದ್ದಿಗಳು ಸರಿಯಲ್ಲ' ಎಂದು ಸ್ಪಷ್ಟಪಡಿಸಿದರು.


ಜಯ್ ಶಾ

ಆಸ್ಟ್ರೇಲಿಯಾದ ಜಸ್ಟೀನ್ ಲ್ಯಾಂಗರ್ ಹಾಗೂ ರಿಕಿ ಪಾಂಟಿಂಗ್ ಅವರು ಈಗಾಗಲೇ ತಾವು ಭಾರತ ತಂಡದ ಕೋಚ್ ಹುದ್ದೆಯ ರೇಸ್‌ನಲ್ಲಿ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಐಪಿಎಲ್‌ನಲ್ಲಿ ಪಾಂಟಿಂಗ್ ಅವರು ಡೆಲ್ಲಿ ಕ್ಯಾಪಿಟಲ್ಸ್ ಹಾಗೂ ಲ್ಯಾಂಗರ್ ಲಖನೌ ಸೂಪರ್ ಜೈಂಟ್ಸ್ ತಂಡಕ್ಕೆ ಕೋಚ್ ಆಗಿದ್ದಾರೆ.

'ಭಾರತ ತಂಡಕ್ಕೆ ಕೋಚ್ ಆಗಿ ಕಾರ್ಯನಿರ್ವಹಿಸುವವರಿಗೆ ಇಲ್ಲಿಯ ಕ್ರಿಕೆಟ್ ಕುರಿತು ಸಂಪೂರ್ಣ ಅರಿವು ಇರಬೇಕು. ದೇಶಿ ಕ್ರಿಕೆಟ್ ಬಗ್ಗೆ ಆಳವಾದ ಜ್ಞಾನ ಅಗತ್ಯ. ಭಾರತದ ಕ್ರಿಕೆಟ್ ವ್ಯವಸ್ಥೆಯನ್ನು ಸರಿಯಾಗಿ ತಿಳಿದುಕೊಂಡವರನ್ನು ಆಯ್ಕೆ ಮಾಡುವುದರತ್ತ ನಮ್ಮ ಗಮನ ಕೇಂದ್ರಿತವಾಗಿದೆ' ಎಂದು ಶಾ ಸ್ಪಷ್ಟಪಡಿಸಿದ್ಧಾರೆ.

'ರಾಜಕೀಯ: ಎಚ್ಚರಿಕೆ ನೀಡಿದ್ದ ರಾಹುಲ್'

ನವದೆಹಲಿ (ಪಿಟಿಐ): ಲಖನೌ ಸೂಪರ್‌ಜೈಂಟ್ಸ್ ತಂಡದ ಮುಖ್ಯ ಕೋಚ್ ಆಗಿರುವ ಆಸ್ಟ್ರೇಲಿಯಾದ ಜಸ್ಟಿನ್ ಲ್ಯಾಂಗರ್ ಅವರು ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಹುದ್ದೆಗೆ ಅರ್ಜಿ ಸಲ್ಲಿಸುವುದರಿಂದ ದೂರ ಉಳಿಯಲು ಆಟಗಾರ ಕೆ.ಎಲ್. ರಾಹುಲ್ ಅವರ 'ಸಲಹೆ' ಕಾರಣವೆಂದು ಹೇಳಿದ್ದಾರೆ.

'ಭಾರತ ತಂಡದ ಕೋಚ್ ಆಗಿ ನೇಮಕಕ್ಕೆ ಪ್ರಯತ್ನಿಸಲು ಯೋಚಿಸಿದ್ದೆ. ಅದಕಾಗಿ ನಮ್ಮ ತಂಡದ (ಲಖನೌ) ನಾಯಕ ರಾಹುಲ್ ಜೊತೆಗೆ ಮಾತನಾಡಿದ್ದೆ. ಆಗ ಅವರು, ಐಪಿಎಲ್ ತಂಡದಲ್ಲಿರುವ ಒತ್ತಡ ಹಾಗೂ ರಾಜಕೀಯದ ಪ್ರಮಾಣವು ಭಾರತ ತಂಡದಲ್ಲಿ ಸಾವಿರ ಪಟ್ಟು ಹೆಚ್ಚಿರುತ್ತದೆ ಎಂದು ರಾಹುಲ್ ಹೇಳಿದ್ದರು. ಅವರ ಸಲಹೆ ಉತ್ತಮವಾಗಿದೆ. ಮುಖ್ಯ ಕೋಚ್ ಆಗುವುದು ಪ್ರತಿಷ್ಠೆಯ ವಿಷಯವೇ. ಆದರೆ ನಾನು ದೂರ ಉಳಿಯಲು ನಿರ್ಧರಿಸಿದೆ' ಎಂದು ಲ್ಯಾಂಗರ್ 'ಬಿಬಿಸಿ ಸ್ಟಂಪ್ಡ್' ಪಾಡ್‌ಕಾಸ್ಟ್‌ನಲ್ಲಿ ಹೇಳಿದ್ದಾರೆ.

ಮೇ 2018 ರಿಂದ 2022ರ ಫೆಬ್ರುವರಿಯವರೆಗೆ ಲ್ಯಾಂಗರ್ ಅವರು ಆಸ್ಟ್ರೇಲಿಯಾ ತಂಡದ ಕೋಚ್ ಆಗಿ ಕಾರ್ಯನಿರ್ವಹಿಸಿದ್ದರು. ಅವರ ಅವಧಿಯಲ್ಲಿಯೇ ಆಸ್ಟ್ರೇಲಿಯಾ ತಂಡವು ಟಿ20 ವಿಶ್ವಕಪ್ ಹಾಗೂ ಆ್ಯಷಸ್ ಟ್ರೋಫಿ ಜಯಿಸಿತ್ತು. ಇದೇ ಅವಧಿಯಲ್ಲಿ ಆಸ್ಟ್ರೇಲಿಯಾದ ಆಟಗಾರರು ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಚೆಂಡು ವಿರೂಪಗೊಳಿಸಿ ಸಿಕ್ಕಿಬಿದ್ದ ಪ್ರಕರಣ ನಡೆದಿತ್ತು.

ತಮಗೆ ಕೋಚ್ ಆಗಲು ಬಂದ ಆಹ್ವಾನವನ್ನು ತಿರಸ್ಕರಿಸಿರುವುದಾಗಿ ಪಾಂಟಿಂಗ್ ಹೇಳಿದ್ದರು.

ಬ್ಯಾಡ್ಮಿಂಟನ್: ಸೆಮಿಫೈನಲ್‌ಗೆ ಶ್ಯಾಮ್

ದಾವಣಗೆರೆ: ಮೈಸೂರಿನ ಶ್ಯಾಮ್ ಬಿಂಡಿಗನವಿಲೆ ಅವರು ಬೆಂಗಳೂರಿನ ಅನಿರುದ್ ರೆಡ್ಡಿ ವಿರುದ್ಧ ಗೆಲ್ಲುವ ಮೂಲಕ ರಾಜ್ಯ ರ‍್ಯಾಂಕಿಂಗ್ ಸಬ್ ಜೂನಿಯರ್ ಬ್ಯಾಡ್ಮಿಂಟನ್ ಟೂರ್ನಿಯ 15 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಸೆಮಿಫೈನಲ್ ಪ್ರವೇಶಿಸಿದರು.

ಇಲ್ಲಿನ ನೇತಾಜಿ ಸುಭಾಷ್‌ಚಂದ್ರ ಬೋಸ್ ಒಳಾಂಗಣ ಕ್ರೀಡಾಂಗಣದಲ್ಲಿ ಶುಕ್ರವಾರ ಸಂಜೆ ನಡೆದ ರೋಚಕ ಪಂದ್ಯದಲ್ಲಿ ಅವರು 21–18, 21–15ರಲ್ಲಿ ಗೆದ್ದರು.

ಬೆಂಗಳೂರಿನ ಮೆಹುಲ್ ಮನವ್ ಅರುಳ್‌ಮುರುಗನ್ ಅವರು ತ್ರಿಶನ್‌ಕುಮಾರ್ ಎಂ. ಅವರನ್ನು 21–12, 10–21, 21–13ರಿಂದ ಮಣಿಸಿದರು. ಬೆಂಗಳೂರಿನ ಪಿಯೂಷ್ ತ್ರಿಪಾಟಿ ಅವರು ಸನ್ನಿ ಎಸ್. ಅವರನ್ನು 21–14 21–8ರಿಂದ ಸೋಲಿಸಿದರೆ, ಧಾರವಾಡದ ಸಂಭ್ರಮ್ ಕೋಳಿವಾಡ್ ಅವರನ್ನು 21–16 21–10ರಿಂದ ಮಣಿಸಿದ ಬೆಂಗಳೂರಿನ ಸಾಯಿ ಪುಷ್ಕರ್ ಸೆಮಿಫೈನಲ್‌ಗೆ ಲಗ್ಗೆ ಇಟ್ಟರು.

ಟಿ20 ವಿಶ್ವಕಪ್: ಕಾಮೆಂಟ್ರಿ ತಂಡದಲ್ಲಿ ದಿನೇಶ್

ದುಬೈ (ಪಿಟಿಐ): ಕ್ರಿಕೆಟ್‌ನ ಎಲ್ಲ ಮಾದರಿಗಳಿಗೆ ಈಚೆಗಷ್ಟೇ ವಿದಾಯ ಹೇಳಿದ ದಿನೇಶ್ ಕಾರ್ತಿಕ್ ಅವರು ಮುಂಬರುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ವೀಕ್ಷಕ ವಿವರಣೆಗಾರರಾಗಿ ಕಾರ್ಯನಿರ್ವಹಿಸಲಿದ್ದಾರೆ. ಅಮೆರಿಕದ ಜೇಮ್ಸ್ ಒಬ್ರೇನ್ ಕಾಮೆಂಟ್ರಿ ಬಾಕ್ಸ್‌ಗೆ ಪದಾರ್ಪಣೆ ಮಾಡಲಿದ್ದಾರೆ.


ದಿನೇಶ್

ಐಪಿಎಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿದ್ದ ದಿನೇಶ್, ಈಚೆಗೆ ಎಲಿಮಿನೇಟರ್ ಪಂದ್ಯದ ನಂತರ ವಿದಾಯ ಹೇಳಿದ್ದರು.

ವೆಸ್ಟ್ ಇಂಡೀಸ್ ಮತ್ತು ಅಮೆರಿಕ ಜಂಟಿ ಆತಿಥ್ಯದಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಟಿ.ವಿ. ವೀಕ್ಷಕ ವಿವರಣೆಕಾರರ ಪಟ್ಟಿಯನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಶುಕ್ರವಾರ ಬಿಡುಗಡೆ ಮಾಡಿದೆ.

ಭಾರತದ ದಿಗ್ಗಜರಾದ ಸುನಿಲ್ ಗಾವಸ್ಕರ್, ರವಿ ಶಾಸ್ತ್ರಿ ಹಾಗೂ ಹರ್ಷ ಭೋಗ್ಲೆ ಅವರು ವೀಕ್ಷಕ ವಿವರಣೆಕಾರರ ತಂಡದಲ್ಲಿದ್ದಾರೆ.

ಇನ್ನುಳಿದಂತೆ; ನಾಸಿರ್ ಹುಸೇನ್, ಇಯಾನ್ ಸ್ಮಿತ್, ಮೆಲ್ ಜೋನ್ಸ್, ಇಯಾನ್ ಬಿಷಪ್, ಎಬನಿ ರೇನ್‌ಫೋರ್ಡ್ ಬ್ರೆಂಟ್, ಸ್ಯಾಮುಯೆಲ್ ಬದ್ರಿ, ಕಾರ್ಲೋಸ್ ಬ್ರಾಥ್‌ವೇಟ್, ಸ್ಟೀವ್ ಸ್ಮಿತ್, ಆ್ಯರನ್ ಫಿಂಚ್, ರಿಕಿ ಪಾಂಟಿಂಗ್, ಮ್ಯಾಥ್ಯೂ ಹೇಡನ್, ರಮೀಜ್ ರಝಾ, ಏಯಾನ್ ಮಾರ್ಗನ್, ಟಾಮ್ ಮೂಡಿ, ವಸೀಂ ಅಕ್ರಂ, ಡೇಲ್ ಸ್ಟೇನ್, ಗ್ರೇಮ್ ಸ್ಮಿತ್, ಮೈಕೆಲ್ ಅಥರ್ಟನ್, ವಕಾರ್ ಯೂನಿಸ್, ಸೈಮನ್ ಡೂಲ್, ಶಾನ್ ಪೊಲಾಕ್, ಕೇಟಿ ಮಾರ್ಟಿನ್, ಎಂಪುಎಲೆಲೊ ಮಬಾಂಗ್ವಾ, ನಥಾಲಿ ಜೆರ್ಮನೊಸ್, ಅಲನ್ ವಿಲ್ಕಿನ್ಸ್, ಬ್ರಯನ್ ಮರ್ಗೆಟ್ರಾಯ್ಡ್, ಮೈಕ್ ಹೈಸ್‌ಮನ್, ಇಯಾನ್ ವಾರ್ಡ್, ಅತ್ತರ್ ಅಲಿ ಖಾನ್, ರಸೆಲ್ ಅರ್ನಾಲ್ಡ್, ನಿಯಾಲ್ ಒಬ್ರೇನ್, ಕಾಸ್ ನಾಯ್ಡು, ಡರೆನ್ ಗಂಗಾ ಹಾಗೂ ಲೀಸಾ ಸ್ಥಳೇಕರ್ ಅವರು ಈ ತಂಡದಲ್ಲಿದ್ದಾರೆ.

ಶನಿವಾರ, 25 ಮೇ 2024
ಪ್ರಜಾವಾಣಿ
ಪ್ರಜಾ ಪ್ಲಸ್


'ರಾಗಮಾಲಿಕಾ' ಪ್ರಶಸ್ತಿ ಪ್ರದಾನ

ಬೆಂಗಳೂರಿನ ಹಂಸನಾದ ಫೌಂಡೇಷನ್ 'ರಾಗಮಾಲಿಕ ಪ್ರಶಸ್ತಿ-2024'ಕ್ಕೆ ಹಿರಿಯ ಹಾರ್ಮೋನಿಯಂ ವಾದಕರಾದ ಮುಂಬೈನ ವಿಶ್ವನಾಥ್ ಶಿರಾಲಿ ಹಾಗೂ ರುಸ್ತಮ್ ಕಾರ್ವಾ ಅವರು ಭಾಜನರಾಗಿದ್ದಾರೆ.

ಪ್ರಶಸ್ತಿಯು ₹10 ಸಾವಿರ ನಗದು ಬಹುಮಾನ ಮತ್ತು ಪ್ರಮಾಣ ಪತ್ರವನ್ನು ಒಳಗೊಂಡಿದೆ. ಜೂನ್ 2ರಂದು ಕಾರ್ಯಕ್ರಮ ನಡೆಯಲಿದ್ದು, ಹಿರಿಯ ರಂಗಕರ್ಮಿ ಶ್ರೀನಿವಾಸ ಜಿ.ಕಪ್ಪಣ್ಣ, ವಿದ್ವಾನ್ ಆನೂರು ಅನಂತಕೃಷ್ಣ ಶರ್ಮ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಹಿರಿಯ ಸಂಗೀತಗಾರರಾದ ವಿದುಷಿಗಳಾದ ರೂಪಾ ಶ್ರೀಧರ್, ಸುಕನ್ಯಾ ರಾಂಗೋಪಾಲ್, ವಿಶ್ವನಾಥ್ ನಾಕೋಡ್ ಇರಲಿದ್ದಾರೆ. ಇದೇ ಸಂದರ್ಭದಲ್ಲಿ 'ಹಾರ್ಮೋನಿಕ್ ವೈಭವ' ಪ್ರಸ್ತುತಿ ನಡೆಯಲಿದ್ದು, ವಿವಿಧ ಹಾರ್ಮೋನಿಯಂ ಕಲಾವಿದರು ಪ್ರದರ್ಶನ ನೀಡಲಿದ್ದಾರೆ.



ರುಸ್ತುಂ ಕರ್ವಾ



ವಿಶ್ವನಾಥ ಶಿರಾಲಿ

ಕ್ರೋಮ್ಯಾಟಿಕ್ ಹಾರ್ಮೋನಿಕಾದ ಜೊತೆ ಕಾರ್ಡ್ ಹಾರ್ಮೋನಿಕಾ, ಬೇಸ್ ಹಾರ್ಮೋನಿಕಾ, ಮೆಲೋಡಿಕಾ ಮುಂತಾದ ಅಪರೂಪವಾದ ವಾದ್ಯಗಳನ್ನು ಬಳಸಿ ಸಾಮೂಹಿಕ ಹಾರ್ಮೋನಿಯಂ ಪ್ರಸ್ತುತಿಗಳನ್ನು ನೀಡಿರುವ ಹೆಗ್ಗಳಿಕೆ ಹಂಸನಾದಕ್ಕಿದೆ. ಬೆಂಗಳೂರಿನ ಹಾರ್ಮೋನಿಕಾ ಹಬ್ಬಗಳಲ್ಲದೆ, ಮುಂಬೈ, ಜೈಪುರ, ಕೋಲ್ಕತ್ತಾ, ಹೈದರಾಬಾದ್, ಪುರಿ, ಕೊಯಿಮತ್ತೂರಿನಲ್ಲಿಯೂ ಕಾರ್ಯಕ್ರಮ ನೀಡಿದೆ ಎಂದು ಹಂಸನಾದದ ಸಾಯಿತೇಜಸ್ ಚಂದ್ರಶೇಖರ್ ತಿಳಿಸಿದ್ದಾರೆ. ❖

ಗಾಯನ ಸಮಾಜ, ಬೆಂಗಳೂರಿನ ಕೃಷ್ಣರಾಜೇಂದ್ರ ರಸ್ತೆ. ಸಂಜೆ 4ರಿಂದ ಪ್ರವೇಶ ಉಚಿತ.



ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ, ದೊಮ್ಮಲೂರು ಎರಡನೇ ಹಂತ. ಸಂಜೆ 7ರಿಂದ

ರಾಗ ಲಹರಿ

29ಕ್ಕೆ ಕೊನಾರಕ್ ರೆಡ್ಡಿ ಸಂಗೀತ ಸಂಜೆ

ಹೆಸರಾಂತ ಗಿಟಾರ್ ವಾದಕ ಹಾಗೂ ಸಂಗೀತ ಸಂಯೋಜಕ ಕೊನಾರಕ್ ರೆಡ್ಡಿ ಅವರ ಸಂಗೀತಯಾನಕ್ಕೆ 50 ವಸಂತಗಳು ತುಂಬಿದ ಹಿನ್ನೆಲೆಯಲ್ಲಿ ಇದೇ 29ರಂದು ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ 'ಬೆಂಗಳೂರು -1974' ಸಂಗೀತ ರಸಸಂಜೆಯನ್ನು ಆಯೋಜಿಸಲಾಗಿದೆ.

ಕರ್ಣಾಟಕ ಶಾಸ್ತ್ರೀಯ ಸಂಗೀತ ಹಾಗೂ ಪಾಶ್ಚಿಮಾತ್ಯ ಸಂಗೀತ ಕ್ಷೇತ್ರಗಳೆರಡರ ಸಮ್ಮಿಳಿತ 'ಫ್ಯೂಷನ್'ಗೆ ಹೊಸ ವ್ಯಾಖ್ಯಾನ ನೀಡಿದ ಕೊನಾರಕ್ ಅವರು ಅಂತರರಾಷ್ಟ್ರೀಯ ಮಟ್ಟದಲ್ಲಿ ನೀಡಿರುವ ಹಲವು 'ಜಾಜ್ ಸಂಗೀತ'ಕ್ಕೆ ಮನ ಸೋಲದವರಿಲ್ಲ.

ಕೊನಾರಕ್ ಅವರ ಸಂಗೀತ ಯಾನದ ಆರಂಭದಲ್ಲಿ ದಿಗ್ಗಜರಾದ ವೇಮು ಮುಕುಂದ, ಟಿಎಎಸ್ ಮಣಿ ಹಾಗೂ ರಮಾಮಣಿ ಅವರೊಂದಿಗೆ ಫ್ಯೂಷನ್ನಿನ ಪಟ್ಟುಗಳನ್ನು ಕಲಿತರು. ಹಾಲಿವುಡ್‌ನ ಬರ್ಕ್ಲಿ ಸಂಗೀತ ವಿದ್ಯಾಲಯದಲ್ಲಿ ಪಾಶ್ಚಿಮಾತ್ಯ ಸಂಗೀತ ಹಾಗೂ ಜಾಜ್ ಗಿಟಾರ್‌ಗಳ ನುಡಿ ಸಾಣಿಕೆಯಲ್ಲಿ ತರಬೇತಿ ಪಡೆದರು. ವೀಣಾ ವಿಶಾಲಾಕ್ಷಿ ಮತ್ತು ಪಂಡಿತ್ ರಾಜೀವ್ ತಾರನಾಥ ಗರಡಿಯಲ್ಲಿ ಪಳಗಿದ ಅವರು ಮೇರು ಪ್ರತಿಭೆಯಾಗಿ ಹೊರಹೊಮ್ಮಿದರು.

1970ರ ಸಮಯದಲ್ಲಿ ಕಬ್ಬನ್ ಉದ್ಯಾನದಲ್ಲಿ ಸಂಗೀತಯಾನ ಆರಂಭಿಸಿದ್ದರು. ಜಾಗತಿಕ ಮಟ್ಟದಲ್ಲಿ ಹಲವು ಪ್ರಶಸ್ತಿಗಳನ್ನು ಪಡೆದ ಸಿನಿಮಾಗಳಿಗೆ, ನಾಟಕಗಳಿಗೆ ಸಂಗೀತ ಸಂಯೋಜಿಸುವ ಮಟ್ಟಕ್ಕೆ ಬೆಳೆದ ಕೊನಾರಕ್ ಅವರ ಸಾಧನೆಯನ್ನು ಸಂಗೀತದ ಮೂಲಕವೇ ಸ್ಮರಿಸಲಾಗುವುದು. ಈ ಸಂಗೀತ ಕಾರ್ಯಕ್ರಮದಲ್ಲಿ 18ನೇ ಶತಮಾನದಿಂದ ಈವರೆಗಿನ ಹಲವು ಶಾಸ್ತ್ರೀಯ ಹಾಗೂ ಫ್ಯೂಷನ್‌ಗಳು ಸೇರಿದಂತೆ ಕೊನಾರಕ್ ರೆಡ್ಡಿ ತಾವೇ ಸಂಯೋಜಿಸಿದ ಸಂಗೀತವನ್ನು ಪಸ್ತುತಪಡಿಸಲಿದ್ದಾರೆ. ❖



ಪ್ರವೀಣ್ ಡಿ. ರಾವ್

ಇಂದಿನಿಂದ ವಸಂತೋತ್ಸವ ಸಾಂಸ್ಕೃತಿಕ ಮೇಳ

ಇನ್ಫೊಸಿಸ್ ಪ್ರತಿಷ್ಠಾನ ಮತ್ತು ಭಾರತೀಯ ವಿದ್ಯಾಭವನ ಜಂಟಿಯಾಗಿ ಇದೇ 25ರಿಂದ 31ರವರೆಗೆ 'ವಸಂತೋತ್ಸವ' ಶೀರ್ಷಿಕೆಯಡಿ ಸಾಂಸ್ಕೃತಿಕ ಮೇಳ ಹಮ್ಮಿಕೊಂಡಿದೆ.


25ರ ಸಂಜೆ 5 ಗಂಟೆಗೆ ಉದ್ಘಾಟನಾ ಸಮಾರಂಭ ನಡೆಯಲಿದೆ. ಏಳು ದಿನಗಳು ನಡೆಯುವ ಈ ಮೇಳದಲ್ಲಿ ನೃತ್ಯಪ್ರದರ್ಶನ, ಸಂಗೀತೋತ್ಸವ, ಚಿತ್ರಕಲಾ ಶಿಬಿರ, ಕವಿಗೋಷ್ಠಿ, ವಾದ್ಯಗೋಷ್ಠಿ ಸೇರಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. 15 ವೈವಿಧ್ಯಮಯ ಕಾರ್ಯಕ್ರಮಗಳಲ್ಲಿ 170ಕ್ಕೂ ಅಧಿಕ ಕಲಾವಿದರು ಪ್ರದರ್ಶನ ನೀಡಲಿದ್ದಾರೆ.

ಕಲಾವಿದ ಮಿಥುನ್ ಶ್ಯಾಮ್ ಮತ್ತು ತಂಡದಿಂದ 'ವಸಂತ ವೈಭವ' ಭರತನಾಟ್ಯ, ಪ್ರವೀಣ್ ಡಿ. ರಾವ್ ಮತ್ತು ತಂಡದಿಂದ 'ಕೋಗಿಲೆ ಹಾಡಿತು' ಸಂಗೀತ ಕಾರ್ಯಕ್ರಮ, ತಿರುಮಲ ಶ್ರೀನಿವಾಸ್ ಮತ್ತು ತಂಡದಿಂದ 'ವಸಂತ' ವಾದ್ಯಗೋಷ್ಠಿ, ಪವನ್ ರಂಗಾಚಾರ್ ಮತ್ತು ತಂಡದಿಂದ 'ವಸಂತ' ಗಾಯನ, ಪ್ರತಿಭಾ ನಂದಕುಮಾರ್ ಮತ್ತು ತಂಡದಿಂದ 'ವಸಂತ' ಕವಿಗೋಷ್ಠಿ, ಶರ್ಮಿಳಾ ಮುಖರ್ಜಿ ಮತ್ತು ತಂಡದಿಂದ 'ವಸಂತ ಋತುವಿನ ಹಬ್ಬಗಳು' ಒಡಿಸ್ಸಿ ನೃತ್ಯ, ದಿವಾಕರ್ ಹೆಗಡೆ ಕೆರೆಹೊಂಡ ಮತ್ತು ತಂಡದಿಂದ 'ತಾಳಮದ್ದಳೆ' ನಡೆಯಲಿದೆ ಎಂದು ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್.ಎನ್. ಸುರೇಶ್ ತಿಳಿಸಿದ್ದಾರೆ.

ವೀಣಾ-ಧನ್ಯ ಮತ್ತು ತಂಡದಿಂದ 'ಮೋಹಿನಿ ಅಟ್ಟಂ', ಲಲಿತಾ ಶ್ರೀನಿವಾಸನ್ ಅವರ ನಿರ್ದೇಶನದಲ್ಲಿ 'ಬಾರೋ ವಸಂತ' ಭರತನಾಟ್ಯ, ಪ್ರತಿಭಾ ನಾರಾಯಣ್ ಮತ್ತು ತಂಡದಿಂದ 'ಸುಂದರಕಾಂಡ' ಪೌರಾಣಿಕ ನಾಟಕ, ಪರಮೇಶ್ವರ ಹೆಗ್ಡೆ ನಿರ್ದೇಶನದಲ್ಲಿ 'ಲಲಿತ್ ರಾಗ ರಸ' ಹಿಂದೂಸ್ಥಾನಿ ಸಂಗೀತ, ಟಿ.ಎಸ್. ಸತ್ಯವತಿ ಮತ್ತು ತಂಡದಿಂದ 'ವಸಂತರಾಗ' ಕರ್ನಾಟಕ ಸಂಗೀತ ಕಾರ್ಯಕ್ರಮ ಉತ್ಸವದ ಆಕರ್ಷಣೆ ಎಂದು ಹೇಳಿದ್ದಾರೆ. ❖

ಪ್ರತಿದಿನವೂ ಬೆಳಿಗ್ಗೆ 11ರಿಂದ ಮಧ್ಯಾಹ್ನ 1ಗಂಟೆಯವರೆಗೆ, ಮಧ್ಯಾಹ್ನ 2ರಿಂದ ಸಂಜೆ 6 ಗಂಟೆಯವರೆಗೆ ವಸಂತ ಋತುವಿಗೆ ಸಂಬಂಧಿಸಿದ ಚಿತ್ರಕಲಾ ಪ್ರದರ್ಶನ ಇರಲಿದೆ. ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ. ಸಂಜೆ 5.

ಬುಡಾಪೆಸ್ಟ್‌ನಲ್ಲಿ 'UI' ಲೋಕ ಸೃಷ್ಟಿ



ಅಜನೀಶ್ ಲೋಕನಾಥ್, ಉಪೇಂದ್ರ

'ಉಪ್ಪಿ-2' ರಿಲೀಸ್ ಆದ 9 ವರ್ಷಗಳ ಬಳಿಕ ರಿಯಲ್ ಸ್ಟಾರ್ ಉಪೇಂದ್ರ ನಟಿಸಿ, ಆ್ಯಕ್ಷನ್ ಕಟ್ ಹೇಳಿರುವ 'UI' ಸಿನಿಮಾ ಬಿಡುಗಡೆ ಯಾವಾಗ ಎನ್ನುವ ಪ್ರಶ್ನೆ ಕೇಳಿಬರುತ್ತಿರುವಾಗಲೇ, ಉಪೇಂದ್ರ ಹಂಗೆರಿ ರಾಜಧಾನಿ ಬುಡಾಪೆಸ್ಟ್‌ನಲ್ಲಿ ಬೀಡುಬಿಟ್ಟಿದ್ದಾರೆ.

ತಮ್ಮ 'UI' ಸಿನಿಮಾಗಾಗಿ, ಚಿತ್ರದ ಸಂಗೀತ ನಿರ್ದೇಶಕ ಬಿ.ಅಜನೀಶ್ ಲೋಕನಾಥ್ ಜೊತೆಗೂಡಿ ಉಪೇಂದ್ರ ಬುಡಾಪೆಸ್ಟ್‌ನಲ್ಲಿ ಸಂಗೀತವನ್ನು ರೆಕಾರ್ಡ್ ಮಾಡುತ್ತಿದ್ದಾರೆ. 90 ಪೀಸ್ ಆರ್ಕೆಸ್ಟ್ರಾ ಬಳಸಿಕೊಂಡು ಸಂಗೀತ ರೆಕಾರ್ಡ್ ಮಾಡಲಾಗುತ್ತಿದೆ. ಯುರೋಪ್‌ನ ವಿಶ್ವ-ದರ್ಜೆಯ ಬುಡಾಪೆಸ್ಟ್ ಆರ್ಕೆಸ್ಟ್ರಾದೊಂದಿಗೆ ಈ ರೆಕಾರ್ಡಿಂಗ್ ನಡೆಯುತ್ತಿದೆ ಎಂದು ಚಿತ್ರತಂಡ ತಿಳಿಸಿದೆ.

'ಸರಿಲೇರು ನೀಕೆವ್ವರು', 'ವಿಕ್ರಾಂತ್ ರೋಣಾ', 'ಕೆಜಿಎಫ್- 2' ಮತ್ತು 'ಸಲಾರ್'ನಂತಹ ಸಿನಿಮಾಗಳು ಈ ಹಿಂದೆ ಬುಡಾಪೆಸ್ಟ್‌ನಲ್ಲಿ ತಮ್ಮ ಸ್ಕೋರ್‌ಗಳನ್ನು ರೆಕಾರ್ಡ್ ಮಾಡಿದ್ದವು. 'ಯುಐ' ಪೂರ್ಣ 90-ಪೀಸ್ ಅನ್ನು ಬಳಸಿಕೊಂಡ ಮೊದಲ ಸಿನಿಮಾ ಎಂದಿದೆ ಚಿತ್ರತಂಡ. ಲಹರಿ ಫಿಲಂಸ್ ಹಾಗೂ ವೀನಸ್ ಎಂಟರ್‌ಟೈನರ್ಸ್ ಲಾಂಛನದಲ್ಲಿ ಜಿ.ಮನೋಹರನ್ ಹಾಗೂ ಕೆ.ಪಿ.ಶ್ರೀಕಾಂತ್ ಈ ಚಿತ್ರವನ್ನು ಜಂಟಿಯಾಗಿ ನಿರ್ಮಾಣ ಮಾಡಿದ್ದಾರೆ. ❖

ಗುಣಮಟ್ಟದ ಶಿಕ್ಷಣ ಅಗತ್ಯ: ನಿಖಿಲ್ ಕಾಮತ್

ಕರ್ನಾಟಕ ಮಾದರಿ ಶಾಲಾ ಕಾರ್ಯಕ್ರಮವು (ಕೆಎಂಎಸ್‌ಪಿಪಿ) ಪ್ರತಿಯೊಬ್ಬ ಮಕ್ಕಳಿಗೂ ಗುಣಮಟ್ಟದ ಶಿಕ್ಷಣವನ್ನು ನೀಡಲು ಪ್ರಯತ್ನಿಸುತ್ತಿದೆ ಎಂದು ವೈಐಪಿಪಿಯ ಸಹ ಸಂಸ್ಥಾಪಕ ನಿಖಿಲ್ ಕಾಮತ್ ತಿಳಿಸಿದ್ದಾರೆ.

ಇದಕ್ಕಾಗಿ ಡಿಜಿಟಲ್ ಮತ್ತು ಭೌತಿಕ ಮೂಲಸೌಕರ್ಯಗಳ ಉನ್ನತೀಕರಣ, ಕೌಶಲಗಳು, ವೃತ್ತಿ ಸಲಹೆ, ವಿಜ್ಞಾನ ಶಿಕ್ಷಣಕ್ಕೆ ಒತ್ತು, ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಪೋಷಕರು, ಶಿಕ್ಷಕರಲ್ಲಿ ಶಿಕ್ಷಣದ ಗ್ರಹಿಕೆಯನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದ್ದೇವೆ ಎಂದು ಪತ್ರಿಕಾ ಹೇಳಿಕೆಯಲ್ಲಿ ಹೇಳಿದ್ದಾರೆ.

ಕೆಎಂಎಸ್‌ಪಿಪಿಯ ಮಕ್ಕಳು ಮೊದಲು ವಿಧಾನವು ಉತ್ತಮ ಫಲಿತಾಂಶ ನೀಡಿದೆ. ವಿಶೇಷವಾಗಿ ಕ್ರಿಯಾತ್ಮಕ ಶಿಕ್ಷಣ, ಸಂಖ್ಯಾ ಸಾಕ್ಷರತೆಯಲ್ಲಿ ಶೇ 11.3ರಷ್ಟು ಸುಧಾರಣೆಯಾಗಿದೆ. ಶೇ 95ರಷ್ಟು ವಿದ್ಯಾರ್ಥಿಗಳು ವಿಜ್ಞಾನ ಕಿಟ್‌ಗಳ ಮೂಲಕ ವೈಜ್ಞಾನಿಕ ಆಲೋಚನೆ ಮತ್ತು ಪ್ರಯೋಗದಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ತಿಳಿಸಿದ್ದಾರೆ. ಉದ್ಯಮಿ ನಿಖಿಲ್ ಕಾಮತ್, ಯುವ ಅನ್‌ಸ್ಟಾಪಬಲ್ ಕಾರ್ಯಕ್ರಮದ ಸಂಸ್ಥಾಪಕ ಅಮಿತಾಬ್ ಶಾ ಯುವ ಭಾರತ ದಾನಪರ ಪ್ರತಿಜ್ಞೆಯನ್ನು (ವೈಐಪಿಪಿ) ಮುನ್ನಡೆಸುತ್ತಿದ್ದಾರೆ. ಬಿಲ್ ಮತ್ತು ಮೆಲಿಂಡಾ ಗೇಟ್ಸ್ ಫೌಂಡೇಷನ್, ಜೆಎಸ್‌ಡಬ್ಲ್ಯು ಫೌಂಡೇಶನ್, ಸ್ವಿಸ್‌ರಿ, ಪ್ರಶಾಂತ್ ಪ್ರಕಾಶ್ ಮತ್ತು ವೈಐಪಿಪಿ ಬೆಂಬಲದೊಂದಿಗೆ 45 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು, ಸಾವಿರಕ್ಕೂ ಹೆಚ್ಚು ಶಿಕ್ಷಕರ ಮೇಲೆ ಪ್ರಭಾವ ಬೀರಿದೆ.

2025-26ರ ಶೈಕ್ಷಣಿಕ ವರ್ಷದೊಳಗೆ ತುಮಕೂರು, ದಾವಣಗೆರೆ, ಹಾವೇರಿ, ಯಾದಗಿರಿ ಮತ್ತು ಚಿತ್ರದುರ್ಗ ಜಿಲ್ಲೆಗಳ 210ಕ್ಕೂ ಹೆಚ್ಚು ಶಾಲೆಗಳು ಮತ್ತು ಅಂಗನವಾಡಿಗಳು ಈ ಪರಿವರ್ತನೆ ಆಗಲಿವೆ ಎಂದು ಪ್ರಕಟಣೆ ತಿಳಿಸಿದೆ. ❖

ಮಳೆಗಾಲದ ಸೊಳ್ಳೆಗಳಿಂದ ಮಕ್ಕಳ ರಕ್ಷಣೆ



ಬರಲಿರುವುದು ಮಳೆಗಾಲ.ನಿಂತ ನೀರಿನಲ್ಲಿ ಸೊಳ್ಳೆಗಳು ಕಾಯಿಲೆ ಹರಡುವುದು ಸಹಜ. ಹಾಗಾಗಿ ಸೊಳ್ಳೆಗಳಿಂದ ಹರಡುವ ಕಾಯಿಲೆಗಳ ಬಗ್ಗೆ ಜಾಗ್ರತೆ ವಹಿಸಬೇಕು. ಅದರಲ್ಲಿಯೂ ಮಲೇರಿಯಾ, ಡೆಂಗಿಯಿಂದ ಮಕ್ಕಳ ಮೇಲೆ ಉಂಟಾಗುವ ಪರಿಣಾಮ, ಪೋಷಕರು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಮಕ್ಕಳತಜ್ಞೆ **ಡಾ.ಶಿಲ್ಪಾ ಪಾಂಡ್ಯ** ವಿವರಿಸಿದ್ದಾರೆ.

ಮಲೇರಿಯಾವು ಸೊಳ್ಳೆಯಿಂದ ಹರಡುವ ರೋಗವಾಗಿದ್ದು, ಪ್ಲಾಸ್ಮೋಡಿಯಂ ಫಾಲ್ಸಿಪಾರಮ್ ಎಂಬುದು ಇದಕ್ಕೆ ಕಾರಣವಾಗಿದೆ. ಈ ಕಾಯಿಲೆಯು ಮಕ್ಕಳು ಮತ್ತು ವಯಸ್ಕರ ಆರೋಗ್ಯದ ಮೇಲೆ ತೀವ್ರ ಪರಿಣಾಮ ಬೀರುತ್ತದೆ. ವ್ಯಕ್ತಿಯು ಸೊಳ್ಳೆಯ ಕಡಿತಕ್ಕೆ ಒಳಗಾದ ನಂತರ ಮಲೇರಿಯಾದ ಪರಾವಲಂಬಿಗಳು ಆ ವ್ಯಕ್ತಿಯ ಯಕೃತ್ ಅನ್ನು ಸೇರಿಕೊಂಡು ಯಕೃತ್ತಿನ ಜೀವಕೋಶಗಳಲ್ಲಿ ದ್ವಿಗುಣಗೊಂಡು ಕೆಂಪು ರಕ್ತ ಕಣಗಳನ್ನು ಸೋಂಕಿಗೆ ಒಳಪಡಿಸುತ್ತವೆ.

ಜ್ವರ, ತಲೆನೋವು, ವಾಕರಿಕೆ, ವಾಂತಿ ಮತ್ತು ಕೆಲವೊಮ್ಮೆ ಅತಿಸಾರ ಬೇಧಿಯಾಗುವುದು ಈ ಕಾಯಿಲೆಯ ಲಕ್ಷಣಗಳು. ಕಾಯಿಲೆ ಅತಿಯಾದಾಗ ಅಂಗಾಂಗ ವೈಫಲ್ಯಕ್ಕೆ ಕಾರಣವಾಗುವ ಸಾಧ್ಯತೆ ಇರುತ್ತದೆ. ಹೀಗಾಗಿ ಸಕಾಲಕ್ಕೆ ಚಿಕಿತ್ಸೆ ತೆಗೆದುಕೊಳ್ಳುವುದು ಅತ್ಯಗತ್ಯ.



ಮಲೇರಿಯಾ ಹೊಂದಿರುವ ಎಲ್ಲಾ ಮಕ್ಕಳು ಜ್ವರದ ಜೊತೆಗೆ ಶೀತವನ್ನು ಹೊಂದಿರುವುದಿಲ್ಲ. ಆದರೆ ಅಸ್ವಸ್ಥತೆ ಅಥವಾ ಆಯಾಸದಂತಹ ಇತರ ರೋಗಲಕ್ಷಣಗಳನ್ನೂ ಹೊಂದಿರಬಹುದು.

ಆರೈಕೆ ಹೀಗಿರಲಿ:

ಮಲೇರಿಯಾಪೀಡಿತ ಮಗುವಿನ ಆರೈಕೆಯಲ್ಲಿ ಪೋಷಕರು ಪ್ರಮುಖ ಪಾತ್ರವಹಿಸುತ್ತಾರೆ. ಕಾಯಿಲೆಯಿಂದ ಕೂಡಿರುವ ಮಗುವಿಗೆ ಪ್ಯಾರಾಸಿಟಮಾಲ್‌ನಂತಹ ಜ್ವರ ನಿಯಂತ್ರಿಸುವ ಔಷಧಗಳನ್ನು ನೀಡುವುದು, ಮಗುವಿಗೆ ಸಾಕಷ್ಟು ವಿಶ್ರಾಂತಿ ಸಿಗಬೇಕು. ನಿರ್ಜಲಿಕರಣವಾಗದಂತೆ ತಡೆಯಲು ಸಾಕಷ್ಟು ನೀರು ಕುಡಿಯುವಂತೆ ನೋಡಿಕೊಳ್ಳಬೇಕು. ವೈದ್ಯರ ಸಲಹೆಯ ಮೇರೆಗೆ ಮಗುವನ್ನು ಆರೈಕೆ ಮಾಡುವ ಮೂಲಕ ಸೋಂಕು ಮುಕ್ತವಾಗುವಂತೆ ನೋಡಿಕೊಳ್ಳುವುದು ಪೋಷಕರ ಜವಾಬ್ದಾರಿ.

ಅಪಾಯಕಾರಿ ಲಕ್ಷಣಗಳು ಯಾವುವು?

ಮಲೇರಿಯಾದಿಂದ ಬಳಲುತ್ತಿರುವ ಮಗುವು ಕಾಮಾಲೆ (ಚರ್ಮ ಮತ್ತು ಕಣ್ಣುಗಳು ಹಳದಿ ಬಣ್ಣಕ್ಕೆ ತಿರುಗುವುದು), ರೋಗಗ್ರಸ್ತವಾಗುವಿಕೆ, ಮೂತ್ರ ಅಥವಾ ಮಲದಲ್ಲಿ ರಕ್ತ ಕಂಡುಬರುವುದು ಅಥವಾ ಸೂಕ್ತ ಔಷಧಿಗಳನ್ನು ತೆಗೆದುಕೊಂಡರೂ ನಿರಂತರವಾಗಿ ಜ್ವರ ಕಾಣಿಸಿಕೊಂಡರೆ ಕೂಡಲೇ ವೈದ್ಯರನ್ನು ನೋಡಿ.

ನಿಮಗಿದು ತಿಳಿದಿರಲಿ

ಮಲೇರಿಯಾವು ಸೊಳ್ಳೆ ಕಡಿತ ಅಥವಾ ರಕ್ತ ವರ್ಗಾವಣೆಯ ಮೂಲಕ ಮಾತ್ರ ಹರಡುತ್ತದೆ. ನೀರು ಅಥವಾ ಸೋಂಕಿತ ವ್ಯಕ್ತಿಯ ಸಂಪರ್ಕದಿಂದ ಹರಡುವುದಿಲ್ಲ. ಮಲೇರಿಯಾ ಪರಾವಲಂಬಿಗಳು ಎದೆ ಹಾಲಿನ ಮೂಲಕ ಹರಡುವುದಿಲ್ಲ. ಆದರೆ ತಾಯಿಯು ಮಗುವಿಗೆ ಹಾಲುಣಿಸುವಾಗ ಕೆಲವು ಔಷಧಿಗಳ ಸೇವನೆ ಬಗೆಗೆ ಎಚ್ಚರಿಕೆವಹಿಸಿ.

ಸೋಂಕಿತ ಮಗುವಿನ ಸಂಪರ್ಕದಿಂದ, ಸೋಂಕಿತ ಮಗು ಬಳಸುವ ಬಟ್ಟೆ ಅಥವಾ ಪಾತ್ರೆಗಳಂಥ ವಸ್ತುಗಳನ್ನು ಹಂಚಿಕೊಳ್ಳುವುದರಿಂದ ಮಕ್ಕಳಿಗೆ ಮಲೇರಿಯಾ ಹರಡುವುದಿಲ್ಲ. ವಿಭಿನ್ನ ಜಾತಿಯ ಪರಾವಲಂಬಿಗಳಿಂದ ಮನುಷ್ಯರಲ್ಲಿ ಮತ್ತೆ ಮಲೇರಿಯಾ ಸೋಂಕು ಕಾಣಿಸಿಕೊಳ್ಳಬಹುದು. ಈ ಕಾಯಿಲೆಗೆ ಲಸಿಕೆ ಕಂಡುಹಿಡಿಯಲು ಸಂಶೋಧನೆ ನಡೆಯುತ್ತಿದ್ದು, ಸದ್ಯ ಮಾರುಕಟ್ಟೆಯಲ್ಲಿ ಯಾವುದೇ ಲಸಿಕೆ ಲಭ್ಯವಿಲ್ಲ.

ಸೊಳ್ಳೆಗಳಿಂದ ಮಕ್ಕಳನ್ನು ರಕ್ಷಿಸಲು ಸಲಹೆಗಳಿವು

- ಸೊಳ್ಳೆಗಳನ್ನು ದೂರವಿಡಲು ಸೊಳ್ಳೆ ನಿವಾರಕಗಳು ಮತ್ತು ಸೊಳ್ಳೆ ಬತ್ತಿಗಳನ್ನು ಬಳಸುವುದು.
- ಬೆಳಿಗ್ಗೆ ಮತ್ತು ಮುಸ್ಸಂಜೆ ವೇಳೆ ಸೊಳ್ಳೆಗಳು ಹೆಚ್ಚು, ಹೀಗಾಗಿ ಮಕ್ಕಳು ಮೈತುಂಬಾ ಉಡುಪುಗಳನ್ನು ಧರಿಸುವಂತೆ ನೋಡಿಕೊಳ್ಳಬೇಕು.
- ಮನೆಯ ಆವರಣದಲ್ಲಿ ನೀರು ನಿಂತಿದ್ದರೆ ಸೊಳ್ಳೆಗಳು ಉತ್ಪತ್ತಿಯಾಗುತ್ತವೆ. ಹಾಗಾಗಿ ಮನೆಯ ಸುತ್ತ ನಿಂತ ನೀರನ್ನು ಸ್ವಚ್ಛಗೊಳಿಸುವುದು ಪ್ರಮುಖವಾದುದು.
- ಎರಡು ತಿಂಗಳೊಳಗಿನ ಶಿಶುಗಳಿಗೆ ಸೊಳ್ಳೆ ಪರದೆಗಳನ್ನು ಬಳಸುವುದು ಮುಖ್ಯ.
- ಸೊಳ್ಳೆಗಳು ಹೆಚ್ಚಿರುವ ಮುಂಜಾನೆ ಮತ್ತು ಮುಸ್ಸಂಜೆ ಸಮಯದಲ್ಲಿ ಮಕ್ಕಳು ಹೊರಾಂಗಣ ಚಟುವಟಿಕೆಗಳಲ್ಲಿ ಪಾಲ್ಗೊಳ್ಳದಂತೆ ಪೋಷಕರು ನೋಡಿಕೊಳ್ಳಬೇಕು.

ಡೆಂಗಿ ಲಕ್ಷಣಗಳು

ಡೆಂಗಿ ಸೋಂಕಿತ ಮಕ್ಕಳಲ್ಲಿ ಆಗಾಗ್ಗೆ ಜ್ವರ, ತಲೆನೋವು ಕಾಣಿಸಿಕೊಳ್ಳುತ್ತದೆ. ಅಲ್ಲದೆ ಜಠರದಲ್ಲಿ ಉರಿತದ ಸಮಸ್ಯೆಯಿಂದ ಬಳಲುತ್ತಿರುತ್ತಾರೆ. ಇದರಿಂದಾಗಿ ವಾಕರಿಕೆ, ವಾಂತಿ, ಹೊಟ್ಟೆ ನೋವು ಮತ್ತು ಕೆಲವೊಮ್ಮೆ ಸಡಿಲವಾದ ಮಲದ ಸಮಸ್ಯೆ ಉಂಟಾಗಲಿದೆ.

ಮಕ್ಕಳಲ್ಲಿ ಈ ಲಕ್ಷಣಗಳು ಕಂಡುಬಂದಲ್ಲಿ ಮೊದಲ 2 ರಿಂದ 4 ವಾರಗಳ ಕಾಲ ಹೆಚ್ಚು ಜಾಗ್ರತೆವಹಿಸಬೇಕು. ಪ್ಯಾರಾಸಿಟಮಲ್‌ನಂತಹ ಜ್ವರ ವಿರೋಧಿ ಔಷಧಿಗಳನ್ನು ಮಕ್ಕಳಿಗೆ ನೀಡಬೇಕು. ಮಗುವಿಗೆ ಸಾಕಷ್ಟು ವಿಶ್ರಾಂತಿ ಜೊತೆಗೆ ನೀರು ಕುಡಿಯುವಂತೆ ಕಾಳಜಿವಹಿಸಬೇಕು.

ರೋಗಲಕ್ಷಣಗಳು

ಮಕ್ಕಳಲ್ಲಿ ಈ ಲಕ್ಷಣಗಳು ಕಂಡುಬಂದಲ್ಲಿ ಕೂಡಲೇ ಎಚ್ಚೆತ್ತು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವುದು ಒಳಿತು.

- ಊಟ ಸೇವನೆಗೆ ನಿರಾಕರಿಸುವುದು ಅಥವಾ ವಾಂತಿ ಮಾಡುವುದು.
- ನಿದ್ರಾಹೀನತೆ ಅಥವಾ ಚಡಪಡಿಕೆಗೆ ಒಳಗಾಗುವುದು.
- ಮೂಗು ಮತ್ತು ಒಸಡುಗಳಲ್ಲಿ ರಕ್ತಸ್ರಾವ, ವಾಂತಿ ಅಥವಾ ಮಲದಲ್ಲಿ ರಕ್ತಸ್ರಾವ ಕಂಡುಬರುವುದು.
- ಹೊಟ್ಟೆ ನೋವು
- ಚರ್ಮದ ಬಣ್ಣ ಬದಲಾವಣೆ, ಕೈ ಮತ್ತು ಪಾದಗಳು ತಣ್ಣಗಾಗುವುದು.
- ಕನಿಷ್ಠ 6 ಗಂಟೆಗಳ ಕಾಲ ಮೂತ್ರ ಕಟ್ಟಿಕೊಂಡಿರುವುದು.

❖



ಬದಲಾದ ಹವಾಮಾನ ಕೇಶ, ಚರ್ಮ ಆರೈಕೆ

ಕಾಳಜಿ

ಮೆಲನಿನ್ ಪ್ರಮಾಣದ ಆಧಾರದ ಮೇಲೆ ಚರ್ಮದ ಸಹಜ ಆರೈಕೆ ಅವಲಂಬಿಸಿರುತ್ತದೆ. ಬೇಸಿಗೆಯ ಶಾಖಕ್ಕೆ ಚರ್ಮದಲ್ಲಿ ಹೆಚ್ಚು ಜಿಡ್ಡಿನಂಶ ಉತ್ಪಾದನೆಯಾದರೆ, ಮಳೆಗಾಲದಲ್ಲಿ ಸೋಂಕಿನ ಪ್ರಮಾಣ ಹೆಚ್ಚಿರುತ್ತದೆ. ಹಾಗಾಗಿ ಚರ್ಮ ಹಾಗೂ ಕೂದಲಿನ ಆರೈಕೆ ಮಾಡಿಕೊಳ್ಳುವುದು ಅನಿವಾರ್ಯ. ಚರ್ಮ ಹಾಗೂ ಕೂದಲು ನಳನಳಿಸುತ್ತಿದ್ದರೆ ಮುಪ್ಪನ್ನು ದೂರ ಇಟ್ಟ ಹಾಗೆ. ಆದರೆ, ಇವರೆಡೂ ಚೆನ್ನಾಗಿರಬೇಕೆಂದರೆ ಒಂದಷ್ಟು ಆರೈಕೆ ಮಾಡಿಕೊಳ್ಳಲೇಬೇಕು. ಅದಕ್ಕಾಗಿ ಇಲ್ಲಿವೆ ಕೆಲವು ಸಲಹೆಗಳು

ಸತ್ವಯುತ ಆಹಾರ

ಸತ್ವಯುತ ಆಹಾರವನ್ನು ಸಮಪ್ರಮಾಣದಲ್ಲಿ ನಿಗದಿತ ಸಮಯಕ್ಕೆ ಸೇವನೆ ಮಾಡುವುದು ಅವಶ್ಯಕ. ಚರ್ಮ ಹಾಗೂ ಕೂದಲಿಗೆ ಬಾಹ್ಯವಾಗಿ ಕ್ರೀಮ್, ಸೀರಮ್ ಬಳಸುವುದರ ಜತೆಗೆ ಊಟದಲ್ಲಿ ಪೋಷಕಾಂಶ ಇರುವಂತೆ ನೋಡಿಕೊಳ್ಳಬೇಕು. ವಿಟಮಿನ್‌ಯುಕ್ತ ಆಹಾರ ಸೇವನೆ ಮಾಡಬೇಕು. ವಿಟಮಿನ್ 'ಇ' ಮತ್ತು 'ಸಿ' ಹೇರಳವಾಗಿರುವ ಸೊಪ್ಪು, ತರಕಾರಿ, ಹಣ್ಣುಗಳ ಸೇವನೆ ಯಥೇಚ್ಛವಾಗಿರಲಿ. ಮಳೆಗಾಲದಲ್ಲಿ ಕುಡಿಯುವ ನೀರಿನ ಪ್ರಮಾಣ ಕಡಿಮೆಯಾಗದಿರಲಿ. ನೀರು ಕುಡಿದಷ್ಟು ದೇಹ ತಂಪಾಗಿರುವುದಲ್ಲದೇ, ನಿರ್ಜಲೀಕರಣವಾಗದಂತೆ, ಚರ್ಮ ಒಣಗದಂತೆ ತಡೆಯುತ್ತದೆ. ಒಣ ಚರ್ಮ ಬೇಗ ಸುಕ್ಕುಗಟ್ಟುವ ಸಾಧ್ಯತೆ ಇರುವುದರಿಂದ ನೀರು ಕುಡಿಯುತ್ತಿರುವುದು ಅವಶ್ಯಕ.

ಆಗಾಗ ಮುಖ ತೊಳೆಯುತ್ತಿರಿ

ಕಾಲ ಯಾವುದಾದರೇನೂ ಎಷ್ಟೇ ಒತ್ತಡದ ಕೆಲಸವಿದ್ದರೂ ಆಗಾಗ ಮುಖ ತೊಳೆಯುವುದನ್ನು ಮರೆಯದಿರಿ. ಸಾಬೂನು, ಕ್ರೀಂ ಯಾವುದನ್ನೂ ಬಳಸದೇ ತಣ್ಣೀರಿನಲ್ಲಿ ಆಗಾಗ ಮುಖ ತೊಳೆದು, ಶುಭ್ರ ಬಟ್ಟೆಯಲ್ಲಿ ಒರೆಸಿಕೊಳ್ಳುವ ಅಭ್ಯಾಸವನ್ನು ರೂಢಿಸಿಕೊಳ್ಳಿ. ಇದರಿಂದ ದೂಳು ಮುಕ್ತವಾಗುವುದಲ್ಲದೇ, ಚರ್ಮದಲ್ಲಿ ಅಲರ್ಜಿಯಾಗುವುದನ್ನು ತಪ್ಪಿಸಬಹುದು.

ಸೂಕ್ತ ಉತ್ಪನ್ನ ಬಳಸಿ

ನಿಮ್ಮ ಚರ್ಮ, ಕೂದಲು ಯಾವ ಮಾದರಿಯದ್ದು ಎಂಬುದನ್ನು ಮೊದಲಿಗೆ ಅರ್ಥ ಮಾಡಿಕೊಳ್ಳಿ. ಜಿಡ್ಡಿನ ಚರ್ಮ, ಒಣ ಚರ್ಮ, ಜಿಡ್ಡಿನ ಕೂದಲು, ಒಣ ಕೂದಲು ಹೀಗೆ ಈ ಮಾದರಿಗನುಗುಣವಾಗಿ ಕ್ರೀಂಗಳು, ಕ್ಲೇನ್ಸರ್, ಮಾಯಿಶ್ಚರೈಸರ್ ಲಭ್ಯವಿರುತ್ತದೆ. ಯಾವುದೇ ಕ್ರೀಂಗಳನ್ನು ಮುಖಕ್ಕೆ ಹಚ್ಚುವ ಮೊದಲು ಕೈಗೆ ಹಚ್ಚಿ ಅದರ ಫಲಿತಾಂಶವನ್ನು ಗಮನಿಸಿ. ಮಳೆಗಾಲದಲ್ಲಿ ಸನ್‌ಸ್ಕ್ರೀನ್ ಬಳಸಿ. ಮನೆಯಲ್ಲಿ ಫೇಸ್ ಹಾಗೂ ಹೇರ್‌ಪ್ಯಾಕ್ ಮಾಡಿಕೊಳ್ಳಿ. ರಾಸಾಯನಿಕಅಂಶಗಳಿಂದ ಮುಕ್ತವಾಗಿರುವ ತರಕಾರಿ ಹಾಗೂ ಹಣ್ಣುಗಳನ್ನು ಬಳಸಿ ಫೇಸ್ ಹಾಗೂ ಹೇರ್ ಪ್ಯಾಕ್ ಮಾಡಿಕೊಳ್ಳಬಹುದು. ಲಘು, ನೀರಿನಂಶ ಆಧಾರಿತ ಮಾಯಿಶ್ಚರೈಸರ್ ಬಳಸಿ.



ಆಯಿಲಿಂಗ್ ಮಾಡಿಸಿ

ಕೂದಲು ಹಾಗೂ ತಲೆಬುರಡೆಗೆ ಶುದ್ಧ ಕೊಬ್ಬರಿ ಎಣ್ಣೆಯನ್ನು ವಾರಕ್ಕೊಮ್ಮೆ ಬಳಸಿ ಮಸಾಜ್ ಮಾಡಿ. ಇದರಿಂದ ರಕ್ತಸಂಚಾರ ಸಮರ್ಪಕವಾಗಿ ಆಗಿ ಕೂದಲು ಚೆನ್ನಾಗಿ ಬೆಳೆಯುತ್ತದೆ. ತಲೆಹೊಟ್ಟು ಕಡಿಮೆಯಾಗುತ್ತದೆ. ಮಳೆಯಲ್ಲಿ ಕೂದಲು ನೆನೆದಿದ್ದರೆ ಸೂಕ್ತ ಶಾಂಪೂ ಬಳಸಿ,ಕೂದಲು ತೊಳೆಯುವುದನ್ನು ಮರೆಯದಿರಿ. 3ರಿಂದ 4 ತಿಂಗಳಿಗೊಮ್ಮೆ ಕೂದಲಿಗೆ ಕತ್ತರಿ ಹಾಕಿ. ಟ್ರಿಮ್ ಮಾಡಿಸುವುದರಿಂದ ಬೆಳವಣಿಗೆ ಸಮರ್ಪಕವಾಗಿ ಆಗುತ್ತದೆ. ಸೀಳು ಕೂದಲುಗಳಿದ್ದರೆ ಕೂದಲ ಬೆಳವಣಿಗೆಯಾಗದು.

ಡಾ.ವಿಜಯಗೌರಿ ಭಂಡಾರು,
ಚರ್ಮವೈದ್ಯರು, ಸಾಕ್ರಾ ವರ್ಲ್ಡ್ ಆಸ್ಪತ್ರೆ



- ಮಳೆಗಾಲದಲ್ಲಿ ಒದ್ದೆಯಾಗುವ ಕೂದಲನ್ನು ಹಾಗೆ ಕಟ್ಟಬೇಡಿ. ಆದಷ್ಟು ಕೂದಲನ್ನು ಒಣಗಿಸಿಕೊಳ್ಳಿ. ಇದರಿಂದ ಕೂದಲು ಅನವಶ್ಯಕವಾಗಿ ಉದುರುವುದನ್ನು ತಪ್ಪಿಸಬಹುದು.
- ಮಳೆಯಲ್ಲಿ ನೆನೆದಿದ್ದರೆ ಕೂಡಲೇ ತಲೆಸ್ನಾನ ಮಾಡಿ. ಒದ್ದೆಯಾದ ಕೂದಲಿಂದ ಹಾನಿ ಹೆಚ್ಚು.
- ಉತ್ತಮ ಬಾಚಣಿಗೆಯನ್ನು ಬಳಸಿ. ಮಳೆಗಾಲದಲ್ಲಿ ಹೇನುಗಳಾಗುವ ಸಾಧ್ಯತೆ ಹೆಚ್ಚು. ಮಳೆಗಾಲವಾದ ಜೂನ್ ತಿಂಗಳಲ್ಲಿ ಶಾಲೆಗಳು ಆರಂಭವಾಗುವುದರಿಂದ ಹೇನುಗಳ ಕಾಟ ಜಾಸ್ತಿ ಇರುತ್ತದೆ. ಹಾಗಾಗಿ ಹೇನು ತೆಗೆಯುವ ಬಾಚಣಿಗೆಯನ್ನು ಬಳಸಿ. ಇದರಿಂದ ಸೋಂಕು ಉಂಟಾಗದಂತೆ ತಡೆಯಬಹುದು.
- ಸೂಕ್ಷ್ಮಚರ್ಮದವರಿಗೆ ಸೋಂಕಾಗುವ ಸಾಧ್ಯತೆ ಹೆಚ್ಚು ಹಾಗಾಗಿ ಸುವಾಸನೆರಹಿತ, ರಾಸಯಾನಿಕಮುಕ್ತ ಕ್ರೀಂಗಳನ್ನು ಹೆಚ್ಚು ಬಳಸಿ. ಇದರಿಂದ ಅನಗತ್ಯ ಉರಿ, ಅಲರ್ಜಿಯಾಗುವ ಸಾಧ್ಯತೆ ಹೆಚ್ಚು.
- ಸ್ವ ಆರೈಕೆ ಮಾಡಿಕೊಳ್ಳುವ ಭರದಲ್ಲಿ ಸ್ವವೈದ್ಯರಾಗಬೇಡಿ. ತಜ್ಞರ ಸಲಹೆ ಪಡೆಯಿರಿ.
- ಸಾಮಾಜಿಕ ಜಾಲತಾಣಗಳಲ್ಲಿ ಯಥೇಚ್ಛವಾಗಿ ಶಿಫಾರಸು ಮಾಡಿದ ಕ್ರೀಂ, ಶ್ಯಾಂಪೂ, ಸಾಬೂನುಗಳನ್ನು ಬಳಸುವ ಮುನ್ನ ಎರಡು ಬಾರಿ ಯೋಚಿಸಿ.

ಮಗುವಿನ ಆರೈಕೆಯಲ್ಲಿ ತಾಯಿಯ ಆರೋಗ್ಯ

ಅಮ್ಮ, ಅವ್ವ, ಅಬ್ಬೆ, ನಾನಾ ಹೆಸರುಗಳಿಂದ ಕರೆದರೂ ಕೂಡ ತಾಯಿ ಪ್ರೀತಿ ಮಾತ್ರ ಒಂದೇ.. ಮಕ್ಕಳಿಗಾಗಿ, ಅವರ ಆರೋಗ್ಯಕ್ಕಾಗಿ, ಅವರ ಜೀವನಕ್ಕಾಗಿ ಸದಾ ಹೋರಾಡೋ ಜೀವ ಅಮ್ಮ. ಮಕ್ಕಳ ಆರೋಗ್ಯ ಹಾಗೂ ಭವಿಷ್ಯ ರೂಪಿಸುವಲ್ಲಿ ತಾಯಂದಿರ ಪಾತ್ರ ದೊಡ್ಡದು. ಇಂದು ಕುಟುಂಬದ ಯೋಗಕ್ಷೇಮಕ್ಕಾಗಿ ತಾಯಂದಿರು ಮಾಡುವ ತ್ಯಾಗ ಹಾಗೂ ಪ್ರಯತ್ನಗಳನ್ನು ನಾವೆಲ್ಲರೂ ನೆನಪು ಮಾಡಿಕೊಳ್ಳುತ್ತೇವೆ. ತಾಯಂದಿರ ನಿಸ್ವಾರ್ಥ ಪ್ರೀತಿ ಹಾಗೂ ಸಮರ್ಪಣೆಯನ್ನು ಪ್ರಶಂಸಿಸಲು ಇದೊಂದು ಸುಸಂದರ್ಭವಾಗಿದೆ.

ಶಿಶುಗಳ ಆರೋಗ್ಯ ಮತ್ತು ಯೋಗಕ್ಷೇಮದಲ್ಲಿ ತಾಯಂದಿರ ಪಾತ್ರ ನಿರ್ಣಾಯಕ. ಹೀಗಾಗಿ ತಾಯಿಯ ಆರೋಗ್ಯ ಮಗುವಿನ ಮೇಲೆ ನೇರ ಪರಿಣಾಮ ಬೀರುತ್ತದೆ. ತಾಯಂದಿರು ಮಾಡುವ ಸಾಮಾನ್ಯ ತಪ್ಪುಗಳು ಹಾಗೂ ಅಜಾಗರೂಕತೆ ಶಿಶುಗಳ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ

ತಾಯಿಯ ಪಾತ್ರವು ತನ್ನ ಮಗುವಿನ ಪೋಷಣೆ ಹಾಗೂ ಆರೈಕೆಗೆ ಮಾತ್ರ ಸೀಮಿತವಾಗಿಲ್ಲ. ಸಾಮಾಜಿಕ, ಭಾವನಾತ್ಮಕ, ದೈಹಿಕ, ಸ್ವಾತಂತ್ರ್ಯ ಬೆಳವಣಿಗೆ ಸೇರಿ ಮಗುವಿನ ಬೆಳವಣಿಗೆಯ ವಿವಿಧ ಆಯಾಮಗಳಲ್ಲಿ ತಾಯಿಯೇ ಮೊದಲ ಶಿಕ್ಷಕಿಯಾಗಿರುತ್ತಾಳೆ.
ಶಿಶು ತಾಯಿಯ ಜೊತೆಗೆ ಆಳವಾದ ಬಾಂಧವ್ಯ ಹೊಂದಿರುತ್ತವೆ. ಶಿಶುಗಳ ಆರಂಭಿಕ ಹಂತದಲ್ಲಿ ತಾಯಂದಿರು ಒದಗಿಸುವ ನಿರಂತರ ಆರೈಕೆ, ಆಹಾರ, ಆಶ್ರಯ, ಶುಚಿಗೊಳಿಸುವಿಕೆ, ಬಟ್ಟೆ ತೊಡಿಸುವುದು ಹಾಗೂ ಸಾಂತ್ವನವು ಬೆಳವಣಿಗೆಯ ಪ್ರಮುಖ ಅಂಶಗಳಾಗಿವೆ. ಇವೆಲ್ಲವೂ ಹೊರ ಜಗತ್ತಿನ ಜೊತೆಗೆ ಸಂವಹನ ಸಾಮರ್ಥ್ಯವನ್ನು ರೂಪಿಸುತ್ತವೆ. ಹೀಗಾಗಿ ಶಿಶುಗಳ ಆರೋಗ್ಯ ಉತ್ತಮವಾಗಿರಬೇಕು ಎಂದರೆ ತಾಯಿಯ ಆರೋಗ್ಯ ಉತ್ತಮವಾಗಿರುವುದು ನಿರ್ಣಾಯಕವಾಗಿರುತ್ತದೆ

ಆರೋಗ್ಯಕರ ಗರ್ಭಧಾರಣೆಯೂ ಭ್ರೂಣದ ಆರೋಗ್ಯಕರ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಇದು ಶಿಶು ಮರಣ ಹಾಗೂ ಅನಾರೋಗ್ಯಕ್ಕೆ ಸಂಬಂಧಿಸಿದ ಅಪಾಯಗಳನ್ನು ಕಡಿಮೆ ಮಾಡುತ್ತದೆ. ಗರ್ಭಿಣಿಯ ಯೋಗಕ್ಷೇಮ, ಆಹಾರ ಪದ್ಧತಿ, ಒತ್ತಡಗಳು ಹುಟ್ಟಲಿರುವ ಮಗುವಿನ ಮೇಲೆ ಗಾಢವಾಗಿ ಪ್ರಭಾವ ಬೀರಬಹುದು. ತಾಯಿಯ ಆರೋಗ್ಯಕ್ಕೂ ಭ್ರೂಣದ ಆರೋಗ್ಯಕ್ಕೂ ಸಂಬಂಧ ಇರುವುದಾಗಿ ಸಂಶೋಧನೆ ಸೂಚಿಸುತ್ತದೆ


ಇನ್ನು ಗರ್ಭಧಾರಣೆಯ ಸಂದರ್ಭದಲ್ಲಿ ಸರಿಯಾದ ಪೋಷಣೆ ಅತ್ಯಗತ್ಯ. ಕಬ್ಬಿಣ ಹಾಗೂ ಪೋಲಿಕ್ ಆಮ್ಲದಂತಹ ಅಗತ್ಯ ಪೋಷಕಾಂಶಗಳಿರುವ ಆಹಾರವನ್ನು ಸೇವಿಸಬೇಕು, ಆದರೆ ಅತಿಯಾಗಿ ಸೇವಿಸಬಾರದು. ಪೋಷಕಾಂಶಗಳನ್ನು ತೆಗೆದುಕೊಳ್ಳುವುದರಿಂದ ತಾಯಿ ಹಾಗೂ ಶಿಶುಗಳ ಆರೋಗ್ಯ ಉತ್ತಮವಾಗಿರುತ್ತದೆ. ರಕ್ತಹೀನತೆ, ಪೆರಿನಾಟಲ್ ಮರಣ, ಅಕಾಲಿಕ ಜನನ, ಕಡಿಮೆ ತೂಕದಂತಹ ಸಮಸ್ಯೆಗಳನ್ನು ನಿಯಂತ್ರಿಸಲು ಅನುಕೂಲವಾಗುತ್ತದೆ.

ಸ್ತನ್ಯಪಾನವು ತಾಯಿ ಮತ್ತು ಶಿಶುವಿನ ಆರೋಗ್ಯ ನಿರ್ವಹಣೆಯಲ್ಲಿ ಪ್ರಮುಖ ಅಂಶವಾಗಿದೆ. ವೈದ್ಯಕೀಯವಾಗಿ ಅಗತ್ಯವಿಲ್ಲದ ಹೊರತು ಶಿಶುಗಳಿಗೆ ಯಾವುದೇ ದ್ರವ ಆಹಾರವನ್ನು ಒದಗಿಸಬಾರದು. ಅದರ ಬದಲು ತಾಯಿಯ ಎದೆಹಾಲು ಉಣಿಸುವುದು ಶಿಶುಗಳ ಯೋಗಕ್ಷೇಮಕ್ಕೆ ಅತ್ಯಗತ್ಯವಾಗಿದೆ

ಡಾ. ಶ್ರೀಜಾ ರಾಣಿ ವಿ.ಆರ್, ಕಿಂಡರ್ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ



ಮಹಿಳೆಯರಿಗೆ ಮುನ್ನೆಚ್ಚರಿಕೆ ಇರಲಿ



ಭಾರತದಲ್ಲಿ ಪ್ರತಿ ವರ್ಷ 7 ಲಕ್ಷ ಮಹಿಳೆಯರಲ್ಲಿ ಕ್ಯಾನ್ಸರ್ ರೋಗ ಪತ್ತೆಯಾಗುತ್ತಿದೆ. ಈ ಪೈಕಿ ಶೇ 28.8ರಷ್ಟು ಸ್ತನ ಕ್ಯಾನ್ಸರ್, ಶೇ 10.6ರಷ್ಟು ಗರ್ಭಕಂಠ, ಶೇ 6.2ರಷ್ಟು ಅಂಡಾಶಯ, ಶೇ 3.7 ರಷ್ಟು ಗರ್ಭಾಶಯ ಮತ್ತು ಶೇ 3.7ರಷ್ಟು ಶ್ವಾಸಕೋಶ ಕ್ಯಾನ್ಸರ್ ರೋಗಗಳು ಸೇರಿವೆ.

ವಿಶ್ವದಾದ್ಯಂತ ಮಹಿಳೆಯರು ಅಕಾಲಿಕವಾಗಿ ಮರಣ ಹೊಂದಲು ಇರುವ ಪ್ರಮುಖ ಮೂರು ಕಾರಣಗಳಲ್ಲಿ ಕ್ಯಾನ್ಸರ್ ಮೊದಲ ಸ್ಥಾನದಲ್ಲಿದೆ.

ಪುರುಷರಿಗೆ ಹೋಲಿಸಿದರೆ ಈ ಮಾರಕ ರೋಗವನ್ನು ತಡೆಗಟ್ಟುವ ಕ್ರಮಗಳನ್ನು ಕೈಗೊಳ್ಳುವುದು ಮಹಿಳೆಯರಲ್ಲಿ ಕಡಿಮೆ ಇದೆ.

ಬೆಂಗಳೂರಿನ ಸಂಪ್ರದ ಆಸ್ಪತ್ರೆಯ ಕನ್ಸಲ್ಟೆಂಟ್ ಮೆಡಿಕಲ್ ಆಂಕಾಲಾಜಿಸ್ಟ್ ಡಾ.ರಾಧೇಶ್ಯಾಮ್ ನಾಯಕ್, ಪ್ರತಿವರ್ಷ ಭಾರತದಲ್ಲಿ 1.23 ಲಕ್ಷ ಮಹಿಳೆಯರಲ್ಲಿ ಗರ್ಭಕಂಠ ಕ್ಯಾನ್ಸರ್ ಮತ್ತು 1.44 ಲಕ್ಷ ಜನರಲ್ಲಿ ಸ್ತನ ಕ್ಯಾನ್ಸರ್ ಪ್ರಕರಣಗಳು ಪತ್ತೆಯಾಗುತ್ತಿವೆ. ಇದು ಜಾಗತಿಕವಾಗಿ ಗರ್ಭಕಂಠ ಕ್ಯಾನ್ಸರ್ ಮರಣದ ಶೇಕಡ ಮೂರನೇ ಒಂದರಷ್ಟಾಗಲಿದೆ. ಇತ್ತೀಚಿನ ವರ್ಷಗಳಲ್ಲಿ ದೇಶದಲ್ಲಿ ಪ್ರಕರಣಗಳು ಮತ್ತು ಮರಣಕ್ಕೆ ಕಾರಣಗಳ ವಿಚಾರದಲ್ಲಿ ಸ್ತನ ಕ್ಯಾನ್ಸರ್ ಗರ್ಭಕಂಠ ಕ್ಯಾನ್ಸರ್ ಅನ್ನು ಹಿಂದಿಕ್ಕಿದೆ ಎನ್ನುತ್ತಾರೆ.

ರೋಗನಿರ್ಣಯದ ಹಂತವನ್ನು ಸುಲಭವಾಗಿ ಕಂಡುಹಿಡಿಯಲು ಸಾಧ್ಯವಾಗಬೇಕು. ದುರದೃಷ್ಟವಶಾತ್, ಶೇ 57ರಷ್ಟು ಸ್ತನ ಕ್ಯಾನ್ಸರ್, ಶೇ 40.6ರಷ್ಟು ಅಂಡಾಶಯ ಕ್ಯಾನ್ಸರ್ ಮತ್ತು ಶೇ 60 ರಷ್ಟು ಗರ್ಭಕಂಠ ಕ್ಯಾನ್ಸರ್ ಪ್ರಕರಣಗಳನ್ನು ದುಗ್ದರಸ ಗ್ರಂಥಿಗಳು, ಅಂಗಾಂಶಗಳು ಅಥವಾ ಇತರ ಅಂಗಗಳಿಗೆ ಹರಡಿಕೊಂಡಿರುವ ಹಂತದಲ್ಲಿ ರೋಗನಿರ್ಣಯವನ್ನು ಮಾಡಲಾಗುತ್ತಿದೆ.

ಮಹಿಳೆಯರು ಪ್ರತಿ ವರ್ಷ ಸ್ತನ, ಗರ್ಭಕಂಠ, ಓರಲ್ ಕ್ಯಾವಿಟಿ, ಹೊಟ್ಟೆ, ಶ್ವಾಸಕೋಶ ಮತ್ತು ಇತರ ಅಂಗಗಳ ತಪಾಸಣೆ ಮಾಡಿಸಿಕೊಳ್ಳಬೇಕು. 9 ರಿಂದ 15 ವರ್ಷ ವಯೋಮಾನದ ಹೆಣ್ಣು ಮಕ್ಕಳು HPV ಲಸಿಕೆ ಹಾಕಿಸಿಕೊಳ್ಳುವುದು ಮತ್ತು ವಯಸ್ಕ ಮಹಿಳೆಯರು ಹೆಪಟೈಟಿಸ್ ಬಿ ವೈರಸ್ ಲಸಿಕೆಯನ್ನು ಹಾಕಿಸಿಕೊಳ್ಳಬೇಕು. ಹೆಲಿಕೋಬ್ಯಾಕ್ಟರ್ ಪೈಲೋರಿ, ಹೆಪಟೈಟಿಸ್ ಬಿ ಮತ್ತು ಹೆಪಟೈಟಿಸ್ ಸಿಯಂಥ ಸೋಂಕುಗಳ ಬಗ್ಗೆ ಜಾಗ್ರತರಾಗಿರಬೇಕು. ಹೈಡ್ರೋಕ್ವಿನೋನ್ ಹೊಂದಿರುವ ಚರ್ಮಕ್ಕೆ ಸಂಬಂಧಿಸಿದ ಕ್ರೀಂಗಳನ್ನು ಹಾಗೂ ಪ್ಯಾರಾಬೆನ್‌ಗಳನ್ನು ಹೊಂದಿರುವ ಕಾಸ್ಮೆಟಿಕ್ ಉತ್ಪನ್ನಗಳನ್ನು ಬಳಸಬಾರದು.

ಭಾರತದಲ್ಲಿ ಶೇ 60ರಷ್ಟು ಸ್ತನ ಕ್ಯಾನ್ಸರ್ ಪ್ರಕರಣಗಳನ್ನು ಮೂರು ಅಥವಾ ನಾಲ್ಕನೇ ಹಂತದಲ್ಲಿದ್ದಾಗ ಪತ್ತೆ ಮಾಡಲಾಗುತ್ತಿದೆ. ಇದರ ಪರಿಣಾಮ ಪಾಶ್ಚಿಮಾತ್ಯ ದೇಶಗಳಿಗೆ ಹೋಲಿಸಿದರೆ ಸ್ತನ ಕ್ಯಾನ್ಸರ್ ರೋಗಿಗಳು ಬದುಕುಳಿಯುವ ಪ್ರಮಾಣ ಕಡಿಮೆ ಇದೆ. ಜಾಗತಿಕವಾಗಿರುವ ಒಟ್ಟು ಗರ್ಭಕಂಠ ಕ್ಯಾನ್ಸರ್ ಪ್ರಕರಣಗಳಲ್ಲಿ ಮೂರನೇ ಒಂದು ಭಾಗದಷ್ಟು ಭಾರತದ್ದಾಗಿವೆ.

ವಿಶ್ವದ ಅಭಿವೃದ್ಧಿಶೀಲ ದೇಶಗಳಲ್ಲಿ ಪ್ರತಿ 100 ಮಹಿಳೆಯರ ಪೈಕಿ ಒಬ್ಬರಿಗೆ ಈ ಗರ್ಭಕಂಠ ಕ್ಯಾನ್ಸರ್ ಕಂಡುಬಂದರೆ, ಭಾರತದಲ್ಲಿ ಪ್ರತಿ 53 ಮಹಿಳೆಯರಲ್ಲಿ ಒಬ್ಬರಲ್ಲಿ ಕಾಣಿಸಿಕೊಳ್ಳುತ್ತಿದೆ. ಭಾರತದಲ್ಲಿನ 15 ರಿಂದ 41 ವರ್ಷ ವಯೋಮಾನದ ಮಹಿಳೆಯರಲ್ಲಿ ಅತಿ ಹೆಚ್ಚಾಗಿ ಕಂಡು ಬರುವ ಎರಡನೇ ಸಾಮಾನ್ಯ ಕ್ಯಾನ್ಸರ್ ಇದಾಗಿದೆ. ಮುಕ್ಕಾಲು ಭಾಗದಷ್ಟು ಪ್ರಕರಣಗಳನ್ನು ಅವುಗಳು ಅಂತಿಮ ಹಂತಕ್ಕೆ ತಲುಪಿದಾಗ ಪತ್ತೆ ಮಾಡಲಾಗುತ್ತಿದೆ. ❖

‘ಕರಗದ ಉತ್ಸಾಹ ಬತ್ತದ ಭಕುತಿ’





ಮಲ್ಲಿಗೆಯ ತೇರಿನಂತೆ ಕಾಣುವ ಕರಗ ಉತ್ಸವವೆಂದರೆ ಬೆಂಗಳೂರಿಗರಲ್ಲಿ ಎಲ್ಲಿಲ್ಲತ ಉತ್ಸಾಹ ಬರುತ್ತದೆ. ಮೇ ತಿಂಗಳಲ್ಲಿ ಮಲ್ಲಿಗೆ ಋತುಮಾನವಿದ್ದಾಗ ಭಕ್ತಿಯ ಆವೇಗ, ಆವೇಶ ಎಲ್ಲವೂ ಒಟ್ಟುಗೂಡುತ್ತವೆ. ದೇವರ ಮುಂದೆ ದೇಹ ದಂಡನೆಗೆ ಮುಂದಾಗುವ ಭಕ್ತರು, ನೀನಿಟ್ಟಂಗೆ ನಾವಿರುವೆವು ಎಂಬ ಸಂಪೂರ್ಣ ಶರಣಾಗತಿಯನ್ನು ತೋರುತ್ತಾರೆ ವಿವಿಧ ಹರಕೆ ಹೊರುವ ಭಕ್ತರು ವೀರಯೋಧರಂತೆ ಹಳದಿಯ ಬಣ್ಣವನ್ನೂ, ತ್ಯಾಗದ ಪ್ರತೀಕವಾದ ಕೇಸರಿ ಬಣ್ಣವನ್ನೂ, ಶೌರ್ಯದ ಸಂಕೇತವಾದ ಕೆಂಬಣ್ಣದ ವಸ್ತ್ರ ಧರಿಸಿದ ಭಕ್ತುರು ಕೆಂಡ ಹಾಯುತ್ತಾರೆ. ಕೆಡುಕನ್ನು ಒಳಿತಿನಿಂದ ಗೆಲ್ಲುವ ಛಲ ಹೊರಲು ಖಡ್ಗ ಹಿಡಿದು, ಆವೇಶದಿಂದ ಸುಡುಸುಡುವ ಕೆಂಡದ ಹೊಂಡ ಹಾದು, ಬದುಕಿನ ಬದಿಗೆ ಬರುತ್ತಾರೆ. ಈ ವಾರಾಂತ್ಯದಲ್ಲಿ ಪೂಜಾರಿ ಕಣ್ಣನ್ ಅವರು ಕರಗ ಹೊತ್ತು ನಡೆಯುವಾಗ ಧರ್ಮರಾಯ ಮತ್ತು ದ್ರೌಪದಿ ದೇವಸ್ಥಾನದ ಮುಂದಿನ ದೃಶ್ಯಗಳನ್ನು ‘ಪ್ರಜಾವಾಣಿ’ಯ ಎಂ.ಎಸ್. ಮಂಜುನಾಥ’ ಅವರು ಸೆರೆ ಹಿಡಿದಿದ್ದಾರೆ.











ಅಹಮ್ಮಿನ ಗೋಡೆಯಲಿ

ಸುಮಾವೀಣಾ

ಭಾರತೀಯ ಪರಂಪರೆಯಲ್ಲಿ ಷೋಡಶ ಸಂಸ್ಕಾರಗಳಿಗೆ ಬಹಳ ಆದ್ಯತೆ. ಮಗುವಿನ ನಾಮಕರಣದಿಂದ ಮೊದಲುಗೊಂಡು ಕರ್ಣಭೇದನ, ಅನ್ನಪ್ರಾಶನ,ಅಕ್ಷರಾಭ್ಯಾಸ ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಈ ಪದಗಳೆಲ್ಲಾ ಮಗುವಿನ ಬೆಳವಣಿಗೆಯನ್ನು ಸೂಚಿಸುತ್ತದೆ. ವಿದ್ಯೆ ತಂದೆ -ತಾಯಿಯಾದರೆ, ಬುದ್ಧಿ ಸೋದರ ಮಾವ ಎಂದು ಕರೆಯುವುದಿದೆ. ಅಂದರೆ ಮಗುವಿನ ಬೆಳವಣಿಗೆಯಲ್ಲಿ ಸಂಬಂಧಿಕರ ಪಾತ್ರವೂ ಇರುತ್ತಿತ್ತು ಎಂದು ತಿಳಿಯುತ್ತದೆ. ಆದರೆ ಇಂದು ಮಕ್ಕಳಿಗೆ ಸಂಬಂಧಗಳ ಮೌಲ್ಯ, ನೈತಿಕ ಮೌಲ್ಯಗಳ ತಿಳಿವಳಿಕೆಯೇ ಇಲ್ಲವಾಗಿದೆ.

ಈಗ ಹೆಚ್ಚಿನವರು ಯಾರೂ ಮನೆಯಲ್ಲಿ ಕೂರುವುದಿಲ್ಲ. ದುಡಿಮೆಯಲ್ಲಿ ತೊಡಗಿಸಿಕೊಂಡಿರುತ್ತಾರೆ. ಮೇಲಧಿಕಾರಿಗೆ ಹೊಂದಿಕೊಂಡು ಹೋಗಲೋ, ಇಲ್ಲವೆ ಒಂದು ದಿನ ರಜೆ ಹಾಕಿದರೆ ಇಷ್ಟು ಹಣ ನಷ್ಟ ಎಂತಲೋ ಯಾವಾಗಲೂ ವ್ಯಸ್ತರಾಗಿರುತ್ತಾರೆ. ಆ ಸಂದರ್ಭದಲ್ಲಿ ಮಕ್ಕಳನ್ನು ಹತೋಟಿಗೆ ತರಲು ಮಕ್ಕಳು ಏನೇ ಕೇಳಿದರೂ ಅವರ ಕೋರಿಕೆಯನ್ನು ಈಡೇರಿಸಿ ಬಿಡುತ್ತಾರೆ. ತಮ್ಮ ಕೆಲಸ ಕಾರ್ಯಗಳನ್ನು ನಿಭಾಯಿಸಿಕೊಳ್ಳಲು ಮಕ್ಕಳನ್ನು ಮನೆಯಲ್ಲಿ ಒಂಟಿಯಾಗಿರಿಸಿ ಒಂದಷ್ಟು ಆಹಾರ ಬೇಯಿಸಿ ಟೇಬಲ್ ಮೇಲಿಟ್ಟು ಹೋಗುತ್ತಾರೆ. ಇದು ಮಕ್ಕಳ ಮೇಲೆ ಅವರ ಮನಸ್ಸಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಸಾಕಬೇಕಲ್ಲೋ ಎಂದೋ, ಖರ್ಚಿನ ಬಾಬ್ತು ಎಂದೋ ಎರಡು ಮಕ್ಕಳಿರುವ ಮನೆಗಳು ತೀರಾ ಕಡಿಮೆಯಾಗುತ್ತಿವೆ. ಒಂದು ಮಗು ಇರುವ ಮನೆಗಳೇ ಅಧಿಕ. ಹೀಗೆ ಒಂಟಿಯಾಗಿ ಬೆಳೆದ ಮಕ್ಕಳಿಗೆ ಹೊಂದಿಕೊಂಡು ಹೋಗುವ ಸ್ವಭಾವವಿರುವುದಿಲ್ಲ. ಎಲ್ಲಾ ಬೇಕುಗಳನ್ನು ಕೋರಿಕೆಯಿಲ್ಲದೆ ಈಡೇರಿಸಿಕೊಳ್ಳುವ ಇವರ



ಜೀವನ ಶೈಲಿಯಲ್ಲಿ, ಭಾವನೆಗಳಲ್ಲಿ ಬಾಂಧವ್ಯದ ಆರ್ದ್ರತೆ ಇರುವುದಿಲ್ಲ . ಸಮಾಜದಲ್ಲಿ ಮಕ್ಕಳಿಂದ ನಡೆಯುವ ಆಗಂತುಕ ಘಟನೆಗಳಿಗೆ ಇದೂ ಒಂದು ಕಾರಣವೆನ್ನಬಹುದು.

ಮಕ್ಕಳ ಮೇಲಿನ ಹಿಡಿತ ತಪ್ಪಿ ಹೋಗುವುದಕ್ಕೆ ಅಪ್ಪ ಅಮ್ಮಂದಿರ ಅಹಂ ಕೂಡ ಮುಖ್ಯ ಕಾರಣ. ಅತ್ತೆ -ಮಾವಂದಿರಿಂದ ನೋವಾಗಿದ್ದರೆ ಮಕ್ಕಳನ್ನು ಅವರಿಂದ ದೂರವಿಡಲು ಪ್ರಯತ್ನಿಸುತ್ತಾರೆ. ಚಿಕ್ಕ ಚಿಕ್ಕ ಕಾರಣಗಳಿಗೆ ಅವರ ಮನಸ್ಸು ಮುದುಡಿ ಹೋಗಿರುತ್ತದೆ. ಹೀಗಾದಾಗ ಜವಾಬ್ದಾರಿಯ ಮಹತ್ವ ಕಳೆದುಕೊಳ್ಳುತ್ತದೆ. ಇನ್ನೂ ಒಂದು ಹೆಜ್ಜೆ ಮುಂದೆ ಸರಿದು ಹೇಳಬೇಕೆಂದರೆ ‘ಏಕಪೋಷಕತ್ವ’ ಎಂಬ

> ಮಕ್ಕಳ ಮೇಲಿನ ಹಿಡಿತ ಕೈ ತಪ್ಪಿ ಹೋಗುವುದಕ್ಕೆ ಅಪ್ಪ ಅಮ್ಮಂದಿರ ಅಹಂ ಕೂಡ ಮುಖ್ಯ ಕಾರಣ. ಕಾರಣಾಂತರಗಳಿಂದ ಅತ್ತೆ -ಮಾವಂದಿರಿಂದ ನೋವಾಗಿರುವ ಪೋಷಕರು ತಮ್ಮ ಮಕ್ಕಳನ್ನು ಅವರಿಂದ ದೂರವಿಡಲು ಪ್ರಯತ್ನಿಸುತ್ತಾರೆ.

ಪದ ಈಗ ಬಹಳ ಪ್ರಚಾರಕ್ಕೆ ಬರುತ್ತಿದೆ. ಅಷ್ಟೇ ಏಕೆ ಶಾಲಾ ಅರ್ಜಿಗಳಲ್ಲಿ ಅಂಕಪಟ್ಟಿಗಳಲ್ಲಿ ಡೈರಿಗಳಲ್ಲಿ ‘ಸಿಂಗಲ್ ಪೇರೆಂಟ್’ ಎಂಬ ಪದ ನುಸುಳಿ, ಪೋಷಕರು, ಪಾಲಕರು ಎಂಬ ಪದವನ್ನು ತಳ್ಳಿ ತನ್ನ ಸ್ಥಾನ ಕಂಡುಕೊಂಡಿದೆ. ಇದಂತೂ ಮಕ್ಕಳ ಬೌದ್ಧಿಕ, ಮಾನಸಿಕ ಬೆಳವಣಿಗೆಗೆ ಮಾರಕವಾದದ್ದು.

ಸಮಾಜದಲ್ಲಿ ಉತ್ತಮ ಸ್ಥಾನಮಾನ ಹೊಂದಿದ್ದೇವೆ; ನಮ್ಮ ಮಕ್ಕಳು ಇತರೆ ನೆರೆಹೊರೆಯ ಮಕ್ಕಳೊಡನೆ, ಕೆಲವೊಮ್ಮೆ ಸಂಬಂಧಿಕರ ಮಕ್ಕಳೊಡನೆಯೂ ಬೆರೆಯಬಾರದು, ಅವರಿಂದ ಏನನ್ನೂ ಪಡೆಯಬಾರದು ಇತ್ಯಾದಿ ನಿರ್ಬಂಧಗಳನ್ನು ಹೇರಲಾಗುತ್ತಿದೆ. ನಮ್ಮ ಘನತೆಗೆ ಅದು ಕುತ್ತು ಎಂದು ತಿಳಿದ ಕಾರಣದಿಂದ ಇಂಥ ಆಲೋಚನೆಗಳು ಮೂಡುತ್ತಿವೆ.

ಮಕ್ಕಳ ಬೆಳವಣಿಗೆಯ ವಿಷಯದಲ್ಲಿ ಯಾರೊಂದಿಗೂ ಚರ್ಚಿಸದೆ ಇರುವುದು, ಯಾರ ಮಾತನ್ನೂ ಕೇಳದೆ ಇರುವುದು ಪೋಷಕರಲ್ಲಿನ ಅಹಂ ಅನ್ನು ತೃಪ್ತಿಪಡಿಸಲು. ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಪೋಷಕರು ಅಹಂ ಬಿಟ್ಟು, ಮುನ್ನಡೆಯಬೇಕಿದೆ. ❖

ಹಗುರವಾದ ಆ್ಯಪಲ್ ಐಪ್ಯಾಡ್ ಪ್ರೊ

ತೆಳು ಮತ್ತು ಹಗುರವಾದ ವಿನ್ಯಾಸವಿರುವ ವಿನೂತನ ಐಪ್ಯಾಡ್ ಪ್ರೊ ಹಾಗೂ ಇತರ ಕೆಲವು ಸಾಧನಗಳನ್ನು ಆ್ಯಪಲ್ ಈಚೆಗೆ ಅನಾವರಣಗೊಳಿಸಿದೆ.

ಸಿಲ್ವರ್ ಮತ್ತು ಸ್ಪೇಸ್ ಬ್ಲ್ಯಾಕ್ ಬಣ್ಣಗಳಲ್ಲಿ ಲಭ್ಯವಿರುವ ವಿನೂತನ ಐಪ್ಯಾಡ್ ಪ್ರೊ 13 ಇಂಚು ಮತ್ತು 11 ಇಂಚು ಮಾದರಿಗಳಲ್ಲಿ ಲಭ್ಯವಾಗಲಿದೆ. ಜಗತ್ತಿನ ಅತ್ಯಾಧುನಿಕವಾದ ಅಲ್ಟ್ರಾ ರೆಟಿನಾ ಎಕ್ಸ್‌ಡಿಆರ್ ಡಿಸ್‌ಪ್ಲೇ (Ultra Retina XDR) ಯನ್ನು ಈ ಐಪ್ಯಾಡ್‌ಗಳು ಹೊಂದಿರುತ್ತವೆ.

ಹೊಸ ಐಪ್ಯಾಡ್‌ನ ಕಾರ್ಯಾಚರಣೆಯ ಸಾಮರ್ಥ್ಯವನ್ನು ಉನ್ನತ ಮಟ್ಟಕ್ಕೇರಿಸುವ ಹೊಚ್ಚ ಹೊಸ ಎಂ4 ಚಿಪ್‌ನೊಂದಿಗೆ ಹೊಸ ಐಪ್ಯಾಡ್ ಪ್ರೊ ಶಕ್ತಿಶಾಲಿ ಸಾಧನವಾಗಿರುತ್ತದೆ ಎಂದು ಆ್ಯಪಲ್ ಹೇಳಿದೆ.

ವರ್ಚುವಲ್ ಕಾರ್ಯಕ್ರಮದಲ್ಲಿ ಹೊಸ ಐಪ್ಯಾಡ್ ಪ್ರೊ, ಎಂ4 ಚಿಪ್ ಜೊತೆಗೆ, ಆ್ಯಪಲ್ ಪೆನ್ಸಿಲ್ ಪ್ರೊ, ತೆಳುವಾದ ಮತ್ತು ಹಗುರವಾದ ಮ್ಯಾಜಿಕ್ ಕೀಬೋರ್ಡ್ ಸಾಧನಗಳನ್ನೂ ಪರಿಚಯಿಸಲಾಗಿದ್ದು, ಇವುಗಳು ಮೇ 15ರಿಂದ ಮಾರುಕಟ್ಟೆಯಲ್ಲಿ ಲಭ್ಯ ಇರುತ್ತವೆ. ಮುಂಗಡ ಕಾಯ್ದಿರಿಸುವಿಕೆ ಈಗಾಗಲೇ ಆರಂಭವಾಗಿದೆ.

ಹೊಸ ಐಪ್ಯಾಡ್ ಪ್ರೊ ಇದುವರೆಗಿನ ಅತ್ಯಂತ ತೆಳುವಾದ ಆ್ಯಪಲ್ ಉತ್ಪನ್ನವಾಗಿದ್ದು, 11 ಇಂಚಿನ ಮಾದರಿಯು ಕೇವಲ 5.3 ಮಿ.ಮೀ. ಹಾಗೂ 13 ಇಂಚು ಮಾದರಿಯು ಕೇವಲ 5.1 ಮಿ.ಮೀ. ತೆಳು ಇದೆ. ಒಂದು ಪೌಂಡ್‌ಗಿಂತಲೂ (ಸುಮಾರು 450 ಗ್ರಾಂ) ಕಡಿಮೆ ತೂಕ ಹೊಂದಿದೆ.



ಅಲ್ಟ್ರಾ ರೆಟಿನಾ ಎಕ್ಸ್‌ಡಿಆರ್ ಡಿಸ್‌ಪ್ಲೇ, ಎಂ4 ಚಿಪ್, ವಿನೂತನ ಕೃತಕ ಬುದ್ಧಿಮತ್ತೆ (ಎಐ) ಸಾಮರ್ಥ್ಯ, ಆ್ಯಪಲ್ ಪೆನ್ಸಿಲ್ ಪ್ರೊ ಹಾಗೂ ಮ್ಯಾಜಿಕ್ ಕೀಬೋರ್ಡ್‌ಗಳೊಂದಿಗೆ, ಹೊಸ ಐಪ್ಯಾಡ್ ಪ್ರೊಗೆ ಸರಿಸಾಟಿ ಯಾವುದೂ ಇಲ್ಲ ಎಂದು ಆ್ಯಪಲ್‌ನ ಹಿರಿಯ ಉಪಾಧ್ಯಕ್ಷ ಜಾನ್ ಟ್ರೆಮಸ್ ಹೇಳಿದ್ದಾರೆ.

ಈಗ ಹೊಸದಾಗಿ ಬರುತ್ತಿರುವ ಎಲ್ಲ ಸಾಧನಗಳೂ ಎಐ ಅಪ್ಪಿಕೊಂಡಿರುವುದರಿಂದ, ಹೊಸ ಐಪ್ಯಾಡ್ ಪ್ರೊದಲ್ಲಿ ಕೂಡ ಕೃತಕ ಬುದ್ಧಿಮತ್ತೆಯ ವೈಶಿಷ್ಟ್ಯಗಳನ್ನು ಅಳವಡಿಸಲಾಗಿದ್ದು, ಇದಕ್ಕೆ ಪೂರಕವಾಗಿ ಐಪ್ಯಾಡ್ ಒಎಸ್ 17 ಅನ್ನೂ ಅಭಿವೃದ್ಧಿಪಡಿಸಲಾಗಿದೆ ಎಂದು ಆ್ಯಪಲ್ ತಿಳಿಸಿದೆ.

ಇದೇ ಸಂದರ್ಭದಲ್ಲಿ ಶಕ್ತಿಶಾಲಿ ಐಪ್ಯಾಡ್ ಒಎಸ್ 17ರ ವೈಶಿಷ್ಟ್ಯಗಳನ್ನೂ ವಿವರಿಸಲಾಯಿತು. ಇದಲ್ಲದೆ, ಲಾಜಿಕ್ ಪ್ರೊ ಎಂಬ ಸ್ಟುಡಿಯೋ ಅಸಿಸ್ಟೆಂಟ್ ವೈಶಿಷ್ಟ್ಯಗಳಿರುವ ಆಡಿಯೊ ಕಿರು ತಂತ್ರಾಂಶವನ್ನು ಘೋಷಿಸಲಾಯಿತು. ಜೊತೆಗೆ, ಫೈನಲ್ ಕಟ್ ಪ್ರೊ, ಲೈವ್ ಮಲ್ಟಿಕ್ಯಾಮ್ ವೈಶಿಷ್ಟ್ಯ ಸಹಿತವಾದ ವಿಡಿಯೊ ಪ್ರೊಡಕ್ಷನ್ ಕಿರು ತಂತ್ರಾಂಶವನ್ನೂ ಘೋಷಿಸಲಾಯಿತು.

ಐಪ್ಯಾಡ್ ಪ್ರೊ ಅನ್ನು ಆ್ಯಪಲ್ ಆನ್‌ಲೈನ್ ಸ್ಟೋರ್‌ನಲ್ಲಿ ಆರ್ಡರ್ ಮಾಡಬಹುದಾಗಿದ್ದು, ಮೇ 15ರಿಂದ ಆಫ್‌ಲೈನ್ ಸ್ಟೋರ್‌ಗಳಲ್ಲಿ ಲಭ್ಯ ಇರುತ್ತವೆ. 11 ಹಾಗೂ 13 ಇಂಚು ಡಿಸ್‌ಪ್ಲೇ ಇರುವ ಸಾಧನಗಳು 256ಜಿಬಿ, 512 ಜಿಬಿ, 1 ಟಿಬಿ ಹಾಗೂ 2 ಟಿಬಿ ಮಾದರಿಗಳಲ್ಲಿ ಲಭ್ಯ ಇರುತ್ತವೆ.

ಬೆಲೆ :11 ಇಂಚಿನ ವೈಫೈ ಮಾದರಿ ಐಪ್ಯಾಡ್ ಪ್ರೊ ಬೆಲೆ ₹99,900ರಿಂದ ಮತ್ತು ವೈಫೈ + ಸೆಲ್ಯುಲಾರ್ ಮಾದರಿಯ ಬೆಲೆ ₹1,19,900ರಿಂದ ಆರಂಭವಾಗುತ್ತದೆ. 13 ಇಂಚಿನ ವೈಫೈ ಮಾದರಿ ₹1,29,900ರಿಂದ ಮತ್ತು ವೈಫೈ + ಸೆಲ್ಯುಲಾರ್ ಮಾದರಿ ₹1,49,900ರಿಂದ ಆರಂಭವಾಗುತ್ತದೆ.

ಹೊಸ ಆ್ಯಪಲ್ ಪೆನ್ಸಿಲ್ ಪ್ರೊ ಬೆಲೆ ₹11,900, ಆ್ಯಪಲ್ ಪೆನ್ಸಿಲ್ (ಯುಎಸ್‌ಬಿ-ಸಿ) ಬೆಲೆ ₹7,900, ಮ್ಯಾಜಿಕ್ ಕೀಬೋರ್ಡ್ ಬೆಲೆ ₹29,900ರಿಂದ ಆರಂಭವಾಗುತ್ತದೆ. ಆ್ಯಪಲ್ ಲಾಜಿಕ್ ಪ್ರೊ ಕಿರು ತಂತ್ರಾಂಶವು ಹಾಲಿ ಬಳಕೆದಾರರಿಗೆ ಮೇ 13ರಿಂದ ಉಚಿತ ಅಪ್‌ಗ್ರೇಡ್ ಆಗಿ ದೊರೆಯಲಿದೆ. ಅದೇ ರೀತಿ, ಫೈನಲ್ ಕಟ್ ಪ್ರೊ ವಿಡಿಯೊ ಎಡಿಟಿಂಗ್ ಕಿರು ತಂತ್ರಾಂಶಕ್ಕೂ ಮಾಸಿಕ/ವಾರ್ಷಿಕ ಬಳಕೆ ಶುಲ್ಕ ಇರುತ್ತದೆ. ❖

ಅಮಿತ ನೆನಪುಗಳ ಕೌದಿ

ಕೌದಿ,ಇದನ್ನ ಹೊಲಿಯುತ್ತಿರುವ ಈ ಗಳಿಗೆ ನನ್ನ ಅಜ್ಜಿ ನೆನಪಾಗ್ತಾ ಇದ್ದಾರೆ. ಅವರು ಶಿರಸಿಯ ಪರಿಚಿತ ಟೈಲರ್ ಅಂಗಡಿಯಿಂದ ಚೂರು ಚಿಂದಿ ಬಟ್ಟೆ ತಗೊಂಡು ಬಂದು ಅವನ್ನು ಅಳತೆ ಬಣ್ಣಗಳ ಅನುಗುಣವಾಗಿ ಜೋಡಿಸಿ ಪುಟ್ಟ ಪೊಟ್ಲಿ ಮಾಡಿ ತಮ್ಮ ಎಲೆ ಅಡಿಕೆ ಸಂಚಿಯಲ್ಲಿ ಇಟ್ಟುಕೊಳ್ಳುತ್ತಿದ್ದರು ಪುರುಸೊತ್ತಾದಾಗೆಲ್ಲ ಪುಟ್ಟ ಪುಟ್ಟ ಪಟ್ಟಿ ಹೊಲಿದು ಇಡುತ್ತಿದ್ದರು. ಆ ಬಟ್ಟೆಯ ಗಂಟಿಗೆ ಎಲೆ ಅಡಿಕೆ ಹೊಗೆಸೊಪ್ಪು ಸುಣ್ಣ ಬೆರೆತ ನವಿರಾದ ಕವಳದ ಘಮ.

ಹಾಗೇ ಒಮ್ಮೆ ನಾನು ಅಜ್ಜಿ ಹತ್ತಿರದ ಕುಸೂರು ಎಂಬ ಹಳ್ಳಿಗೆ ಹೋಗಿದ್ದೆವು ಅಲ್ಲಿ ವಿನೋಬಾ ಭಾವೆ ಅವರ ಅನುಯಾಯಿ ಕರ್ಮಯೋಗಿಯಂತೆ ಬದುಕುತ್ತಿದ್ದ ರಮಾನಂದ್ ಮಾಮನ ಮನೆಯಲ್ಲಿ ದಿನಪೂರ್ತಿ ಇದ್ದು ಸಂಜೆ ವಾಪಸ್ ಬರುವಾಗ ಕೊಟ್ಟ ಅವರ ತೋಟದ ಪೇರಲೆ ಹಣ್ಣುಗಳನ್ನು ಅಜ್ಜಿ ಉಡಿಯಲ್ಲಿ ಕಟ್ಟಿ ಕೊಂಡಿದ್ದರು.

ವಾಪಸ್ ಮುಂಡಗೋಡ ಬರಲು ಬಸ್ ಸಿಗಲೇ ಇಲ್ಲ. ಕತ್ತಲಾಗುತ್ತಿತ್ತು ನನಗೊಂಚೂರು ಭಯವೂ ಶುರು ಆಯಿತು. ಆಗ ಯಾವುದೋ ಒಂದು ಇಟ್ಟಿಗೆ ಸಾಗಿಸುತ್ತಿದ್ದ ಲಾರಿಯವ ನಿಲ್ಲಿಸಿ 'ಬರ್ರಿ ಅವ್ವಾರ' ಎಂದು ಹತ್ತಿಸಿಕೊಂಡಿದ್ದ.

ಅಜ್ಜಿಯ ಮಡಿಲಲ್ಲಿ ಮುಖ ಮುಚ್ಚಿಕೊಂಡು, ಮಲಗಿದಂತೆ ನಟಿಸುತ್ತಿದ್ದೆ. ಆಗ ಅಜ್ಜಿಯ ಸೀರೆಯಿಂದ ಹೊಮ್ಮುತ್ತಿದ್ದ ಆ ಪೇರಲೆ ಹಣ್ಣಿನ ಘಮ ಮತ್ತು ತಿಳಿಯಾಗಿ ಹರಡಿಕೊಂಡ ಪೆಟ್ರೋಲ್ ವಾಸನೆ ಮಾತ್ರ ನನ್ನ ಜೊತೆ ಮಾತಿಗಿಳಿದಿದ್ದವು.

ಕೆಲ ವರ್ಷಗಳ ನಂತರ ಅಜ್ಜಿಯ ಆ ಸೀರೆ ಹಳೆಯದಾಯಿತು, ಗೊದಡಿಯ ಹಿಂಬದಿಗೆ ಆಯವಾಯಿತು. ಆ ಕೌದಿಯನ್ನು ನೋಡಿದಾಗ ಹೊದ್ದುಕೊಂಡಾಗ, ಮೂಸಿದಾಗ ನನಗೆ ಪೇರಳೆಹಣ್ಣಿನ ಘಮ ಮತ್ತು ಇಟ್ಟಿಗೆಯ ಲಾರಿಯಲ್ಲಿ ಪಸರಿಸಿದ್ದ ಪೆಟ್ರೋಲ್ ವಾಸನೆಯೇ ಬರುತ್ತಿತ್ತು.

ನಾ ಹೊಂದಿಸಿದ ಈ ಬಟ್ಟೆಯ ಚೌಕಗಳು ಅವನ್ನು ಜೋಡಿಸಿದ ಸಾವಿರಾರು ಹೊಲಿಗೆಗಳು ಈ ಪುಟ್ಟ ಕೌದಿಯಾಗಿ ರೂಪುಗೊಳ್ಳುತ್ತ ಏನೇನೆಲ್ಲ ನೆನಪಾಯಿತು. ಎಷ್ಟೆಲ್ಲ ನೆನಪ ಮಾಡಿತು.

ಕಳೆದ ಬೇಸಿಗೆಯ ರಜೆಯಲ್ಲಿ ಮಗಳನ್ನು ಬ್ಯುಸಿ ಇಡಲು ನಾನು ಆಯ್ದು ಕೊಂಡಿದ್ದು ಅಜ್ಜಿ ಮಾಡುತ್ತಿದ್ದ ಇದೇ ಕೌದಿಯನ್ನ. ನನ್ನ ಅಕ್ಕನಂತಿರುವ ಸ್ನೇಹಿತೆ, ಅನು ಪಾವಂಜೆ ಅವರ ವಿವಿಧ ರೀತಿಯ ಕೌದಿಯ ಪೋಸ್ಟ್ ಗಳನ್ನು ನೋಡಿ ನನಗೆ ಅಜ್ಜಿ ಆಕೆಯ ಸಂಚಿ, ಬಣ್ಣ ಬಣ್ಣದ ಬಟ್ಟೆ, ಅವನ್ನು ಹರಿದು ಹಂಚಿ ಹೊಂದಿಸಿ,ಬೇರೆ ಬೇರೆ ಆದ ಆ ಬಟ್ಟೆಯ ತುಂಡುಗಳನ್ನು ಕೌದಿಯ ಚೌಕಟ್ಟಿನಲ್ಲಿ ಹೊಂದಿಸುವುದು ಅದು ಪೂರ್ತಿಯಾದಾಗ ಸಿಗುವ ಆತ್ಮ ತೃಪ್ತಿಯನ್ನು ಅನುಭವಿಸುವ ಉತ್ಕಟತೆ.

ಮಗಳೊಂದಿಗೆ, ಕುಳಿತು ಒಂದಷ್ಟು ಬಳಸದ ಬಟ್ಟೆಗಳನ್ನ ಚೌಕ ಆಯತದ ಆಕಾರದಲ್ಲಿ ಕತ್ತರಿಸಿ, ಅವನ್ನು ಜೋಡಿಸಿ ಇಟ್ಟು. ಎರಡು ಕೌದಿ ತಯಾರಿಸುವ ಪ್ಲಾನ್ ಮಾಡಿ, ಇಬ್ಬರೂ ಒಟ್ಟಿಗೆ ಶುರು ಮಾಡಿದೆವು.

ಆಕೆಯದು ಇಟ್ಟಿಗೆ ಜೋಡಿಸಿದಂತೆ, ಚದುರಂಗದ



ಮಣೆಯಂತೆ. ನನ್ನದು ಹಚ್ಚಿದ ಕೌದಿ ಒಂದು ಚೌಕದಲ್ಲಿ ಎಲ್ಲ ಬಣ್ಣದ ಬಟ್ಟೆಗಳನ್ನ ಎಲ್ಲೂ ಜಾಗ ಬಿಡದಂತೆ ತುಂಬುವುದು.

ಕೌದಿಯಲಿ ಬಳಸುವ ಪ್ರತಿ ಬಟ್ಟೆ ಚೂರಿಗೂ ಒಂದು ಕಥೆ ಇದೆ. ಎಂದೋ ಖುಷಿಯಲ್ಲಿ ಧರಿಸಿದ ಬಟ್ಟೆಯ ಚೌಕ, ದುಃಖದಲ್ಲಿ ಹಾಕಿದ್ದು, ಯಾರದೋ ಮದುವೆಗೆ ಹೊಲಿಸಿದ್ದು, ಬಾಣಂತನಕ್ಕೆ ಹಾಕಿಕೊಂಡ ನೈಟಿ, ಕೂಸು ಹುಟ್ಟಿದಾಗ ಬಳಸಿದ ಬಿಳಿ ಚೌಕಗಳು. ಅಮ್ಮ ಅತ್ತೆ ಅಜ್ಜಿಯರ ಸೀರೆ, ನಾದಿನಿ ಅಂದೇನೋ ಬಿಟ್ಟುಹೋದ ಹಳೆಯ ಶಾಲು ಮಕ್ಕಳ ಬಟ್ಟೆ, ಆ ಬಟ್ಟೆ ಹಾಕಿದಾಗ ಜರುಗಿದ ಘಟನೆಗಳು ಎಲ್ಲವೂ ಆ ಕೌದಿ ಚೌಕಟ್ಟಿನಲ್ಲಿ ಸುರಕ್ಷಿತ. ಮಗಳಿಗೂ ಈ ಆಟ ಖುಷಿ ಕೊಟ್ಟಿತ್ತು, ಇಬ್ಬರೂ ಒಟ್ಟಿಗೆ ಕೂತು ಆಗೀಗ ಈ ಕೌದಿಯೆಂಬ ಖುಷಿಗೆ ತೆರೆದುಕೊಂಡಿದ್ದು ಒಂದು ಅನನ್ಯ ಅನುಭವ.

ಕೌದಿ ಮಾಡುವಷ್ಟು ಹೊತ್ತು ಎರಡೂ ಕೈ ಮತ್ತು ಮನಸ್ಸೂ ಬ್ಯುಸಿ ಇರುವುದರಿಂದ ಸುಖಾ ಸುಮ್ಮನೆ ಫೋನ್ ಸ್ಕ್ರಾಲ್ ಮಾಡೋದು ನಿಂತು ಹೋಗುತ್ತದೆ. ಈ ನಿಟ್ಟಿನಲ್ಲಿ ಕೂಡ ಕೌದಿ ನಮ್ಮನ್ನು ಬೆಚ್ಚಗೆ ಕಾಯುತ್ತದೆ.

ಒಮ್ಮೆಲೇ ಮಾಡಿ ಮುಗಿಸಬೇಕು ಎನ್ನುವ ಒತ್ತಡವೂ ಇಲ್ಲದ ಕಾರಣ ಮನಸು ಮತ್ತೆ ಮತ್ತೆ ಬೇಕೆನಿಸಿದಾಗ ಈ ಬಣ್ಣದ ಬಟ್ಟೆ ಚೂರು ಮತ್ತು ಸೂಜಿ ದಾರಗಳ ಮಾಯೆಗೆ ಮರಳುತ್ತದೆ. ಇದೊಂದು ರೀತಿಯ ತವರು ಮನೆ ಮೋಹದಂತೆ.

ಈಗ ಹೇಳಿ, ನೀವೂ ಯಾಕೆ ಒಮ್ಮೆ ಕೌದಿ ಮಾಡಲು ಪ್ರಯತ್ನ ಪಡಬಾರದು?

ಅಮಿತಾ ರವಿಕಿರಣ್, ಬೆಲ್‌ಫಾಸ್ಟ್ ಯುಕೆ

ಕಾನ್ ಉತ್ಸವ ಚೆಲುವೆಯ ಚರಿಸ್ಮಾ


ಐಶ್ವರ್ಯಾ ರೈ

77ನೆಯ ಕಾನ್ ಉತ್ಸವಕ್ಕೆ ತೆರೆ ಬಿದ್ದಿದ್ದರೂ ನಟಿ ಐಶ್ವರ್ಯ ರೈ ಅವರ ಔಟ್ ಫಿಟ್ ಬಗೆಗಿನ ಟೀಕೆಗಳು ಮುಂದುವರಿಯುತ್ತಲೇ ಇವೆ. ರಜತ ಮತ್ತು ನೀಲಿ ವರ್ಣಸಂಯೋಜನೆಯ ಅವರ ಗೌನು ಈ ಸಲ ಅಭಿಮಾನಿಗಳ ಮೆಚ್ಚುಗೆ ಪಡೆಯಲಿಲ್ಲ. ಪ್ರತಿಸಲವೂ ವಿಶೇಷ ಗೌನುಗಳಿಂದ ಗಮನಸೆಳೆಯುತ್ತಿದ್ದರು. ಐಶ್ವರ್ಯ ರೈ ಬಚ್ಚನ್, ಈ ಸಲ ಮಣಿಕಟ್ಟಿನ ಮೂಳೆ ಮುರಿದಿದ್ದರೂ ತಮ್ಮ ಬದ್ಧತೆಯನ್ನು ಪ್ರದರ್ಶಿಸುವಂತೆ ಪ್ಲಾಸ್ಟರ್‌ನೊಂದಿಗೆ ಕಪ್ಪು ಮತ್ತು ಬೆಳ್ಳಿ ಬಣ್ಣದ ಗೌನುಗಳಲ್ಲಿ ಮಿಂಚಿದರು. ಎಂದಿನಂತೆ ಅವರ ವಿನ್ಯಾಸಕ ಸ್ನೇಹಿತರು ಶಾನೆ ಮತ್ತು ಫಾಲ್ಗುಣಿ ಪಿಕಾಕ್ ವಿನ್ಯಾಸದ ಈ ಗೌನುಗಳು ಐಶ್ವರ್ಯ ರೈ ಅಭಿಮಾನಿಗಳ ಟೀಕೆ ಎದುರಿಸುವಂತಾಯಿತು. ಎಕ್ಸ್ ವೇದಿಕೆಯಲ್ಲಿ ಐಶ್ವರ್ಯ ರೈ ಅವರಿಗೆ ಸ್ಟ್ರಾಗಳೇ ಬೇಕಿದ್ದವೇ? ಲಾರಿಗೆ ತೂಗಿಹಾಕುವ ಅಲಂಕಾರಿಕ ವಸ್ತುಗಳಿಂದ ಉಡುಗೆ ಮಾಡಿಸಿದರೆ ಎಂಬಂಥ ಕಟುವಾದ ಟೀಕೆಗಳನ್ನು ಎದುರಿಸಬೇಕಾಯಿತು. ಕಾನ್‌ನಿಂದ ಮರಳಿದ ಐಶ್ವರ್ಯ ರೈ ಮಾತ್ರ, ಈ ಉಡುಗೆಗಳು ಚಮತ್ಕಾರಿಕವಾಗಿದ್ದವು. ಅವುಗಳನ್ನು ಧರಿಸಿದ ಕ್ಷಣಗಳನ್ನು 'ಮ್ಯಾಜಿಕಲ್' ಎಂದೂ ಉತ್ತರಿಸಿ, ತಮ್ಮ ವಿನ್ಯಾಸಕರ ಬೆಂಬಲಕ್ಕೆ ನಿಂತಿದ್ದಾರೆ. ❖

ಹೃನ್ಮನ ಸೆಳೆದಳಾ ಹಂಸ ಗಮನೆ...

ಮೂವತ್ತು ಕೆಜಿ ಭಾರದ ಘಾಗ್ರಾ, ಮೈಗಪ್ಪುವ ಮಲ್‌ಮಲ್ ಚೋಲಿ, ಗೊಂಡೆ ಇರುವ ನೀಳ ಕೃಷ್ಣವೇಣಿಯನ್ನು ಅಲುಗಾಡಿಸುತ್ತ ಅದಿತಿರಾವ್ ಹೈದರಿ ನಡೆಯುತ್ತಿದ್ದರೆ... 'ಹೀರಾಮಂಡಿ'ಯ ಸೌಂದರ್ಯವೇ ಮೈವೆತ್ತಂತೆ!

ಸಂಜಯ್ ಲೀಲಾ ಬನ್ಸಾಲಿ ಅವರ ಬಹುನಿರೀಕ್ಷಿತ ವೆಬ್‌ಸಿರೀಸ್ ಹೀರಾಮಂಡಿ ಬಿಡುಗಡೆಯಾಗಿ ಮೂರು ವಾರಗಳೇ ಕಳೆದಿವೆ. ವೆಬ್ ಸಿರೀಸ್ ಕತ್ತಲೆಯಲ್ಲಿಯೇ ಮಾಡಿದಂತಿದೆ, ಪಂಜಾಬಿ ಬಳಸುವ ಕಾಲದಲ್ಲಿ ಉರ್ದು ನ್ಯೂಸ್ ಪೇಪರ್ ಓದುವುದನ್ನು ತೋರಿಸಲಾಗಿದೆ, ನಿಜವಾದ ಹೀರಾಮಂಡಿಯಲ್ಲಿ ಕಲಾವಿದೆಯರು ತೀರ ಬಡತನದಲ್ಲಿ ಬದುಕುತ್ತಿದ್ದರು. ಇಲ್ಲಿ ತೋರಿದಂತೆ ಬಲಶಾಲಿಗಳಾಗಿ, ಅಧಿಕಾರ ಶಾಹಿಗಳಾಗಿ ಇರಲಿಲ್ಲ, ನಿಜವಾದ ಹೀರಮಾಂಡಿಯ ಹವೇಲಿಗಳು ಹೀಗಿರಲಿಲ್ಲ ಎಂದೆಲ್ಲ ಹತ್ತಾರು ದೋಷಗಳನ್ನು ಎತ್ತಿ ಹಿಡಿಯುತ್ತಿರುವ ಟೀಕಾಕಾರರು ಒಂದೆಡೆ ಬಿಡುವಿಲ್ಲದಂತೆ ಬರೆಯುತ್ತಿದ್ದಾರೆ. ಇನ್ನೊಂದೆಡೆ ಅಷ್ಟೇ ಪ್ರಮಾಣದ ಮೆಚ್ಚುಗೆಯೂ ಹರಿದು ಬಂದಿದೆ.

ಹೊಗಳುವವರು, ಟೀಕಾಕಾರರು, ವ್ಯಂಗ್ಯ ಆಡುವವರು ಎಲ್ಲರೂ ಬಾಯ್ತೆರೆದು, ಬೆಕ್ಕಸಬೆರಗಾಗಿ ನೋಡುತ್ತಲೇ ಮೌನದ ಮೊರೆಹೋಗುವ ಕ್ಷಣವೆಂದರೆ 'ಸ್ವಾನ್‌ವಾಕ್' ಎಂಬ ಹಂಸನಡಿಗೆಯ ನೃತ್ಯ. ನೀಳಕಾಯದ ಚೆಲುವೆ ಅದಿತಿ ರಾವ್ ಹೈದರಿ ಗೆಜ್ಜೆಯ ನಾದ ಹರಡಿಸುತ್ತ, ಕಗ್ಗತ್ತಲೆಯ ರಾತ್ರಿಯ ಮಿಂಚು ನಡೆದಂತೆ ನಡೆಯುತ್ತಿದ್ದರೆ ಹೃದಯದ ಮಿಡಿತಗಳು ಬಡಿತಗಳಾಗಿ ಬದಲಾಗುತ್ತವೆ. ಈ ಶಾಟ್‌ಗಾಗಿ ಹದಿನೆಂಟು ಸಲ ರಿಟೇಕ್ ಆಯಿತು ಎಂದು ಕಪಿಲ್ ಶರ್ಮಾ ಶೋನಲ್ಲಿ ಹೇಳಿದ ಅದಿತಿ, ಸಂಜಯ್ ಲೀಲಾ ಬನ್ಸಾಲಿ ಅವರ ಪರ್ಫೆಕ್ಷನ್ ಕುರಿತೂ ಹೇಳಿದರು.

ಒಮ್ಮೆ ಜಡೆ ಸರಿಯಾಗಲಿ ಅಲುಗಾಡಲಿಲ್ಲವೆಂದು, ಇನ್ನೊಮ್ಮೆ ಕತ್ತು ಸರಿಯಾದ ಕೋನದಲ್ಲಿ ಬಾಗಲಿಲ್ಲವೆಂದು, ನೋಡಿದ ದೃಷ್ಟಿ ಸರಿಇರಲಿಲ್ಲ, ಮಾದಕವಾಗಿರಕೂಡದು, ಮುಗ್ಧ, ಸ್ನಿಗ್ಧ ಸೌಂದರ್ಯದಲ್ಲಿ ನವಿರಾದ ಬೇಡಿಕೆ ಇರಬೇಕು ಎಂದು ಕೇಳುತ್ತಿದ್ದರು.. ಅರ್ಥೈಸಿಕೊಳ್ಳುವುದರಲ್ಲಿ, ಅದರಲ್ಲಿಯ ನಾಜೂಕು (ನಜಾಕತ್) ತನ ನಮ್ಮ ಮೈಮರೆಯಿಸುತ್ತಿತ್ತು ಎಂದೂ ನೆನಪಿಸಿಕೊಂಡಿದ್ದಾರೆ.

ಈ ಸ್ವಾನ್ ವಾಕ್ ಕುರಿತು ಇನ್‌ಸ್ಟಾಗ್ರಾಂನಲ್ಲಿ ಸಾಕಷ್ಟು ರೀಲ್‌ಗಳು, ಮೀಮ್‌ಗಳೂ ಜನಪ್ರಿಯವಾಗುತ್ತಿವೆ.❖


ಅದಿತಿರಾವ್ ಹೈದರಿ

'ಮಿಸ್ಟರ್ ಅಂಡ್ ಮಿಸಸ್ ಮಹಿ' ತೆರೆಗೆ


ಜಾಹ್ನವಿ ಕಪೂರ್


ನಟ ರಾಜ್‌ಕುಮಾರ್ ರಾವ್ ಹಾಗೂ ನಟಿ ಜಾಹ್ನವಿ ಕಪೂರ್ ಅಭಿನಯದ 'ಮಿಸ್ಟರ್ ಅಂಡ್ ಮಿಸಸ್ ಮಹಿ' ಚಿತ್ರವು ಇದೇ ಮೇ 31ರಂದು ಬಿಡುಗಡೆಯಾಗಲಿದೆ ಎಂದು ಚಿತ್ರತಂಡ ತಿಳಿಸಿದೆ.

'ಎಕ್ಸ್'ನಲ್ಲಿ 'ಮಿಸ್ಟರ್ ಅಂಡ್ ಮಿಸಸ್ ಮಹಿ' ಚಿತ್ರದ ಟ್ರೇಲರ್ ಹಂಚಿಕೊಂಡಿರುವ ಧರ್ಮಾ ಪ್ರೊಡಕ್ಷನ್ಸ್, 'ತಮ್ಮ ಕನಸುಗಳನ್ನು ಸಾಕಾರಗೊಳಿಸಿಕೊಳ್ಳಲು ಎದುರಾಗುವ ಎಲ್ಲ ಆತಂಕಗಳನ್ನು ಮೆಟ್ಟಿ ನಿಲ್ಲುವತ್ತ ಈ ಕಥೆ ಬೆಳಕು ಚೆಲ್ಲಲಿದೆ' ಎಂದು ಬರೆದುಕೊಂಡಿದೆ.

ಗುಂಜನ್ ಸಕ್ಸೇನಾ ಸಿನಿಮಾ ಖ್ಯಾತಿಯ ಶರಣ್ ಶರ್ಮಾ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಈ ಚಿತ್ರವು ಕ್ರಿಕೆಟ್ ಕ್ಷೇತ್ರದ ಕಥಾಹಂದರ ಹೊಂದಿದೆ.

'ರೂಹಿ ಅಫ್ಜಾ' ಸಿನಿಮಾದ ಬಳಿಕ ಇದೀಗ ರಾಜ್‌ಕುಮಾರ್ ಮತ್ತು ಜಾಹ್ನವಿ ಕಪೂರ್ ಎರಡನೇ ಬಾರಿ ತೆರೆ ಮೇಲೆ ಕಾಣಿಸಿಕೊಳ್ಳಲಿದ್ದಾರೆ.

ಈ ಚಿತ್ರವನ್ನು ಕರಣ್ ಜೋಹರ್, ಜೀ ಸ್ಟುಡಿಯೋಸ್, ಹಿರೂ ಯಶ್ ಜೋಹರ್ ಮತ್ತು ಅಪೂರ್ವ ಮೆಹ್ತಾ ನಿರ್ಮಿಸಿದ್ದಾರೆ. ❖


ಅಕ್ಷಯ್ ಕುಮಾರ್

ಇದೇ ಮೊದಲ ಬಾರಿಗೆ ತಮ್ಮ ಮಗನ ಬಗ್ಗೆ ಬಹಿರಂಗವಾಗಿ ಮಾತನಾಡಿರುವ ಬಾಲಿವುಡ್ ನಟ ಅಕ್ಷಯ್ ಕುಮಾರ್, ಮಗ ಆರವ್ ಸರಳತೆಯನ್ನು ಕೊಂಡಾಡಿದ್ದಾರೆ.

ಮಗನ ಸರಳತೆ ಕೊಂಡಾಡಿದ ಅಕ್ಷಯ್

ಜಿಯೊ ಸಿನಿಮಾದಲ್ಲಿ ಪ್ರಸಾರವಾಗುತ್ತಿರುವ ಕ್ರಿಕೆಟಿಗ ಶಿಖರ್ ಧವನ್ ಅವರ 'ಧವನ್ ಕರೆಂಗೆ' ಟಾಕ್ ಶೋದಲ್ಲಿ ಮಾತನಾಡಿರುವ ಅಕ್ಷಯ್, ಕೌಟುಂಬಿಕ ಜೀವನದ ಬಗ್ಗೆ ಮನಬಿಚ್ಚಿ ಮಾತನಾಡಿದ್ದಾರೆ.

'ಲಂಡನ್ ವಿಶ್ವವಿದ್ಯಾಲಯದಲ್ಲಿ ನನ್ನ ಮಗ ಆರವ್ ವ್ಯಾಸಂಗ ಮಾಡುತ್ತಿದ್ದಾನೆ. ವಿದ್ಯಾಭ್ಯಾಸಕ್ಕಾಗಿ ಆತ ತನ್ನ 15ನೇ ವಯಸ್ಸಿನಲ್ಲಿಯೇ ಮನೆ ತೊರೆದಿದ್ದನು. ಏಕಾಂಗಿಯಾಗಿರಲು ಇಷ್ಟಪಡುತ್ತಿದ್ದ ಆರವ್‌ಗೆ ಓದಿನಲ್ಲಿ ಅಪಾರ ಆಸಕ್ತಿಯಿತ್ತು. ನಿಜ ಹೇಳಬೇಕೆಂದರೆ ಆರವ್ ಲಂಡನ್‌ಗೆ ಹೋಗುವುದು ನನಗೆ ಇಷ್ಟವಿರಲಿಲ್ಲ. ಆದರೆ ಆತನ ಆಸಕ್ತಿಗೆ ಅಡ್ಡಿಪಡಿಸುವುದಕ್ಕೂ ಇಷ್ಟವಿರಲಿಲ್ಲ. ನಾನೂ ಕೂಡ 14ನೇ ವಯಸ್ಸಿಗೆ ಮನೆ ತೊರೆದಿದ್ದರಿಂದ ಅವನನ್ನು ತಡೆಯಲು ನನಗೆ ಸಾಧ್ಯವಾಗಿರಲಿಲ್ಲ' ಎಂದರು.

'ಆರವ್ ಎಷ್ಟು ಸರಳ ಜೀವನ ನಡೆಸುತ್ತಾನೆಂದರೆ, ತನ್ನ ಬಟ್ಟೆಗಳನ್ನು ತಾನೇ ಶುಚಿಗೊಳಿಸುತ್ತಾನೆ. ಅಡುಗೆ ಮಾಡುವುದಕ್ಕಾಗಲಿ, ಪಾತ್ರೆ ತೊಳೆಯುವುದಕ್ಕಾಗಲಿ ಯಾರನ್ನು ಅವಲಂಬಿಸಿಲ್ಲ. ಎಲ್ಲವನ್ನು ತಾನೇ ಮಾಡುತ್ತಾನೆ. ಬಟ್ಟೆ ಖರೀದಿಸಲು ಸೆಕೆಂಡ್ ಹ್ಯಾಂಡ್ ಸ್ಟೋರ್‌ಗಳಿಗೆ ಹೋಗುತ್ತಾನೆ. ವೃಥಾ ಹಣ ಖರ್ಚು ಮಾಡುವುದನ್ನು ಆರವ್ ಇಷ್ಟಪಡುವುದಿಲ್ಲ' ಎಂದರು. ❖

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331



ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

PROPERTY CORNER

ಕ್ಲಾಸಿಫೈಡ್ಸ್

RESIDENTIAL HOUSE FOR SALE

IN HRBR LAYOUT 2nd BLOCK
(BDA Corner Site) 45 X 46 Dimension
GROUND FLOOR 1800 SQ.FT.
(BUILTUP AREA)
FIRST FLOOR 800 SQ.FT.
(BUILTUP AREA)
Concact : **9886618800**

REAL ESTATE SELLING

Sites

Anjanapura

BDA SITES Available for SALE 40x60 West Facing, 20x60 North Facing Anjanapura & Banashankari 6th Stage. Call: 9448082366

SALE 40X60 North facing BDA site, 11th block, Anjanapura Layout, Good location, 11000/sft- 9448225072.

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

65X90,COMMERCIAL South`Side 100Feet Road, North`Side 30feet Road`BDA Approved Balaji-Layout Kanakapura Rd`Near Sharma Transport: 9880770498.

BANASHANKARI 6TH STAGE WANTED/ AVAILABLE BDA RESIDENTIAL AND COMMERCIAL SITES IMMEDIATE SETTLEMENT Contact: 8050908920/ 9986866661

BDA SITE for Sale, Residential & Commercial Banashankari 6th stage, Banashankari 5th stage, Uttarahalli, Rajarajeshwarinagara 30x40, 40x60, 50x80, 80% Bank Loan. 9916592400

20*30 BDA Site East facing for Sale in BSK 3rd block, 6th stage. Contact: 9844392575

Basaweshwaranagar

SITE FOR sale 40x60 Basweshwarnagar 3rd block 3rd stage, North face, Nice location, Rate 19000/- Mobile: 9945116577, 9945866245, 9743322555.

HBR Layout

30X40 SEMI COMMERCIAL BDA property For-sale in HBR Layout 5th Block. Bangalore. Connect: TRINITY VENTURES- 9449287000.

HSR Layout

SALE HSR SITES & BUILDINGS 30X40 40X60 50X80 COMMERCIAL AVAILABLE BTM 20X33 5FLOORS 30X45: 9900966336

Indiranagar

INDIRANAGAR AMARJOTHI 80x60 Corner, Koramangala 40x60, Jpnagar 41x62, BTM 4 30x40, 40x60 USR: 7019770736/ 8951614989.

Jigani

JIGANI NANDANA Layout Site No. 166, 30x40 West Facing 2700/- Negotiable. 40x60 East 2700/-: 9844155175

Jayanagar

BDA SITE for Sale, Residential & Prime Commercial Jayanagara JP Nagara, BTM Layout, HSR Layout, Koramangala 40x60, 50x80, 100x100, 80% Bank Loan. 9916592400.

JAYANAGAR PRIME Property 100x150 For SALE. Rs.30K Psft. Interested Buyers Call: 'LEO ESTATES'- 9343728200

Kengeri

DIRECT OWNER 30x40 KHB Aloted Site Sale, 'BANDEMATA' Adjacent to Kengeri Metro Station, Rs.7500/-. 9742681666

Kempegowda Layout

NADAPRABHU KEMPEGOWDA LAYOUT,3rd Block 40x60 W/F,30x40 E/F and 7th Block 20x30 S/F Contact: 9686469799

KEMPEGOWDA LAYOUT, BDA SITE FOR SALE 20X30 30X40, 40X60, 50X80 CONTACT KUMAR: 99451 19449

"50X80 COMMERCIAL BDA-SITES SALE KEMPEGOWDA LAYOUT, 50X80 VISHVESHWARAIYA LAYOUT, 40X60 RTO RAILWAY LAYOUT- 7338328879"

Mysore Road

40x60 BDA



SITE FOR SALE

NADAPRABHU KEMPEGOWDA Layout Adjacent to 300 ft Peripheral Ring Road, 8500 per sqft. **6360710395, 9900040218**

KETHOHALLI BIGBANYAN Tree 30x50 4 Sites, East, 2200/-Sqft. 5 KM- Challaghatta Metro. 9945724472, 7829830333.

Nelamangala

EAST FACING 60x54 clear document developed Ramkey Layout excuse agent buyer. Contact Owner 9481028358, 9449611876

Vishweshwariah Layout

VISVESWARAIAH 9TH BLOCK 30x40 Semi Commercial 40ft Road, Near Nagarabhavi Ring Road 13000/- PSft: 9845488488

AVAILABLE 40X60 BDA Site North Facing 1st Block 40ft Road Vishveshwariah Layout Contact Buyers: 9844603127

BDA,8TH BLOCK, Very Good Location, South Facing Site,Sale Price Rs.12500/-sft, Payment mode Reasonable, Direct Registration Contact Genuine buyers only: 9945564769 (Brokers Excuse)

BDA SITE for Sale, Residential and Commercial Nagarbhavi, Sir M Vishveshwaraiah Layout, Kempegowda Layout 30x40, 40x60, 50x80, 80% Bank Loan. 9916592400

VVS LAYOUT Attached, 50X80 East facing A Katha Convertion land, Mallathalli, Balaji Layout, Near Krishna hardware: 9008884823

VISWESHWARAIAH LAYOUT 2nd Block BDA 30x40 East Facing Near Kengeri Good Location Immediate Construction: 6360050356

SALE BDA Vishweshwaraiah Layout 50X80 Commercial Site Kempegowda Layout 20X30 East West Facing Owner: 9880032685

"AVAILABLE ALL- MEASUREMENTS BDA Sites Vishveshwaraiah Layout. Please Contact Genuine Buyers Only.Feel free Contact: 7259675150"

'DIRECT OWNER' BDA 30x40 Site Sale VISHVESWARAIAH LAYOUT BLOCK-2, Near Park, Close to 100ft Road: 8496030007

Vidyaranyapura

SITE BBMP A Katha 40x30 SEMI COMMERCIAL SF Rs. 9200/- THINDLU LAKE SHOW GARDEN: 8296895858

Mangaluru

KHB ALLOTTED 30x40 SOUTH EAST CORNER Site Corporation Limit 17.50 Lakhs Clear Papers OWNER 9606866368

Chennapatna

BMICAPA APPROVED Residential DC Converted 3Acre Land for Sale, Channapatna Town Limits, Price 6Cr per Acre, Call- 9845188137

Hejjala

40X60 SOUTH East Corner Site for Sale at Judicial Layout, 3rd Phase, Hejjala, nearby Mysore Road, Contact: 9980163987

Agricultural Land Converted

Devanahalli

REQUIRED/WANTED AGRICULTURE green zone or converted 4 to 50 acres outright purchase & joint venture for MNC Company & NRI Investors in and around Doddaballapura, Devanahalli, Chikkaballpur, Sarjapura Road, Hoskote- Chintamani-Malur surroundings, minimum Road width 40 feet plus. Flexible Payment. 9916592400

Kolar

150 ACRES LAND Available, Attached to KIADB Narasapura, Sale 1.75cr./Acre. Suitable for Warehouse, Layout. 9980577227.

Ramanagar

RESIDENTIAL CONVERTED and Approved Site For Sale near Ramanagar 10000Sq.Ft Developed Area 1650/- P.Sqft Clear Titles. Owner- 9900115519

Agricultural Land

Chitradurga

EXCELLANT INVESTMENT 50.22 Acres Redsoil suitable for Commercial Crops Bhoganahalli, Challekere (Science City) nearby BARC, DRDO, IISC, ISRO, BTPDAM @ 6.75 CR Nego, Mallesh: 9743865623

Commercial Building

Jayanagar

COMMERCIAL RENTAL INCOME PROPERTIES Available FOR SALE in Jayanagar JP.Nagar, Banashankari, BTM, Basavanagudi. RN.RAO: 9341906338

Commercial Land

Nelamangala

BANGALORE-SOLUR HIGHWAY 2 acres 17 guntas Commercial Land for SALE. CONTACT: 9845780996

Commerical

Kengeri

COMMERCIAL PROPERTY For Sale 16500/- Sqf, Ajasent Kengeri Metro Station For Hotel, Theater Kumar 9945119449

Nagarabhavi

COMMERCIAL PROPERTY FOR SALE 2500 SQFT
LOCATION IN NAGARBHAVI 2ND STAGE, BANGALORE, NEAR NEW OUTER RING ROAD
REAL ESTATE BROKERS STRICTLY NOT ALLOWED
CONTACT: **8050064066**

Vishweshwariah Layout

SITE FOR Sale 40X60 Commercial at Vishweshwaraiah layout Near RTO Office Direct Owner Contact :8971851966 /9880781399

Flat

Mysore Road

MYSORE ROAD AVILABLE EAST DOOR 3BHK FLAT WITH CAR PARKING LEASE RS. 32 LACS: 8105273951

General

Multiple Locations

AVAILABLE WANTED 36000 Sqft Land Sale. Suitable for Mall/ Hospital Apartment Near BANASHANKARI 2nd Stage. Commercial Buildings Sale. 5-25CR Rental Income. Residential/PG Building Sale. Wanted 3-6 Acres For High- Rise Apartment. JV/Purchase- 9900399006

House

Basaveshwaranagar

60X40 EAST facing Independent House at prime location for Sale 45 squares building, Ground, 1st & 2nd Floor with 5 Bedrooms attached bathroom, built with teak wood, Italian Marble Tiles, at BEML Layout, Basaveshwaranagar, Bangalore. Clear Titles & 'A' Katha, Rs.5.50 Crores (negotiable). Party going out of station, one time settlement (more negotiable) Immediate Registration. 9845765559/ 9845043282

J P Nagar

J.P.NAGAR SECOND phase Excellent Residential 30x40 West facing 2 Floors Old House BDA- 9845173427/ 9845144365

SALE 125 Acres Land
33 Kms from Yelahanka, 85Lacs per Acre

20Acres Industrial converted land
for IT Park, 17 Kms from Yelahanka @ Attractive Price
Contact: 7022446922

Majestic And Around

PROPERTY FOR SALE, at 5th Cross, near Kanishka, Gandhinagar, Bangalore, 40ftx75ft, South facing, 27k/Sqft, Negotiable. Contact: 9019130999, 9980318880

Mysore

2-BHK HOUSE for Sale 30x40, E/F, Ground,+2 Floors, Carparking. near Vasanthnagar, Mysuru. 8884920455.

Industrial & Factory

Ramanagar

8ACRES 7GUNTA Industrial Converted Land Sale between RAMANAGARA- CHANNAPATNA Proposed 80ft Road 2.25Cr/ Acre: 9845488488

Residential/ Commercial

Jayanagar

AVAILABLE PRIME Property near Madhavan Park, 2400 sqft, Park View, South Facing. Immediate Possession. Contact - 7760110114

REAL ESTATE BUYING

Flat

Multiple Locations

WANTED 1, 2, 3 BHK Flat Sale and Rental and Plots. Rajajinagar, Malleshwaram, Yeshwantpur. 7022573176/ 8308173176.

General

General

WANTED AGRICULTURE/ Residential/ Commercial/ Industrial Lands for JV or Purchase in BLR. 9916310226/ 9620253180. vernadevelopers1@gmail.com Barton Centre, MG Road.

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ

ಕ್ಲಾಸಿಫೈಡ್ಸ್

REAL ESTATE BUYING

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout, Kempegowda Layout & any BDA Katha Sites, immediate settlement. Genuine Sellers Contact: 9972223222, 9606632777

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement. Genuine Sellers Contact: 9902038118, 9449060605

Kanakapura Road

WANTED SITE For INVESTMENT Anjanapura, NarayanNagar, Gubblala, BCMC, BCC Layout, Banashankari 6th Stage, Balaji`Layout, Agent Excuse Contact: 9008259222.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Multiple Locations

WANTED BDA SITES Anjanapura- Arkavathi Banashankari 6th Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI, 9900268073 9448068073.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

"WE-FIX" LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVILWORKS. 9448572697


RENTAL PROPERTIES

Accommodation Available

Commercial

SHOP LEASE 700 Sqft Commercial at Ground floor Available for any Showroom or Business Purpose for long-term (20 years), for 2.5cr (Negotiable), at 80ft Road, BSK 3rd stage, near SBM Colony Bus Stop. 9482849811

AVAILABLE ON RENT



MAGADI ROAD
6,500 - 20,000 sq.ft.
Suitable for Super Market / Godown / Warehouse / Office / Showroom, etc.,
CONTACT : 98450 49000

Industrial And Factory

AVAILABLE OF Industrial Shed for Rent 95000sqft at Soukya Road, Whitefield. Contact: 9341234288/ 9663224353/ 9845417487.

JOB OPPORTUNITIES

Drivers

WANTED PART-TIME Drivers Residing Around Kalyannagar to Work Between 9:00 Am to 2:00 Pm. Retired Drivers Also Invited to Apply. Salary Rs 12,000. Call: 98440-43299

OTHERS

Medical

RUNNING NEW Modern NABH Ready 50 Bed Hospital South Bangalore, Longterm Rental Partnership WhatsApp: 00447868727506

ADMISSION CORNER

V.E.T.B.V.L. POLYTECHNIC
(Recognised by Collegiate and Directorate of Technical Education, Govt. of Karnataka, AICTE, New Delhi)
14th Main, 2nd Phase, J.P. Nagar, Bengaluru - 560078.
Web: vetbvlpolytechnic.edu.in

ACADEMIC ACHIEVERS



KIRAN K U
PER-98.67%
COMMERCIAL PRACTICE



ANKITHA R
PER- 99.25%
APPAREL DESIGN & FABRICATION TECHNOLOGY

44 DISTINCTIONS



KAPSHA SURAJ SINGH
PER- 99.00%
COMPUTER SCIENCE & ENGINEERING

ADMISSIONS OPEN FOR POLYTECHNIC COURSE FOR THE ACADEMIC YEAR 2024-2025

COURSES OFFERED:
1. COMPUTER SCIENCE AND ENGG
2. APPAREL DESIGN & FABRICATION TECHNOLOGY
3. COMMERCIAL PRACTICE
4. INFORMATION SCIENCE & ENGG*
(*Waiting for Approval)

CONTACT: 9513704801

PERSONAL

Change of Name

I, VIKAS CHAUDHARY, Residing at Flat No- 1072, Tower- 1, 7th Floor, Sobha Habitech Channasandra Main Road, Whitefield, Bengaluru- 560066 have changed my Minor son's name TIM CHAUDHARY to New name TAKSH CHAUDHARY vide affidavit dated 24/05/2024 before notary Veena J, Bangalore.

CHANGE OF NAME
I, **TEJASWINI**, residing at # 99/2, Subramanyaeshwara Nilaya, Near Devika Store, Sai Ram Garden Layout, Bidarahalli, Bangalore-560049 have changed my name to **K TEJASWINI** vide affidavit dated 24.05.2024 before notary Mohammed Hussain K, Bangalore. Henceforth I shall be called as **K TEJASWINI** only.

I, BHAGYAMMA, Residing at #31, R.Hosakote, Pavagada, Tumkur- 561202, have changed my name to C.K. JAYAPRADHA, vide affidavit dated 08/05/2024, before notary R. Lakshminarayana, Bangalore.

I MADHURA Bhat W/O, Srinath Kugwe Srinivas R/o #105, Brahmana Kugve, Post : Kugve, Sagara, Shivamogga, Karnataka-577401 have changed my name to Madhura Srinath.


CHANGE OF NAME
I, **BALAMURUGAN R**, residing at # 91/1, 2nd Main, NRI Layout, Ramamurthy Nagar, Bengaluru-560016, have changed my minor son's name from ARWIN to **ARWIN B** vide affidavit dated 24.05.2024 before notary S. Samuel Solomon, Bengaluru, Henceforth he shall be called as **ARWIN B** only.

Lost

ಕಳೆದಿದೆ
ದೀಪಕ್ ಕುಮಾರ್ ಚಂದ್ರಹಾಸ ನಾಯ್ಕ ಬಿನ್ ಚಂದ್ರಹಾಸ ನಾಯ್ಕ ಆದ ನಾನು, ನಂ. 1095, 35ನೇ ಡಿ ಕ್ರಾಸ್, 26ನೇ ಮುಖ್ಯರಸ್ತೆ, ಜಯನಗರ, ಬೆಂಗಳೂರು ಇಲ್ಲಿಯ ನಿವಾಸಿಯಾಗಿದ್ದು, ಆನೇಕಲ್ ತಾಲ್ಲೂಕು, ಕೆಹೆಚ್‌ಬಿ ಸೂರ್ಯನಗರ 1ನೇ ಹಂತದ ಎಲ್‌ಐಜಿ ಟೈಪ್ 'ಬಿ' ನಂ. 179ರ ಮನೆಯ ಸ್ವಾಧೀನ ಜ್ಞಾಪನಾ ಪತ್ರವನ್ನು ಕಳೆದುಕೊಂಡಿರುತ್ತೇನೆ. ಯಾರಿಗಾದರು ಸಿಕ್ಕಲ್ಲಿ ಸಂಪರ್ಕಿಸಿ, ಮೊ: **9886481770**

LOST SALE DEED Address: 22 5th cross 5th main 2 stage arakere mico Layout, Bangalore - 560076 Date of registration: 9/9/1999 Ref: BNG(U)-BLR(S)/3992/1999-2000/ FIR Lost Report No. 1066428/2024 Contact Information: +91 7204278908

ACHARYA PATASHALA EDUCATIONAL TRUST®



Since 1935 — Serving in the field of Education 1935
N. R. Colony, Bengaluru-560 019. Phone: 080-26602586

ADMISSION OPEN from KG-PG

List of City Campus Institutions & Programs - N R Colony

APS PUBLIC SCHOOL
ICSE Syllabus-New Delhi — www.apspublic.co — Telephone: 080 26603826
Montessori (LKG/UKG), Primary (1-7th Standard), Secondary (8th -10th standard)
CENT PERCENT RESULTS FROM 28 YEARS

APS College of Arts & Science-N R Colony
Affiliated to Bengaluru City University, Accredited B Grade by NAAC
https://apscollegeofartsandscience.com
Programs Offered: **B.A. B.Sc. BCA, MA (Economics)**

APS COLLEGE OF COMMERCE
Affiliated to Bengaluru City University, Accredited B++ Grade by NAAC
https//apscommerce.in; mail.id-apscommercecollege@gmail.com; Contact: 080 26611786
Programs Offered: **B.Com. BBA M.Com.**

APS PU College of Arts, Science & Commerce
Awarded A Grade by Department of PU Education Board
https://apspucollege.com: mail.id: apspucollege @gmail.com Contact: 080 26607314
ARTS: HEPS/HEKS/HEKM/SEP.Psy, SCIENCE: PCMB/PCMC,
COMMERCE: GEBA/SEBA/CEBA/HEBA
Integrated Coaching for CET, NEET & JEE in collaboration with Deeksha Institution

APS Evening College of Arts & Commerce, N R Colony
Affiliated to Bengaluru City University, Accredited B Grade by NAAC
https://apseveningcollege.in mail.id: apsevening1964@gmail.com Contact: 080 26613705
Programs Offered: **B.A. B.Com.**

Highlights: Located in Prime locality, Huge Play Ground, Transportation Facility, State of the Art Infrastructure

Institutions at Somanahalli Campus & Programs

APS COLLEGE OF ENGINEERING, Somanahalli
Affilated to VTU, AICTE Approved, NAAC Accredited
https://.apsce.ac.in mail id; apsceoffice@gmail.com Contact: 8296574054
Branches : UG - CSE - ISE - AI &ML - Cy. Sy - ECE - ME - Civil
Newly Introduced PG Programs - MBA & MCA Programs subject to Approval

APS College of Polytechnic-Somanahalli
Affiliated to Department of Technical Educational (DTE) Approved by AICTE (All India Council of Technical Education)
https:// apspolytechnic.com mail.id:Principal.apspolytechnic.com Contact: 080 28432234
Programs Offered: ME, Civil Engineering CSE, ECE, EEE, Arch, Automobile

APS Rural PU College of Science & Commerce (Somanahalli)
www.apspucsc.org: mail.id- apspusom@gmail.com Contact; 9019506596
Commerce : HEBA / CEBA Science : PCMB / PCMC

Highlights: • Situated In a lush green serene locality on the Kanakapura Road • Metro Connectivity, BMTC Services and the College Transportation • Active Training, Placement & Entrepreneurial Activities • Thousands of students have excelled and are serving the society with respect and dignity. • Students will walk out with extra skills trained along with the academics • Centre for excellence –Skill Labs-3D, Robotics, VLSI, Cyber Security, IP Cell • Wi-Fi enabled campus, State of the Art Infrastructure • Facilities :- Transportation, Sports, Hostel, (Boys & Girls), Centre for Excellence and many more

Other Institutions under the Umberalla: APS Evening PU College Arts & Commerce | APS High School 8th, 9th & 10th | APS Rural High School 8th, 9th & 10th

President : CA Dr. Vishnu Bharath Alampalli — *General Secretary :* Sri. Prakash

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331





